ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಕೇವಲ ಒಂದು ಪಟ್ಟಿ ನೋಡಿ ಲೆಕ್ಕ ಹಾಕುತ್ತಾರೆ. ಬಿದರೆ ಜಿಲ್ಲೆಯಲ್ಲಿ ಒಂದು ಲಕ್ಷಕ್ಕೆ ಮೇಲ್ಪಟ್ಟಿರತಕ್ಕ ಕೆಲಸಕಾರ್ಯಗಳನ್ನು ತೆಗೆದುಕೊಂಡಿದ್ದೇವೋ ಇಲ್ಲವೋ ಎಂಬುದು ಬಡ್ಜೆಟ್ ಪುಸ್ತಕವನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ.

ಶ್ರೀ ವಿ. ಎನ್. ಪಾಟೀಲ್.—ಬಡ್ಜೆಟ್ ಪುಸ್ತಕವನ್ನು ತೆಗೆದು ನೋಡಿದಮೇಲೆಯೇ ನಾನು ಸ್ಪೆಸಿಫಿಕ್ಕಾಗಿ ಈ ಪ್ರಶ್ನೆಯನ್ನು ಕೇಳಿದ್ದು. ಅದಕ್ಕೆ ಉತ್ತರವೇ ಬರಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಪುನಃ ಇನ್ನೊಂದುಸಾರಿ ಸರಿಯಾಗಿ ಅದನ್ನು ನೋಡಿದರೆ, ಅವರ ಸಂಶಯ ದೂರವಾಗುತ್ತದೆ. ಅದು ಯಾವರೀತಿಯಾಗಿದೆ ಎನ್ನುವುದನ್ನು ನೋಡಿದರೆ ಏನೇನು ಕೆಲಸಕಾರ್ಯಗಳು ಆಗಿದೆ ಎಂದು ಗೊತ್ತಾಗುತ್ತದೆ. ಒಂದು ಲಕ್ಷಕ್ಕೆ ಕೆಳಗಡೆ ಇರುವ ಕೆಲಸಕಾರ್ಯಗಳು ಯಾವ ಬಡ್ಜೆಟ್ಟಿನಲ್ಲೂ ಸೇರಿಸದೇ ಇರುವುದಕ್ಕೆ ಕಾರಣ ಬಿದರೆ, ಗುಲ್ಬರ್ಗ ಅಥವಾ ಬಾಂಬೆ ಕರ್ನಾಟಕದಲ್ಲಾಗಲಿ ಸಣ್ಣ ಪುಟ್ಟ ಕೆಲಸಕಾರ್ಯಗಳಿಗೆ ಅವಕಾಶವೇ ಕಡಿಮೆ. ಒಂದು ಲಕ್ಷದ ಒಳಗೆ ಇರುವ ಅಂದರೆ 60, 70, 80 ಸಾವಿರ ರೂಪಾಯಿಗಳಿಗೆ ಕೆರೆಗಳು ಆಗುವ ಹಾಗಿಲ್ಲ. 8, 10, 15 ಲಕ್ಷದವರೆಗೆ ಖರ್ಚುಮಾಡಿದರೆ ಕೆರೆಗಳು ಆಗುತ್ತವೆ. ಒಂದು ಲಕ್ಷದ ಒಳಗೆ ಇರುವ ಕೆಲಸವನ್ನು ಪಟ್ಟಿಯಲ್ಲಿ ಸೇರಿಸಿಲ್ಲ. ಅದನ್ನು ಎಲ್ಲಿಯೂ ತೆಗೆದುಕೊಂಡಿಲ್ಲ ಎಂದು ಹೇಳಿದ ಮಾತು ಸುಳ್ಳು. ಪ್ರತಿಯೊಂದು ಕಡೆಯೂ ಒಂದಲ್ಲ ಒಂದು ಕೆಲಸವನ್ನು ತೆಗೆದುಕೊಂಡಿದ್ದೇವೆ. ಎಲ್ಲಾ ಕಡೆಯೂ, ಎಲ್ಲಾ ಏರಿಯಾದಲ್ಲೂ ಸ್ವಲ್ಪಮಟ್ಟಿಗೆ ಕೆಲಸಕಾರ್ಯಗಳು ಆಗಬೇಕು ಎನ್ನುವ ಧೋರಣೆಯಿಂದ ಎರಡು ಪಟ್ಟಿ ತಯಾರುಮಾಡಿದ್ದೇವೆ. ಆ ಎರಡು ಪಟ್ಟಿಯನ್ನು ಓದಿದರೆ ಅರ್ಥವಾಗುತ್ತದೆ.

Sri B. P. GANGADHAR (Tumkur).—Under Rule 59 I have given notice of a motion which is a matter of urgent public importance regarding the suicide of Narayan. The Officer concerned, in order to favour a person, transferred him immediately to another place. This was brought to the notice of the Minister, Deputy Minister and every body. In spite of the fact that the Deputy Minister gave a direction in the matter, the Officer did not care and as a consequnence of it, as a protest, that person committed suicide. He has put in a very big list of corruption charges against all the officers concerned, how the officers tried to pinch him to see that money is paid to them through him by some villagers for which he was not prepared. As a consequence of it, he committed suicide; he was transferred to a different place to which he was not prepared to go. It has been admitted. The session is coming to an end. You may kindly direct that it may be taken up at least tomorrow.

Mr. DEPUTY SPEAKER.—It has been disallowed. The Member is already informed of it.

Sri B. P. GANGADHAR.—I submitted two things. One is under rule 59 and another a Short notice question. One is disallowed and another is admitted. This is a very important matter. These officers cannot have their own way of transferring officials wherever they want if they do not get money.

Mr. DEPUTY SPEAKER.—As I said already it has been disallowed and the Member has been informed.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಇದು ಬಹಳ ಪ್ರಾಮುಖ್ಯವಾದುದು. ಒಬ್ಬ ಗುಮಾಸ್ತನನ್ನು ಟ್ರಾನ್ಸ್‌ಫರ್ ಮಾಡಿ ಎಷ್ಟು ತೊಂದರೆ ಕೊಟ್ಟಿದ್ದಾರೆ. ಅವನು ಫಾಲಿಡಾಲ್ ತೆಗೆದುಕೊಂಡು ಸೂಯಿಸೈಡ್ ಮಾಡಿಕೊಂಡಿದ್ದಾನೆ. ಇದರ ಬಗ್ಗೆ ಡಿಸ್ಕಷನ್‌ಗೆ ಅವಕಾಶ ಕೊಡಬೇಕು.

Mr. DEPUTY SPEAKER.—The member has already been informed that it is disallowed. However, I will request the concerned Minister to make a statement tomorrow.

BUDGET ESTIMATES FOR 1968-69—DEMANDS FOR GRANTS

DEMAND NOS. 12, 13, 39 AND 41A

Sri R. M. PATIL (Minister for Home and Local Self-Government).—Sir, on the recommendation of the Governor, I beg to move Demands Nos. 12—Jails, 13-Police, 41-A, National Emergency—Civil Defence, and 39- Miscellaneous......

Sri M. NAGAPPA.—I have a point of order for Demand No. 39.

Sri R. M. PATIL.—Let me finish my sentence. If it is objectionable, let him raise objection afterwards. Before completing the sentence, what is the use of raising it?

Mr. DEPUTY SPEAKER.—Let him complete the sentence.

Sri R. M. PATIL.—Sir, on the recommendation of the Governor, I beg to move:

> " That a sum not exceeding Rs. 74,60,000 including the sums already voted on account be granted to the Government to defray the charges which will come in course of payment during the financial year for the period ending 31 st day of March 1969, in respect of Jails."

> " That a sum not exceeding Rs. 8,15,00,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Police'.

> " That a sum not exceeding Rs. 4,51,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969 in respect of Expenditure connected with the National Emergency."

> " That a sum not exceeding Rs. 5,02,61,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of Miscellaneous."

† Sri M. NAGAPPA.—My Point of order is this: In the list of demands for grants for 1968-69 that has been supplied to us on page 8, under Demand No. 39, 70 Miscellaneous, the Minister for Development and Co-operation has been mentioned. Accordingly, this has been moved yesterday and put by the Chair and even one Hon'ble Member spoke on this particular item of the Demand. But it was not put to vote afterwards. It has not been amended either by the Hon'ble Minister, or the Legislature Secretariat. Therefore, when a Demand has been moved on the floor of the House and even one of the Members has taken part in the debate regarding that particular demand, it cannot be moved again by the Minister and it cannot be placed on the floor of the House again. There is also a rule that once a subject has been taken up in a particular session, same thing cannot be repeated. I submit my point of order should be allowed and the Hon'ble Minister may not be allowed to move Demand No. 39.

Sri R. M. PATIL.—I wish to say a few words in this respect. According to my Hon'ble friend, Mr. Nagappa, if it has been moved yesterday, my moving is only redundant; for the purpose of the discussion by the House today this is one of the demands along with three others. Therefore moving of a redundant motion will not bar discussion by this House so far as four demands are concerned. Hence my humble submission is there is no point of order.

Mr. DEPUTY SPEAKER.—I said that it was not moved yesterday and the matter has already been disposed of. There is no question of reopening the matter when it has been disposed of. Any objection after disposal cannot be sustained, because yesterday I had said, it was not moved.

Sri M. NAGAPPA.—If the Hon'ble Minister concedes that it has been already moved..........

Sri R. M. PATIL.—My friend has not properly understood. There are two ways of meeting this argument. One, according to himself, if the Demand was moved, my moving it today, is only superfluous and redundant. But according to him that matter was not discussed yesterday and if it was moved yesterday, according to the Chair's ruling, I am entitled to move it because I am handling that portfolio. There is no point of order at all on this. The House has to discuss these four subjects today and these four subjects are mentioned in today's Agenda. He seems to be relying upon yesterday's Agenda. Perhaps, he has not seen today's Agenda.

Mr. DEPUTY SPEAKER.—Motion moved:

> "That a sum not exceeding Rs. 74,60,000 including the sums already voted on account be granted to the Government to defray the charges which will come in course of payment during the financial year for theperiod ending 31st day of March 1969, in respect of "Jails."

Along with this, all the other Demands, *viz* No. 13, 41 A and 39 are before the House.

ಶ್ರೀ ಎಚ್. ಸಿದ್ಧವೀರಪ್ಪ.—ಸ್ವಾಮಿ, ಸಭೆಯ ಮುಂದೆ ಮಂಡಿಸಿರತಕ್ಕ ಗೃಹಮಂತ್ರಿಗಳ ಬೇಡಿಕೆಗಳನ್ನು ವಿರೋಧಿಸುತ್ತ ಈ ವಿಷಯದಲ್ಲಿ ನಾನು ಒಂದೆರಡು ಮಾತುಗಳನ್ನು ಈ ಸಭೆಯ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ. ಈ ಡಿಮ್ಯಾಂಡುಗಳ ಬಗ್ಗೆ ಸಾಕಷ್ಟು ಚರ್ಚೆ ನಡೆಸುವುದಕ್ಕೆ ಕಾಲಾವಕಾಶವನ್ನು ಒದಗಿಸಿಕೊಟ್ಟಿಲ್ಲ. ಅನೇಕ ಮಾನ್ಯ ಸದಸ್ಯರು ಅಭಿಪ್ರಾಯಪಡುತ್ತಿರುವಂತೆ ಈ ದಿವಸ ಸಭೆಯ ಮುಂದಿರತಕ್ಕ ಡಿಮ್ಯಾಂಡುಗಳನ್ನು ಚರ್ಚೆ ಮಾಡುವುದಕ್ಕೆ ಮೂರು ದಿವಸಗಳ ಕಾಲಾವಕಾಶವನ್ನು ಕೊಟ್ಟಿದ್ದರೂ ಸಾಕಾಗುತ್ತಿರಲಿಲ್ಲ. ಆದರೆ ಬಹಳ ಬುದ್ಧಿವಂತಿಕೆಯಿಂದ ಮಾನ್ಯ ಗೃಹಸಚಿವರು ತಮ್ಮ ಬೇಡಿಕೆಗಳನ್ನೆಲ್ಲಾ ನಾವು ಪೂರಾ ಬೇಜಾರಾಗಿರತಕ್ಕ ಕಾಲದಲ್ಲಿ, ನಾವೆಲ್ಲರೂ ಸುಸ್ತಾಗಿರತಕ್ಕ ಕಾಲ ನೋಡಿಕೊಂಡು ತಮ್ಮ ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಆದರೆ ಈ ಎಲ್ಲ ಬೇಡಿಕೆಗಳ ಬಗ್ಗೆ ನಾನೀಗ ಮಾತನಾಡುವುದಕ್ಕೆ ಸಾಕಷ್ಟು ಕಾಲಾವಕಾಶವಿಲ್ಲದ್ದರಿಂದ ನಾನು ಕೇವಲ ಈ ಪೋಲೀಸ್ ಡಿಮ್ಯಾಂಡ್ ಒಂದರ ಮೇಲೆ ಮಾತ್ರ ಮಾತನಾಡಿ ಬಾಕಿ ಡಿಮ್ಯಾಂಡುಗಳನ್ನು ಚರ್ಚೆ ಮಾಡುವುದಕ್ಕೆ ಅವುಗಳನ್ನು ನನ್ನ ಮಿತ್ರರಿಗೆ ಬಿಡುತ್ತೇನೆ.

ಇಲ್ಲಿ ಈಗ ಪೋಲೀಸ್ ದಳ ಅನ್ನುವುದಕ್ಕೆ—ಆರಕ್ಷಕ ದಳ ಎಂದು ತರ್ಜುಮೆ ಮಾಡಿದ್ದಾರೆ. ಇಂಥ ಒಂದು ಕನ್ನಡವನ್ನು ಕಲಿಯಲು ನಾವು ಮತ್ತೆ ಶಾಲೆಗಳಿಗೆ ಸೇರಬೇಕಾಗುವುದೋ ಏನೋ ಗೊತ್ತಾಗುತ್ತಿಲ್ಲ. ಇಂಥ ಕನ್ನಡ ಪದವನ್ನು ತರ್ಜುಮೆ ಮಾಡುವುದರ ಬದಲು ಸುಮ್ಮನೆ ಪೋಲೀಸ್ ದಳ ಎಂತಲೇ ಹಾಕಿದ್ದರೆ ಚೆನ್ನಾಗಿತ್ತು. ಈ ದಿವಸ ನಮ್ಮ ಪೋಲೀಸ್ ದಳ ಒಂದಕ್ಕೆ ಸಭೆಯ ಮುಂದಿಟ್ಟಿರತಕ್ಕ ಡಿಮ್ಯಾಂಡ್ ಎಷ್ಟು ಎಂದರೆ—8 ಕೋಟಿ 15 ಲಕ್ಷ. ಇದು ವರ್ಷೆ ವರ್ಷೆ ಹೆಚ್ಚಾಗುತ್ತಲೇ ಬರುತ್ತಿದೆ. ಈ ಬೇಡಿಕೆಯ ವಿಚಾರವನ್ನು ಯೋಚಿಸಿ ನೋಡುವುದಾದರೆ ನಾವು ಈ ಒಂದು ಬಾಬಿಗೆ ಎಷ್ಟು ಹಣವನ್ನು ಕೊಡುತ್ತೇದ್ದೇವೆ ಎಂಬುದನ್ನು ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳಿಂದ ಕಾಣಬಹುದು. ನಾನು 1964ರಿಂದಲೂ ಇದಕ್ಕೆ ಸಂಬಂಧಪಟ್ಟ ಎಲ್ಲಾ ಅಂಕೀ ಅಂಶಗಳನ್ನೂ ಶೇಖರಣೆ ಮಾಡಿದ್ದೇನೆ. 1964ರಿಂದಲೂ ಈ ಪೋಲೀಸ್ ಸ್ಟ್ರೆಂಗ್ತ್ ವರ್ಷೆ ವರ್ಷೆ ಹೆಚ್ಚುತ್ತಲೇ ಬರುತ್ತಿದೆ. ಆದರೆ ಈ ಸಿಬ್ಬಂದಿ ವರ್ಗ ಹೆಚ್ಚಾಯಿತು ಎಂದು ನಾನು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನೂ ಹೆಚ್ಚಿನ ಸ್ಟ್ರೆಂಗ್ತ್ ಬೇಕಾದರೂ ಆಗಬಹುದು. ಆದರೆ ಈ ಸಿಬ್ಬಂದಿ 1964ರಲ್ಲಿ ಎಷ್ಟಿತ್ತು ಎಂದರೆ—27,577 ಇತ್ತು. ಇದರಲ್ಲಿ ಪೋಲೀಸ್ ಕಾನ್ಸ್ಟೇಬಲ್‌ಗಳ ಸಂಖ್ಯೆ 21,379 ಇತ್ತು. ಇದು 1967ಕ್ಕೆ 28,334ಕಕ್ಕೆ ಏರಿತು. ಆದರೆ ಇದು ಇನ್ನೂ ಮುಂದೆ ಹೆಚ್ಚಾಗಬಹುದು. ರಾಜ್ಯದಲ್ಲಿರತಕ್ಕ 1964ರಲ್ಲಿ ಪ್ರತಿಯೊಬ್ಬ ಕಾನ್ಸ್ಟೇಬಲ್‌ಗೆ 1,603 ರೂಪಾಯಿ ಮತ್ತು 4 ಪೈಸೆ per capita ಖರ್ಚು ಮಾಡುತ್ತಿದ್ದೇವೆ. ಈ ದಿವಸ ನಾವು ಇದೇ ಸಿಬ್ಬಂದಿಗೆ ತಲಾ ಒಂದಕ್ಕೆ 2,339-89 ಪೈಸೆಗಳನ್ನು ಖರ್ಚು ಮಾಡುತ್ತಿದ್ದೇವೆ. 1964ರಲ್ಲಿ ಈ ಬಾಬಿಗೆ ಒದಗಿಸಿದ್ದ ಬಡ್ಜೆಟ್ ಎಷ್ಟಿತ್ತು ಎಂದರೆ ಅದು 6 ಕೋಟಿ 72 ಲಕ್ಷ ಚಿಲ್ಲರೆ. ಈ ದಿವಸ ಇದಕ್ಕೆ ಒದಗಿಸಿರತಕ್ಕ ಬಡ್ಜೆಟ್ 8 ಕೋಟಿ ರೂಪಾಯಿಗಳು. ಅಂದರೆ 2 ಕೋಟಿ ರೂಪಾಯಿಗಳು ಆ ದಿವಸಕ್ಕೂ ಇಂದಿಗೂ ಹೆಚ್ಚಾದಂತಾಯಿತು. ಆದುದರಿಂದ ನನಗೆ ನಾವೀ ದಿವಸ ಸಾಕಷ್ಟು ಹಣವನ್ನು ಒದಗಿಸಿದ್ದೇವೆಂದು ಭಾವಿಸುತ್ತೇನೆ. ಆದ್ದರಿಂದ ನನ್ನ ಮಿತ್ರರಾರೂ ಈ ಬಾಬಿಗೆ ಒದಗಿಸಿರತಕ್ಕ ಹಣ ಸಾಲದು ಎಂದು ವಾದ ಮಾಡಲಾರರೆಂದು ತಿಳಿದುಕೊಂಡಿದ್ದೇನೆ. ಆದರೆ ನನಗೆ ಈ ದಿವಸ ಈ ಪೋಲೀಸ್ ವಿಚಾರದಲ್ಲಿ ಮಾತನಾಡಬೇಕು ಎಂದರೆ ದ್ವಂದ್ವವಾಗುತ್ತಿದೆ. ಪೋಲೀಸ್ ಇಲಾಖೆಯ ವಿಚಾರಗಳನ್ನೆಲ್ಲಾ ನಾನು ಹಿಂದೆ 5 ವರ್ಷಗಳ ಕಾಲ ಗೃಹಮಂತ್ರಿಯಾಗಿದ್ದುದರಿಂದ ಸಾಕಷ್ಟು ಚೆನ್ನಾಗಿ ತಿಳಿದುಕೊಂಡಿದ್ದೇನೆ; ಪ್ರತಿಯೊಂದು ವಿಷಯಗಳೂ ಚೆನ್ನಾಗಿ ಮನವರಿಕೆಯಾಗಿವೆ. ಆದರೆ ಈ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡತಕ್ಕವರೆಲ್ಲಾ ಕೆಟ್ಟವರೆಂದು ನಾನು ಹೇಳಿದರೆ ಅದು ಸತ್ಯಕ್ಕೆ ದೂರವಾದ ಮಾತಾಗುವುದು. ಆದರೆ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲೂ ಈ ಪೋಲೀಸಿಗೆ ಒಂದು ಕೆಟ್ಟ ಹೆಸರು ಏತಕ್ಕೆ ಬರುತ್ತಿದೆ ಎಂದರೆ, ಈ ಇಲಾಖೆಯನ್ನು ಬಹುಮಟ್ಟಿಗೆ ಕೆಡಿಸಿರತಕ್ಕವರು ಯಾರು ಎಂದರೆ, ಈ ಇಲಾಖೆಗೊಂದು ಕೆಟ್ಟ ಹೆಸರನ್ನು ತಂದಿರತಕ್ಕವರು ಯಾರು ಎಂದರೆ ಅದು ಈ ದಿವಸ ಆಡಳಿತ ನಡೆಸತಕ್ಕ ಪಕ್ಷದಲ್ಲಿರತಕ್ಕ ರಾಜಕೀಯ ಕಾರಣಿಗಳೇ ಹೊರತು ಮತ್ಯಾರೂ ಅಲ್ಲ ಎಂದು ಹೇಳುತ್ತೇನೆ. ಈ ರಾಜಕಾರಣಿಗಳು ಎಲ್ಲೆಲ್ಲಿ ಏನೇನು ಪಾಪ ಕಾರ್ಯಗಳನ್ನು ಮಾಡಿದ್ದರೆ ಅದಕ್ಕೆ ಪೋಲೀಸಿನವರು, ಆ ಕಾಕಿ ಬಟ್ಟೆ ಹಾಕಿರತಕ್ಕ ಜನರು ಸಾರ್ವಜನಿಕರಿಂದ ಬೈಸಿಕೊಳ್ಳಬೇಕಾಗಿದೆ, ಕಲ್ಲಿನಿಂದ ಹೊಡಿಸಿಕೊಳ್ಳಬೇಕಾಗಿದೆ. ಮೈಮುರಿಸಿಕೊಳ್ಳಬೇಕಾಗಿದೆ. ಆದರೆ ಈ ಹಿಂದೆ ನಮ್ಮ ರಾಜ್ಯದಲ್ಲಿ 1964, 1965, 1966 ಮತ್ತು 1967ರಲ್ಲಿ ಎಲ್ಲೆಲ್ಲಿ ಯಾವಾಗ ಎಷ್ಟೆಷ್ಟು ಪೋಲೀಸ್ ಫೈರಿಂಗಾಗಿದೆ ಎಂಬುದನ್ನೆಲ್ಲಾ ಶೇಖರಣೆ ಮಾಡಿದ್ದೇನೆ. ಅವು ಯಾವ ಯಾವ ಕಾರಣಕ್ಕಾಗಿ ಆದವು ಎಂಬುದನ್ನೂ ಸಹಾ ನೋಟ್ ಮಾಡಿಕೊಂಡಿದ್ದೇನೆ. ಆದರೆ ಆ ವಿವರಗಳನ್ನೆಲ್ಲಾ ಈಗ ಇಲ್ಲಿ ತಿಳಿಸುವುದಕ್ಕೆ ಕಾಲಾವಕಾಶವಿಲ್ಲ. ಕಳೆದ 5 ವರ್ಷಗಳಲ್ಲಿ ಹಿಂದೆ

(ಶ್ರೀ ಎಚ್. ಸಿದ್ಧವೀರಪ್ಪ)

ಎಲ್ಲಿಯಾದರೂ ಫೈರಿಂಗ್ ಆಗಿದ್ದರೆ ಅವು ವರ್ಷಕ್ಕೆ 2—3ಕ್ಕೆ ಜಾಸ್ತಿಯಾಗಿಲ್ಲ. ಆದರೆ ಕಳೆದ ಮಾರ್ಚಿ ತಿಂಗಳು ಒಂದರಲ್ಲೇ ರಾಜ್ಯದ ನಾನಾ ಭಾಗಗಳಲ್ಲಿ ಸುಮಾರು 8—9 ಪೋಲೀಸ್ ಫೈರಿಂಗುಗಳಾದವು. ಅವುಗಳಲ್ಲಿ ಅನೇಕ ನಿರಪರಾಧಿಗಳಾದ ಜನರು ಅನೇಕ ಕಷ್ಟನಷ್ಟಗಳಿಗೆ ತುತ್ತಾದರು. ಆದರೆ ಆ ಫೈರಿಂಗುಗಳೆಲ್ಲಾ ಆದದ್ದು ಯಾವ ಕಾರಣಕ್ಕಾಗಿ? ಆ ಭಾಷಾ ಪ್ರಶ್ನೆಯನ್ನು ಎತ್ತಿದವರು ಆ ಪೋಲೀಸಿನವರಲ್ಲ. ಅದನ್ನು ದೇಶದ ಮುಂದಿಟ್ಟವರು ಪೋಲೀಸಿನವರಲ್ಲ. ಈ ಪ್ರಶ್ನೆಯನ್ನೆತ್ತಿದವರು ರಾಜಕಾರಣಿಗಳು. ಅದರಿಂದ ಜನರ ಮನಸ್ಸು ಕಲುಷಿತವಾಯಿತು. ಜನರು ಉದ್ರಿಕ್ತರಾದರು. ಇಷ್ಟೆಲ್ಲಾ ಆದನಂತರ ಅಲ್ಲಿಗೆ ಪೋಲೀಸಿನವರು ಇನ್ನು ಬಾರದಿದ್ದರೆ ಆಗುತ್ತದೆಯೇ? ಅವರೂ ಬರಲೇಬೇಕಾಯಿತು. ಅಂಥ ಪ್ರಸಂಗಗಳಲ್ಲಿ ಅವರ ರಕ್ತವೂ ಕಾಯುತ್ತದೆ. ಅನೇಕ ಸಾರಿ ಬರಬಾರದ ಕಷ್ಟಗಳು ಬಂದೇ ಬರುತ್ತವೆ. ಆದರೆ ಈ ವಿಚಾರದಲ್ಲಿ ಆ ರಾಯಲ್ ಕಮಿಷನ್ನಿನವರು ಒಂದು ರಿಪೋರ್ಟನ್ನು 1962ರಲ್ಲಿ ಕೊಟ್ಟರು. ಅದರಲ್ಲಿ ಅವರು ಏನು ಹೇಳಿದ್ದಾರೆ ಎಂದರೆ—ಪೋಲೀಸಿನವರಿಗೆ ಎಷ್ಟೇ ಕಷ್ಟಗಳು-ಸಂಕಟಗಳು ಬಂದಾಗ್ಯೂ ಅವರು ನಗುವುದನ್ನು ಕಲಿಯಬೇಕು. ಮತ್ತು ಪ್ರಸಂಗ ಎಷ್ಟೇ ಬಿಗಡಾಯಿಸಿದ್ದರೂ ಜನರ ಮೇಲೆ ದುಷ್ಪರಿಣಾಮವನ್ನು ಉಂಟು ಮಾಡತಕ್ಕ ಕಾರ್ಯಗಳನ್ನು ಅವರು ಕಲಿಯಬಾರದು—ಎಂಬುವಾಗಿ ಅದರಲ್ಲಿ ತಿಳಿಸಿದ್ದಾರೆ. ಆದರೆ ಅಂಥ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿದ್ದ ಹಾಗೆ ಕಂಡುಬರುವುದಿಲ್ಲ.

ಇದಕ್ಕೆ ಕಾರಣ ಇಷ್ಟೆ, ಅವರಿಗೆ ನಾವು ಏನು ಮಾಡಿದರೂ ಅಷ್ಟೆ ಒಳ್ಳೆಯ ಕೆಲಸ ಮಾಡಿದರೂ ಅಷ್ಟೆ, ನಾವು ಒಳ್ಳೆಯ ಕೆಲಸ ಮಾಡಿದರೂ ನಮ್ಮನ್ನು ಯಾರೂ ನೋಡುವುದಿಲ್ಲ; ಪೋಲೀಸ್ ಇಲಾಖೆಯಲ್ಲಿ ಕುದುರೆಯೂ ಒಂದೇ, ಕತ್ತೆಯೂ ಒಂದೇ, ಹೇಸರಗತ್ತೆಯೂ ಒಂದೇ, ಎನ್ನುವ ಭಾವನೆ ಬಂದಿದೆ. ಯಾರೇ ಆಗಲಿ ತಪ್ಪು ಮಾಡಿದವನನ್ನು ಹಿಡಿದು ಶಿಕ್ಷೆಮಾಡಿ ಒಳ್ಳೆಯ ಕೆಲಸ ಮಾಡತಕ್ಕಂಥ ಅಧಿಕಾರಿಗೆ ಶಿಫಾರಸ್ಸು ಮಾಡಿದರೆ ಆಗ ಅವರಿಗೆ ಒಂದು ಉತ್ಸಾಹ ಬರುತ್ತದೆ. ಅವರಿಗೆ ಒಳ್ಳೆಯ ಕೆಲಸ ಮಾಡಿದರೆ ಸರ್ಕಾರದವರು ಒಂದು ರಕ್ಷಣೆ ಕೊಡುತ್ತಾರೆ ಎನ್ನತಕ್ಕಂಥ ಭಾವನೆ ಇರುತ್ತದೆ. ಇದನ್ನು ರಾಯಲ್ ಕಮಿಷನ್ನಿನ ವರದಿಯಲ್ಲಿ ಹೇಳುತ್ತಾರೆ. ಅವರ ವರದಿಯಲ್ಲಿ ಈ ವಿಷಯವನ್ನು ಬಹಳ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಈಗ ಪೋಲೀಸಿನವರು ಎಂದರೆ ಒಟ್ಟಿಗೆ ಎಲ್ಲರನ್ನೂ ಬಯ್ಯುತ್ತಾರೆ ಎನ್ನುವ ಒಂದು ಭಾವನೆ ಬರುತ್ತಿದೆ. ಒಳ್ಳೆಯ ಕೆಲಸವನ್ನು ಮಾಡಿದರೂ ಬೈಯ್ಯುತ್ತಾರೆ, ಕೆಟ್ಟ ಕೆಲಸವನ್ನು ಮಾಡಿದರೂ ಬೈಯ್ಯುತ್ತಾರೆ. ಏನು ಮಾಡಿದರೂ ಬೈಯ್ಯುತ್ತಾರೆ ಎನ್ನುವ ಭಾವನೆ ಪೋಲೀಸಿನವರಿಗೆ ಬರುತ್ತಿದೆ. ಇದನ್ನು ತಪ್ಪಿಸಬೇಕಾದರೆ ಸರ್ಕಾರದವರು ಮೊದಲು ತನ್ನ ಕರ್ತವ್ಯವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಯಾರು ಒಳ್ಳೆಯ ಕೆಲಸ ಮಾಡುತ್ತಾರೆ, ಯಾರು ಸರಿಯಾಗಿ ನಡೆದುಕೊಳ್ಳುತ್ತಾರೆ, ಯಾರು ಸತ್ಯವಂತರಾಗಿರುತ್ತಾರೆ ಅಂಥವರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ಇದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ಲಂಚ ತಿಂದು ಮಾಡಬಾರದ್ದನ್ನು ಮಾಡಿದವರಿಗೆ ಈ ಸರ್ಕಾರದವರು ಮರ್ಯಾದೆಯನ್ನು ಏನೂ ಕಡಿಮೆ ಮಾಡುವುದಿಲ್ಲ. ಸತ್ಯವಂತರಾಗಿದ್ದರೆ ಅದು ಒಂದು ಡಿಸ್‌ಕ್ವಾಲಫಿಕೇಷನ್ ಆಗಿದೆ. ನನ್ನ ಒಂದು ಅನುಭವವನ್ನು ಹೇಳಬೇಕು ಎಂದರೆ ನಾನು ಪೋಲೀಸ್ ಖಾತೆಯ ಮಂತ್ರಿಯಾಗಿದ್ದಾಗ ಒಬ್ಬರು ಸಬ್ ಇನ್‌ಸ್ಪೆಕ್ಟರು ಇದ್ದರು. ಇಲ್ಲಿ ಅವರ ಹೆಸರನ್ನು ಹೇಳುವುದು ಅಪ್ರಕೃತ. ಅವರಿಗೆ ಒಂದು ವಿಶೇಷ ರೆಕಮೆಂಡೇಷನ್ ಮಾಡಿ ಕೂಡಲೇ ಅವರಿಗೆ ಪ್ರಮೋಷನ್ ಕೊಡಬೇಕು ಎಂದು ಹೇಳಿದ್ದೇನೆ. ಮನೆಯಲ್ಲಿ ಅವರ ಹೆಂಡತಿ ಅಡಿಗೆಯನ್ನು ಮಾಡಬೇಕಾಗಿದ್ದರೆ ಬೇರೆ ಒಂದು ಸೊಪ್ಪನ್ನು ತಂದು ಅಡಿಗೆ ಮಾಡಿದ್ದಳು. ಆ ಸಬ್ ಇನ್‌ಸ್ಪೆಕ್ಟರು ಮನೆಗೆ ಊಟಕ್ಕೆ ಬಂದಾಗ ಹೆಂಡತಿಯನ್ನು ಕೇಳಿದರು, ಈ ಸೊಪ್ಪನ್ನು ಪೇಟೆಯಲ್ಲಿ ತಂದು ಸಾರು ಮಾಡಿದೆಯಾ ಹೇಗೆ, ಎಲ್ಲಿಂದ ಅದನ್ನು ತರಿಸಿದೆ ಎಂದು. ಆಗ ಆಕೆ ಹೇಳಿದಳು ಪಕ್ಕದ ಮನೆಯ ಹಿತ್ತಲಲ್ಲಿ ಇತ್ತು ಬಹಳ ಚೆನ್ನಾಗಿತ್ತು ಅದಕ್ಕೋಸ್ಕರ ಆ ಸೊಪ್ಪನ್ನು ತಂದು ಸಾರು ಮಾಡಿದ್ದೇನೆ, ಬಹಳ ಚೆನ್ನಾಗಿದೆ ಎಂದು ಹೇಳಿದರು. ಆಗ ಆ ಸಬ್ ಇನ್‌ಸ್ಪೆಕ್ಟರು ಇದನ್ನು ಮಾಡುವುದರಿಂದ ಇನ್ನೊಬ್ಬರ ದಾಕ್ಷಿಣ್ಯಕ್ಕೆ ಒಳಗಾದ ಹಾಗೆ ಆಗುತ್ತದೆ ಈ ರೀತಿ ಮಾಡಿದ್ದು ಶುದ್ಧ ತಪ್ಪು ಎಂದು ಹೇಳಿ, ತನ್ನ ಮನೆಯ ಹಿಂದೆ ಇದ್ದ ಸ್ವಲ್ಪ ಜಾಗವನ್ನು ತನ್ನ ಹೆಂಡತಿಯಿಂದಲೇ ಅಗೆಸಿ, ನೀರು ಹಾಕಿಸಿ ಸೊಪ್ಪು ಬೆಳೆದು ಆ ಪಕ್ಕದ ಮನೆಯವರಿಗೆ ಕೊಡುವವರೆಗೂ ಬಿಡಲಿಲ್ಲ. ಇದು ಬಹಳ ದೂರ ಹೋಯಿತು ಎಂದು ತಾವು ಹೇಳಬಹುದು. ಆದರೂ ಕೂಡ ಇದರ ಹಿಂದೆ ಇರತಕ್ಕ ತತ್ವವನ್ನು ಗಮನದಲ್ಲಿಟ್ಟುಕೊಂಡು ಆ ರೀತಿ ಮಾಡದೆ ಹೋದರೆ ಇವೊತ್ತು ದೇಶದೊಳಗೆ ಉಳಿಗಾಲವಿಲ್ಲ. ಲಂಚ ಹಿಂದೂಸ್ಥಾನದಲ್ಲೇ ಬಂದಿರುವ ಪ್ರಶ್ನೆ ಅಲ್ಲ. ಈ ಪ್ರಶ್ನೆ ಎಲ್ಲಾ ಕಡೆಗಳಲ್ಲಿದ್ದರೂ ಕೂಡ ನಮ್ಮಲ್ಲಿ ಇದು ಬಹಳ ದೊಡ್ಡ

ದಾಗಿ ಬೆಳೆಯುತ್ತಿದೆ. ಆದ್ದರಿಂದ ನಾನಾದರೂ ಹೇಳುತ್ತೇನೆ ಈ ಪ್ರಶ್ನೆಯನ್ನು ಬಿಡಿಸಲೇಬೇಕು. ಈ ಪ್ರಶ್ನೆಯನ್ನು ಬಿಡಿಸಬೇಕಾದರೆ ಮುಖ್ಯವಾಗಿ ಬೇಕಾಗಿರತಕ್ಕಂಥಾದ್ದು ಒಂದು ಕಮಿಷನ್ ನೇಮಿಸಬೇಕು. ಪೋಲೀಸ್ ಆಡಳಿತ ಸರಿಯಾಗಿ ಇದೆಯೇ ಅಥವಾ ಇಲ್ಲವೇ, ಅದು ಸರಿಯಾಗಿಲ್ಲದಿದ್ದರೆ ಅದಕ್ಕೆ ಕಾರಣವೇನು ಎಂದು ಅದರ ಮೂಲವನ್ನು ತಿಳಿದುಕೊಂಡು ಅದನ್ನು ಸರಿಪಡಿಸಬೇಕು. ಪಂಜಾಬಿನ ಪೋಲೀಸ್ ಆಡಳಿತದ ಬಗ್ಗೆ ಹಿಂದೆ ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೆ. ಹಿಂದೆ ಪಂಜಾಬಿನಲ್ಲಿ ಇಬ್ಬರು ಮಹನೀಯರು ಶ್ರೀ ಮಹಾಜನ್ ಅವರ ಅಧ್ಯಕ್ಷತೆಯಲ್ಲಿ ಪೋಲೀಸ್ ಆಡಳಿತ ಪತಕ್ಕೆ ಕೆಟ್ಟು ಹೋಗಿದೆ, ಅದನ್ನು ಯಾವ ರೀತಿ ಸರಿಪಡಿಸಬೇಕು ಎನ್ನುವ ದೃಷ್ಟಿಯಿಂದ 1961ನೇ ಇಸವಿಯಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದರು. ಆ ಸಮಿತಿಯಲ್ಲಿ 15 ಜನಗಳು ಇದ್ದರು. ಆ ಸಮಿತಿ 1962ನೇ ಇಸವಿಯಲ್ಲಿ ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಅದರಿಂದ ಕಾಂಗ್ರೆಸ್ ಸರ್ಕಾರದ ಮೇಲೆ ಆಕ್ಷೇಪಣೆಗಳು ಬರುತ್ತವೆ ಎನ್ನುವ ದೃಷ್ಟಿಯಿಂದ ಆ ವರದಿಯನ್ನು ಅವರು ಪಬ್ಲಿಷ್ ಮಾಡಿಲ್ಲ. ಇತ್ತೀಚೆಗೆ ಅದು 1967ನೇ ಡಿಶಂಬರ್ ತಿಂಗಳಿನಲ್ಲಿ ಪಬ್ಲಿಷ್ ಆಗಿದೆ. ಮಾನ್ಯ ಮಂತ್ರಿಗಳು ಆ ರಿಪೋರ್ಟಿನ ಕಾಪಿಯನ್ನು ತರಿಸಿ ಅದನ್ನು ಮನನ ಮಾಡಬೇಕು. ನಾನು ಸಹ ಒಂದು ಕಾಪಿಯನ್ನು ತರಿಸಬೇಕೆಂದು ನಮ್ಮ ಸ್ನೇಹಿತರಿಗೆ ಬರೆದಿದ್ದೇನೆ. ಇನ್ನೂ ನನಗೆ ಅದರ ಕಾಪಿಯು ಸಿಕ್ಕಿಲ್ಲ. ಆ ವರದಿಯಲ್ಲಿ ಒಂದು ಅಂಶವನ್ನು ಹೇಳಿದ್ದಾರೆ. ಅದು ಡಿಶಂಬರ್ ತಿಂಗಳು 20ನೇ ತಾರೀಖಿನ ಪತ್ರಿಕೆಯಲ್ಲಿ ಬಂದಿದೆ. ಅದರಲ್ಲಿ ಈ ರೀತಿ ಹೇಳಿದ್ದಾರೆ. The report said :

> "the evidence led before the Commission has disclosed that members of political parties, particularly of the ruling party whether in the treasury or outside interfere considerably in the working of the police for unlawful ends."

ಇವೊತ್ತಿನ ದಿವಸ ನಮ್ಮ ದೇಶಕ್ಕೆ ಬಂದಿರತಕ್ಕ ಕುತ್ತು ಏನು ಎಂಬುದನ್ನು ನಾನು ಹೇಳುತ್ತೇನೆ. ಇದು ಬಹಳ ಮುಖ್ಯವಾದದ್ದು.

> "Screening of the police force from top to bottom by a Committee of top honest men has been recommended by the Commission as a number one measure for purifying the existing cadre and eliminating from it the inefficient, dishonest and corrupt elements."

ಅತಿ ಮುಖ್ಯವಾಗಿ ಇದನ್ನು ಮಾಡಬೇಕು. ಇದು ಕಷ್ಟ ಇದೆ ಎಂಬುದು ನನಗೆ ಗೊತ್ತು. ಈ ಬಗ್ಗೆ ಯಾವರೀತಿ ಮಾಡಬೇಕು ಎಂಬ ಬಗ್ಗೆ ನಾವು ಸಲಹೆ ಕೊಡುತ್ತೇವೆ. ಈ ರೀತಿ ಮಾಡುವುದಾದರೆ ಒಂದು ಸ್ಟ್ಯಾಂಡರ್ಡ್ ಬರುತ್ತದೆ. ಯಾವುದೇ ಬಂದರೂ ಅದನ್ನು ಪೋಲೀಸ್ ಫೋರ್ಸಿಗೆ ಅನ್ವಯಿಸುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಆರ್. ಎಂ. ಪಾಟೀಲರು ವಕೀಲರು ಇದ್ದಾರೆ. ತಜ್ಞರಿದ್ದಾರೆ. ಅವರು ಈ ಕೆಲಸವನ್ನು ಚೆನ್ನಾಗಿ ಮಾಡಬಹುದು. ಇದರಲ್ಲಿ ಲಂಚಕೋರರು ಯಾರು ಇದ್ದಾರೆ, ಅದಕ್ಷರಾಗಿರುವವರನ್ನು, ಯೂಸ್‌ಲೆಸ್ ಆಗಿರುವವರನ್ನು ನಿರ್ದಾಕ್ಷಿಣ್ಯವಾಗಿ ಕಿತ್ತು ಒಗೆದು ಆ ಅಧಿಕಾರಿಗಳನ್ನು ಮೂಲೋತ್ಪಾಟನೆ ಮಾಡುವುದು ಅಗತ್ಯವಾಗಿದೆ. ಹೀಗೆ ಮಾಡುವುದಾದರೆ ನಿಮ್ಮ ಪೋಲೀಸ್ ಇಲಾಖೆಗೆ ಒಳ್ಳೆಯ ಹೆಸರು ಬರುತ್ತದೆ. ಒಳ್ಳೆಯವರು ಯಾರು ಇದ್ದಾರೆ, ಚೆನ್ನಾಗಿ ಕೆಲಸ ಮಾಡತಕ್ಕವರು ಯಾರು ಇದ್ದಾರೆಯೋ ಅವರಿಗೆ ಪ್ರೋತ್ಸಾಹ ಕೊಡಬೇಕು. ಇದನ್ನು ಮಟ್ಟಿಗೆ ಮಾಡಿದರೆ ನಿಮಗೆ ಮರ್ಯಾದೆ ಬರುತ್ತದೆ ಎಂದು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಪಾಟೀಲರಿಗೆ ನಾನು ಹೇಳುತ್ತೇನೆ. ಹಿಂದೆ ಇದ್ದಂತಹ ಗೃಹಮಂತ್ರಿಗಳು ದೇಶವನ್ನೇ ಹಾಳು ಮಾಡಿ ಹೋದರು. ಅವರು ಇಲ್ಲಿ ಇಲ್ಲದೇ ಇರುವಾಗ ಅವರ ವಿಷಯವನ್ನು ಇಲ್ಲಿ ಹೇಳುವುದು ಉಚಿತವಲ್ಲದಿದ್ದರೂ ಒಂದು ಮಾತನ್ನು ಮಾತ್ರ ಈ ಸಂದರ್ಭದಲ್ಲಿ ನಾನು ಹೇಳಲೇ ಬೇಕಾಗಿದೆ. ಅವರು ಮೈಸೂರು ಸಂಸ್ಥಾನದ ಗೃಹಮಂತ್ರಿಗಳಾಗಿ ಆಡಳಿತವನ್ನು ವಹಿಸಿಕೊಂಡಮೇಲೆ ದೇಶದಲ್ಲಿ ಆಗಬಾರದ ಅನಾಹುತಗಳು, ಆಗಬಾರದ ತೊಂದರೆಗಳು ಆದುವು. ಇಷ್ಟೆಲ್ಲಾ ಮಾಡಿ ಕೆಳಮನೆಯಲ್ಲಿ, ಮೇಲ್ಮನೆಯಲ್ಲಿ ಒಂದು ಹೇಳಿಕೆಯನ್ನಾದರೂ ಕೊಡತಕ್ಕಂಥ ಮುಖ ಇಲ್ಲದೆ ಅವರು ಹೊರಟು ಹೋದರು. ನಾನೇನು ಇಲ್ಲಿ ಟೀಕೆ ಮಾಡುವುದಕ್ಕೇ ಬಂದು ಕುಳಿತುಕೊಂಡಿಲ್ಲ; ಮುಖ್ಯವಾಗಿ ಪೋಲೀಸ್ ಅಡ್ಮಿನಿಸ್ಟ್ರೇಷನ್ ಸರಿಯಾಗಿ ಇಲ್ಲದೇ ಇದ್ದರೆ, ಬಲಯುತವಾಗಿಲ್ಲದೇ ಹೋದರೆ ದೇಶದಲ್ಲಿ ಅರಾಜಕತೆ ಬರುತ್ತದೆ.

(ಶ್ರೀ ಎಚ್. ಸಿದ್ಧವೀರಪ್ಪ)

ಪೋಲೀಸ್ ಇಲಾಖೆ ಸರಿಯಾಗಿ ಇದ್ದಿದ್ದರೆ ಮಧುಗಿರಿಯಂತಹ ಪ್ರಕರಣ ಚಿಂತಾಪುರದಂತಹ ಪ್ರಕರಣ ನಡೆಯುತ್ತಾ ಇರಲಿಲ್ಲ. ಪೋಲೀಸ್ ಅಡ್ಮಿನಿಸ್ಟ್ರೇಷನ್ ಸರಿಯಾಗಿಲ್ಲದೆ ಇದ್ದರೆ ಇಂಥಾ ಪ್ರಸಂಗಗಳು ಬರುತ್ತವೆ. ಬಹು ಭಾಗ ಪೋಲೀಸ್ ಇಲಾಖೆಯಲ್ಲಿ ಎಲ್ಲೆಲ್ಲಿ ನೋಡಿದರೂ ಕೂಡ ದಕ್ಷರಾದ ಮತ್ತು ನಿಸ್ಪೃಹರಾದ ಅಧಿಕಾರಿಗಳು ಎಲ್ಲಿ ಇರುತ್ತಾರೆಯೋ ಅಲ್ಲಿ ಕೆಲಸ, ಆಡಳಿತ ಚೆನ್ನಾಗಿ ನಡೆಯುತ್ತದೆ. ಮೇಲ್ಪಟ್ಟ ಅಧಿಕಾರಿಗಳು ತಮ್ಮ ಕೈಕೆಳಗಿರುವ ಅಧಿಕಾರಿಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕು. ಮಾನ್ಯ ಮಂತ್ರಿಗಳು ತಮ್ಮ ಕೈಯಲ್ಲಿ ಚಾವಟಿ ಇಟ್ಟುಕೊಂಡಿರಬೇಕು. ಕೆಳಗಿನವರು ತಿಳಿಸಿದ್ದಕ್ಕೆಲ್ಲಾ ಸುಮ್ಮನೆ ರೈಟ್ ಎಂದು ಹೇಳಿದರೆ ಅದರಿಂದ ಯಾವ ಜನ ಕೂಲವೂ ಇಲ್ಲ. ಯಾವರೀತಿ ಕೆಲಸಗಳನ್ನು, ಆಡಳಿತವನ್ನು ಮಾಡಬೇಕೆಂಬುದನ್ನು ನಾನೇನು ಮಂತ್ರಿಗಳಿಗೆ ಹೇಳಬೇಕಾಗಿಲ್ಲ. ಅವರು ಉತ್ತಮವಾದ ಆಡಳಿತವನ್ನು ಮಾಡುತ್ತಾರೆ ಎಂಬ ಭರವಸೆ ನನಗೆ ಇದೆ. ಪೋಲೀಸ್ ಇಲಾಖೆಯಲ್ಲಿ ಏನೇನು ಮಾಡಿಲ್ಲವೋ ಅವನ್ನು ಮಾಡಿ, ಪೋಲೀಸ್ ಆಡಳಿತವನ್ನು ಉತ್ತಮಪಡಿಸುತ್ತಾರೆ ಎನ್ನುವ ನಂಬಿಕೆ ನನಗೆ ಇದೆ. ಪೋಲೀಸ್ ಇಲಾಖೆ ಸರಿಯಾಗಿ ಇದ್ದರೆ ಮಧುಗಿರಿಯ ಪ್ರಕರಣವಾಗಲೀ ಇನ್ನು ಯಾವುದೇ ಪ್ರಕರಣವಾಗಲೀ ನಡೆಯುತ್ತಾ ಇರಲಿಲ್ಲ. ಈ ದೇಶದಲ್ಲಿ ಸರ್ಕಾರ ಯಾವರೀತಿ ಇದೆ ಎಂಬುದನ್ನು ನೋಡಬೇಕಾದರೆ ಕೆಲವು ಪೋಲೀಸ್ ಸಬ್ ಇನ್‌ಸ್ಪೆಕ್ಟರನ್ನು ಸ್ವಾರ್ಥದ ಉದ್ದೇಶದಿಂದ 8—10 ವರ್ಷಗಳಾದರೂ ಒಂದೇ ಊರಿನಲ್ಲಿ ಇಟ್ಟಿದ್ದಾರೆ. ಮತ್ತು ಕೆಲವು ಎಸ್. ಪಿ. ಗಳನ್ನು 3 ತಿಂಗಳು, 6 ತಿಂಗಳಲ್ಲೇ ಬೇರೆ ಕಡೆ ಎತ್ತಿಹಾಕಿದ್ದಾರೆ. ಮಂತ್ರಿಗಳಾದವರು ಪೋಲೀಸ್ ಅಧಿಕಾರಿಗಳಿಗೆ, ನಾನು ಹೇಳುವುದನ್ನು ಮಾಡಬೇಕು ಎಂದು ಹೇಳಿದರೆ, ಅವರು ಆಗಲೀ ಸ್ವಾಮಿ ಮಾಡುತ್ತೇನೆ ಎಂದು ಹೇಳಿದರೆ, ಅಂಥವರನ್ನು ಇಟ್ಟುಕೊಳ್ಳುತ್ತಾರೆ. ಅವರು ಇದು ಆಗುವುದಿಲ್ಲ, ಕಾನೂನಿಗೆ ವಿರೋಧವಾಗಿದೆ ಎಂದು ಹೇಳಿದರೆ ಅವರಿಗೆ ಬೆಳಗಾಗುವುದರೊಳಗೆ ಟ್ರಾನ್ಸ್‌ಫರ್ ಆರ್ಡರ್ ಬರುತ್ತದೆ. ಈ ರೀತಿ ಸರ್ವೀಸಿನಲ್ಲಿ ಡೀಮಾರಲೈಜೇಷನ್ ಜಾಸ್ತಿಯಾಗುತ್ತಿದೆ. ಈ ಅಧಿಕಾರದಲ್ಲಿರುವವರು ಶಾಶ್ವತವಲ್ಲ ಎಂಬುದನ್ನು ತಿಳಿದು ವರ್ತಿಸಬೇಕು. ಆದ್ದರಿಂದ ಈ ಸಮಯದಲ್ಲಿ ಈ ಇಲಾಖೆಗೆ ನಾನು ಎಚ್ಚರಿಕೆಯನ್ನು ಕೊಡುತ್ತೇನೆ. ಬಹುಕಾಲ ಇವರೇ ಅಧಿಕಾರದಲ್ಲಿರುತ್ತಾರೆಂದು ಇವರ ಮನಸ್ಸಿಗೆ ಪ್ರೀತಿ ಬರುವ ಹಾಗೆ ಮಾಡುತ್ತಾ ಹೋಗುವುದು ಸರಿಯಲ್ಲ. ನೀವು ಎಂದರೆ ಈ ಇಲಾಖೆಯವರು ತಿನ್ನತಕ್ಕಂಥಾದ್ದು ಎರಡೂವರೆ ಕೋಟಿ ಜನರ ಉಪ್ಪನ್ನು ತಿನ್ನುತ್ತಿದ್ದೀರಿ, ಕಾಂಗ್ರೆಸ್ಸಿನವರ ಉಪ್ಪನ್ನು ಮಾತ್ರ ತಿನ್ನುವುದಿಲ್ಲ. ಆದ್ದರಿಂದ ನಿಸ್ಪೃಹತೆಯಿಂದ ಕೆಲಸ ಮಾಡಬೇಕು. ನಿಸ್ಪೃಹತೆಯಿಂದ ದೇಶ ಸೇವೆ ಮಾಡಬೇಕು. ಬೇರೆ ಕಡೆ ಟ್ರಾನ್ಸ್‌ಫರ್ ಮಾಡಿದರೆ ಏನಾಗುತ್ತದೆ, ಟಿ. ಎ. ಕೊಡುತ್ತಾರೆ, ಎಲ್ಲಾ ಖರ್ಚುಗಳನ್ನೂ ಸರ್ಕಾರದವರು ಕೊಡುತ್ತಾರೆ. ಯಾವಾಗಲೂ ಸತ್ಯದಿಂದ ನಡೆಯುವುದನ್ನು ಕಲಿಯಬೇಕು. ಅದು ಎಲ್ಲಿಯವರೆಗೆ ಹೋಗಿದೆಯೆಂದರೆ ಒಂದು ರೀತಿಯಿಂದ ನನಗೆ ಈ ವಿಚಾರದಲ್ಲಿ ಆಶ್ಚರ್ಯವೂ ಆಯಿತು, ಸಂತೋಷವೂ ಆಯಿತು. ಆಗಿರುವಂಥ ಟೀಕೆಗಳನ್ನು ಮಾತ್ರ ಟೀಕೆ ಮಾಡಲಾಗುತ್ತದೆ ಎಂಬ ಬಗ್ಗೆ ಮೊನ್ನೆ ದಕ್ಷಿಣ-ಕನ್ನಡ ಜಿಲ್ಲೆಯ ಎರಡು ಪಕ್ಷಗಳ ಸದಸ್ಯರೂ ಕೂಡ ಅಡ್ಮಿನಿಸ್ಟ್ರೇಷನ್ ಬಗ್ಗೆ ಟೀಕೆ ಮಾಡಿದರು. ಅಂದರೆ ಈ ರೀತಿ ಟೀಕೆ ಮಾಡಿರುವ ಹಿನ್ನೆಲೆ ಏನು ಎಂಬುದು ಮಾನ್ಯ ಮಂತ್ರಿಗಳಿಗೆ ಅರ್ಥವಾಗಿದೆಯೆಂದು ತಿಳಿದಿದ್ದೇನೆ. ಮತ್ತು ತಮ್ಮ ಕಣ್ಣಿಗೆ ಅಂಜನ ಹಾಕಿದಂತೆ ಆಗಿರಬಹುದೆಂದು ಭಾವಿಸಿದ್ದೇನೆ. ಕಣ್ಣುಮುಚ್ಚಾಲೆ ಆಟದಂತೆ ಜುಡಿಷಿಯಲ್ ಎನ್‌ಕ್ವೈರಿಯನ್ನು ಮಾಡಿಸುತ್ತೇವೆಂದು ಹೇಳಿದ್ದೀರಿ. ಹಿಂದೆ ಇಂತಹ ಸಂದರ್ಭಗಳು ಬಂದಾಗ ನೀವು ಜುಡಿಷಿಯಲ್ ಎನ್‌ಕ್ವೈರಿ ಮಾಡಿಸಿರುವುದೆಲ್ಲಾ ಬರೀ ಫಾರ್ಸ್. ಇನ್ನು ಮುಂದೆಯಾದರೂ ಸಹ ಇಂತಹ ವಿಷಯಗಳು ಬಂದಾಗ ಜುಡಿಷಿಯಲ್ ಎನ್‌ಕ್ವೈರಿಯನ್ನು ಮಾಡಿಸಲು ರೆವಿನ್ಯೂ ಆಫೀಸರ್‌ಗಳನ್ನು ನೇಮಕ ಮಾಡಬೇಡಿ. ಈ ಆಫೀಸರ್‌ಗಳಿಗೂ ಸಹ ಅಧಿಕಾರವಿದೆಯೆಂದು ನೀವು ನೇಮಕ ಮಾಡಿದರೆ ಜನರಿಗೆ ನಂಬಿಕೆ ಬರುವುದಿಲ್ಲ. ಜನರಿಗೆ ನಿಮ್ಮಲ್ಲಿ ವಿಶ್ವಾಸ ಬರುವುದಿಲ್ಲ. ಒಬ್ಬ ಮ್ಯಾಜಿಸ್ಟ್ರೇಟನ್ನು ನೇಮಕ ಮಾಡುವುದು ಒಳ್ಳೆಯದೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

10-30 A.M.

ಇನ್ನು ಒಂದು ಮುಖ್ಯವಾದ ವಿಷಯವೆಂದರೆ ಹಳ್ಳಿಗಾಡಿನಲ್ಲಿ ಪೋಲೀಸ್ ಪಟೇಲರನ್ನು ನೇಮಕ ಮಾಡುವ ಬಗ್ಗೆ ಒಂದು ಹೊಸ ಸ್ಕೀಮನ್ನು ಜಾರಿಗೆ ತಂದಿದ್ದೀರಿ. ಇಂತಹವರನ್ನೇ ಪೋಲೀಸ್ ಪಟೇಲರನ್ನಾಗಿ ನೇಮಿಸುತ್ತೇವೆಂದು ಸಾವಿರ ರೂಪಾಯಿಗಳವರೆಗೂ ಲಂಚ ತೆಗೆದುಕೊಳ್ಳುವುದು ನಡೆಯುತ್ತಿದೆ, ಇಷ್ಟು ಲಂಚ ಕೊಡದಿದ್ದರೆ ಪೋಲೀಸ್ ಪಟೇಲರ ಕೆಲಸ ಕೊಡುವುದಿಲ್ಲವಾಗುತ್ತದೆಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಅನೇಕ ಕೃತ್ಯಗಳು ನಡೆಯುತ್ತಿವೆ.

ಇಂತಹವರನ್ನು ಏನಾದರೂ ನೀವು ಪೋಲೀಸ್ ಪಟೇಲರನ್ನಾಗಿ ನೇಮಕ ಮಾಡಿದರೆ ಅವರಿಗೆ ಜನರಿಂದ ಏಟು ಬೀಳುತ್ತದೆ. ಏಕೆಂದರೆ ಜನರು ಏನೂ ದಡ್ಡರಲ್ಲ. ನಾವು ತಿಳಿಸುತ್ತೇವೆ. ಇಂಡಿಯನ್ ಪೀನಲ್ ಕೋಡನ್ನು ಜನ ಓದಿದ್ದಾರೆ. ನಮ್ಮ ಆತ್ಮ ರಕ್ಷಣೆ ಮಾಡಿಕೊಳ್ಳುವುದಕ್ಕೆ, ನಮ್ಮ ಆಸ್ತಿ ರಕ್ಷಣೆ ಮಾಡಿಕೊಳ್ಳುವುದಕ್ಕೆ ಸರ್ಕಾರದ ಸಹಾಯ ಸಿಗದಿದ್ದರೆ, ಯಾರಿಂದಲಾದರೂ ನಮ್ಮ ಪ್ರಾಣಕ್ಕೆ ತೊಂದರೆ ಬಂದರೆ ವಿಶೇಷ ಸಂದರ್ಭದಲ್ಲಿ ಅವರನ್ನು ಕೊಲ್ಲುವುದಕ್ಕೆ ಕಾಯಿದೆಯಲ್ಲಿ ಅವಕಾಶವಿದೆ. ಅದು ನಮಗೆ ಗೊತ್ತಿದೆ. ಗೊತ್ತಿಲ್ಲದ ಜನರಿಗೆ ನಾವು ತಿಳಿಸುತ್ತೇವೆ. ಆದ್ದರಿಂದ ಐ. ಪಿ. ಸಿ. 420ರ ಪ್ರಕಾರ ಪ್ರವೀಣನಾದವನನ್ನು ಏನಾದರು ನೀವು ಪೋಲೀಸ್ ಪಟೇಲರ ಕೆಲಸಕ್ಕೆ ನೇಮಕ ಮಾಡಿದರೆ ದೇಶಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಪ್ರಜಾಪ್ರಭುತ್ವದ ದೃಷ್ಟಿಯಿಂದ, ಪ್ರಜಾಪ್ರಭುತ್ವದ ಉಳಿಯುವಿಕೆಯ ದೃಷ್ಟಿಯಿಂದ ಪೋಲೀಸ್ ಪಟೇಲರನ್ನು ನೇಮಕ ಮಾಡುವ ಕೆಲಸಕ್ಕೆ ಹೋಗಬೇಡಿ. ಈಗ ವಿಲೇಜ್ ಪಂಚಾಯತ್ ಸೆಕ್ರೆಟರಿ ಎಂದು ಮಾಡಿದ್ದೀರಿ. ಅವರು ಸಹ ಸರ್ಕಾರಿ ಅಧಿಕಾರಿಗಳೇ ಆಗಿದ್ದಾರೆ. ಹಳ್ಳಿಗಳಲ್ಲಿ ಏನಾದರು ತಕ್ಸೀರು ಆದರೆ ಸರ್ಕಾರಕ್ಕೆ ರಿಪೋರ್ಟ್ ಮಾಡುತ್ತಾರೆ. ಆದ್ದರಿಂದ ಇವರಿಗೇ ಪೋಲೀಸ್ ಪಟೇಲರ ಕೆಲಸವನ್ನೂ ಸಹ ವಹಿಸಿದರೆ ಒಳ್ಳೆಯದು.

ಶ್ರೀ ಪಿ. ಬಿ. ಶಂಕರರಾವ್ (ಕಂದಾಯ ಶಾಖೆಯ ಉಪಮಂತ್ರಿಗಳು).—ಪೋಲೀಸ್ ಪಟೇಲರು ಇರಬಾರದು ಎಂದು ನಿಮ್ಮ ಅಭಿಪ್ರಾಯವೇ!

ಶ್ರೀ ಎಚ್. ಸಿದ್ಧವೀರಪ್ಪ.—ನಿಮಗೆ ಏನೂ ಗೊತ್ತಾಗುವುದಿಲ್ಲ. ನೀವು ಸುಮ್ಮನಿರಿ. ಪೋಲೀಸ್ ಪಟೇಲರ ಕೆಲಸವನ್ನೂ ಸಹ ವಿಲೇಜ್ ಪಂಚಾಯತ್ ಸೆಕ್ರೆಟರಿಯವರಿಗೇ ಕೊಡಿ ಎಂದು ನಾನು ಹೇಳುತ್ತಿರುವುದು. ಈ ರೀತಿ ಮಾಡದಿದ್ದರೆ ನೀವು ಅಕ್ಷಮ್ಯ ಅಪರಾಧ ಮಾಡಿದಂತಾಗುತ್ತದೆ.

ಇನ್ನು ಈ ಸರ್ಕಾರದ ಅನೀತಿ ಎಲ್ಲಿಯವರೆಗೆ ಹೋಗಿದೆ ಎಂಬ ಬಗ್ಗೆ ಒಂದು ಉದಾಹರಣೆಯನ್ನು ಮಾತ್ರ ಹೇಳುತ್ತೇನೆ. ಶ್ರೀಮಾನ್ ಕೆ. ಎಚ್. ಪಾಟೀಲರ ಬಗ್ಗೆ ಈ ಸರ್ಕಾರದವರು ಮಾಡಬಾರದ ಪಾಪವನ್ನು ಮಾಡಿದ್ದಾರೆ. ಇದಕ್ಕಾಗಿ ಯಮಧರ್ಮರಾಯನು ನಿಮಗೆ ಬೇರೆ ಒಂದು ನರಕವನ್ನು ಸೃಷ್ಟಿಮಾಡಬೇಕಾಗಿದೆ. ಈಗಿರುವ ನರಕ ನಿಮಗೆ ಸಾಲದು. ಇವರ ಮೇಲೆ ಒಂದು ಕೇಸನ್ನು ಹಾಕಿಸಿ ಕೋರ್ಟಿಗೆ ಎಳೆದಾಡಿಸಿದ್ದೀರಿ ಮತ್ತು ನೇತಾಡುವಂತೆ ಮಾಡಿದ್ದೀರಿ. ಹನುಮನ ಮಟ್ಟಿಯಲ್ಲಿ ಒಂದು ರೂರಲ್ ಇನ್ಸ್ಟಿಟ್ಯೂಟ್ ಇದೆ. ಈ ಇನ್ಸ್ಟಿಟ್ಯೂಟ್ ವಿಚಾರದಲ್ಲಿ ಶ್ರೀಮಾನ್ ಪಾಟೀಲರನ್ನು ಕೋರ್ಟಿಗೆ ಎಳೆಸಿದ್ದೀರಿ. ಇದಕ್ಕೆ ಕಾರಣವೆಂದರೆ ಇಷ್ಟೆ, ಶ್ರೀ ಪಾಟೀಲರು ಶ್ರೀ ನಿಜಲಿಂಗಪ್ಪನವರ ವಿರುದ್ಧವಾಗಿ ಚುನಾವಣೆ ವಿಚಾರದಲ್ಲಿ ಕೋರ್ಟಿನಲ್ಲಿ ಕೇಸ್ ಹಾಕಿದ್ದರೆಂದು. ಶ್ರೀ ನಿಜಲಿಂಗಪ್ಪನವರು ಕೂಡ ಕೋರ್ಟಿನಲ್ಲಿ ಪಾಟೀಲರು ನನ್ನ ವೈರಿ ಎಂದು ಹೇಳಿದ್ದಾರೆ. ಈ ಕೇಸಿನಲ್ಲಿ ಸರ್ಕಾರದವರು ಇಂಟರ್‌ಫಿಯರ್ ಆಗಿಲ್ಲವೆಂದು ನೀವು ಹೇಳಬೇಡಿ. ನಿಮಗೆ ಶಕ್ತಿ ಇದ್ದರೆ ಈ ಕೇಸನ್ನು ಮೇಲಕ್ಕೆ ಎತ್ತಬಹುದಾಗಿತ್ತು. ಈ ಕೇಸ್ ಬಗ್ಗೆ ಕೋರ್ಟಿನವರು ಕೊಟ್ಟಿರುವ ತೀರ್ಮಾನವನ್ನು ನೋಡುವುದಾದರೆ ಶ್ರೀ ಪಾಟೀಲ್ ಅವರು ಏನೂ ತಪ್ಪು ಮಾಡಿಲ್ಲವೆಂದು ಅರ್ಥವಾಗುತ್ತದೆ. ಅವರು ಮಾಡಬಾರದ ಕೆಲಸ ಏನು ಮಾಡಿದರು ಎಂದು ಅವರಮೇಲೆ ಕೇಸ್ ಹಾಕಿಸಿದಿರಿ ಎಂದು ಕೇಳುತ್ತೇನೆ. ಇವರಮೇಲೆ ಕೇಸ್ ಹಾಕಿಸುವುದಕ್ಕೆ ಶ್ರೀ ಕಂಠಿಯವರೇ ಕಾರಣ. ಶ್ರೀ ಪಾಟೀಲರು ಅಲ್ಲದೆ ಬೇರೆ ಯಾರಾದರೂ ಆಗಿದ್ದರೆ ಇನ್ನೂ ಹೆಚ್ಚಿನ ಹಿಂಸೆಯನ್ನು ಕೊಡುತ್ತಿದ್ದಿರಿ. ಇವರು ಇರುವುದು ಗದಗ್‌ನಲ್ಲಿ ಆದರೂ ಸಹ ಬೆಂಗಳೂರಿನ ಕೋರ್ಟ್‌ದಲ್ಲಿ ಕೇಸ್ ಹಾಕಿಸಿದಿರಿ. ಇವರು ನಿರ್ದೋಷಿಗಳು ಎನ್ನುವ ಬಗ್ಗೆ ಕೋರ್ಟಿನವರು ಕೊಟ್ಟಿರುವ ಹೇಳಿಕೆಯನ್ನು ಓದುತ್ತೇನೆ :

> "The Magistrate observed that the Prosecution was a waste of public money and time. He observed that it was not possible to hold that the prosecution was politically motivated (as contended by Mr. Patil); but the fact that there was no basis to file the charge- sheet against the accused and that the prosecution evidence established the innocence of the accused, gave a handle to him (Mr. Patil) to contend that he was prosecuted because of political enmity. It also created a lurking feeling in the mind of the court that it might be so."

This is, as reported by the "Deccan Herald".

(ಶ್ರೀ ಎಚ್. ಸಿದ್ಧವೀರಪ್ಪ)

ನಿಮ್ಮ ಮುಖಕ್ಕೆ ಮಸಿ ಬಳಿಯುವುದಕ್ಕೆ ಇದೊಂದೇ ಸಾಕು. ಇಂತಹವುಗಳನ್ನು ನೀವು ಓದು ವುದಿಲ್ಲವೆಂದು ಕಾಣುತ್ತದೆ. ರಾಯಲ್ ಕಮಿಷನ್ ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಮಗೆ ರಕ್ಷಣೆ ಮಾಡಲು ಯಾರು ಇಲ್ಲವೆಂದು ತಿಳಿದುಕೊಳ್ಳಬೇಡಿ, ಕೋರ್ಟೇ ಸಾರ್ವಜನಕರಿಗೆ ಡಿಫೆನ್ಸ್ ಆಗಿದೆ ಎಂದು ಹೇಳಿದ್ದಾರೆ. ಕೋರ್ಟಿನಿಂದ ಬರತಕ್ಕಂಥ ತೀರ್ಮಾನಗಳನ್ನು ಸರ್ಕಾರದವರು ತರಿಸಿ ನೋಡಬೇಕು. ಶ್ರೀ ಪಾಟೀಲರ ಬಗ್ಗೆ ಕೇಸ್ ಆಗುವುದಕ್ಕೆ ಕಾರಣ ಶ್ರೀ ಕಂಠಿಯವರೇ ಕಾರಣ. ಅವರು ಈಗ ಇಲ್ಲಲ್ಲ. ಈ ಬಗ್ಗೆ ಕೋರ್ಟಿನವರು ಕೊಟ್ಟಿರುವ ತೀರ್ಮಾನ ದಂತೆ ಅವರು ರಾಜೀನಾಮೆ ಕೊಡಬೇಕು. ಈ ವಿಚಾರದಲ್ಲಿ ಇನ್ನೂ ಅನೇಕ ಉದಾಹರಣೆ ಗಳನ್ನು ಕೊಡಬಲ್ಲೆ, ಆದರೆ ಸಮಯವಿಲ್ಲ. ಹಿಂದೆ ಹೈಕೋರ್ಟಿನಲ್ಲಿ ಶ್ರೀ ಭೀಮಯ್ಯ ಎನ್ನ ತಕ್ಕಂಥ ಜಡ್ಜ್ ಇದ್ದರು. ಅವರು ಒಳ್ಳೆಯ ತೀರ್ಮಾನ ಕೊಡುತ್ತಿದ್ದರು. ತಿಸ್ಪೆಯಲ್ಲಿ ಕೋಳಿ ಗಳು ಕೆದಕುವಂತೆ 8 ವರ್ಷಕ್ಕೆ 9 ವರ್ಷಕ್ಕೆ ಒಂದು ಸಾರಿ ಕೆದಕಿ ಒಂದೊಂದೇ ಕೇಸನ್ನು ಹೊರಗೆ ತರುತ್ತಾರೆ. ಈ ರೀತಿ ಬಹಳ ಕಾಲದ ಮೇಲೆ ತಂದು ನಿರಪರಾಧಿಯನ್ನು ಕೋರ್ಟಿಗೆ ಎಳೆಯುವುದು. ಈ ರೀತಿಯಾದರೆ ಜನರಿಗೆ ವಿಶ್ವಾಸ ಬರುವುದಿಲ್ಲ. 6 ವರ್ಷಗಳ ಕೆಳಗೆ ಒಬ್ಬ ನಿರಪರಾಧಿಯ ಮೇಲೆ ಹಾಕಿದಂಥ ಕೇಸನ್ನು ನಾನು ನಡೆಸುತ್ತಿದ್ದೇನೆ.

ಶ್ರೀ ಆರ್. ಎಂ. ಪಾಟೀಲ್.—ಆಗ ನೀವು ಕೇಸ್ ಹಾಕಿಸಿದ್ದೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಹಾಕಿಸಿಲ್ಲ. ಇದೇ ರೀತಿ ಸರ್ಕಾರದವರು ಮುಂದು ವರಿಸಿದರೆ ಜನರಿಗೆ ಸರ್ಕಾರದ ಮೇಲೆ ನಂಬಿಕೆ ಬರುವುದಿಲ್ಲ. Justice must not only be done but it must be seemir.gly done.

ಇನ್ನು ಪೋಲೀಸಿನವರ ಬಗ್ಗೆ ಒಂದು ಸಲಹೆ ಕೊಡುವುದೇನೆಂದರೆ ಅವರ ಕಾಕಿ ಬಟ್ಟೆಯನ್ನು ಬದಲಾಣೆ ಮಾಡಿಸಬೇಕು. ಈ ಬಟ್ಟೆಯಿಂದ ಜನರಿಗೆ ಜಿಗುಪ್ಸೆ ಬಂದಿದೆ. ಬಣ್ಣ ಬದಲಾಯಿಸಿ ದರೆ ಏನಾದರೂ ಜನರಿಗೆ ಪೋಲೀಸಿನವರ ಮೇಲೆ ನಂಬಿಕೆ ಬರಬಹುದೆಂದು ಕಾಣುತ್ತದೆ. ಕಾಕಿ, ಕಾವಿ ಮತ್ತು ಖಾದಿ ಈ ಮೂರು ಬಣ್ಣಗಳನ್ನು ಬದಲಾವಣೆ ಮಾಡಿದರೆ ಒಳ್ಳೆಯದಾಗಿದೆಯೆಂದು ಕಾಣುತ್ತದೆ. ನಾನು ಮಾನ್ಯ ಗೃಹಮಂತ್ರಿಗಳಿಗೆ ಕೆಲವೊಂದು ವಿಷಯಗಳ ಬಗ್ಗೆ ಅಂಕಿಅಂಶ ಗಳನ್ನು ಒದಗಿಸಿಕೊಡಬೇಕೆಂದು ಕೇಳಿದ್ದೆ. ಅದರಂತೆ ಒದಗಿಸಿಕೊಟ್ಟಿದ್ದಾರೆ. ಆದರೆ ನಾನು ಕೇಳಿದಂತಹ " Are there cases pending investigation for more than one year in cognizable cases ? If so, what are they ?... .." ಎನ್ನುವ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ.

ಶ್ರೀ ಆರ್. ಎಂ. ಪಾಟೀಲ್.—ಬಹಳ ಕೇಸಸ್‌ಗಳು ಇವೆ.

ಶ್ರೀ ಎಚ್. ಸಿದ್ಧವೀರಪ್ಪ.—ನನಗೆ ಅದು ನನಗೆ ಗೊತ್ತಿದೆ. ಸಿಂಡಿಕೇಟ್ ಬ್ಯಾಂಕ್‌ನವರು ಒಬ್ಬ ಎರಡು ಲಕ್ಷ ರೂಪಾಯಿಗಳನ್ನು ಹೊಡೆದುಕೊಂಡು ಹೋಗಿದ್ದಾನೆ ಎಂಬ ಬಗ್ಗೆ 5-3 1967ರಲ್ಲಿ ಒಂದು ಫಿರ್ಯಾದ ಕೊಟ್ಟಿದ್ದರೂ ಸಹ ಇನ್ನೂ ಕೇಸನ್ನು ಇನ್‌ವೆಸ್ಟಿಗೇಟ್ ಮಾಡಿಲ್ಲ, ಇದೇ ವಿಚಾರದಲ್ಲಿ ನಾನು ಎರಡು ಮೂರು ಸಲ ಪ್ರಸ್ತಾಪ ಮಾಡಿದ್ದೇನೆ. ಇಂತಹ ವಿಚಾರದಲ್ಲಿ ಒಂದು ದಿನ ತಡಮಾಡಿದರೂ ಸಹ ಸಾಕ್ಷ್ಯ ಕಳೆದು ಹೋಗುತ್ತವೆ. ಈ ವಿಚಾರದಲ್ಲಿ ಯಾರನ್ನಾದರೂ ಉಳಿಸಬೇಕೆಂದಿದ್ದರೆ ಬೇಕಾದರೆ ನಿಧಾನ ಮಾಡಿ. ಖಾದಿ ಬೋರ್ಡಿನಲ್ಲಿ ಏನಾಯಿತು ಎಂಬುದು ನಿಮಗೆ ಗೊತ್ತಿದೆ. 20 ವರ್ಷಗಳಾದರೂ ಸಹ ಯಾವ ಕೇಸನ್ನೂ ಹಾಕುವುದಕ್ಕಾಗಿಲ್ಲ. ನಿಧಾನ ಮಾಡಿ ರುಜುವಾತು ಮಾಡುವುದಕ್ಕೆ ಹೋದರೆ ಅದು ಸಾಧ್ಯವಾಗುವುದಿಲ್ಲ. ಆದುದರಿಂದ ನಾನು ಹೇಳುವುದು ಪೋಲೀಸು ಡಿಪಾರ್ಟ್‌ಮೆಂಟಿನಲ್ಲಿ ಏನು ಅನ್ಯಾಯಗಳಾಗಿವೆ ಎಷ್ಟು ದುಡ್ಡು ಕೊಟ್ಟಿದ್ದಾರೆ ಎನ್ನುವುದನ್ನು ಇಲ್ಲಿ ಹೇಳುತ್ತಿದ್ದೇನೆ. ಬ್ಯಾಂಕಿನವರು ಎರಡು ಲಕ್ಷದಷ್ಟು ಹಣ ಕೊಟ್ಟಿರುವುದು ಬರದೇ ನಿಂತು ಹೋಗಿದೆ. ನೀವು ಚಾರ್ಜ್ ಷೀಟು ಹಾಕಿದರೆ ಬರುತ್ತದೆ. ಆದರೆ ನೀವು ಚಾರ್ಜ್ ಷೀಟು ಹಾಕುವುದರಲ್ಲೇ ತಡ ಮಾಡುತ್ತಿದ್ದೀರಿ. ಚಾರ್ಜ್‌ಷೀಟು ಹಾಕಿದರೆ ಇದು ಪ್ರೈಮಾ ಫೇಸಿ ಕೇಸು ಇದೆ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ ಮತ್ತು ಇವರಲ್ಲಿ ನಿಮ್ಮ ಕಾಂಗ್ರೆಸ್‌ನಲ್ಲಿರುವ ಪುಢಾರಿಗಳೊಬ್ಬರನ್ನು ಬದುಕಿಸುವುದಕ್ಕಾಗಿ ಇವನ್ನೆಲ್ಲಾ ಮಾಡುತ್ತಿದ್ದೀರಿ. ನಿಮಗೆ ಬೇಕಾದವರು ಎಂದು ಹೀಗೆಲ್ಲಾ ಮಾಡುತ್ತಿದ್ದೀರಿ. ನಿಮಗೆ ಬೇಕಾದ ವರು ಅಲ್ಲದಿದ್ದರೆ ಇನ್ನಾರನ್ನಾದರೂ ಇಲ್ಲ ನೇಮಿಸಿದ್ದರೆ ಇಷ್ಟು ಹೊತ್ತಿಗೆ ಅವರನ್ನು ಸಸ್‌ಪೆಂಡು ಮಾಡಿಬಿಡುತ್ತಿದ್ದರಿ. ಇದು ನಿಮ್ಮ ಸರಕಾರದ ಅವಕ್ಷತೆಯನ್ನು ತೋರಿಸುತ್ತದೆ. ಸರಕಾರದ

ಇಲಾಖೆ ಇರುವುದಾದರೂ ಏತಕ್ಕಾಗಿ? ಅವರೆಲ್ಲಾ ಏನು ಮಾಡುತ್ತಿದ್ದಾರೆ? ಇದನ್ನು ಹೇಗಾದರೂ ಮಾಡಿ ಮುಂದೂಡಬೇಕು ಎಂದು ಮಾಡುತ್ತಿದ್ದಾರೆ. ನಾನು ಇಲ್ಲಿ ಪೋಲೀಸು ಇಲಾಖೆಯ ಮೇಲೆ ಚರ್ಚೆ ಮಾಡುವಾಗ ಇದಕ್ಕೆ ಮೂರು ದಿನಗಳಷ್ಟಾದರೂ ಕಾಲಾವಕಾಶ ಕೊಡಬೇಕೆಂದು ಹೇಳಿದರೂ ಅದು ಸಾಧ್ಯವಾಗಲಿಲ್ಲ. ಇದರ ಬಗ್ಗೆ ಮೂರು ದಿವಸಗಳಷ್ಟು ಕಾಲ ತೆಗೆದುಕೊಂಡರೂ ಅದು ಸಾಲುವುದಿಲ್ಲ. ಇದನ್ನು ಇಷ್ಟು ಸುಲಭವಾಗಿ ಇಂದು ಕೈಬಿಡಬೇಕಲ್ಲ ಎಂದು ಬಹಳ ವ್ಯಸನವಾಗುತ್ತಿದೆ. ಇದರ ಜೊತೆಗೆ ಇನ್ನೂ ಕೆಲವು ಇಲಾಖೆಗಳ ಬಗ್ಗೆ ಹೇಳುತ್ತೇನೆ.

ಹೋಂ ಗಾರ್ಡ್ಸ್ ಎಂದರೆ ಗೃಹ ರಕ್ಷಕ ದಳ ಎಂದು ಈ ಇಲಾಖೆಯಲ್ಲಿ ಮಾಡಿದ್ದಾರೆ. ಇದು ಬಹಳ ಮುಖ್ಯವಾದುದು. ಗೃಹರಕ್ಷಕ ದಳಗಳನ್ನು ನಮ್ಮ ದೇಶದಲ್ಲಿ ಇನ್ನೂ ಹೆಚ್ಚು ಮಾಡಬೇಕಾದುದು ನಮ್ಮ ಸರಕಾರದ ಆದ್ಯ ಕರ್ತವ್ಯ. ಸೆಲ್ಫ್ ಪ್ರೊಟೆಕ್ಷನ್ (Self-Protection) ಗೋಸ್ಕರ ಮಾಡಿರುವ ಇದು ಒಂದು ನಾನ್ ಅಫಿಷಿಯಲ್ ಬಾಡಿ. ಇದರಲ್ಲಿ ತಯ್ಯಾರು ಮಾಡುವಂತಹ ಜನರು ಬಹಳ ಒಳ್ಳೆಯವರು ಮತ್ತು ಉತ್ತಮವಾದ ಜನರು. ಇವರು ದೇಶದಲ್ಲಿ ಅಶಾಂತಿಯಾದಾಗ ಜನರ ರಕ್ಷಣೆ ಮಾಡುವುದಕ್ಕೆ ಬಹಳ ಸಹಾಯವಾಗುತ್ತಾರೆ. ಒಂದು ಸಾರಿ ನಾನು ಆಡಳಿತದಲ್ಲಿದ್ದಾಗ ಒಂದು ಸಂದರ್ಭ ಜ್ಞಾಪಕಕ್ಕೆ ಬರುತ್ತದೆ. ಕೆಲವು ಕಡೆಗಳಲ್ಲಿ ಅಶಾಂತಿಯಾದ ಸಂದರ್ಭಗಳು ಬಂದಾಗ ದೇಶದ ಜನ ರಕ್ಷಣೆಗಾಗಿ ಸರಕಾರದವರನ್ನು ಕೇಳುವುದಕ್ಕೆ ಬರುತ್ತಾರೆ. ಇದು ನನ್ನ ಅನುಭವದಲ್ಲೂ ಬಂದಿದೆ. ಹಿಂದೆ ಕ್ಯಾತಸಂದ್ರದ ಬಳಿ ಇದ್ದ ಅಡಿಕೆ ಹಾಗೂ ತೆಂಗಿನ ತೋಟಗಳಲ್ಲಿ ಕಳ್ಳತನಗಳು ಜಾಸ್ತಿಯಾಗಿ ಆದಾಗ ನಾನು ಆಗ ಗೃಹ ಮಂತ್ರಿಯಾಗಿದ್ದೆ ಮತ್ತು ನನ್ನ ಬಳಿ ಕೆಲವು ಜನರು ಬಂದು ಇದಕ್ಕೆ ತಕ್ಕ ರಕ್ಷಣೆ ಕೊಡಬೇಕೆಂದು ಹೇಳುತ್ತಿದ್ದರು. ನಾನೇ ಆಗ ಆ ಏರಿಯಾದಲ್ಲೇ ಇರುವ ಸುಮಾರು ಇಪ್ಪತ್ತು ಹುಡುಗರನ್ನು ಸೇರಿಸಿ ಆ ಸ್ಥಳದಲ್ಲಿರುವ ಅಕ್ಕಪಕ್ಕದ ಜನರ ಬಂದೋಬಸ್ತಿಗಾಗಿ ಅವರಿಗೆ ಆರು ಬಂದೂಕಗಳನ್ನು ತರಿಸಿ ಕೊಟ್ಟಿದ್ದೆ. ಆದರಿಂದಾಗಿ ಅಲ್ಲಿನ ಜನರ ಕಷ್ಟಗಳು ಸ್ವಲ್ಪಮಟ್ಟಿಗೆ ಸುಧಾರಿಸಲು ಅನುಕೂಲವಾಯಿತು ಮತ್ತು ಅವರ ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡಿಕೊಳ್ಳಲು ಅವರಿಗೆಲ್ಲಾ ಬಹಳ ಅನುಕೂಲವಾಯಿತು ಎಂದು ನನಗೆ ಅಲ್ಲಿಂದ ಅನೇಕ ರಿಪೋರ್ಟುಗಳೂ ಬಂದವು. ಅದರಿಂದ ಈಗ ಸರಕಾರದವರು ಇಲ್ಲಿ ಮಾಡಿರುವ ಹೋಂಗಾರ್ಡ್ಸ್‌ಗಳ ಬಗ್ಗೆ ನನಗೆ ಅನೇಕ ರಿಪೋರ್ಟುಗಳೂ ಬಂದಿವೆ. ಇವರಲ್ಲಿ ಸರಿಯಾದ ನೀತಿಯನ್ನು ರೂಪಿಸಿಕೊಂಡು ಕೆಲಸ ಮಾಡುವುದು ಬಹಳ ಮುಖ್ಯ. ಈಗಿರುವ ಕಮ್ಯಾಂಡರ್‌ರವರು ಇದರ ಕಡೆಗೆ ಸ್ವಲ್ಪ ಹೆಚ್ಚು ನಿಗಾ ಇಟ್ಟು ಕೆಲಸ ಮಾಡುತ್ತಿಲ್ಲ ಎಂದು ನನಗೆ ತಿಳಿದು ಬಂದಿದೆ. ಇದರ ಡಿಟೇಲ್ಸ್ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಸರಕಾರ ಇದರ ಕಡೆಗೆ ತಮ್ಮ ಗಮನವನ್ನು ಹರಿಸಬೇಕೆಂದು ಇಷ್ಟು ಮಾತ್ರ ಇಲ್ಲಿ ಹೇಳುತ್ತೇನೆ.

ಇನ್ನು ಮಂತ್ರಿಗಳು ಹಸ್ತಕ್ಷೇಪ ಮಾಡುವುದು ಎಂದರೆ ಅದು ಅಕ್ಷಮ್ಯ ಅಪರಾಧ ಇದರಲ್ಲೂ ಮಂತ್ರಿಗಳಲ್ಲದೆ ಈಗ ಉಪಮಂತ್ರಿಗಳೂ ಕೂಡ ಹಸ್ತಕ್ಷೇಪ ಮಾಡಲು ಹೊರಟಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಈಚೆಗೆ ನಾನು ಹೋದಾಗ ಇದು ನನಗೆ ಗೊತ್ತಾಯಿತು! ನಮ್ಮ ಮಾನ್ಯ ಉಪಮಂತ್ರಿಗಳಾದ ಮಾನ್ಯ ಬೋರಯ್ಯನವರು ಬಂದಾಗ ನಡೆಯಿತು ಎಂದು ಕೇಳುತ್ತೇನೆ. ಮಾನ್ಯ ಶ್ರೀ ಬೋರಯ್ಯನವರು ನನ್ನ ಸ್ನೇಹಿತರು ಹಾಗೂ ನನ್ನ ಕ್ಷೇತ್ರದ ಕಡೆಯಿಂದಲೇ ಬಂದವರು. ಇವರು ಇನ್ನೂ ತರುಣರು ಮತ್ತು ಇನ್ನೂ ಚೆನ್ನಾಗಿ ಮುಂದಕ್ಕೆ ಬರಬೇಕೆಂದು ಅಪೇಕ್ಷೆ ಮಾಡುತ್ತೇನೆ. ಆದರೆ ಅವರೇ ಈ ರೀತಿಯಿಂದ ಮಾಡಿದರು ಎನ್ನುವುದನ್ನು ಕಂಡಾಗ ನನಗೆ ಬಹಳ ಆಶ್ಚರ್ಯವಾಯಿತು. ನಮ್ಮ ಜಿಲ್ಲೆಯ ಪ್ರಮುಖ ಮುಖಂಡರಾಗಿರುವವರು ಮತ್ತು ತರುಣರೂ ಆಗಿರುವುದರಿಂದ ಇವರು ಇನ್ನೂ ಚೆನ್ನಾಗಿ ಮುಂದಕ್ಕೆ ಬರಬೇಕು ಎಂದು ನನಗೂ ಆಸೆ ಇದೆ. ಆದರೆ ಇತ್ತೀಚೆಗೆ ನಾನು ಚಿತ್ರದುರ್ಗದ ಕಡೆಗೆ ಹೋದಾಗ ಇವರು ನಡೆಸಿದ ಆಟಾಟೋಪ ಕೆಲಸಗಳು ಏನು ಎನ್ನುವುದು ಗೊತ್ತಾಯಿತು. ಇಲ್ಲಿ ಶ್ರೀಮಾನ್ ಬೋರಯ್ಯನವರು ಈ ರೀತಿ ಮಾಡುವುದಕ್ಕೆ ಹೋದದ್ದು ನೋಡಿ ನನಗೆ ಬಹಳ ಆಶ್ಚರ್ಯವೇ ಆಯಿತು. ಇಲ್ಲಿ ಒಂದು ಕೇಸಿನಲ್ಲಿ ಒಬ್ಬ ಮನುಷ್ಯನ ಬಂಗಾರ ಇತ್ಯಾದಿ ಪದಾರ್ಥಗಳು ಕಳುವಾಗಿವೆ ಎಂದು ಹೇಳಲು ಪೋಲೀಸು ಸ್ಟೇಷನ್ನಿಗೆ ಬಂದಾಗ ಇದರಲ್ಲಿ ಎರಡು ಮೂರು ಜನರು ಪೋಲೀಸು ಕಸ್ಟಡಿಯಲ್ಲಿ ಇಟ್ಟುಕೊಂಡಿದ್ದಾರೆ ಎಂದು ಹೇಳಿದರು. ಆದರೆ ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಇದನ್ನು ನೋಡಿ ಇದರಲ್ಲಿ ಯಾರು ಫಿರ್ಯಾದಿಯಾಗಿದ್ದರೋ ಅವರೇ ಹೋಗಿ ಎಸ್.ಪಿ.ಯವರ ಬಳಿ ಹೋಗಿ ಹೇಳಿದಾಗ ಅವರು ಈ ಕೇಸಿನ ಬಗ್ಗೆ ಮಾನ್ಯ ಶ್ರೀ ಬೋರಯ್ಯನವರು ಬೆಂಗಳೂರಿಂದ ನನಗೆ ಟೆಲಿಫೋನಿನಲ್ಲಿ ಹೇಳಿದ್ದಾರೆ ಮತ್ತು ಇದರ ಬಗ್ಗೆ ನಾನು ಆಗಲೇ ಸರ್ಕಲ್ ಇನ್ಸ್‌ಪೆಕ್ಟರವರಿಗೆ ಹೇಳಿದ್ದೇನೆ ಎಂದು ಹೇಳಿದಾಗ ಇದರ ಹಿಂದೆ ಏನಿದೆ ಎನ್ನುವುದು ನನಗೆ ಗೊತ್ತಾಯಿತು. ಮತ್ತೆ ಫಿರ್ಯಾದಿಯಾದವನು ಎಸ್ ಪಿ ಕಡೆ ಹೇಳಿದರೆ

(ಶ್ರೀ ಎಚ್. ಸಿದ್ದವೀರಪ್ಪ)

ಅವರು ಪುನಃ ನೀವು ಸರ್ಕಲ್ ಇನ್ಸ್‌ಪೆಕ್ಟರ ಬಳಿಗೆ ಹೋಗಿ ಎಂದು ಆಗಲೇ ಹೇಳಿದನಲ್ಲಾ ಅವರಲ್ಲಿಗೇ ಹೋಗಿ ಅವರಿಗೆ ಎಲ್ಲವನ್ನೂ ಹೇಳಿದ್ದೇನೆ ಎಂದು ಹೇಳುತ್ತಾರೆ. ಮೊನ್ನೆ ದಿವಸ ಕೂಡ ಟೆಲಿಫೋನ್ ಬಂತು ಎಂದು ಹೇಳಿದ್ದೇನೆ ಎಂದು ಹೇಳಿದರೆ ಆಡಳಿತ ಹೇಗೆ ನಡೆಯುತ್ತಿದೆ ಎಂದು ಇಲ್ಲಿ ಹೇಳಬಹುದು, ಮಾನ್ಯ ಮಂತ್ರಿಗಳಾದವರು ಯಾರೇ ಆಗಿರಲಿ ತಮ್ಮ ಇಲಾಖೆಗೆ ಸಂಬಂಧಪಡದೇ ಇದ್ದರೂ ಅವರ ಸಿಬ್ಬಂದಿಯ ಬಗ್ಗೆ ಹೇಳಬೇಕಾದರೆ ನಿಮಗೆ ಒಂದು ಮೆಮೋ ಕಳುಹಿಸಿ ನಿಮ್ಮ ಸಿಬ್ಬಂದಿಯಲ್ಲಿರುವವರು ಇಂತಹ ಇಲಾಖೆಯಲ್ಲಿರುವವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದರ ಬಗ್ಗೆ ಸೂಕ್ತ ಗಮನ ಕೊಡಬೇಕು ಎಂದು ಅವರಿಗೆ ಮೆಮೋ ಕಳುಹಿಸಿ ಕೊಡಬೇಕು. ಮತ್ತು ಇಂತಹ ಪಟ್ಟಿಯನ್ನು ಮಂತ್ರಿಗಳು ಕಳುಹಿಸಿಕೊಟ್ಟರೆ ಆಡಳಿತ ಇಲಾಖೆಯಲ್ಲಿ ಒಂದು ರೀತಿಯಾದ ಬಿಗಿ ಬರುತ್ತದೆ. ಮಂತ್ರಿಗಳಾದವರು ಪ್ರವಾಸ ಹೋದಾಗ ಅಲ್ಲಿರುವ ಸರ್ಕಲ್ ಇನ್ಸ್‌ಪೆಕ್ಟರನ್ನಾಗಲೀ ದಫೇದಾರನನ್ನಾಗಲೀ ಕರೆದು ಯಾವ ಇನ್ಸ್‌ಟ್ರಕ್ಷನ್‌ಗಳನ್ನೂ ಕೊಡಕೂಡದು. ಮಂತ್ರಿಗಳು ಯಾವಾಗಲೂ ಆ ಏರಿಯಾದಲ್ಲಿರುವ ಸೂಪರಿಂಟೆಂಡೆಂಟರಿಗೆ ಎಲ್ಲ ಇನ್ಸ್‌ಟ್ರಕ್ಷನ್‌ನನ್ನು ಕೊಟ್ಟು ಅವರಿಗೇ ಹೇಳಬೇಕು. ಯಾವಾಗಲೂ ಆಯಾ ಜಿಲ್ಲೆಗಳಲ್ಲಿ ಜಿಲ್ಲಾ ಸೂಪರಿಂಟೆಂಡೆಂಟು ಎಂದು ಇರುತ್ತಾರೆ ಅವರ ಮೂಲಕವೇ ಯಾವ ಇನ್ಸ್‌ಟ್ರಕ್ಷನ್‌ನನ್ನಾದರೂ ಕೊಡಬೇಕು. ಇಲ್ಲೇನಾದರೂ ತಪ್ಪುಗಳು ಆಗಿದ್ದರೆ ಅಂತಹ ಅಧಿಕಾರಿಗಳನ್ನು ಅಲ್ಲೇ ಸ್ಯಾಕ್ ಮಾಡಬೇಕು. ಮಂತ್ರಿಗಳಾಗಿರುವವರು ಇತರ ಅಧಿಕಾರಗಳ ಬಗ್ಗೆ ಇಷ್ಟು ಸದರವಾಗಿ ಆಡಳಿತದಲ್ಲಿ ಮಾಡಿದರೆ ಇದು ಆಡಳಿತದ ಅದಕ್ಷತೆ ತೋರಿಸುತ್ತದೆ. ಇದನ್ನು ಮಾನ್ಯ ಉಪಮಂತ್ರಿಗಳಾದ ಶ್ರೀ ಬೋರಯ್ಯನವರೂ ತಿಳಿದುಕೊಳ್ಳಬೇಕು. ಇದನ್ನು ಅವರು ಮಾಡಿಲ್ಲ.

† ಶ್ರೀ ಹೆಚ್. ಸಿ. ಬೋರಯ್ಯ (ಸಾರಿಗೆ ಶಾಖೆಯ ಉಪಮಂತ್ರಿಗಳು).—ಸ್ವಾಮಿ, ಇದರ ಬಗ್ಗೆ ಮಾನ್ಯ ಸದಸ್ಯರು ಹಿಂದೆ ಪ್ರಶ್ನೆ ಕೇಳಿದಾಗಲೂ ವಿವರವಾಗಿ ಹೇಳಿದ್ದೆ. ಇದೊಂದು ದಿವಸ ಬಿಟ್ಟು ಬೇರೆ ಯಾವುದಾದರೂ ಒಂದು ಸಂದರ್ಭವನ್ನು ಇಲ್ಲಿ ಹೇಳಲಿ ಆಗ ನಾನು ಒಪ್ಪಿಕೊಳ್ಳುತ್ತೇನೆ. ಇದೂ ಕೂಡ ನಾನು ಅಲ್ಲಿಗೆ ಹೋಗಿದ್ದಾಗ ಇಲ್ಲಿ ಒಂದು ರೀತಿಯಾದ ಘರ್ಷಣೆಯಾಗುವಂತಹ ಸಂದರ್ಭ ಬಂದಿದೆ ಎಂದು ಗೊತ್ತಾದುದರಿಂದ ಮತ್ತು ಇಲ್ಲಿನ ಜನರಿಗೆ ಪೋಲೀಸು ಬಂದೋಬಸ್ತು ಅವಶ್ಯಕವಾಗಿ ಬೇಕು ಎಂದು ತಿಳಿದು ಬಂದುದರಿಂದ ಸಂಬಂಧಪಟ್ಟ ಪೋಲೀಸು ಅಧಿಕಾರಿಗಳಿಗೆ ತಕ್ಕ ಬಂದೋಬಸ್ತನ್ನು ಮಾಡಬೇಕೆಂದು ಹೇಳಲು ಇಲ್ಲಿ ನಾನು ಪ್ರವೇಶಮಾಡಬೇಕಾಯಿತು. ಇದಲ್ಲದೆ ಬೇರೆ ಯಾವುದಾದರೂ ಒಂದು ಉದಾಹರಣೆಯನ್ನು ಇಲ್ಲಿ ಕೊಟ್ಟು ಹೇಳಿದ್ದರೆ ಅದು ಸಮಂಜಸವಾಗಿರುತ್ತಿತ್ತು. ಹೋದ ಸಾರಿ ಕೂಡ ಇಲ್ಲಿ ಇದರ ಪ್ರಸ್ತಾಪ ಬಂದಾಗ ಇದೇ ಉದಾಹರಣೆಯನ್ನೇ ಆಗಲೂ ಕೊಟ್ಟರು. ಬೇರೆ ಯಾವುದಾದರೂ ಉದಾಹರಣೆಯನ್ನು ಕೊಟ್ಟಿದ್ದರೆ ಸರಿಯಾಗಿರುತ್ತಿತ್ತು. ಅದರೆ ಇಂದು ಸುಮ್ಮನೆ ಪೋಲೀಸು ಇಲಾಖೆಯಲ್ಲಿ ನಾನು ಪ್ರವೇಶ ಮಾಡುತ್ತಿದ್ದೇನೆ ಎಂದು ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ನೋಡಿ ನನಗೆ ತುಂಬಾ ವ್ಯಥೆಯಾಗುತ್ತದೆ. ಇಲ್ಲಿ ಘರ್ಷಣೆಯಾಗುತ್ತದೆ ಎಂದು ತಿಳಿದು ಬಂದುದರಿಂದ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಅಗತ್ಯ ಇದೆ ಎಂದೆ ಇಲ್ಲಿನ ಪೋಲೀಸು ಸೂಪರಿಂಟೆಂಡೆಂಟರವರಿಗೆ ಸುಗಮವಾಗಿ ಕೆಲಸ ನಡೆಯುವುದಕ್ಕಾಗಿ ಅವರಿಗೆ ಹೇಳಿದೆ ಅಷ್ಟೇ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಅದಕ್ಕಾಗಿ ಹೇಳುವುದು ಇಲ್ಲಿ ನಾನು ಹೇಳಿದ ಕೇಸನ್ನು ತಾವು ಸಂಪೂರ್ಣವಾಗಿ ಮತ್ತು ಸಕ್ಸಸ್‌ಫುಲ್ ಆಗಿ ಇನ್‌ವೆಸ್ಟಿಗೇಟು ಮಾಡಿಸಿ ನಾನು ಆಗ ಮಾನ್ಯ ಬೋರಯ್ಯನವರು ಇದರಲ್ಲಿ ಏನು ಮಾಡಿಲ್ಲ ಎಂದು ನಾನು ತಿಳಿದುಕೊಳ್ಳಬಹುದು. ಇದನ್ನು ಇನ್‌ವೆಸ್ಟಿಗೇಟು ಮಾಡಿಸದೆ ಏತಕ್ಕಾಗಿ ತಡಮಾಡುತ್ತಿದ್ದೀರಿ? ನಾನು ಮೊನ್ನೆ ಚಿತ್ರದುರ್ಗಕ್ಕೆ ಹೋದಾಗ ನನ್ನ ಹತ್ತಿರ ಕೆಲವು ಜನರು ಬಂದು ನಿಮ್ಮ ಸರಕಾರದಲ್ಲಿ ಕೇಳುವವರೇ ಇಲ್ಲ ನಿಮ್ಮ ಮಂತ್ರಿಗಳಾದ ಶ್ರೀಮಾನ್ ಬೋರಯ್ಯನವರೇ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಟ್ಟು ಹೀಗೆಲ್ಲಾ ಮಾಡುತ್ತಿದ್ದಾರೆ ಎಂದು ಹೇಳಿದರು. ಇದಕ್ಕಾಗಿ ತಾವು ಸರಿಯಾದ ರೀತಿಯಲ್ಲಿ ಇದನ್ನು ಇನ್‌ವೆಸ್ಟಿಗೇಟು ಮಾಡಿ ತಕ್ಕ ಕ್ರಮ ತೆಗೆದುಕೊಳ್ಳುವಂತೆ ಮಾಡಬೇಕು ಎಂದು ಇಲ್ಲಿ ಹೇಳುತ್ತೇನೆ. ಇದರ ಬಗ್ಗೆ ಇನ್ನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. I am not prepared to pursue it further. ಇನ್ನು ಕನ್‌ವಿಕ್ಷನ್ಸ್ ಬಗ್ಗೆ ಹೇಳಬೇಕಾಗಿದೆ.

Sri S. D. KOTHAVALE (Sankeswar).—For clearing my own doubt, suppose an ordinary member of the public finds that something is wrong and some police bandobust is needed, should he not bring it to the notice of the police and see that something is done? If an ordinary citizen can do it, I do not understand why a Deputy Minister or a Minister should not do it. To seek the aid in the proper context is not wrong.

ಶ್ರೀ ಎಚ್. ಸಿದ್ಧವೀರಪ್ಪ.—ನಾನು ನನ್ನ ಮಾನ್ಯ ಸ್ನೇಹಿತರಲ್ಲಿ ಇದನ್ನು ಏತಕ್ಕಾಗಿ ಹೇಳುತ್ತಿದ್ದೇನೆ ಎಂದರೆ ನಿಮ್ಮ ಹಿತದೃಷ್ಟಿಯಿಂದಲೇ ಹೇಳುತ್ತಿದ್ದೇನೆ. ಮಂತ್ರಿಗಳಾಗಿರುವವರು ಕೆಳದರ್ಜೆಯ ಅಧಿಕಾರಿಗಳೊಡನೆ ಮಾತನಾಡುವುದಕ್ಕೆ ಹೋದರೆ ಅದರಿಂದೇನಾಗುತ್ತದೆ ಎನ್ನುವುದು ತಮಗೆ ತಿಳಿಯುವುದಿಲ್ಲ. ಅವರು ಎಂತಹ ಪಾಕಡ ಜನರು ಇರುತ್ತಾರೆ ಎನ್ನುವುದು ನಿಮಗೆ ತಿಳಿಯುತ್ತಿಲ್ಲ. ನೀವು ಸರಿಯಾದ ಒಂದು ನೀತಿಯನ್ನು ಪರಿಪಾಲನೆ ಮಾಡಬೇಕಾದರೆ ಇದನ್ನು ಸರಿಯಾಗಿ ಮಾಡಬೇಕು, ಇವೊತ್ತು ಕಾಂಗ್ರೆಸ್ ಪಕ್ಷದವರಾದ ಶ್ರೀಮಾನ್ ಕೊಠಾವಳೆಯವರೇ ಬಂದು ಹೇಳಿದರು ಎಂದರೆ ನಿಮ್ಮ ಚೇಲವನ್ನು ಬಿಚ್ಚಿಸಿಬಿಡುತ್ತಾರೆ. ಇಂತಹ ಅಧಿಕಾರಿಗಳೂ ಇರುತ್ತಾರೆ ಇದರ ಬಗ್ಗೆ ಸರಿಯಾದ ರಿಪೋರ್ಟ್ ಕೂಡ ನಿಮಗೆ ಬರುವುದಿಲ್ಲ. ಇವೊತ್ತು ಒಂದು ಕ್ರಿಮಿನಲ್ ಕೇಸನ್ನು ಇನ್‌ವೆಸ್ಟಿಗೇಟು ಮಾಡದೇ ಇದನ್ನು ನಾಳೆ ಮಾಡುತ್ತೇವೆ ಎಂದು ಮಾಡುವುದಕ್ಕೆ ಹೋದರೆ ಅದರಿಂದ ಎಷ್ಟು ಬದಲಾವಣೆಯಾಗುತ್ತವೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿರಬೇಕು. ಅದಕ್ಕೋಸ್ಕರ ಇದನ್ನು ಸರಿಯಾಗಿ ತಿಳಿದುಕೊಳ್ಳಬೇಕು ಎಂದು ಹೇಳುತ್ತಿರುವುದು.

Sri S. D. KOTHAVALE.—It is a question of time also. If there is not sufficient time, he must make an approach even to the smallest officer.

ಶ್ರೀ ಎಚ್. ಸಿದ್ಧವೀರಪ್ಪ.—ಜಿಲ್ಲೆಯಲ್ಲಿ ಸುಪರಿಂಟೆಂಡೆಂಟ್ ಆಫ಼್ ಪೋಲೀಸ್ ಎನ್ನುವ ಅಧಿಕಾರಿಗಳೇ ಬಹಳ ರೆಸ್ಪಾನ್ಸಿಬಲ್ ಆಫೀಸರಾಗಿರುತ್ತಾರೆ. ಅವರಿಗೇ ಎಲ್ಲ ಸೂಚನೆಗಳನ್ನೂ ಕೊಡಬೇಕು. ಅವರ ಕೈಕೆಳಗಿರುವ ಸಣ್ಣ ಸಣ್ಣ ಅಧಿಕಾರಿಗಳಿಗೆ ಯಾವ ಸೂಚನೆಗಳನ್ನೂ ಕೊಡಬಾರದು. ಇದರಿಂದ ಜನಕ್ಕೆ ಕ್ಷೇಮವಾಗುವುದಕ್ಕೆ ಬದಲಾಗಿ ಅಕ್ಷೇಮವಾಗುತ್ತದೆ, ಇದನ್ನು ಮುಂದುವರಿಯುವುದಕ್ಕೆ ಅವಕಾಶಕೊಡಬಾರದು.

ಇನ್ನೊಂದು ವಿಷಯ ಹೇಳುತ್ತೇನೆ. ಇನ್‌ವೆಸ್ಟಿಗೇಷನ್ನಿನಲ್ಲಿ ಎಷ್ಟೆಷ್ಟು ಅನ್ಯಾಯವಾಗುತ್ತದೆ ಎನ್ನುವುದನ್ನು ನಾನು ನಡೆಸಿದ ಒಂದು ಕೇಸಿನಲ್ಲಿ ನೋಡಿದರೆ ಕಳವಳವಾಗುತ್ತದೆ. ಇದು ನಮ್ಮ ಆಡಳಿತದ ವೈಶಿಷ್ಟ್ಯ. ಒಂದು ಕೇಸಿನಲ್ಲಿ ಕೆಲವು ಜನ ಒಬ್ಬನನ್ನು ಹೊಡೆದರು. ಏನೋ ಮೈಮೇಲೆ ಸಣ್ಣಪುಟ್ಟ ಗಾಯಗಳಾಗಿದ್ದವು, Doctor ಮತ್ತು investigating Officer ಒಂದಾಗಿ ಸೇರಿ, ಕೈ ಮುರಿಯಿತು, ಕಾಲು ಮುರಿಯಿತು 14—15 ಗಾಯಗಳಾಗಿವೆ ಎಂದು ವರದಿ ಬರೆದಿದ್ದರು. ಇದು ಬಯಲಿಗೆ ಹೇಗೆ ಬಂತು ಅಂದರೆ ಸರ್ಕಂಸ್ಟಾನ್ಷಿಯಲ್ ಎವಿಡೆನ್ಸ್ ಮೂಲಕ. ಗಲಾಟೆಯಾದ ಸ್ಥಳಕ್ಕೆ ಇನ್ನೊಬ್ಬ ಡಾಕ್ಟರು ಹೋಗಿದ್ದರು. ಅಲ್ಲಿ ಏನೇನು ನಡೆದಿದೆ ಎನ್ನುವುದನ್ನು ಅವರು ಬರೆದುಕೊಂಡು ಬಂದಿದ್ದರು. ನನ್ನ 30 ವರ್ಷಗಳ ಅನುಭವದಲ್ಲಿ ಇಂಥ ಪ್ರಕರಣ ನನ್ನ ಮುಂದೆ ಬಂದಿರಲಿಲ್ಲ. ಈ ಕೇಸು ಹಾಕಬೇಕು ಎಂದು ಆ ಇನ್ನೊಬ್ಬ ಡಾಕ್ಟರನ್ನು ಹುಡುಕಿಕೊಂಡು ಹೋದರು. 14—15 ಗಾಯಗಳಾಗಿವೆ ಎಂದು ವರದಿ ಬರೆದಿದ್ದಾರೆ ಎಂದು ಅವರಿಗೆ ಹೇಳಿದರು. ಇನ್ನೊಬ್ಬ ಡಾಕ್ಟರರು ನೋಡಿದ್ದಾರೆ ಎನ್ನುವುದು ಮೊದಲನೇ ಡಾಕ್ಟರಿಗೆ ಗೊತ್ತಿರಲಿಲ್ಲ. ಅವರಿಂದ ಈ ವಿಷಯ ಹೊರಬಿತ್ತು. 2—3 ಗಾಯಗಳಾಗಿದ್ದವು ಎಂದು ಅವರು ತಿಳಿಸಿದರು. ಇದು ಗೊತ್ತಾದ ಮೇಲೆ ಕೋರ್ಟಿನ ಮುಂದೆ ಕೇಸು ಬಂದ ಮೇಲೆ ಅರಿಕೆ ಮಾಡಿಕೊಂಡು ಈ ಕೇಸಿನಲ್ಲಿ ವರದಿ ಮಾಡಿರುವುದು ಸುಳ್ಳು ಇದೆ ಎಂದು ತಿಳಿಸಿದೆವು. ಹೀಗಾದರೆ ಏನು ಸ್ವಾಮಿ ! ಈ ರೀತಿ ಮುಂದುವರಿದರೆ ಸಮಾಜದಲ್ಲಿ ನಿರಪರಾಧಿಯನ್ನು ಗಲ್ಲಿಗೆ ಏರಿಸಬಹುದು. ನೂರು ಜನ ತಪ್ಪಿಸಿಕೊಂಡರೂ ಚಿಂತೆಯಿಲ್ಲ ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದು ಎಂದು ತತ್ವ ಇದೆ. ಆ ರೀತಿ ಮಾಡಿದೀರಾ. ಕಣ್ಣಲ್ಲಿ ಕಣ್ಣು ಇಟ್ಟು ನೋಡಬೇಕು. ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರನ್ನು ನೇಮಕ ಮಾಡಿ ಅವರನ್ನು ಜವಾಬ್ದಾರರನ್ನಾಗಿ ಮಾಡಬೇಕು. ಅಂದರೆ ಜನರಲ್ಲಿ ನಂಬಿಕೆ ಬರುತ್ತದೆ ವಿಶ್ವಾಸ ಬರುತ್ತದೆ. ಇದರ ಬಗ್ಗೆ ಇನ್ನು ಹೆಚ್ಚಿಗೆ ಹೇಳಲು

(ಶ್ರೀ ಎಚ್. ಸಿದ್ಧವೀರಪ್ಪ)

ಹೋಗುವುದಿಲ್ಲ. ಪೋಲೀಸ್ ಇಲಾಖೆ ಸುಧಾರಿಸಲಿಕ್ಕೆ ಸಾಧ್ಯವಿದೆ, ಅದು ಎಲ್ಲಿಯುವರೆಗೆ ನೀವು ಮನಸ್ಸುಮಾಡಿ ಹಸ್ತಕ್ಷೇಪ ಮಾಡುವುದಿಲ್ಲ ಅಲ್ಲಿಯುವರೆಗೆ. ಅಧಿಕಾರಿಗಳು ತಪ್ಪು ಮಾಡಿದರೆ ಬೇಕಾದ ಶಿಕ್ಷೆ ಮಾಡಿ ಅದಕ್ಕೆ ನಾವು ಸಪೋರ್ಟ್ ಮಾಡುತ್ತೇವೆ. ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಬೇಕು. ಒಳ್ಳೇ ಅಧಿಕಾರಿಗಳಿಗೆ ಶಹಬ್ಬಾಸಗಿರಿ ಕೊಡಬೇಕು. ಈ ನಿಯಮವನ್ನು ನಡೆಸಿಕೊಂಡು ಬರುವುದು ಬಹಳ ಕಷ್ಟದ ಕೆಲಸ. ಕಟ್ಟ ಕಡೆಯಾಗಿ ಒಂದು ಮಾತು ಹೇಳುತ್ತೇನೆ. ಯುಧಿಷ್ಠಿರ ಧರ್ಮರಾಯನಂತೆ ಸತ್ಯ ಧರ್ಮದಿಂದ ನಡೆದರೆ ಪೋಲೀಸ್ ಇಲಾಖೆ ಸುಧಾರಿಸೀತು. ಯಮಧರ್ಮರಾಯನಂತೆ ದಂಡ ಇಟ್ಟುಕೊಂಡು ಶಿಕ್ಷೆ ಮಾಡುವುದಕ್ಕೆ ತಯಾರಾಗಬೇಕು ಎಂದು ಹೇಳಿ ಈ ಬೇಡಿಕೆಗಳನ್ನು ವಿರೋಧಿಸಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ–ರೂರಲ್).— ಮಾನ್ಯ ಸಭಾಪತಿಗಳೇ, ಈ ದಿವಸ ಸಭೆಯ ಮುಂದೆ ಇರುವ 12,13,41 ಎ, 39 ಈ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಚಾರ ಹೇಳಲು ಬಯಸುತ್ತೇನೆ. ಇದುವರೆಗೆ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಪೋಲೀಸ ಖಾತೆಯ ಬಗ್ಗೆ ಮಂತ್ರಿಗಳ ಬಗ್ಗೆ ಯಾವ ರೀತಿ ಸುಧಾರಣೆಯಾಗಬೇಕು ಎಂಬುದನ್ನು ಹೇಳಿದ್ದಾರೆ. ಇಡೀ ಹಿಂದುಸ್ತಾನದಲ್ಲಿ ನಮ್ಮ ರಾಜ್ಯದ ಪೋಲೀಸ್ ಇಲಾಖೆಯು ದಕ್ಷತೆಯಲ್ಲಿ ಯಾರಿಗೂ ಕಡಿಮೆ ಇಲ್ಲ ಎಂದು ಸ್ಪಷ್ಟವಾಗಿ ಧೈರ್ಯವಾಗಿ ಹೇಳುತ್ತೇನೆ. ಒಂದು ಉದಾಹರಣೆ ಕೊಡುವುದಾದರೆ ನಮ್ಮ ಮೈಸೂರು ರಾಜ್ಯದ ಪೋಲೀಸ್ ಇಲಾಖೆಯವರು ಕಿಂಗ್ಸ್ ಮೆಡಲ್, ಪೋಲೀಸ್ ಮೆಡಲ್, ರಾಷ್ಟ್ರಾಧ್ಯಕ್ಷರ ಮೆಡಲ್ ಮುಂತಾದ ಪದಕಗಳನ್ನು ಮೈಸೂರಿನವರು ಎಷ್ಟು ಪಡೆದಿದ್ದಾರೋ ಅಷ್ಟು ಯಾರೂ ಪಡೆದಿಲ್ಲ ಎಂದು ಹೇಳುತ್ತೇನೆ. ದಕ್ಷ ಮಂತ್ರಿಗಳು ಇರಬೇಕು ಎಂದು ಅವರು ಹೇಳಿದರು. ದಕ್ಷತೆಯಲ್ಲಿ ಶ್ರೀ ಆರ್. ಎಂ. ಪಾಟೀಲರವರು ಹೆಸರುಗಳಿಸಿದ್ದಾರೆ. ಅವರು ದಕ್ಷರಾಗಿರುವುದರಿಂದಲೇ ಪೋಲೀಸ್ ಖಾತೆ ಅವರಿಗೆ ಸಿಕ್ಕಿದೆ. ನಡುವೆ ಕೆಲವು ಕಾಲ ಬೇರೆ ಇಲಾಖೆ ತೆಗೆದುಕೊಂಡು ನೋಡಿದರು. ಮತ್ತು ಪೋಲೀಸ ಖಾತೆಗೆ ಬಂದರು. ಅವರು ಗೃಹ ಮಂತ್ರಿಗಳಾಗಿರುವುದರಿಂದ ರಾಜ್ಯದಲ್ಲಿ ನೆಮ್ಮದಿ ಬಂದಿದೆ. ಅವರ ಆಡಳಿತದಲ್ಲಿ ಪೋಲೀಸ್ ಖಾತೆ ಚೆನ್ನಾಗಿ ನಡೆಯುತ್ತಿದೆ. ಕುಂದು ಕೊರತೆಗಳು ಬರುವುದಿಲ್ಲ ಎಂದು ಭರವಸೆ ಇದೆ. ಪೋಲೀಸ್ ಪದದ ಪ್ರತಿಯೊಂದು ಅಕ್ಷರದಲ್ಲಿ ಇದು ಕಂಡು ಬರುತ್ತದೆ.

ಪಿ. ಅಂದರೆ ಪೊಲೈಟ್
ಓ. ಅಂದರೆ ಒಬೀಡಿಯೆಂಟ್
ಎಲ್. ಅಂದರೆ ಲೀಗಲ್ ಮೈಂಡೆಡ್
ಐ. ಅಂದರೆ ಇಂಟೆಲಜೆಂಟ್
ಸಿ. ಅಂದರೆ ಕಾನ್‌ಫಿಡೆಂಟ್
ಈ. ಅಂದರೆ ಎಫೀಶಿಯೆಂಟ್

ಪಿ.ಓ.ಎಲ್.ಐ ಸಿ.ಈ. ಎಂಬ ಅಕ್ಷರಗಳಿಂದ ಪೋಲೀಸ್ ಶಬ್ದ ಆಗಿದೆ. ಪೋಲೀಸರು ಈ ಪ್ರಕಾರ ಇದ್ದಾರೆ. ಮಂತ್ರಿಗಳನ್ನು ನೋಡಿದರೂ ಕೂಡ ಇದಕ್ಕೂ ಹೆಚ್ಚಾಗಿ ಇದ್ದಾರೆ ಆದುದರಿಂದಲೇ ಅವರಿಗೆ ಈ ಖಾತೆ ಕೊಟ್ಟಿದ್ದಾರೆ.

ಪರ ರಾಷ್ಟ್ರಗಳಲ್ಲಿಯ ಪೋಲೀಸರು ಅಮೇರಿಕಾದಲ್ಲಿಯ ಪೋಲೀಸರು ಚೆನ್ನಾಗಿ ಕೆಲಸ ಮಾಡುತ್ತಾರೆ ಹಿಂದುಸ್ಥಾನದಲ್ಲಿ ಚೆನ್ನಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಪರ ರಾಷ್ಟ್ರದಲ್ಲಿ ಪೋಲೀಸರಿಗೆ ಕೊಡುವ ಸೌಕರ್ಯ ಇಕ್ವಿಪ್ಮೆಂಟ್ ಇವರಲ್ಲಿ 10ಕ್ಕೆ 1ರಷ್ಟು ಕೂಡ ಕೊಡುತ್ತಿಲ್ಲ. ಆದುದರಿಂದ ನಮ್ಮ ಪೋಲೀಸರಿಗೆ ಮೋಟಾರ್‌ವ್ಯಾನ್ ಕೊಡಬೇಕು, ಟೆಲಿಫೋನ್ ವ್ಯವಸ್ಥೆ ಮಾಡಿ ಕೊಡಬೇಕು ಬೇರೆ ಬೇರೆ ಇಕ್ವಿಪ್‌ಮೆಂಟ್ ಕೊಡಬೇಕು. ಇಂಥ ಇಕ್ವಿಪ್‌ಮೆಂಟ್ ಕೊಡದೇ ಸೌಕರ್ಯ ಒದಗಿಸಿ ಕೊಡದೇ ಸ್ಕಾಟ್‌ಲಂಡ್ ಯಾರ್ಡ್ ಪೋಲೀಸರ ಹಾಗೆ ಕೆಲಸ ಮಾಡಬೇಕು ಎಂದು ಹೇಳಿದರೆ ಹೇಗೆ ಆಗುತ್ತದೆ? ಈ ಎಲ್ಲ ಸೌಕರ್ಯ ಕೊಟ್ಟು ಪ್ರತಿಯೊಂದು ಜಿಲ್ಲೆಗೆ ಒಂದು ಹೆಲಿಕಾಪ್ಟರ್ ಕೊಡಬೇಕು. ಅಪರಾಧ ನಡೆದ ಸ್ಥಳಕ್ಕೆ ಹೋಗಲು ಹೆಚ್ಚು ವೇಳೆ ಬೇಕಾಗುವುದನ್ನು ತಪ್ಪಿಸುವುದಕ್ಕೆ ಹಾಗೂ ತಕ್ಷಣ ಹೋಗುವುದಕ್ಕೆ ಇದು ಬೇಕು. ಆದುದರಿಂದ ಪ್ರತಿಯೊಂದು ಜಿಲ್ಲೆಗೆ ಒಂದು ಹೆಲಿಕಾಪ್ಟರ್ ಒಂದು ಮೋಟಾರ್ ವ್ಯಾನ್ ಕೊಡಬೇಕು ಎಂದು ಸೂಚನೆ ಮಾಡುತ್ತೇನೆ. ಈ ಎಲ್ಲಾ ಇಕ್ವಿಪ್‌ಮೆಂಟ್ ಕೊಟ್ಟರೆ ಚೆನ್ನಾಗಿ ಕೆಲಸ ಮಾಡಲು

ಅನುಕೂಲವಾಗುತ್ತದೆ. ಪೋಲೀಸರ ತಲೆಯ ಮೇಲಿನ ಪಗಡಿ ಕೂಡ ಭಾರವಾದದ್ದು ಆಗಿದೆ. ಅದನ್ನು ಕೂಡ ಭಾರವಿಲ್ಲದ ಸಣ್ಣ ಪ್ರಮಾಣದ್ದು ಫಾರೆನ್ ಕಂಟ್ರೀಜನಲ್ಲಿ ಇರುವ ಹಾಗೆ ಮಾಡ ಬೇಕು. ಇಂಥ ಸೌಕರ್ಯ ಪೋಲೀಸ್ ಸಿಬ್ಬಂದಿಗೆ ಕೊಟ್ಟು ಅವರಲ್ಲಿ ಚೈತನ್ಯ ಹುಟ್ಟಿಸಿದರೆ ಅವರಿಂದ ಉತ್ತಮ ಕೆಲಸ ಪಡೆಯಬಹುದು ಎಂದು ಹೇಳುತ್ತೇನೆ.

11-00 A.M.

ಕರಾವಳಿ ಪ್ರದೇಶದಲ್ಲಿ ಬೇಕಾದಷ್ಟು ಗುನ್ಹೆಗಳು ಆಗುತ್ತಿರುತ್ತವೆ. ಅಲ್ಲಿರುವ ಪೋಲೀಸರಿಗೆ ಬೇಕಾದ ಪದಾರ್ಥಗಳನ್ನು ಕೊಟ್ಟಿಲ್ಲ. ಕಡಲುಗಳ್ಳರು, ಸ್ಮಗ್ಲರ್ಸ್, ಬ್ಲಾಕ್ ಮಾರ್ಕೆಟೀರ್ಸ್ ಇವರೆಲ್ಲ ಪೋಲೀಸರ ಕೈಗೆ ಸಿಕ್ಕದೆ ದೋಣಿಗಳಲ್ಲಿ, ಹಡಗಿನಲ್ಲಿ, ಲಾಂಚ್‌ಗಳಲ್ಲಿ ತಪ್ಪಿಸಿಕೊಂಡು ಹೋಗುತ್ತಾರೆ. ಕರಾವಳಿ ಪ್ರದೇಶದಲ್ಲಿ ಪೋಲೀಸ್ ಲಾಂಚಸ್ ನಿರ್ಮಾಣ ಮಾಡಿ ಅದರ ಮುಖಾಂತರ ತುಡುಗರನ್ನು, ಕಳವು ಮಾಡಿದ ಜನರನ್ನು ಕಳ್ಳ ಸಾಗಣೆ ಮಾಡುವವರನ್ನು ಹಿಡಿಯುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಮೈಸೂರು ಸಂಸ್ಥಾನದ ದೃಷ್ಟಿಯಿಂದ ನೋಡಬೇಕು ಎಂದರೆ ಗುಲ್ಬರ್ಗ, ಅಥವಾ ಬಿದರೆ ಯಲ್ಲಿ ಒಂದು ದಂಗೆ ಆಯಿತು ಎಂದರೆ ಅಲ್ಲಿಗೆ ಹೆಡ್‌ಕ್ವಾರ್ಟರ್‌ನಿಂದ ಪೋಲೀಸ್ ದಳವನ್ನು ಕಳುಹಿಸ ಬೇಕು. ಇದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಪೋಲೀಸ್ ಇಲಾಖೆಗೆ 8,15,00,000 ರೂಪಾಯಿಗಳನ್ನು ಒದಗಿಸಿ ಅದರಲ್ಲಿ ಎಲ್ಲ ಮಾಡಬೇಕು ಎಂದರೆ ಪ್ರತಿ ವರ್ಷ ನಾವು ಇಷ್ಟು ಮಾತ ನಾಡಿದೆವು ನಾವು ಇಷ್ಟು ಮಾತನಾಡಿವೆವು ಎಂದುಕೊಂಡು ನಾವು ನಮ್ಮ ಮನೆಗೆ ಹೋಗುವಂಥ ಸಂದರ್ಭವಾಗುತ್ತದೆ. ಪೋಲೀಸ್ ದಳವನ್ನು ಉತ್ತಮ ರೀತಿಯಿಂದ, ಇಪ್ಪತ್ತನೇ ಶತಮಾನಕ್ಕೆ ಅನುಗುಣವಾಗಿರುವಂತೆ ವ್ಯವಸ್ಥೆ ಮಾಡಿ ಅದಕ್ಕೆ ಬೇಕಾಗುವ ದುಡ್ಡನ್ನು ಕೊಡಬೇಕು.

ಹೆಣ್ಣು ಮಕ್ಕಳನ್ನು ಕೇವಲ ನರ್ಸಗಳು, ಡಾಕ್ಟರುಗಳು ಇಂಥ ಕೆಲಸಗಳನ್ನು ಮಾಡಲು ಕಲಿಸುತ್ತಿದ್ದಾರೆ. ಹೆಣ್ಣು ಮಕ್ಕಳಿಗಾಗಿ ಕಿತ್ತೂರು ಚೆನ್ನಮ್ಮನ ಹೆಸರಿನಲ್ಲಿ ಒಂದು ಪೋಲೀಸ್ ಕಾಲೇಜನ್ನು ತೆರೆದು ಅದರಲ್ಲಿ ಹೆಣ್ಣು ಮಕ್ಕಳಿಗೆ ಟ್ರೇನಿಂಗ್ ಕೊಟ್ಟು, ಹೆಣ್ಣು ಮಕ್ಕಳ ಗುನ್ಹೆ ಗಳನ್ನು ಅವರ ಮುಖಾಂತರ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿದೆ. ಸರ್ಕಾರದವರು ಈ ಬಗ್ಗೆ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಹಿಂದಿನ ಬೊಂಬಾಯಿ ಪ್ರಾಂತದಲ್ಲಿ ಚೌಕಿ ಪದ್ಧತಿ ಇತ್ತು. ಆದರೆ ಈಚೆಗೆ ಆ ಪದ್ಧತಿ ಯನ್ನು ತೆಗೆದಿದ್ದಾರೆ. ಒಬ್ಬ ಕಾನ್‌ಸ್ಟೇಬಲ್, ಒಬ್ಬ ಹೆಡ್ ಕಾನ್‌ಸ್ಟೇಬಲ್ ಅವರು ಆಯಾ ಭಾಗದಲ್ಲಿ ಸಂಚರಿಸಿ ಪುಸ್ತಕದಲ್ಲಿ ಸೈನ್ ಮಾಡಿದರೆ ಅವರು ಕರ್ತವ್ಯ ಮುಗಿಯಿತು ಎಂದು ತಿಳಿದು ಕೊಂಡಿದ್ದಾರೆ. ಪೋಲೀಸಿನವರು ಬಂದು ಆ ಕಡೆ ಹೋದ ಕೂಡಲೇ ಜನ ತುಡುಗು ಮಾಡುವುದಕ್ಕೆ ಶುರು ಮಾಡುತ್ತಾರೆ. ಈ ರೀತಿಯ ಗುನ್ಹೆಗಳನ್ನು ತಡೆಯುವುದಕ್ಕೆ ಈಗ ಸಾಧ್ಯವಿಲ್ಲ. ಚೌಕಿ ಪದ್ಧತಿಯನ್ನು ತೆಗೆದು ಹಾಕಿರುವುದರಿಂದ ಈ ರೀತಿಯಾಗಿ ರಾತ್ರಿ ಕಾಲದಲ್ಲಿ ನಡೆಯತಕ್ಕ ಗುನ್ಹೆ ಗಳನ್ನು ತ್ವರಿತಗತಿಯಿಂದ ತಡೆಯುವುದಕ್ಕೆ ಸಾಧ್ಯವಿಲ್ಲ. ಹಿಂದೆ ಇದ್ದಂತೆ ಚೌಕಿ ಪದ್ಧತಿಯನ್ನು ಪುನರುಜ್ಜೀವನಗೊಳಿಸಬೇಕು ಎಂದು ಹೇಳುತ್ತೇನೆ.

ಮೈಸೂರು ಸಂಸ್ಥಾನದಲ್ಲಿ ಎರಡು ಕಾರ್ಪೊರೇಷನ್‌ಗಳಿವೆ. ಒಂದು ಬೆಂಗಳೂರು ಕಾರ್ಪೊರೇಷನ್ ಇನ್ನೊಂದು ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್. ಬೆಂಗಳೂರಿನಲ್ಲಿ ಜನಗಳಿಗೆ ಉಪಯೋಗವಾಗಬೇಕು ಎಂದು ಅಗ್ನಿಶಾಮಕ ದಳಗಳನ್ನು ಇಟ್ಟಿದ್ದಾರೆ. ಹುಬ್ಬಳ್ಳಿ ಧಾರವಾಡ ಕಾರ್ಪೊರೇಷನ್‌ನಲ್ಲಿ ಏಕೆ ಅಗ್ನಿಶಾಮಕ ದಳವನ್ನು ಇಟ್ಟಿಲ್ಲ ಎಂದು ಕೇಳಿದ್ದಕ್ಕೆ ಅದು ಸಣ್ಣ ಕಾರ್ಪೊರೇಷನ್ ಆದ್ದರಿಂದ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು. ದೊಡ್ಡ ಕಾರ್ಪೊರೇಷನ್ ಇರಲಿ, ಸಣ್ಣ ಕಾರ್ಪೊರೇಷನ್ ಇರಲಿ ಎಲ್ಲ ಕಡೆಗೂ ಅಗ್ನಿಶಾಮಕ ದಳದ ಸೌಕರ್ಯ ಬೇಕು. ಬೆಂಗಳೂರಿನಲ್ಲಿ ಸಿಕ್ಕಬಹುದಾದ ಸೌಕರ್ಯಗಳು ಹುಬ್ಬಳ್ಳಿ ಧಾರವಾಡದಲ್ಲಿಯೂ ಸಿಕ್ಕಬೇಕು. ಅದಕ್ಕೆ ಬೇಕಾದ ವ್ಯವಸ್ಥೆ ಮಾಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಪೋಲೀಸ್ ಖಾತೆಯಲ್ಲಿ ದಕ್ಷತೆ ಹೆಚ್ಚಾಗಬೇಕೆಂದು ಕೆಲವೊಂದು ದಿವಸ ಸ್ಕಾಟ್ಲೆಂಡ್ ಯಾರ್ಡ್, ಅಮೇರಿಕಾ, ಇಂಥ ಕಡೆಗಳಿಗೆ ತರಬೇತಿ ಪಡೆಯಲು ಕಳಿಸುತ್ತಿದ್ದರು. ಈಗ ವಿದೇಶಿ ವಿನಿಮಯ ಸಿಕ್ಕುವುದಿಲ್ಲ ಎಂದು ಅದನ್ನು ಬಂದು ಮಾಡಿದ್ದಾರೆ. ಪ್ರತಿಯೊಂದು ಕೆಲಸಕ್ಕೆ ಕೇಳಿದಾಗಲೂ ವಿದೇಶಿ ವಿನಿಮಯದ ತೊಂದರೆ ಇದೆ ಎಂದು ಹೇಳುತ್ತ ಹೋದರೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಹೆಡ್ ಕಾನ್‌ಸ್ಟೇಬಲ್ ರ್‍ಯಾಂಕ್‌ನಿಂದ ಹಿಡಿದು ಸೂಪರಿಂಟೆಂಡೆಂಟ್ ರ್‍ಯಾಂಕ್‌ವರೆಗೆ ದಕ್ಷರಾದ ಪೋಲೀಸ್ ಅಧಿಕಾರಿಗಳನ್ನು ಸ್ಕಾಟ್ಲೆಂಡ್ ಯಾರ್ಡಿಗೆ ಕಳಿಸಿ ಅಲ್ಲಿಂದ ಅವರು ಟ್ರೇನಿಂಗ್

(ಶ್ರೀ ಎಸ್. ಪಿ. ಅಗ್ನಿಹೋತ್ರಿ)

ಪಡೆದು ಬರುವರು ಮಾಡಬೇಕು ಎಂದು ನಾನು ಇಲ್ಲಿ ಸೂಚಿಸಬಯಸುತ್ತೇನೆ. ವಿದೇಶಿ ವಿಸಿನು ಯಿದ ತೊಂದರೆ ಈ ವಿಷಯಗಳಿಗೆ ಅಡ್ಡಿ ಬರಬಾರದು ಎಂದು ತಿಳಿಸಬಯಸುತ್ತೇನೆ.

ಪೋಲೀಸನವರು ಕೆಲಸ ಮಾಡುವಾಗ ಅವರಿಗೆ ತೊಂದರೆ ಇದೆ. ಅವರು ಗುಂಡು ಹಾರಿಸಿದರೆ ಏಕೆ ಹಾಗೆ ಮಾಡಿದಿರಿ ಎಂದು ಕೇಳುತ್ತಾರೆ ಗುಂಡು ಹಾರಿಸದೆ ಬಿಟ್ಟರೆ ನೆಗ್ಲಿಜೆನ್ಸ ಆಫ್ ಡ್ಯೂಟಿ ಎಂದು ಹೇಳುತ್ತಾರೆ. ಇಂಥ ಕಠಿಣ ಪರಿಸ್ಥಿತಿಯಲ್ಲಿ ಅವರು ಕೆಲಸ ಮಾಡತಕ್ಕ ಸಂಭವವಿರುವುದರಿಂದ ಸರ್ಕಾರದವರು ಇವರಿಗೆ ರಕ್ಷಣೆಯನ್ನು ಕೊಡದೆ ಹೋದರೆ ಯೋಗ್ಯರಾದ ಪೋಲೀಸ್ ಅಧಿಕಾರಿಗಳನ್ನು ನಾವು ಕಳೆದುಕೊಳ್ಳುವ ಪ್ರಸಂಗ ಬರುತ್ತದೆ. ಉದಾಹರಣೆಗೆ ಹೇಳಬೇಕಾದರೆ ಎಲ್ಲಿಯಾದರೂ ಒಂದು ಕೊಲೆ ಆಯಿತು ಎಂದರೆ ಫಸ್ಟ್ ಹ್ಯಾಂಡ್ ಇನ್‌ಫರ್ಮೇಷನ್ ಎಂದರೆ ಮುಂಚೆ ನೋಡಿದವರು ಯಾರು, ಇನ್‌ಫರ್ಮೇಷನ್ ಕೊಟ್ಟವರು ಯಾರು ಎನ್ನುವುದರ ಮೇಲೆ ಮುಂದಿನ ಇನ್‌ವೆಸ್ಟಿಗೇಷನ್ ಪ್ರಾರಂಭ ಮಾಡುತ್ತಾರೆ. ಇಂಗ್ಲೆಂಡ್ ದೇಶದಲ್ಲಿ ಎಲ್ಲಿಯಾದರೂ ಕೊಲೆಯಾದರೆ, ಅದನ್ನು ನೋಡಿದ ಕೂಡಲೇ ಹೆಣ್ಣು ಮಗಳಾಗಲೀ, ಗಂಡುಮಗನಾಗಲೀ ಇಂಥ ಕಡೆ ಕೊಲೆಯಾಗಿದೆ, ಅದರ ಇನ್‌ವೆಸ್ಟಿಗೇಷನ್ ಮಾಡಿರಿ ಎಂದು ಹೇಳುತ್ತಾರೆ. ಹಿಂದೂಸ್ಥಾನದ ಜನರು ಇಂಥ ಸಮಾಚಾರವನ್ನು ಪೋಲೀಸ್ ಠಾಣೆಗೆ ತಿಳಿಸಿದರೆ ನನ್ನನ್ನೇ ಹಿಡಿದುಕೊಂಡು ಹೋಗುತ್ತಾರೆಂದು ಯಾರು ಸುದ್ದಿ ಕೊಡುವುದಿಲ್ಲ. ಅಕಸ್ಮಾತ್ ಪೋಲೀಸರಿಗೆ ತಿಳಿಸೋಣವೆಂದರೆ ಇಲಾಖೆಯ ಮೇಲಾಧಿಕಾರಿಗಳು ಆ ಗುನ್ಹೆಯ ವಿಚಾರದಲ್ಲಿ ಸಾಕಷ್ಟು ಕೆಲಸ ಮಾಡಿಲ್ಲ ಎಂದು ತಿಳಿದುಕೊಂಡು ಸಂಬಂಧಪಟ್ಟ ಪೋಲೀಸ್ ಅಧಿಕಾರಿಯನ್ನು ಸಸ್ಪೆಂಡ್ ಮಾಡಿಯಾರು ಎನ್ನುವ ಭಯದಿಂದ ಸುದ್ದಿ ಕೊಟ್ಟವನನ್ನೇ ಅರೆಸ್ಟ್ ಮಾಡುವುದಕ್ಕೆ ಶುರು ಮಾಡುತ್ತಾರೆ. ಅಕಸ್ಮಾತ್ ಒಂದು ಪಂಚನಾಮೆ ಮಾಡಲು ಬನ್ನಿ ಎಂದರೂ ಯಾರೂ ಮುಂದೆ ಬರುವುದಿಲ್ಲ. ಇದರಿಂದಾಗಿ ಅವರು ಒಂದು ಖಾಯಂ ಪಂಚರನ್ನು ಮಾಡಿಕೊಂಡಿದ್ದಾರೆ. ಎಲ್ಲಿಯಾದರೂ ಗುನ್ಹೆ ಅಥವಾ ಕೊಲೆಯಾಯಿತು ಎಂದರೆ ಪೋಲೀಸರು ಈ ಖಾಯಂ ಪಂಚರನ್ನೇ ಕರೆದುಕೊಂಡು ಹೋಗಿ ಉಪಯೋಗ ಮಾಡಿಕೊಳ್ಳುತ್ತಾರೆ. ಪೋಲೀಸರು ಏನು ಪಂಚನಾಮೆ ಬರೆಯುತ್ತಾರೆ ಅದಕ್ಕೆ ನಿಂಗಪ್ಪ ಫಕೀರಪ್ಪ, ಹೀಗೆ ಖಾಯಂ ಪಂಚರಾದವರು ರುಜು ಹಾಕಿರುತ್ತಾರೆ. ಇಂಥದ್ದನ್ನು ನಿವಾರಿಸಲು ಅಪರಾಧ ನಿರೋಧ ಕ್ಲಬ್‌ಗಳನ್ನು ತೆರೆಯಬೇಕು ಮತ್ತು ಅವುಗಳ ಮುಖಾಂತರ ಜನಜಾಗೃತಿಯನ್ನು ಉಂಟುಮಾಡಬೇಕು ಎಂದು ನಾನು ಸೂಚಿಸಬಯಸುತ್ತೇನೆ.

ಪೋಲೀಸ್ ಖಾತೆಗೆ ಈಗ ಇರುವಂಥ ಬಜೆಟ್ ಬಹಳ ಕಡಿಮೆ ಇದೆ. ಇದಕ್ಕೆ ಇನ್ನೂ ಹೆಚ್ಚು ದುಡ್ಡು ಕೊಡಬೇಕು ಮತ್ತು ಅವರು ದಕ್ಷತೆಯಿಂದ ಕೆಲಸ ಮಾಡುವಂತೆ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

ಜೈಲುಗಳ ವಿಷಯವಾಗಿ ಹೇಳಬೇಕೆಂದರೆ ರಾಜ್ಯದಲ್ಲಿ ಮೂರು ದರ್ಜೆಯ ಜೈಲುಗಳಿವೆ. ಇಷ್ಟೊಂದು ಜೈಲುಗಳಿದ್ದರೂ ಅವುಗಳಿಗೆ ರೆವೆನ್ಯೂ ಅಧಿಕಾರಿಗಳನ್ನು ಜೈಲರ್‌ಗಳಾಗಿ ನೇಮಕ ಮಾಡುತ್ತೀರಿ. ಮುಂಚಿನಿಂದಲೂ ಡ್ರೆಸ್ ಹಾಕಿ ಅವರಿಗೆ ರೂಢಿ ಇರುವುದಿಲ್ಲ. ಯಾವಾಗಲೂ ಮಫ್ತಿಯಲ್ಲಿ ಇದ್ದವರು. ಒಮ್ಮಿಂದೊಮ್ಮೆಗೇ ಅವರಿಗೆ ಡ್ರೆಸ್ ಕೊಟ್ಟರೆ ಹಾಕಿಕೊಳ್ಳಲಿಕ್ಕೆ ಅವರು ಕಷ್ಟ ಪಡುವುದನ್ನು ನಾವು ನೋಡಿದ್ದೇವೆ ಅವರಿಗೆ ಡ್ರೆಸ್ ಹಾಕಿಕೊಂಡು ನಡೆಯುವುದಕ್ಕೆ ಬರುವುದಿಲ್ಲ. ಜೈಲರ್‌ಗಳಾಗಿ ನೇಮಕ ಮಾಡುವವರಿಗೆ ಟ್ರೇನಿಂಗ್ ಕೊಟ್ಟು ನಂತರ ಅವರನ್ನು ಆ ಕೆಲಸಕ್ಕೆ ನೇಮಕ ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ.

ಜೈಲುಗಳ ಸುಧಾರಣೆ ಮಾಡಬೇಕು ಎಂದು ಹೇಳುತ್ತಾರೆ. ಈಗಲೇ ಸುಧಾರಣೆ ಸಾಕಷ್ಟು ಆಗಿದೆ. ಮುಂಚೆಗೆ ಅವರ ಕಡೆಯಿಂದ ನೀರು ಶರುವುದು, ಗರಿಕೆ ತೆಗೆಯುವುದು. ಇಂಥ ಕೆಲಸಗಳನ್ನೆಲ್ಲ ಮಾಡಿಸುತ್ತಿದ್ದರು. ಈಗ ಬೆಳಗಾದರೆ ಚಾ, ಮಧ್ಯಾಹ್ನ ಊಟ, ಇವನ್ನೆಲ್ಲ ಕ್ರಮವಾಗಿ ಕೊಡುತ್ತಿದ್ದಾರೆ. ಇದರಿಂದಾಗಿ ಒಳಗಿರುವವರು ಹೊರಗೆ ಬರುವುದಿಲ್ಲ. ಹೊರಗೆ ಬಂದವರು ಯಾವಾಗ ಒಳಗೆ ಹೋಗುತ್ತೇನೆ ಎಂದು ಅಪೇಕ್ಷೆ ಪಡುತ್ತಿರುತ್ತಾನೆ. ದಯವಿಟ್ಟು ಇದನ್ನು ತಪ್ಪಿಸಬೇಕು. ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಇನ್ನು ಜೈಲುಗಳ ಸುಧಾರಣೆಯನ್ನು ಮಾಡಬೇಡಿ ಅಕಸ್ಮಾತ್ ಏನಾದರೂ ಸುಧಾರಣೆ ಮಾಡಿದರೆ ಹೊರಗಿನವರು ಏನಾದರೂ ನೆವದಿಂದ ಒಳಗೆ ಹೋಗುತ್ತಾರೆ ಹೊರಗೆ ಜೀವನ ಮಾಡುವುದು ಕಷ್ಟವಾಗಿರುವಾಗ ಒಳಗೆ ಇರಲು ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಇನ್ನು ಸುಧಾರಣೆ ಮಾಡುವುದನ್ನು ಬಂದ್ ಮಾಡಿ ಎಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಜೈಲು ಆಡಳಿತದಲ್ಲಿ ನಾಲ್ಕು ಭಾಗದಿಂದ ಜನರು ಬಂದಿದ್ದಾರೆ, ಅವರ ಸೀನಿಯಾರಿಟಿ ಲಿಸ್ಟ್ ಇನ್ನೂ ಆಗದೆ ಸಾಕಷ್ಟು ಅನ್ಯಾಯವಾಗಿದೆ. ದಯಮಾಡಿ ಇದನ್ನು ಜಾಗ್ರತೆ ಮಾಡಬೇಕು ಮತ್ತು

ಈ ಬಗ್ಗೆ ವಿಚಾರ ಮಾಡಿ ಅನ್ಯಾಯವಾಗಿರುವ ಅಧಿಕಾರಿಗಳಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಜೈಲುಗಳಲ್ಲಿರುವ ಮಹಿಳಾ ಖೈದಿಗಳನ್ನು ನೋಡಿಕೊಳ್ಳಲು ಮಹಿಳಾ ಅಧಿಕಾರಿಗಳನ್ನು ನೇಮಿಸುವ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಪೋಲೀಸ್ ಇಲಾಖೆಯಲ್ಲಿ ಅಧಿಕಾರಿಗಳಲ್ಲಿ ಯಾವುದೇ ತರಹ ನ್ಯೂನತೆಗಳಿದ್ದರೂ ಸೀನಿಯಾರಿಟಿ ಪ್ರಕಾರ ಅವರಿಗೆ ಪ್ರಮೋಷನ್‌ಗಳನ್ನು ಕೊಡದ ಒಂದು ತತ್ವದ ದೃಷ್ಟಿಯಿಂದ ಯಾರು ಯೋಗ್ಯರಿದ್ದಾರೆ, ಯಾರು ಚೆನ್ನಾಗಿ ಕೆಲಸ ಮಾಡಿದ್ದಾರೆ ಅಂಥವರಿಗೆ ಪ್ರಮೋಷನ್ ಕೊಡುತ್ತ ಬಂದರೆ ಅವರಿಗೆ ಸ್ಫೂರ್ತಿ ಬಂದು ಆಗ ಅವರು ಏನು ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ ಅದಕ್ಕಿಂತ ಉತ್ತಮ ಸೇವೆಯನ್ನು ಅವರಿಂದ ಪಡೆಯಬಹುದು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಅಧ್ಯಕ್ಷರೇ, ಶ್ರೀ ನಿಜಲಿಂಗಪ್ಪನವರ ರಾಜ್ಯದಲ್ಲಿ ಲಂಚದ ಧಾರಣೆ ನಿಗದಿಯಾಗಿರುವುದನ್ನು ನೋಡಿ ಸಂತೋಷವಾಗಿದೆ. ಈಗ ಮಾನವಿ ತಾಲ್ಲೂಕು ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಧಾರಣೆ ನಿಗದಿಯಾಗಿರುವುದನ್ನು ತಿಳಿಸಿದ್ದಾರೆ. 500 ರೂಪಾಯಿ ಕೊಟ್ಟರೆ ಜಾಮೀನು ಕೊಡಬಹುದು, ಒಂದು ಸಾವಿರ ರೂಪಾಯಿ ಕೊಟ್ಟರೆ ಬಿಡುಗಡೆ ಮಾಡಿಸಿಕೊಳ್ಳಬಹುದು, 15 ನೂರು ರೂಪಾಯಿ ಕೊಟ್ಟರೆ ಡಿಕ್ರಿ ಪಡೆಯಬಹುದು ಎಂದು ತಿಳಿಸಿದ್ದಾರೆ. ಪೋಲೀಸು ಇಲಾಖೆ ಲಂಚಮಯವಾಗಿದೆ. ಆ ಇಲಾಖೆಯಲ್ಲಿ ಲಂಚದ ನಿದರ್ಶನ ಹೇಳಬೇಕಾದರೆ ಪೋಲೀಸು ಠಾಣೆಗೆ ಒಬ್ಬ ಆರೋಪಿಯನ್ನು ಹಿಡಿದುಕೊಂಡು ಹೋದರೆ ಅವನನ್ನು ಜಾಮೀನಮೇಲೆ ಬಿಡಬೇಕಾದರೆ 11 ರೂಪಾಯಿ 4 ಆಣೆ ಕೊಡಬೇಕು, ಕೊಟ್ಟನೊರೆ ಬಿಡುತ್ತಾರೆ. ಸರ್ವೇಸಾಧಾರಣವಾಗಿ ಹುಬ್ಬಳ್ಳಿಯಲ್ಲಿ, ಧಾರವಾಡ ಜಿಲ್ಲೆಯಲ್ಲಿ ಈ ಪದ್ಧತಿ ಜಾರಿಯಲ್ಲಿದೆ. ಬೇರೆ ಜಿಲ್ಲೆಗಳಲ್ಲಿ ಹೇಗಿದೆಯೋ ಗೊತ್ತಿಲ್ಲ. ಇದನ್ನು ಕಾಯಿದೆ ಪ್ರಕಾರ ಕೊಡಬೇಕು ಎಂಬ ನಂಬಿಕೆ ನಾಗರಿಕರಲ್ಲಿ ಬರುವಂತೆ ಮಾಡಿದ್ದಾರೆ, ಈ ಭಾವನೆ ಜನರಲ್ಲಿ ಹುಟ್ಟುವಂತೆ ಮಾಡಿದ್ದಾರೆ. ಈ ಸಂಬಂಧದಲ್ಲಿ ಒಬ್ಬ ಕಾನ್‌ಸ್ಟೇಬಲ್ ಹೇಳಿರುವುದನ್ನು ತಿಳಿಸುತ್ತೇನೆ. ಅಕಸ್ಮಾತ್ ನಾನು ಚುನಾವಣೆಯಲ್ಲಿ ಆರಿಸಿಬಂದರೆ ಮೊದಲು ಈ 11 ರೂಪಾಯಿ ನಾಲ್ಕಾಣೆ ಕೊಡುವುದನ್ನು ತೆಗೆಸಿಹಾಕಲು ಪ್ರಯತ್ನವನ್ನು ಮೊದಲು ಮಾಡಿ ಎಂದು ನನಗೆ ಹೇಳಿದ್ದಾರೆ. ಈ ಹಣ ಪೋಲೀಸು ಕಾನ್‌ಸ್ಟೇಬಲ್ಲಿಗೆ ಸೇರುವುದಿಲ್ಲ, ಬೇರೆ ಕಡೆಗೆ ಹೋಗುತ್ತದೆ. ಇದನ್ನು ವಸೂಲು ಮಾಡುವುದು ಕಾನ್‌ಸ್ಟೇಬಲ್ಲಿಗೆ ಕೆಲಸ ತಿನ್ನುವವರು ಬೇರೆ. ಇದರಿಂದ ಅವರ ಹೊಟ್ಟೆಯುರಿದು ಹೀಗೆ ಹೇಳಿರಬಹುದು. ಈ ಪ್ರಕಾರ ತಪ್ಪು ಭಾವನೆ ಬರಲು ಸರಕಾರ ಅವಕಾಶ ಕೊಡಬಾರದು. ಲಂಚ ಈ ರೀತಿಯಲ್ಲಿ ಬಹಳವಾಗಿದೆ. ಎರಡನೆಯದು ಯಾವುದಾದರೂ ಫಿರ್ಯಾದು ಕೊಡುವುದಕ್ಕೆ ಹೋದರೆ ಸಬ್ ಇನ್‌ಸ್ಪೆಕ್ಟರಿರುವುದಿಲ್ಲ, ಕಾಯಬೇಕು. ಮರುದಿವಸ ಪ್ರತಿಯೊಂದು ಚರ್ಚೆಮಾಡಿ ಯಾವುದನ್ನು ಯಾವರೀತಿ ದಾಖಲು ಮಾಡಿಕೊಳ್ಳಬೇಕು ಎಂಬುದನ್ನು ನಿಷ್ಕರ್ಷೆಮಾಡಿ ಕೇಸು ಹಾಕುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಒಂದು ಲಕ್ಷ ರೂಪಾಯಿ ಮೋಸಮಾಡಿರುವ ಪ್ರಕರಣ ಬೆಳಕಿಗೆಬಂದಿದೆ. ಯಾರೋ ಒಬ್ಬ ಒಬ್ಬರ ಮನೆಗೆ ಹೋಗಿ ಅಲ್ಲಿ ಹೆಚ್ಚು ದ್ರವ್ಯವಿದೆಯೆಂದೂ 60 ಸಾವಿರ ರೂಪಾಯಿಗಳನ್ನು ಪೂಜೆಗೆ ಕೊಟ್ಟು 40 ಸಾವಿರ ರೂಪಾಯಿ ಬಂಗಾರ ಕೊಟ್ಟರೆ ದ್ರವ್ಯವನ್ನು ತೋರಿಸುವುದಾಗಿ ಹೇಳಿ ಒತ್ತಾಯಮಾಡಿದ. ಈ ಬಗ್ಗೆ ಮಾರ್ಚಿ 28 ರಲ್ಲಿ ಪೋಲೀಸಿಗೆ ದೂರು ಕೊಟ್ಟರೂ ಇವತ್ತಿನವರೆಗೆ ಆ ದೂರನ್ನು ರಿಜಿಸ್ಟರು ಮಾಡಿಲ್ಲ, ಕ್ರಮ ಕೈಕೊಂಡಿಲ್ಲ. ಇಂಥ ಸಣ್ಣ ವಿಷಯಗಳನ್ನು ಕೂಡಿ ಮಂತ್ರಿಗಳಿಗೆ ಹೇಳಬೇಕಾಗುತ್ತದೆ. ಇದು ಪ್ರತಿಯೊಂದು ಪೋಲೀಸು ಸ್ಟೇಷನ್ನಿನಲ್ಲೂ ನಡೆಯುವ ಕೆಲಸ. ದೂರು ಕೊಡುವುದಕ್ಕೆ ಪೋಲೀಸು ಸ್ಟೇಷನ್ನಿಗೆ ಹೋದರೆ ದೊಡ್ಡ ಅವಮಾನವಾಗುತ್ತದೆ. ಇದರಿಂದ ಏಕೆ ಸ್ಟೇಷನ್ನಿಗೆ ಹೋಗಬೇಕು ಎಂಬ ಭಾವನೆ ಜನರಲ್ಲಿ ಮೂಡಿದೆ. ಇದನ್ನು ವಿಚಾರಮಾಡಿ ಜನರಲ್ಲಿ ಆ ಭಾವನೆ ಬಂದಿರುವುದನ್ನು ನಿವಾರಣೆ ಮಾಡಬೇಕು. ಮಾರನೆಯ ದಿವಸ ಯಾರಾದರೂ ಬಂದು ಮಾಹಿತಿ ಕೊಟ್ಟರೆ ಕೇಸು ಹಾಕದೆ ಬಿಡಬಹುದು ಎಂದು ಯಾವುದೋ ಒಂದು ಅನುಕೂಲಕ್ಕಾಗಿ ಕೇಸನ್ನು ರಿಜಿಸ್ಟರುಮಾಡಿಕೊಳ್ಳುವುದರಲ್ಲಿ ನಿಧಾನಮಾಡುವರು. ಹೀಗಾಗಿ ಪೋಲೀಸು ಇಲಾಖೆಯಿಂದ ಜನರಿಗೆ ಸಹಾಯವಾಗುತ್ತಿಲ್ಲ. ಹುಬ್ಬಳ್ಳಿ ನಗರದಲ್ಲಿ ಒಂದು ಪೋಲೀಸು ಸ್ಟೇಷನ್ ಇದೆ, ಅದರ ಎದುರಿಗೆ ಅಂಗಡಿ ಇದೆ. ಆ ಅಂಗಡಿಯಲ್ಲಿ ಪೋಲೀಸರು ಲಂಚ ತೆಗೆದುಕೊಳ್ಳುವುದು ಮುಂತಾದುವುಗಳ ಬಗ್ಗೆ ಲೆಕ್ಕ ಇದೆ. ಅದಕ್ಕಾಗಿ ಅಂಗಡಿಯನು ರಾತ್ರಿ 2 ಗಂಟೆಯವರೆಗೂ ತೆರೆದಿರುತ್ತಾರೆ. ಯಾವ ಅಂಗಡಿಯನ್ನು ಎಷ್ಟು ಹೊತ್ತಿನವರೆಗೆ ತೆರೆದಿರಬೇಕು ಎಂಬ ವಿಚಾರದಲ್ಲಿ ನಿರ್ಬಂಧವಿದ್ದರೂ ಕೂಡ ಅದಕ್ಕೆ ಗಮನ ಕೊಡದೆ ಈ ಅಂಗಡಿಯನ್ನು ರಾತ್ರಿ ಬಹಳ ವೇಳೆಯವರೆಗೆ ತೆರೆದಿರುತ್ತಾರೆ. ಲಂಚ ಕೊಡುವುದು,

(ಶ್ರೀ ಎಸ್. ಎಸ್. ಶೆಟ್ಟರ್)

ತೆಗೆದುಕೊಳ್ಳುವುದು – ಇದರ ಬಗ್ಗೆ ಈ ಅಂಗಡಿಯಲ್ಲಿ ಲೆಕ್ಕವಿದೆ. ಇದಕ್ಕೆ ಅವಕಾಶ ಎಲ್ಲಾ ಕಡೆಯಲ್ಲೂ ಇದೆ ಎಂದು ಸಾಮಾನ್ಯವಾಗಿ ಹೇಳಬಹುದು. ಒಂದು ಕಡೆ ಪೋಲೀಸು ಸೂಪರಿಂಟೆಂಡೆಂಟರಿಗೆ ಎರಡು ಡಬ್ಬಿ ಎಣ್ಣೆ ಬೇಕಾಗಿತ್ತು. ಅದಕ್ಕೆ ತರಲು ಯಾರನ್ನಾದರೂ ಕಳಿಸಬೇಕಾಗಿತ್ತು. ಒಬ್ಬ ಪಿ ಸಿ ಯನ್ನು ಡ್ಯೂಟಿಗೆ ಹಾಕಿ ಒಬ್ಬ ಆರೋಪಿಯನ್ನು ಹುಡುಕಿಕೊಂಡು ಬಾ ಎಂದು ಕಳಿಸಿ, ಪರಾರಿಯಾಗಿರುವ ಒಬ್ಬನ ಹೆಸರನ್ನು ಹಾಕಿ ಡಬ್ಬಿ ಅವನ ಕೈಗೆ ಕೊಟ್ಟು ಕಳಿಸಿದರು. ಆತ ಆರೋಪಿ ಸಿಕ್ಕಲಿಲ್ಲವೆಂದು ಹೇಳಿ ಎಣ್ಣೆ ತಂದುಕೊಟ್ಟ. ಈ ರೀತಿ ಸ್ವಂತ ಕೆಲಸಕ್ಕೆ ಯಾರನ್ನಾದರೂ ಕಳಿಸುವಾಗ ಮಾಡುತ್ತಾರೆ. ಬೆಂಗಳೂರಿಗೆ ಹೋಗಿ ಎಣ್ಣೆ ತೆಗೆದುಕೊಂಡು ಹುಬ್ಬಳ್ಳಿಗೆ ಮುಟ್ಟಿಸಲು ಈ ಉಪಾಯ ಮಾಡಿದ್ದಾರೆ. ಇದನ್ನು ಗವನಿಸಬೇಕು. ಕೋರ್ಟನ್ನು ಮೋಸಮಾಡುವ ಪ್ರಸಂಗಗಳು ಬೇರೆ ಇವೆ. 24 ತಾಸುಗಳೊಳಗಾಗಿ ಅರೆಸ್ಟ್ ಮಾಡಿರುವವರನ್ನು ಕೋರ್ಟಿನಲ್ಲಿ ಹಾಜರುಮಾಡಬೇಕೆಂಬ ಕಾನೂನಿದೆ. ಆದರೆ ಹಾಗೆ ಮಾಡುತ್ತಿಲ್ಲ, ನಾಲ್ಕೈದು ದಿವಸಗಳಾದರೂ ಕೂಡ ಸ್ಟೇಷನ್‌ನಲ್ಲೇ ಅರೆಸ್ಟ್ ಮಾಡಿರುವವರನ್ನಿಟ್ಟಿರುತ್ತಾರೆ. ಅರೆಸ್ಟ್ ಮಾಡಿರುವವರನ್ನು ಬಿಟ್ಟುಬಿಡಬೇಕು ಅಥವಾ 24 ತಾಸುಗಳೊಳಗೆ ಕೋರ್ಟಿನ ಮುಂದೆ ಹಾಜರುಮಾಡಬೇಕು. ಕೋರ್ಟಿಗೆ ಪೋಲೀಸಿನವರು ಮಾಡುವ ಮೋಸ ತಿಳಿಯುವುದಿಲ್ಲ. ಕೋರ್ಟು ತಿಳಿಯದೆ ಏನೂ ಮಾಡುವುದಕ್ಕಾಗುವುದಿಲ್ಲ. ಪರಿಸ್ಥಿತಿ ಹೀಗಿದೆ. ಇದು ತಪ್ಪಬೇಕು. ಪ್ರತಿಯೊಂದು ಪೋಲೀಸು ಸ್ಟೇಷನ್ನಿನಲ್ಲೂ ದುರಾಡಳಿತ ಯಾವರೀತಿ ನಡೆಯುತ್ತಿದೆಯೆಂಬುದು ಈ ಸಭೆಯಲ್ಲಿ ಚರ್ಚೆಯ ಕಾಲದಲ್ಲಿ ತಿಳಿಸಿದ್ದಾರೆ. ಯಾರಾದರೂ ಒಬ್ಬರನ್ನು ಹಿಡಿದುಕೊಂಡು ಹೋಗುವುದು, ಹೊಡೆಯುವುದು, ಬೇಕಾದ ವಿವರ ದೊರೆಯದಿದ್ದರೆ ಬಿಟ್ಟುಬಿಡುವುದು ಹೀಗೆಲ್ಲಾ ನಡೆಯುತ್ತಿದೆ.

ಇದು ಏಕೆ ಕಂಡುಬರುತ್ತದೆ ಎಂದರೆ ಪೋಲೀಸರಿಗೆ ಯಾವುದೇ ಒಂದು ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ಈಗ ಇದ್ದಂಥ ಆಧುನಿಕ ಸೌಲತ್ತು ಏನಿದೆ ಅದು ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಈ ಪ್ರಕಾರ ಕಟುತರವಾದ ರೀತಿಯಲ್ಲಿ ಇನ್‌ವೆಸ್ಟಿಗೇಷನ್ ಮಾಡಿ ಏನೋ ಒಂದು ಅಹಿತವಾದ ಮೇಲೆ ಅದನ್ನು ಮುಚ್ಚಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ ಎಂದು ಅನಿಸುತ್ತದೆ. ಅನೇಕ ಪೋಲೀಸ್ ಸ್ಟೇಷನ್‌ಗಳೊಳಗೆ ಬಡಿದಂತಹ ಕೇಸುಗಳು, ಕೊಂದಂತಹ ಕೇಸುಗಳು ಊರಿನೊಳಗೆ ಜನರ ಬಾಯಿ ಮಾತು ಆದರೂ ಕೂಡ ರೆಕಾರ್ಡ್ ಮಾತ್ರ ಕೈಗೆ ಸಿಕ್ಕದ ಹಾಗೆ ಮಾಡುತ್ತಾರೆ, ಇದೂ ಕೂಡ ನಿಲ್ಲಬೇಕೆಂದು ಸೂಚನೆ ಮಾಡುತ್ತೇನೆ. ಇನ್ನು ಯಾವುದೇ ಒಂದು ಊರಿನಲ್ಲಿ ಒಬ್ಬ ಸಬ್‌ಇನ್‌ಸ್ಪೆಕ್ಟರ್ ಆಗಲಿ, ಕಾನ್‌ಸ್ಟೇಬಲ್ ಆಗಲಿ ಇಂತಿಷ್ಟೇ ದಿವಸ ಇರಬೇಕು, 3 ಅಥವಾ 4 ವರ್ಷ ಇರಬೇಕೆಂಬ ನಿಯಮ ಇರುವುದು ಒಳ್ಳೆಯದು, ಎಷ್ಟೋ ಕಡೆ 8—10 ವರ್ಷವಾದರೂ ಕೂಡ ಟ್ರಾನ್ಸ್‌ಫರ್ ಆಗಿಲ್ಲ. ಇಲ್ಲಿದ್ದಂಥ ಐ ಜಿ ಯವರನ್ನೂ ಕೂಡ ಟ್ರಾನ್ಸ್‌ಫರ್ ಮಾಡಬೇಕು. ಬಹಳ ದಿವಸದಿಂದ ಇದ್ದಾರೆ ಎಂಬ ಮಾತನ್ನು ಕಟ್‌ಮೋಷನ್‌ನಲ್ಲಿ ಹೇಳಿದ್ದೇನೆ. ಈ ರೀತಿ ಮಾಡಬೇಕಾದ್ದು ಸೂಕ್ತ ಎಂದು ಅನಿಸುತ್ತದೆ ಏಕೆಂದರೆ ಒಬ್ಬನೇ ಒಬ್ಬ ಮನುಷ್ಯ ಒಂದು ಸ್ಥಾನವನ್ನು ಹಿಡಿದುಕೊಂಡು ಕುಳಿತ ಎಂದರೆ ಆ ಸ್ಥಾನವನ್ನು ದುರುಪಯೋಗಪಡಿಸಿಕೊಳ್ಳುವಂತಹ ಸಂದರ್ಭ ಅನೇಕ ವೇಳೆ ಗೊತ್ತಾಗಿದೆ. ಹುಬ್ಬಳ್ಳಿಯ ಪೋಲೀಸ್ ಸ್ಟೇಷನ್‌ನಲ್ಲಿ ನಡೆದಂತಹ ಸಂಗತಿಯನ್ನು ಹೇಳಬಹುದಾಗಿದೆ. ಅಲ್ಲಿದ್ದಂತಹ ಒಬ್ಬ ಸಬ್‌ಇನ್‌ಸ್ಪೆಕ್ಟರು ಯಾವುದೋ ಒಂದು ರೀತಿಯ ದುರ್ವ್ಯವಹಾರ ಮಾಡುವ ಸಲುವಾಗಿ —ಗ್ಯಾಂಬ್ಲಿಂಗ್‌ನ್ನು ಬಂದು ಮಾಡಬೇಕೆಂದು ಕೆಲವು ಕಾಯಿದೆಗಳನ್ನು ಮಾಡಿದ್ದರೂ ಸಹಿತ – ಗ್ಯಾಂಬ್ಲಿಂಗ್ ಡೆನ್ ನಡೆಸುವುದಕ್ಕೆ ಅವಕಾಶ ಕೊಟ್ಟಿದ್ದಾನೆ. ಮಾಮೂಲು ಎಷ್ಟು ಆತನಿಗೆ ಮುಟ್ಟಬೇಕೋ ಅಷ್ಟು ಮುಟ್ಟುವತನಕ ಅದು ನಡೆಯುತ್ತಲೇ ಇರುತ್ತದೆ, ಅದಕ್ಕೆ ಪ್ರೋತ್ಸಾಹ ಸಿಕ್ಕುವಂತಹ ಅನೇಕ ಸಂಗತಿಗಳು ಇವೆ. ಇದೇ ರೀತಿ ಸಪ್ರೆಷನ್ ಆಫ್ ಇಂಮಾರಲ್ ಟ್ರಾಫಿಕ್ ಇನ್ ವಿಮೆನ್ ಬಗ್ಗೆ ಆಕ್ಟ್ ಬಂತು, ಆಕ್ಟ್ ಬಂದ ಮೇಲೆ ಬಹುಶಃ ಇದು ಸುಧಾರಣೆಯಾಗುತ್ತದೆ ಅಂತ ಹೇಳಿ ತಿಳಿದುಕೊಂಡಿದ್ದೆವು. ಆದರೆ ಈ ವೇಶ್ಯ ವೃತ್ತಿ ಮಾಡತಕ್ಕ ಹೆಣ್ಣುಮಕ್ಕಳ ಕಡೆಯಿಂದಲೇ ಪೋಲೀಸರು ಲಂಚ ಹೊಡೆಯುವುದಕ್ಕೆ ಶುರು ಮಾಡಿ ಅವರಿಂದ ದಿನಂಪ್ರತಿ 3-4 ರೂಪಾಯಿ ವಸೂಲು ಮಾಡುತ್ತಾ ಇದ್ದಾರೆ. ಎಲ್ಲಾ ಕಡೆಯಲ್ಲೂ ನೋಡುತ್ತಾ ಇದ್ದೇವೆ. ಈ ರೀತಿಯಾದ ಶಿಥಿಲವಾದ ಆಡಳಿತಕ್ಕೆ ಕಾರಣ ಟ್ರಾನ್ಸ್‌ಫರ್ ಮಾಡದೆ ಒಬ್ಬನನ್ನು ಒಂದೇ ಜಾಗದಲ್ಲಿ ಬಹಳ ದಿವಸ ಇಡುವುದರಿಂದ ಆಗುತ್ತದೆ ಎಂದು ಹೇಳಿ ಕಂಡುಬರುತ್ತಿದೆ ಎಂದು ಹೇಳಬಹುದು.

ಇನ್ನು ಈ ಪೋಲೀಸ ಆಡಳಿತೆಯನ್ನು ನೋಡುವುದರಿಂದ ಹೀಗೆ ಅನಿಸುತ್ತದೆ. ಇವತ್ತು ರಾಜಕೀಯ ಚಳುವಳಿಯಾಗಲಿ ಅಥವಾ ಯಾವುದಾದರೂ ಕಮ್ಯೂನಲ್ ರೈಯಟ್ಸ್ ಆಗಲಿ ಅದನ್ನು ಹತ್ತಿಕ್ಕಲಿಕ್ಕೆ ಅಥವಾ ಬಂದು ಮಾಡಲಿಕ್ಕೆ ಎಷ್ಟು ಜಾಗರೂಕತೆಯನ್ನು ಅವರು ವಹಿಸುತ್ತಾರೆ

ಎಂಬುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಹುಬ್ಬಳ್ಳಿಯಲ್ಲಿ ಹೋದ ಸಲ ಚಿಕ್ಕಮಗಳೂರಿನಲ್ಲಿ ಗೊಂದಲವಾದ ಮೇಲೆ ಅಲ್ಲೂ ಕೂಡ ಗೊಂದಲ ಏಳುತ್ತದೆ ಎಂಬ ಸುದ್ದಿಯನ್ನು ಮೊಟ್ಟಮೊದಲು ಎಬ್ಬಿಸಿದವರು ಪೋಲೀಸರೇ. ಸಿ.ಐ.ಡಿ. ಯವರಾಗಲಿ ಅಥವಾ ಪೋಲೀಸ್ ಸಿಬ್ಬಂದಿಯಾಗಲಿ ಬೇಜವಾಬ್ದಾರಿಯಿಂದ ಯಾವರೀತಿ ಕೆಲಸಮಾಡುತ್ತಾರೆ ಎಂಬುದು ಇದರಿಂದ ಗೊತ್ತಾಗುತ್ತದೆ. ಯಾವದನ್ನು ಎಷ್ಟು ಗೋಪ್ಯವಾಗಿ ಇಡಬೇಕು, ಯಾವುದನ್ನು ಗೋಪ್ಯವಾಗಿ ತಿಳಿದುಕೊಳ್ಳಬೇಕು ಎಂಬುದು ಅವರಿಗೆ ಗೊತ್ತಿಲ್ಲ. ಸಾಮಾನ್ಯ ಜನರಿಗೆ ತಿಳಿದ ಸಂಗತಿ ಅವರಿಗೆ ತಿಳಿದಿರುವುದಿಲ್ಲ. ರಾಜಕೀಯ ಮೀಟಿಂಗ್‌ಗಳಾದಾಗ ಸಿ. ಐ. ಡಿ. ಯವರು ಮೀಟಿಂಗಿನಲ್ಲಿ ಏನಾಯಿತು ಅಂತ ಹೇಳಿ ಭಾಷಣಕಾರರನ್ನೇ ಕೇಳಲಿಕ್ಕೆ ಹೋಗುತ್ತಾರೆ, ಅವರ ದಕ್ಷತೆಗೆ ಇದು ಒಂದು ನಿದರ್ಶನ. ಇವತ್ತಿನ ದಿವಸ ಪೋಲೀಸ್ ಡಿಪಾರ್ಟ್‌ಮೆಂಟಿನವರ ಈ ಒಂದು ವರ್ತನೆಯಿಂದ ಜನತೆಗೆ ಅವರಲ್ಲಿ ವಿಶ್ವಾಸ ಹಾರಿಹೋಗುತ್ತಾ ಇದೆ ಎಂದು ಹೇಳುವುದರಲ್ಲಿ ಸಂಶಯವಿಲ್ಲ. ಎಲ್ಲಿ ನೋಡಿದರೂ, ಮೊನ್ನೆ ಮಧುಗಿರಿ ಪ್ರಕರಣ ಆಯಿತು. ಅದಾದಮೇಲೆ ವಿದ್ಯಾರ್ಥಿ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನ ನಡೆಯಿತು. ಇವತ್ತಿನ ದಿವಸ ಹೇಳಬೇಕೆಂದರೆ ನಿರ್ದಿಷ್ಟವಾದ ಒಂದು ನೀತಿಯನ್ನು ಅನುಸರಿಸದೆ ಹೋದರೆ ನಾಳೆ ಜನತೆ ಸರ್ಕಾರ ಇದೆಯೋ ಇಲ್ಲವೊ ಎಂದು ಹೇಳಿ ಸಂಶಯ ಪಡಬೇಕಾದ ಸನ್ನಿವೇಶ ಬಂದೀತು.

ಇನ್ನು ಕಾಳು ಸಾಗಾಣಿಕೆ ಮಾಡಲು ಪ್ರತಿಬಂಧಿಸುವ ಸಲುವಾಗಿ ಎಲ್ಲಾ ಬಂಧನಗಳನ್ನೂ ಹಾಕಿದ್ದೀರಿ. ಜೋನಲ್ ಸಿಸ್ಟಂ ಮಾಡಿದ್ದೀರಿ. ಅಂಥಾದ್ದರಲ್ಲೂ ಕೂಡ ಯಾವ ರೀತಿ ಬೇಕೋ ಆ ರೀತಿ ಇವತ್ತಿನ ದಿವಸ ಕಾಳನ್ನು ಸಾಗಿಸಲಿಕ್ಕೆ ವ್ಯಾಪಾರಸ್ಥರು ಮತ್ತು ಪೋಲೀಸರು ಇಬ್ಬರೂ ಒಂದಾಗಿ ಕೆಲಸ ಮಾಡುತ್ತಾ ಇರುವುದು ಉಂಟು.

ಇನ್ನು ಕಾರ್ಪೊರೇಷನ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ ಬೆಂಗಳೂರಿನಂತಹ ಈ ಊರಿನಲ್ಲೇ ನೀರಿನ ಪ್ರಶ್ನೆ ಇತ್ಯರ್ಥವಾಗಿಲ್ಲ, ಇನ್ನು ಹುಬ್ಬಳ್ಳಿಯ ನೀರಿನ ವ್ಯವಸ್ಥೆ ಬಗೆಹರಿಯುವುದಂತೂ ದುಸ್ಸಾಧ್ಯವಾದದ್ದೇ. 24 ತಾಸು ನೀರು ಅಲ್ಲಿ ನಳದಲ್ಲಿ ಬರುವುದಿಲ್ಲ. ಆದರೆ ವಾಟರ್ ಲೆವಿ ಮಾತ್ರ ವಸೂಲು ಮಾಡುತ್ತಾ ಇದ್ದಾರೆ. ಇದು ಜನರಿಗೆ ಅತ್ಯಂತ ಭಾರವಾಗಿದೆ. ಅನೇಕ ಬಡವರು ವಾಸ ಮಾಡತಕ್ಕ ವಸತಿಗೃಹಗಳಿಗೆ ನೀರನ್ನು ಕೊಡುತ್ತಿಲ್ಲ ಎಂಬ ಮಾತನ್ನು ಸರ್ಕಾರದವರ ಗಮನಕ್ಕೆ ಮುನಿಸಿಪಾಲಟಿಯವರ ಗಮನಕ್ಕೆ, ಕಾರ್ಪೊರೇಷನ್‌ನವರ ಗಮನಕ್ಕೆ ತಂದರೂ ಕೂಡ, ಇನ್ನೂ ಯಾವುವೇ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಅಲ್ಲಿನ ನೀರಿನ ಪೂರೈಕೆಗೆ ಸರ್ಕಾರದವರು ನೀರಸಾಗರ ಯೋಜನೆಯನ್ನು ಹಾಕಿದ್ದೇವೆ ಅದಕ್ಕೆ ದುಡ್ಡು ಕೊಡುತ್ತೇವೆ ಎಂಬ ವಾದವನ್ನು ಹೇಳುತ್ತಾರೆ. ಅದೂ ಅಲ್ಲದೇ ಸರ್ಕಾರದವರು ಒಳ ಚರಂಡಿ ಯೋಜನೆಯನ್ನು ಹಾಕಿದ್ದಾರೆ. ಇದರ ಸಲುವಾಗಿ ಕಾರ್ಪೊರೇಷನ್‌ನವರು 300—400 ರೂಪಾಯಿ ಕಿಮ್ಮತ್ತು ಆಗತಕ್ಕ ಗುಡಿಸಲುಗಳಿಗೂ ಒಳಚರಂಡಿ ಯೋಜನೆಯ ಬಿಲ್ಲು ಅಂತ ಹೇಳಿ 600—700 ರೂಪಾಯಿಗಳನ್ನು ಕಳುಹಿಸಿಕೊಟ್ಟಿದ್ದಾರೆ. ಬಡವರಿಗೆ ಇದು ಬಹಳ ಕಷ್ಟದಾಯಕವಾಗಿದೆ. 34ಲಕ್ಷ ರೂಪಾಯಿನಷ್ಟು ಹಣ ವಸೂಲಾಗದೆ, ಸರ್ಕಾರದಿಂದ ಕೂಡ ಬಾಕಿ ನಿಂತಿದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಬಡ ಜನರಿಗೆ ಏನೂ ತೊಂದರೆ ಅಥವಾ ಅನ್ಯಾಯವಾಗದಂತೆ ಸೂಕ್ತ ಪರಿಹಾರಮಾಡಬೇಕು ಮತ್ತು ಅವರಿಗೆ ಸೂಕ್ತವಾದ ಸೌಲತ್ತನ್ನು ಒದಗಿಸಿ ಅದನ್ನು ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧಿನಗರ).—ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಇರುವ ಈ ಡಿಮ್ಯಾಂಡ್‌ಗಳನ್ನೂ ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ನಿಂತಿದ್ದೇನೆ. ನಾನು ಈ ಬೆಂಗಳೂರು ನಗರದ ಕೊಳಕು ಪ್ರದೇಶಗಳ ಬಗ್ಗೆ ಮತ್ತು ನೀರಿನ ಬಗ್ಗೆ ಮತ್ತು ಇನ್ನೂ ಕೆಲವು ವಿಷಯಗಳನ್ನು ಅಗಿಂದಾಗ್ಯೆ ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಾ ಇದ್ದೇನೆ. ಕೆಲವು ಕೆಲಸಗಳು ಆಗಿವೆ, ಕೆಲವು ಕೆಲಸಗಳು ಬಹಳ ನಿಧಾನವಾಗುತ್ತಾ ಇದೆ. ಏನ ಅತ್ಯಾವಶ್ಯಕವಾಗಿ ಆಗ ಬೇಕೋ ಆ ಕೆಲಸಗಳನ್ನು ಬೇಗ ಮಾಡಿಕೊಡಲು ಮತ್ತು ಏನು ಕೆಲವು ಕುಂದುಕೊರತೆಗಳನ್ನು ನೋಡುತ್ತಾ ಇದ್ದೇವೆ ಅವುಗಳನ್ನು ಸರಿಪಡಿಸಲು ತಮ್ಮ ಗಮನವನ್ನು ಸೆಳೆಯಲು ಮಾತನಾಡಬೇಕೆಂದು ನಿಂತಿದ್ದೇನೆ. ಇನ್ನು ರಾಜ್ಯದ ಉನ್ನತಿ-- ಸುಭದ್ರತೆಯು ಸ್ಥಳೀಯ ಸಂಸ್ಥೆಗಳ ಆಡಳಿತವನ್ನವಲಂಬಿಸಿದೆ ಎಂಬುದು ಎಲ್ಲರೂ ಒಪ್ಪುವ ಮಾತು. ಸ್ವಾತ್ರನಿಕ ಸ್ವರಾಜ್ಯದ ಅಸ್ತಿಭಾರ ಸ್ಥಳೀಯ ಸಂಸ್ಥೆಗಳಿಂದಲೇ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಅದರಲ್ಲಿಯೂ ಕರ್ನಾಟಕದ ರಾಜದಾನಿ ಬೆಂಗಳೂರಿನ ಕಾರ್ಪೋರೇಷನ್ ಮಾದರಿಯಾಗಿದ್ದರೆ ದೇಶದ ಇತರ ಸ್ಥಳೀಯ ಸಂಸ್ಥೆಗಳೂ ಇದರ ಆದರ್ಶವನ್ನೇ ಅನುಸರಿಸುತ್ತವೆ. ಬೆಂಗೂಳೂರಿನ ಕಾರ್ಪೊರೇಷನ್ ಒಂದು ಸಣ್ಣ ರಾಜ್ಯವಿದ್ದಂತೆ; ಸುಮಾರು 20 ಲಕ್ಷ ಪ್ರಜೆಗಳ

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಸುಖ ದುಃಖದ ಹೊಣೆಗಾರಿಕೆ ಬೆಂಗಳೂರು ಕಾರ್ಪೊರೇಷನ್ನಿನ ಮೇಲಿದೆ. ಇದರ ಅಧಿಕಾರಿಗಳೂ, ನೌಕರರೂ, ನ್ಯಾಯ ಪರರಾಗಿ, ಪ್ರಾಮಾಣಿಕರಾಗಿದ್ದರೆ ಮಾತ್ರ ನಗರ ಸಭೆಗೆ ಯಶಸ್ಸು ದೊರೆಯಬಲ್ಲದು. ಆ ಪ್ರಾಮಾಣಿಕತೆ ಹೇಳಿಕೆ ಕೇಳಿಕೆಗಳಿಂದ ಬರುವುದಿಲ್ಲ. ಸಂಬಂಧ ಪಟ್ಟ ಅಧಿಕಾರಿಗಳು ಯಾರೇ ಆಗಲಿ ಅರಿತು ನಿಸ್ಪೃಹತೆಯಿಂದ ನಡೆದರೆ ಮಾತ್ರ ಸಾಧ್ಯ. ಆದರೆ ನಮ್ಮ ದುರ್ದೈವವೆನ್ನಬೇಕಾಗಿದೆ. ಆಡಳಿತ ನಿರೀಕ್ಷೆ ಮಟ್ಟದಲ್ಲಿ ಕ್ರಮಬದ್ಧವಾಗಿ ನಡೆಯುತ್ತಿಲ್ಲ ವೆಂದು ವಿಷಾದದಿಂದ ಹೇಳಬೇಕಾಗಿದೆ. ರೀತಿ, ನೀತಿ, ನಿಯಮಗಳಲ್ಲ ಶಿಸ್ತು ಇಲ್ಲವೇ ಇಲ್ಲ. ದಾಕ್ಷಿಣ್ಯ, ಲಂಚ, ಭ್ರಷ್ಟಾಚಾರಗಳ ಮೇಲೆ ಆಡಳಿತ ನಡೆದರೆ 'ಹುಕೊಲ್ಲರ' ಪರಕಾಯ್ವನೇ' ಎಂಬಂತೆ ಪ್ರಜೆಗಳಿಗೆ ದಿಕ್ಕೇ ಇಲ್ಲದಂತಾಗುತ್ತದೆ.

ಕಾರ್ಪೊರೇಷನ್ನಿನ ತೆರಿಗೆ ಇಲಾಖೆ, ರೆವಿನ್ಯೂ ಇಲಾಖೆ, ಕಾಮಗಾರಿ ಇಲಾಖೆ, ಸಾರ್ವಜನಿಕ ಆರೋಗ್ಯ ಇಲಾಖೆ, ವಿದ್ಯಾ ಇಲಾಖೆ ಯಾವುದೇ ತೆಗೆದುಕೊಳ್ಳಿ, ಪರಿಶುದ್ಧ ಆಡಳಿತವಿರುವ ಒಂದೇ ಒಂದು ಇಲಾಖೆ ತೋರಿಸಿದರೆ, ತೋರಿಸಿದವರು 'ಭಾರತ ರತ್ನ' ಎಂಬ ಪ್ರಶಸ್ತಿಗೆ ಅರ್ಹರಾಗು ತ್ತಾರೆ, ಕೆಲವು ನೌಕರರೂ, ಕೆಲವು ಅಧಿಕಾರಿಗಳು ಕಾರ್ಪೊರೇಶನ್ನಿನಲ್ಲ ದುಡಿಯಬೇಕೆಂದು ಮಹತ್ವಾಕಾಂಕ್ಷೆ ಇಟ್ಟುಕೊಂಡಿರುತ್ತಾರೆ. ಈ ಬಗ್ಗೆ ವಿಮರ್ಶಿಸುತ್ತಾ ಹೋದರೆ, ಘಂಟೆ ಘಂಟೆ ಗಳ ಕಾಲ ಹೇಳುವಷ್ಟು ವಿಷಯ ಇದೆ. 'ಅಕಾಶ ನೋಡಲಿಕ್ಕೆ ನೂಕು ನುಗ್ಗಲು ಹೇಗೆ ಬೇಕಾಗಿ ಲ್ಲವೋ ಹಂಗೆ ಕಾರ್ಪೊರೇಷನ್ ಆಡಳಿತ ನೋಡಲು ನೂಕು ನುಗ್ಗಲು ಬೇಕಾಗಿಲ್ಲ; ಪರಮಾತ್ಮ ಸರ್ವಾಂತರ್ಯಾಮಿ ಇರುವಂತೆ ಕಾರ್ಪೊರೇಷನ್ನಿನ ಅಕ್ರಮ ಆಡಳಿತ ಬೃಹದ್ ಬೆಂಗಳೂರಿ ನಲ್ಲಿ ಸರ್ವಾಂತರ್ಯಾಮಿಯಾಗಿದೆ ಎಂದರೆ ಅತಿಶಯೋಕ್ತಿ ಏನೂ ಅಲ್ಲ. 'ದಿಳ್ಳಿಯ ಬುದ್ಧ ಹಳ್ಳಿಯ ಪೆದ್ದ' ನಿಗಿಂತಲೂ ಕಡೆಯಾಗುವಂತಹ ಜೀವನ ಸ್ಥಿತಿ ಬೆಂಗಳೂರಿಗೆ ಬಂದಿದೆ.

ಬೆಂಗಳೂರು ಅಂಕೆಯಿಲ್ಲದೆ ಬೆಳೆಯುತ್ತಿದೆ. ಪಕ್ಕದ ನಾಡುಗಳಿಂದ ವಲಸೆ ಬಂದವರ ಗುಡಿಸಲುಗಳು ನಾಯಿಕೊಡೆಗಳಂತೆ ತಮಗೆ ತಾವೇ ಬೆಳೆಯುತ್ತಿವೆ. ಕಟ್ಟಿದವನೇ ಜಾಗದ ಒಡೆಯ ಎಂಬಂತಾಗಿದೆ ಬೆಂಗಳೂರಿನ ಸ್ಥಿತಿ. ಜೊತೆಗೆ ಸುಮಾರು 35 ಹಳ್ಳಿಗಳನ್ನು ಸರ್ಕಾರದವರು ಸೇರಿಸಿಕೊಂಡಿದ್ದಾರೆ.

11-30 A.M.

ಇವುಗಳಲ್ಲಿ ಕೆಲವು ಪ್ರದೇಶಗಳು ನನ್ನ ಕ್ಷೇತ್ರಕ್ಕೆ ಸೇರಿವೆ. ಇದನ್ನು ಏಕೆ ಹೇಳುತ್ತಿದ್ದೇ ನೆಂದರೆ, ಅಲ್ಲಿ ಲಕ್ಷ್ಮೀನಾರಾಯಣಪುರ, ಪೈಪ್‌ಲೈನ್, ರಾಮಚಂದ್ರಪುರ, ಗೋಪಾಲ ಸ್ವಾಮಿಅಯ್ಯರ್ ಕಾಲೊನಿ–ಹೀಗೆ ಇನ್ನೂ ಅನೇಕ ಇವೆ. ಅಲ್ಲಿ ನೀರು ಇದ್ದರೆ ದೀಪ ಇಲ್ಲ, ದೀಪ ಇದ್ದರೆ, ರಸ್ತೆ ಇಲ್ಲ. ಅಲ್ಲಿನ ಜನಗಳಿಗೆ ಯಾವ ಒಂದು ಅನುಕೂಲತೆಯೂ ಇಲ್ಲ ಇವನ್ನು ಏತಕ್ಕೋಸ್ಕರ ಕಾರ್ಪೊರೇಷನ್ನಿಗೆ ಸೇರಿಸಿದರೋ ನನಗೆ ಅರ್ಥವಾಗುತ್ತಾ ಇಲ್ಲ. ಜನತೆಗೆ ಸರಿಯಾದ ಸೌಲಭ್ಯ ಗಳನ್ನ ಒದಗಿಸಿಕೊಡುವುದಾಗಿದ್ದರೆ ಮಾತ್ರ ಅವನ್ನು ಕಾರ್ಪೊರೇಷನ್ ವ್ಯಾಪ್ತಿಗೆ ಸೇರಿಸಿಕೊಳ್ಳ ಬೇಕಾಗಿತ್ತು. ಇಲ್ಲದೇ ಹೋದರೆ ಅದನ್ನು ಅವರು ಕೈಬಿಡಬಹುದಾಗಿತ್ತು. ಇದು ನನ್ನ ದುರ್ದೈವವೋ ಏನೋ ! ಯಾವ ಜನ್ಮದ ಕರ್ಮ ಈ ಜನ್ಮದಲ್ಲಿ ಎನ್ನ ಕಾಡುತಿಹುದೋ ಎಂಬಂತೆ ಒಂದು ಭಾವನೆ ಈಗ ಬಂದಿದೆ. ಕೆಲವು ಕಡೆಗಳಲ್ಲಿ ಕೆಲವು ಕೆಲಸಗಳು ಆಗಿವೆ. ಇಲ್ಲಿ ಮಾತ್ರ ಒಂದು ಉದಾಹರಣೆಯನ್ನು ಹೇಳುತ್ತೇನೆ. ಗೋಪಾಲಸ್ವಾಮಿ ಐಯ್ಯರ್ ಕಾಲೊನಿಯಲ್ಲಿ ಒಂದು ಲ್ಯಾಟ್ರಿನ್ನನ್ನು ಕಾರ್ಪೊರೇಷನ್ನಿನವರು ಕಟ್ಟಿಸಿದ್ದಾರೆ. ಸುಮಾರು ಅಲ್ಲಿ 10—12 ಲ್ಯಾಟ್ರಿನ್ ಗಳು ಕುಸಿದುಬಿದ್ದು ಒಡೆದು ಹೋಗಿ ರಸ್ತೆಯಲ್ಲಿ ಹರಿಯುತ್ತಾ ಇದೆ. ಅದನ್ನು ಸುಮಾರು ಒಂದು ವರ್ಷದಿಂದ ಕಾರ್ಪೊರೇಷನ್ನಿನವರ ಗಮನಕ್ಕೂ ಮತ್ತು ಸಚಿವರ ಗಮನಕ್ಕೂ ತಂದಿದ್ದೇನೆ. ಇನ್ನೂ ಕೂಡ ಅವರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಅದನ್ನು ಸರಿಪಡಿಸಿಲ್ಲ. ಆಗಲಿ, ಮಾಡ ಸೋಣವೆನ್ನುತ್ತಾರೆ. ಹೀಗಾದರೆ ಜನತೆ ನಮ್ಮ ಮೇಲೆ ಅಭಿಮಾನವಿಟ್ಟು ನಮ್ಮನ್ನು ಇಲ್ಲಿ ಆರಿಸಿ ಕಳುಹಿಸಿದಮೇಲೆ ಅವರ ಕಷ್ಟಗಳೇನು ಎಂಬುದನ್ನು ನಾವು ವಿಚಾರಿಸದೆ ಹೋದರೆ, ಆಗ ಅವರು ನಮ್ಮನ್ನು ಗೌರವದಿಂದ ಕಾಣದೆ ಹೋದರೆ, ನಾವು ಇಲ್ಲಿದ್ದು ಏನು ಪ್ರಯೋಜನವೆಂದು ನಾನು ಸಚಿವರನ್ನು ಕೇಳುತ್ತೇನೆ. ಇತ್ತೀಚೆಗೆ ಕೆಲವು ಹಿಂದುಳಿದ ಪ್ರದೇಶಗಳೆಂದು ಹೊಸದಾಗಿ ಕಾರ್ಪೊರೇಷನ್ನಿಗೆ ಸೇರಿಸಿಕೊಂಡಿದ್ದೀರಿ. ಆ ಪ್ರದೇಶಗಳ ಜನಗಳಿಗೆ ಏನೂ ಇಲ್ಲದಿದ್ದರೂ ದೀಪ, ನೀರು, ರಸ್ತೆ—ಇವು ಮೂರನ್ನೂ ಮಾಡಿಸುವುದಕ್ಕೆ ತಕ್ಕ ಕ್ರಮವನ್ನು ನಮ್ಮ ಸಚಿವರು ತೆಗೆದು ಕೊಳ್ಳಬೇಕು. ಹಣ ಕೊಟ್ಟಾದರೂ ಆ ಕೆಲಸಗಳನ್ನು ಮಾಡಿಸಬೇಕು. ನನ್ನ ಕ್ಷೇತ್ರಕ್ಕೆ ಅತ್ಯವಶ್ಯ

ಕವಾಗಿ ಆಗಬೇಕಾಗಿರುವ ಕೆಲಸಗಳು ತ್ವರಿತವಾಗಿ ಆಗದೇ ಇದ್ದರೆ, ಮುಂದೆ ಇನ್ನು ಸತ್ಯಾಗ್ರಹ ಹೂಡುವುದೊಂದೇ ಮಾರ್ಗ ಉಳಿದಿದೆ. ಅದನ್ನು ಯೋಚನೆ ಮಾಡುತ್ತಿದ್ದೇನೆ. ಅಂಥಾದ್ದಕ್ಕೆ ಖಂಡಿತ ಅವಕಾಶ ಕೊಡಬೇಡಿ. ಆದ್ದರಿಂದ ಮಾನ್ಯ ಮಂತ್ರಿಗಳು ಅವರ ಸ್ಥಿತಿಗತಿಗಳನ್ನು ಗಮನಿಸಿ 10 ಅಥವಾ 15 ದಿವಸಗಳಿಗೊಂದಾವೃತ್ತಿ ಒಂದೊಂದು ಕ್ಷೇತ್ರಕ್ಕೆ ಆಗಾಗ್ಗೆ ಹೋಗಿ ಅಲ್ಲಿನ ಜನರ ಸ್ಥಿತಿಗತಿಗಳನ್ನು ನೋಡಿಕೊಂಡು ಅವರ ಕಷ್ಟ ನಿವಾರಣೆಗೆ ಬೇಕಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಜೊತೆಗೆ ಸುಮಾರು 35 ಹಳ್ಳಿಗಳ ಸೇರ್ಪಡೆಯಾಗಿರುವ ಕಾರಣ ಈ ಬೆಂಗಳೂರು ಬೃಹದಾಕಾರವಾಗಿ ಬೆಳೆಯುತ್ತಾ ಇದೆ. ಇದು ತುಂಬಾ ಕ್ಲಿಷ್ಟ ಪರಿಸ್ಥಿತಿ ತಂದೊಡ್ಡಿದೆ. ಹಾಲಿ ಇರುವ ವಿಸ್ತರಣೆಗಳಿಗೇನೇ ರಸ್ತೆಯಿದ್ದರೆ ದೀಪವಿಲ್ಲ, ದೀಪವಿದ್ದರೆ ಕುಡಿಯುವ ನೀರಿಲ್ಲ. ಚರಂಡಿಗಳಂತೂ ಮೊದಲೇ ಇಲ್ಲ. ಹೀಗಿರುವಾಗ ಬೆಂಗಳೂರಿನ ಬೃಹತ್ ಸ್ವರೂಪ ಹೇಗೆ ತೋರಿಸುತ್ತಾರೋ ದೇವರೇ ಬಲ್ಲ. ನಾವು ಕಾಣುವುದು ಬೃಹತ್ ಸುಂದ ರೂಪವಲ್ಲ. ಬೃಹತ್ ಗುಡಿಸಲುಗಳ ರೂಪವನ್ನು ಮಾತ್ರ ಮುಂದೆ ನೋಡುತ್ತೇವೆ. ಈಗಿರುವ ಸ್ಲಂಗಳ ಜೊತೆಗೆ ಬೇರೆ ಬೇರೆ ಸ್ಲಂಗಳನ್ನೂ ಕಾಣುವ ಯೋಗ ಬೃಹತ್ ಬೆಂಗಳೂರಿಗಿದೆ. ಇಂತಹ ಒಂದು ಸಂಶಯ ಬಂದಿದೆ. ಇದು ಸರ್ಕಾರಕ್ಕೂ ಮತ್ತು ಕಾರ್ಪೊರೇಷನ್ ಆಡಳಿತವರ್ಗಕ್ಕೂ ಹಾಕುವ ಸವಾಲು. ಈ ಸವಾಲನ್ನು ಆಡಳಿತ ವರ್ಗ ಸ್ವೀಕರಿಸುವ ಧೈರ್ಯವಿದೆಯೇ ಎಂಬುದಾಗಿ ನಾನು ಪ್ರಶ್ನೆ ಮಾಡುತ್ತೇನೆ, ಇಂತಹ ಸವಾಲಿಗೆ ಅವಕಾಶ ಕೊಡದೆ ಪಣ ತೊಟ್ಟಾದರೂ ಒಂದು ವರ್ಷಕ್ಕೆ ಎರಡರಂತೆಯಾದರೂ ಕೊಳಕು ಪ್ರದೇಶಗಳನ್ನು ನಿರ್ಮೂಲನ ಮಾಡುವ ಮನಸ್ಸು ಮಾಡಬೇಕೆಂದು ಸಂಬಂಧಪಟ್ಟವರಿಗೆ ನಾನು ಸೂಚಿಸಬಯಸುತ್ತೇನೆ.

ಇನ್ನು ನೀರಿನ ವಿಚಾರ ಹೇಳಲೇಬೇಕಾಗಿದೆ. ಬೆಂಗಳೂರಿನ ನೀರಿನ ವಿಚಾರ ರಾಷ್ಟ್ರೀಯ ಪ್ರಶ್ನೆ ಆಗುವ ಪರಿಸ್ಥಿತಿಗೆ ಬಂದಿದೆ. ಇದು ಕಾವೇರಿ ಬೆಂಗಳೂರಿಗೆ ಬರುವ ಮುನ್ಸೂಚನೆಯ ಪ್ರಕರಣ. ಮೊದಲು ಒಂದು ಸಂಸಾರಕ್ಕೆ ಬರುತ್ತಿದ್ದ ನೀರಿನ ದರದ ಮೂರರಷ್ಟು ಇಂದು ನೀರಿನ ದರ ಹೆಚ್ಚಾಗಿದೆ. ನಮ್ಮ ಮನೆಯಲ್ಲೇ ಒಟ್ಟು ನಮ್ಮದೂ ಸೇರಿ ಮೂರು ಸಂಸಾರ ಉಂಟು. ಒಂದೊಂದು ಸಂಸಾರಕ್ಕೆ ತಿಂಗಳಿಗೆ 30 ರೂಪಾಯಿಗಳು ಬರುತ್ತದೆ. ಇದು ತುಂಬಾ ದುಬಾರಿ. ಮೀಟರುಗಳು ಲಕ್ಷಗಟ್ಟಲೆ ಲೀಟರ್ಸ್ ಲೆಕ್ಕ ತೋರಿಸುತ್ತದೆ. ಬೆಂಗಳೂರಿನ ನಿವಾಸಿ ತನ್ನ ಆದಾಯದಲ್ಲಿ ಒಂದು ರೂಪಾಯಿಗೆ ಕನಿಷ್ಠ ಆರಾಣೆ ಕಾರ್ಪೊರೇಷನ್ನಿಗೆ ತೆರಿಗೆ ರೂಪದಲ್ಲಿ ಕೊಡಬೇಕು. ಕೊಡೋಣ, ಆದರೆ ಅದಕ್ಕೆ ಸರಿಯಾದ ಸೌಲಭ್ಯ ಜನಗಳಿಗೆ ಬೇಕಲ್ಲವೇ? ಅದರಲ್ಲಿ ಈಗ ನೀರಿನ ಮಾರಿ ಹೆಮ್ಮಾರಿಯಾಗಿದ್ದಾಳೆ. ಆದರೆ ನಾವು ಕೊಡತಕ್ಕ ತೆರಿಗೆಗಳನ್ನು ಕೊಡುವುದರಲ್ಲಿ ಮಾತ್ರ ಹಿಂಜರಿಯಬಾರದು. ಈ ಬಗ್ಗೆ ಸರ್ಕಾರ ತುರ್ತು ಕ್ರಮ ತೆಗೆದುಕೊಂಡು ಒಂದು ದೃಢವಾದ ತೀರ್ಮಾನವನ್ನು ಕೈಗೊಳ್ಳಬೇಕು. ಈಗ ನೀರಿನ ದರವನ್ನು ವಿಮರ್ಶೆ ಮಾಡುವುದರಲ್ಲಿ ಜನತೆಗೆ ತೊಂದರೆಯಾಗಬಾರದು, ಹೆಚ್ಚು ಹೊರೆಯಾಗಬಾರದು, ಸರ್ಕಾರಕ್ಕೆ ನಷ್ಟವಾಗಬಾರದು. ಹಿಂದಿನ ಬಾಕಿಗಳನ್ನು ಸುಲಭ ಕಂತುಗಳಲ್ಲಿ ತೆಗೆದುಕೊಳ್ಳುವಂತೆ ಆದೇಶ ನೀಡಬೇಕು. ನೀರಿನ ವಿಚಾರ ಸಣ್ಣ ವಿಚಾರ ಎಂದು ನಿರ್ಲಕ್ಷಿಸಿದರೆ ಇದು ರಾಷ್ಟ್ರೀಯ ಪ್ರಶ್ನೆಯಾಗಿ ಬೃಹದ್ ಬೆಂಗಳೂರಿನಂತೆಯೇ ಬೃಹದಾಕಾರವಾಗಿ ಬೆಳೆಯಲು ಬಿಡಬೇಡಿ. ನಾನಾ ಕಡೆಗಳಲ್ಲಿ ನಾನಾ ರೂಪದಲ್ಲಿ ಪೈಪು ಒಡೆದು ಪೋಲಾಗುತ್ತಿರುವ ನೀರನ್ನು ನಿಲ್ಲಿಸಿದರೆ ಅದರಿಂದ ಜನರಿಗೆ ಬಹಳವಾಗಿ ಉಪಕಾರವಾಗುತ್ತದೆ. ಆ ರೀತಿಯಾಗಿ ಪುಣ್ಯ ಕಟ್ಟಿಕೊಳ್ಳಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಬೆಂಗಳೂರಿನ ಜನತೆಯ ಆಸ್ತಿಪಾಸ್ತಿಗಳ ತೆರಿಗೆ ವಸೂಲಿ ಕ್ರಮದಲ್ಲಿ ಭ್ರಷ್ಟಾಚಾರಕ್ಕೆ ಪುರಸ್ಕಾರವಿದೆ. ಶಿಷ್ಟಾಚಾರಕ್ಕೆ ತಿರಸ್ಕಾರವಿದೆ. ನನಗೆ ಒಂದು ಮನೆ ಇದೆ, ಅದಕ್ಕೆ ಕಂದಾಯ ಹಾಕಿ ಎಂದು ನ್ಯಾಯವಾಗಿ ಹೇಳಿದರೆ ಹೆಚ್ಚಿನ ತೆರಿಗೆ, ಆದರೆ ಆರು ಮನೆ ಇದ್ದವರು ಮೂರು ಮನೆ ಎಂದು ಹೇಳಿ ಕೈಬೆಚ್ಚಗೆಮಾಡಿದರೆ ಮೂರೇ ಮನೆಗೆ ತೆರಿಗೆ, 12 ಸಾವಿರ ರೂಪಾಯಿಗಳಷ್ಟು ತಿಂಗಳಿಗೆ ಬಾಡಿಗೆ ಬಂದರೂ, ಆರೇ ಸಾವಿರ ರೂಪಾಯಿಗಳಷ್ಟು ಬಾಡಿಗೆ ಬರುತ್ತಿದೆ ಎಂದು ತೆರಿಗೆಯನ್ನು ಉಳಿಸಿಕೊಳ್ಳುತ್ತಾರೆ. ಆದರೆ ಆರು ಮನೆ ಇರುವವರು ಆರು ಸಾವಿರ ಬಾಡಿಗೆ ಇದ್ದವರು ನಿಜ ಹೇಳಿದರೆ ಪೂರ್ಣ ಕಂದಾಯ ಕೊಡಬೇಕಾಗುತ್ತದೆ. ಡಬ್ಬಲ್ ಆಗಿಯೂ ವಸೂಲು ಮಾಡುತ್ತಾರೆ. ಇದು ಹೀಗಾಗಬಾರದು. ಹೀಗೆ ಅಧಿಕಾರಿಗಳು ವಂಚಕರಿಗೆ ಪುರಸ್ಕಾರ ಕೊಟ್ಟರೆ ಕಾರ್ಪೊರೇಷನ್ ಹೇಗೆ ನಡೆಯೀತು, ಯೋಚನೆ ಮಾಡಿ. ಕೆಲವರು ಆಸ್ತಿಪಾಸ್ತಿಗಳನ್ನು ಸರಿಯಾಗಿ ತೋರಿಸದೆ, ಕೊಡತಕ್ಕ ತೆರಿಗೆಗಳನ್ನು ಸರಿಯಾಗಿ ಕೊಡದೆ, ಮುಚ್ಚಿಟ್ಟುಕೊಂಡು ಇರುತ್ತಾರೆ. ಹೀಗೆ ನಡೆಯುವುದು ಸುಳ್ಳು, ಇದು ಆಗುತ್ತಾ ಇಲ್ಲ ಎನ್ನುವುದನ್ನು ಯಾರಾದರೂ ತೋರಿಸಿಕೊಟ್ಟರೆ, ಅಂತಹವರನ್ನು ನೋಬಲ್ ಪ್ರೈಜ್‌ಗೆ ಯೋಗ್ಯರೆಂದು ಶಿಫಾರಸು ಮಾಡಬಹುದು. ಈ ರೀತಿ ತೆರಿಗೆ, ಸುಂಕ, ಎಲ್ಲದರಲ್ಲಿಯೂ ಅಕ್ರಮ ನಡೆಯುತ್ತಿದೆ. ಕಾರ್ಪೊರೇಷನ್ ಕಟ್ಟಿಸಿರುವ ಮಳಿಗೆಗಳನ್ನು ಪ್ರಭಾವಶಾಲಿಗಳು ಕಡಿಮೆ ಬಾಡಿಗೆಗೆ ಪಡೆದು ಬೇರೆಯವರಿಗೆ ಹೆಚ್ಚಿನ ಬಾಡಿಗೆಗೆ ಕೊಟ್ಟಿದ್ದಾರೆ.

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಒಬ್ಬೊಬ್ಬರ ಹೆಸರಿನಲ್ಲಿ ಏಳು—ಎಂಟು ಅಂಗಡಿಗಳು ಅಥವಾ ಮಳಿಗೆಗಳು ಇರುತ್ತವೆ. ಒಟ್ಟಿನಲ್ಲಿ ಕಾರ್ಪೊರೇಷನ್ ಕೆಲಸ ಮಾಮೂಲು ಸಂದಾಯದಿಂದ ಕರಾರುವಾಕ್ಕಾಗಿ ನಡೆಯುತ್ತಿದೆ. ಒಂದು ಜಾತಿಗೆ ಮೈಕ್ಕೆ ಅಂಗವೆಲ್ಲವೂ ವಿಷವು ಎಂಬಂತೆ ಅಖಂಡ ಕಾರ್ಪೊರೇಷನ್ನೇ ಕಡುನಂಜಾಗಿದೆ. ಈ ನಂಜನುಣಬಲ್ಲ ನಂಜುಂಡನವತಾರವಾಗುವವರೆಗೂ ಬೆಂಗಳೂರಿನವರಿಗೆ ತಾಪತ್ರಯ ಕಟ್ಟಿಟ್ಟದ್ದೇ. ಇದನ್ನು ಮಾನ್ಯ ಸಚಿವರು ಆರು ವರ್ಷಗಳಿಂದಲೂ ನೋಡುತ್ತಿದ್ದಾರೆ. ಅದನ್ನು ತೊಡೆದು ಹಾಕುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಆದರೂ ಸಫಲವಾಗಿಲ್ಲ. ಅವರೊಂದಿಗೆ ಅಲ್ಲಿನ ಅಧಿಕಾರಿಗಳು ಸಹಕಾರ ನೀಡಬೇಕು. ಆ ರೀತಿಯಾಗಿ ಸಹಕಾರ ನೀಡಿದರೆ ಕಾರ್ಪೊರೇಷನ್ ಆಡಳಿತ ನಿಜವಾಗಿ ಸುಗಮವಾಗಿ ನಡೆಯುತ್ತದೆ. ಅದನ್ನು ಈಗ ನಾನು ಬೇರೆ ಹೇಳಬೇಕಾಗಿಲ್ಲ.

ಇನ್ನು ಕಾರ್ಪೊರೇಷನ್ನಿಗೆ ಈಗ ಅಡ್ಮಿನಿಸ್ಟ್ರೇಟರ್ ಬಂದಮೇಲೆ ಕೆಲವು ಉತ್ತಮವಾದಂಥ ಕೆಲಸಗಳು ನಡೆದಿವೆ. ಆದರೆ ಮಾಮೂಲು ತಪ್ಪಿಸಲು ಅವರಿಂದಲೂ ಸಾಧ್ಯವಾಗಿಲ್ಲ. ಅವರು ಮಾಮೂಲು ತಪ್ಪಿಸುವ ಮನಸ್ಸು ಮಾಡಿದರೆ ಅವರಿಗೆ ಆ ಸ್ಥಾನದಿಂದ ಪಲ್ಲಟ. ಆದರೂ ಚಿಂತೆಯಿಲ್ಲ. ಇದ್ದಷ್ಟೇ ದಿವಸ ಕಣ್ಣಿಗೆ ಬಿದ್ದ ಅಕ್ರಮಗಳನ್ನು ಸರಿಪಡಿಸುವ ದಿಟ್ಟನಿಲುವನ್ನು ಅಡ್ಮಿನಿಸ್ಟ್ರೇಟರ್ ತೆಗೆದುಕೊಳ್ಳಲೆಂದು ನಾನು ಅಪೇಕ್ಷಿಸುತ್ತೇನೆ. ಆಡಳಿತದಲ್ಲಿರುವ ಅಕ್ರಮಗಳನ್ನು ಪ್ರಾಮಾಣಿಕ ಅಧಿಕಾರಿಗಳು ಅರ್ಥಮಾಡಿಕೊಳ್ಳಲೆಂದು ಇಷ್ಟೆಲ್ಲಾ ಬಿಡಿಸಿ ಹೇಳಿದ್ದೇನೆ.

ಇನ್ನು ಕಾರ್ಪೊರೇಷನ್ ನೌಕರಿಯಲ್ಲಿರುವ ಝಾಡಮಾಲಿಗಳಿಗನೇಕರಿಗೆ ವಸತಿ ಸೌಕರ್ಯದ ವ್ಯವಸ್ಥೆ ಇಲ್ಲ. ಅವರಿಗೆ ವಸತಿ ಸೌಕರ್ಯಗಳನ್ನು ಒದಗಿಸುವ ಕಡೆ ಅಧಿಕಾರಿಗಳ ಗಮನ ಬೀಳಲೆಂದು ನಾನು ಹಾರೈಸುತ್ತೇನೆ. ಇನ್ನು ವಿಳಂಬ ನೀತಿ, ಅದು ಎಲ್ಲೆಲ್ಲೂ ಮನೆ ಮಾಡಿದೆ. ಇಲ್ಲೂ ಇದೆ.

ಇನ್ನು ಕಾರ್ಪೊರೇಷನ್ನಿಗೆ ಸಂಬಂಧಪಟ್ಟಂಥ ಬಿ.ವಿ. ಕೃಷ್ಣಯ್ಯಂಗಾರ್ ಅವರ ರಸ್ತೆಯನ್ನು ಸುಮಾರು 10 ವರ್ಷಗಳಿಂದಲೂ ಮಾಡಿಸುತ್ತಿದ್ದಾರೆ. ಒಬ್ಬರಿಗೆ ಸಾಲ ಕೊಟ್ಟರೆ ಇನ್ನೊಬ್ಬರಿಗೆ ಕೊಟ್ಟಿಲ್ಲ. ಹೀಗೆ ಏಕೆ ಆಗುತ್ತದೆ? ಎಂ.ಎಲ್.ಎ. ಬಂದು ಫೋನ್ ಮಾಡಬೇಕು. ದೊಡ್ಡ ದೊಡ್ಡ ಅಧಿಕಾರಿಗಳು ಇದರಲ್ಲಿ ಕೈಹಾಕುತ್ತಾರೆಂದು ಹೇಳುತ್ತಾರೆ. ಇಂತಹ ಒಂದು ಆಪಾದನೆಯನ್ನು ನಾವು ಕೇಳಬೇಕು. ಜನತೆಯ ಪ್ರತಿನಿಧಿಗಳಾಗಿ ಅವುಗಳನ್ನು ತಮ್ಮ ಗಮನಕ್ಕೆ ತರದಿದ್ದರೆ ಜನರ ಮನಸ್ಸಿಗೆ ಬೇಜಾರು ಆಗುತ್ತದೆ. ಅವರಿಗೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಈ ರಸ್ತೆ ಬಗ್ಗೆ ಮಾನ್ಯ ಸಚಿವರು ಸಾಕಷ್ಟು ಗಮನ ತೆಗೆದುಕೊಳ್ಳಲಿ ಎಂಬುದಾಗಿ ನಾನು ಹೇಳ ಬಯಸುತ್ತೇನೆ.

ಇನ್ನು ಪೋಲೀಸ್ ಇಲಾಖೆ ಮೇಲೆ ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರೆ, ಜೈಲುಗಳ ಬಗ್ಗೆಯೂ ಮಾತನಾಡಿದ್ದಾರೆ. ಜೈಲಿನ ಸುಧಾರಣೆ ಇನ್ನೂ ಸಾಲದು ಎಂದು ಹೇಳಿದ್ದಾರೆ. ಇದನ್ನು ಪುಷ್ಟೀಕರಿಸಿ ಮಾತನಾಡುತ್ತಿದ್ದೇನೆ. ಮೊದಲಿಗಿಂತ ಇಂದು ಜೈಲಿನಲ್ಲಿ ಅನೇಕ ಸೌಲಭ್ಯ ಗಳನ್ನು ಒದಗಿಸಿದ್ದಾರೆ. ಅಲ್ಲಿ ಇರುವವರು ಸುಖವಾಗಿದ್ದಾರೆ. ಜೈಲ್ ಬೋರ್ಡ್ ಆಫ್ ವಿಸಿ ಟರ್ಸ್ನವರಿಗೆ ನಾವು ಕೆಲವರನ್ನು ಬಿಡಬೇಕು 10 ವರ್ಷದಿಂದಲೂ ಶಿಕ್ಷೆ ಅನುಭವಿಸುತ್ತಿದ್ದಾರೆ ಎಂದು ಶಿಫಾರಸು ಮಾಡಿ ಕಳುಹಿಸಿದರೂ ಇನ್ನೂ ಎರಡು ವರ್ಷಗಳ ಕಾಲ ಮುಂದೂಡಿ ಬಿಡು ತ್ತಾರೆ. ಅವರಿಗೆ ತಿಳಿದೋ ತಿಳಿಯದೆಯೋ ತಪ್ಪು ಮಾಡಿ ಬಂದಿದ್ದಾರೆ, ಹೆಂಡತಿ ಮಕ್ಕಳನ್ನು ತೊರೆದು ಬಿಟ್ಟು ಬಂದು ಬಿಟ್ಟಿದ್ದಾರೆ. ಅವರನ್ನು ಆದಷ್ಟು ಜಾಗ್ರತೆ ಬಿಡುಗಡೆ ಮಾಡುವಂತೆ ಸರ್ಕಾರ ದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಕಳ್ಳತನ ಕೊಲೆಗೆ ಸಿಲುಕಿ, ಬಂದಂಥ ಮಹಿಳೆಯರ ಬಗ್ಗೆ ನಮ್ಮ ಸದಸ್ಯರು ಹೇಳಿದರು. ಅವರನ್ನು ನೋಡಿಕೊಳ್ಳುವುದಕ್ಕೆ ಜೈಲ್‌ವಾರ್ಡ್ಸ್‌ನಲ್ಲಿ ಹೆಣ್ಣುಮಕ್ಕಳನ್ನು ಪೋಲೀಸ್ ಕಾನ್‌ಸ್ಟೇಬಲ್ ಆಗಿ ಇಟ್ಟಿದ್ದಾರೆ ಎಂದು ಯಾವ ರೀತಿಯೋ ಅಗಲಿ ಮಾನ ಭಂಗ ಆಗಿಲ್ಲ ಆದರೂ ನಮ್ಮ ದೂರದೃಷ್ಟಿಯಿಂದ ಕೆಲವು ಹೆಣ್ಣುಮಕ್ಕಳಿಗೆ ಪೋಲೀಸ್ ಕಾನ್‌ಸ್ಟೇಬಲ್ಸ್ ಕೆಲಸ ಕೊಟ್ಟು ಅಂತಹ ಕಡೆ ಇಡುವುದು ಸೂಕ್ತ. ಕೆಲವು ರಸ್ತೆಗಳಲ್ಲಿ ವಾಹನಗಳಿಗೆ ದಾರಿ ತೋರಿಸಲಿಕ್ಕೆ ಪೋಲೀಸಿನವರು ನಿಂತಿರುತ್ತಾರೆ. ಕೋಟು ಸಹ ಇಲ್ಲ, ಕೆಲವು ಕಡೆ ಬರೀ ರೋಡಿನಲ್ಲೇ ನಿಂತು ಕೊಳ್ಳುತ್ತಾರೆ. ಸ್ಕೂಟರ್ಸ್, ಲಾರಿಗಳು, ಟಾಂಗ ನುಗ್ಗುತ್ತದೆ, ರೋಡಿನಲ್ಲಿ ನಿಂತುಕೊಂಡು ಕೈ ತೋರಿಸಿದರೆ ತಲೆ ಕೆಟ್ಟವನು ಹೊಡೆದರೆ ಪ್ರಾಣಕ್ಕೆ ಸಂಚಕಾರ ಇದೆ. ಇದನ್ನು ತಪ್ಪಿಸಿ ಎತ್ತರ ವಾದ ಕಟ್ಟೆಗಳನ್ನು ಇಟ್ಟು ಅವರು ನಿಂತುಕೊಂಡು ದಾರಿ ತೋರಿಸುವಂತೆ ವ್ಯವಸ್ಥೆ ಮಾಡಬೇಕು ಎಂದು ಹೇಳಬಯಸುತ್ತೇನೆ. ಇನ್ನು ಕೆಲವರು ಮಳೆಯಲ್ಲಿ ನಿಂತುಕೊಂಡಿರುವುದನ್ನು ನೋಡಿ ದರೆ ಕನಿಕರವಾಗುತ್ತದೆ. ಅವರಿಗೆ ರೈನ್ ಕೋಟ್ಸ್ ಇಲ್ಲ. ಯಾವುದರಲ್ಲಾದರೂ ಖರ್ಚನ್ನು ಕಡಿಮೆ ಮಾಡಿ ಪ್ರತಿಯೊಬ್ಬರಿಗೂ ರೈನ್ ಕೋಟುಗಳನ್ನು ಪೋಲೀಸಿನವರಿಗೆ ಕೊಡಬೇಕು ಎಂದು

ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಇಷ್ಟೆಲ್ಲಾ ವಿಚಾರವನ್ನು ಸೂಕ್ಷ್ಮ ದೃಷ್ಟಿಯಿಂದ ಹೇಳಿದ್ದೇನೆ. ಇದನ್ನು ದೂರದೃಷ್ಟಿಯಿಂದ ಮಾನ್ಯ ಸಚಿವರು ವಿಮರ್ಶೆ ಮಾಡುತ್ತಾರೆಂದು ನಂಬಿ ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ.

ಬೆಂಗಳೂರಿನ ಕತೆಯು ಕೇಳಬಲ್ಲಿರಾ ನೀವು ।
ಇದು ಕನ್ನಡಿಗರ ಗಂಡುಮೆಟ್ಟು ।
ಆದರೇಂ ಕನ್ನಡಿಗರಿಗೆ ಇಂಬಿಲ್ಲ ಇಲ್ಲಿ ।
ವಲಸೆ ಬಂದವರ ಕೈಯ್ಯಲ್ಲಿದೆ ಇವರ ಜುಟ್ಟು ।

ಇದನ್ನು ಆಡಳಿತದ ವರ್ಗ ಅಕ್ಷರಶಃ ಅರ್ಥ ಮಾಡಿಕೊಂಡು ಕಾರ್ಪೋರೇಷನ್ ಕನ್ನಡಿಗರ ಹಿತ ರಕ್ಷಣೆಗೆ ಪಣ ತೊಡಲೆಂದು ಹಾರೈಸುತ್ತೇನೆ. ಇಷ್ಟು ವಿಷಯಗಳನ್ನು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟೊಂದು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ಇದನ್ನು ಅನುಮೋದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ, ನಿನ್ನೆ ಈ ಡಿಮ್ಯಾಂಡ್ ಮೂವ್ ಆಗದೇ ಹೋಗಿದುದರಿಂದ ಪುನಃ ನಿನ್ನೆ ಹೇಳಿದ್ದನ್ನು ಸ್ವಲ್ಪ ಹೇಳಬೇಕಾದ ಪ್ರಮೇಯ ಬಂದಿದೆ. ಮಾನ್ಯ ನಗರಾಡಳಿತ ಮಂತ್ರಿಗಳಿಗೆ ಮಂತ್ರಿಯಾಗಿ ಇರುವುದಕ್ಕೆ ಅರ್ಹತೆ ಕಡಿಮೆ ದಯವಿಟ್ಟು ಆ ಖಾತೆಯನ್ನು ಬಿಟ್ಟುಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಮೊದಲನೆಯದಾಗಿ ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲ, ಎರಡನೆಯದಾಗಿ ಕಾರ್ಪೋರೇಷನ್ ಅಥವಾ ಮುನಿಸಿಪಾಲಿಟಿಗಳನ್ನು ಸೂಪರ್‌ಸೀಡ್ ಅಲ್ಲದೆ ಬೇರೆ ರೀತಿ ಗೊತ್ತಿಲ್ಲ. ಮೂರನೆಯದಾಗಿ ನಯ ವಿನಯ ಇಲ್ಲದೆ ಜನಗಳ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಒರಟಾಗಿ ಜವಾಬು ಕೊಡುವುದಲ್ಲದೆ ಬೇರೆ ವಿಚಾರ ಗೊತ್ತಿಲ್ಲ. ನಾಲ್ಕನೆಯದಾಗಿ ಜನಗಳ ಕಷ್ಟ ಸುಖಗಳನ್ನು ಅರಿತುಕೊಂಡು ಅವರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗಿಲ್ಲ. ಅವರು ಪೋಲೀಸ್ ಖಾತೆಗೆ ಲಾಯಕ್ಕಾದ ಮಂತ್ರಿಗಳು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗ 36 ಜನಗಳು ಉಳ್ಳಂಥ ಕನ್‌ಸಲ್‌ಟೇಟೀವ್ ಕಮಿಟಿ ಕಾರ್ಪೋರೇಷನ್ ಆಡಳಿತವನ್ನು ನೋಡಿಕೊಳ್ಳುವುದಕ್ಕೆ ಗೊತ್ತು ಮಾಡಿದ್ದಾರೆ. ಅದಕ್ಕೆ ಅವರೇ ಅಧ್ಯಕ್ಷರು. 36 ಜನದಲ್ಲಿ 26 ಜನ ಕಾಂಗ್ರೆಸ್‌ನವರು. ಈ ಕನ್‌ಸಲ್‌ಟೇಟೀವ್ ಕಮಿಟಿ ತಿಂಗಳಿಗೆ ಒಂದು ಸಾರಿ ಸಾಮಾನ್ಯವಾಗಿ ಸೇರಬೇಕಾಗಿತ್ತು. ಅಲ್ಲಿ ಕಾಂಗ್ರೆಸ್ ಸದಸ್ಯರಲ್ಲೇ ತಮ್ಮನ್ನು ಅಟ್ಯಾಕ್ ಮಾಡುತ್ತಾರೆ ಎಂದು 6 ತಿಂಗಳಿನಿಂದ ಕನ್‌ಸಲ್ಟೇಟೀವ್ ಕಮಿಟಿ ಮೀಟಿಂಗ್ ಕರೆದಿಲ್ಲ. ಪ್ರಜಾಪ್ರಭುತ್ವದಲ್ಲಿ ಸ್ವಲ್ಪವೂ ನಂಬಿಕೆ ಇಲ್ಲದೇ ಇರುವುದರಿಂದ ನಗರಾಡಳಿತ ಮಂತ್ರಿಗಳಾಗಿರುವುದಕ್ಕೆ ಖಂಡಿತ ಅರ್ಹತೆ ಇಲ್ಲ. ಸೂಕ್ಷ್ಮವಾಗಿ ಹೇಳುತ್ತೇನೆ. ಸರ್ಕಾರದವರೇ ಈ ಕಾರ್ಪೋರೇಷನ್‌ಗೆ ನ್ಯಾಯವಾಗಿ ದೊರಕಬೇಕಾದಂಥ ಮೋಟಾರ್ ವೆಹಿಕಲ್‌ಟ್ಯಾಕ್ಸ್, ಬಿಲ್ಡಿಂಗ್ಸ್‌ಗೆ ಕೊಡಬೇಕಾದಂಥ ಗ್ರಾಂಟ್ ಮತ್ತು ನ್ಯಾಯವಾದ ಕಾರ್ಪೋರೇಷನ್ ಷೇರುಗಳು, ಧರ್ಮಾಂಬುಧಿ ಟ್ಯಾಂಕ್, ಸಂಪಂಗಿ ಟ್ಯಾಂಕ್ ಉಳ್ಳ ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕದ್ದನ್ನು ಕಸಿದುಕೊಂಡಿರುವುದರ ಬಗ್ಗೆ ಮತ್ತು ಸರ್ಕಾರದ ಕಟ್ಟಡಗಳ ಮೇಲೆ ಟ್ಯಾಕ್ಸನ್ನು ಕೊಡದೇ ಇರುವುದು ಬೇರೆ ಮುನಿಸಿಪಾಲಿಟಿಗಳಿಗೆ ಕೊಟ್ಟಿರುವುದು ಹೀಗೆ ಕಾರ್ಪೋರೇಷನ್ನಿಗೆ ಸಲ್ಲಬೇಕಾದಂಥ 50 ಪರ್ಸೆಂಟು ಡಿ.ಎ. ಕೊಡದೇ ಇರುವುದು ಈ ರೀತಿ ಅನ್ಯಾಯ ನಡೆದಿದೆ. ಇದರ ಬಗ್ಗೆ ಸರ್ಕಾರದವರಿಗೆ ಕಾರ್ಪೋರೇಷನ್ ಕಡೆಯಿಂದ 3 ಕೋಟಿ ರೂಪಾಯಿಗಳು ಕಲೆಕ್ಟ್ ಆದರೂ ಕೊಡುತ್ತಾ ಇರುವುದು $4\frac{1}{2}$ ಲಕ್ಷ ರೂಪಾಯಿ. ಬೇರೆ ಯಾವ ಗ್ರಾಂಟನ್ನೂ ಕೊಡುವುದಿಲ್ಲ. 5 ಕೋಟಿ ರೂಪಾಯಿ ವರಮಾನ ಬರುವಂಥಾ ಕಾರ್ಪೋರೇಷನ್ನನ್ನು ನಿರ್ಲಕ್ಷ್ಯ ಮನೋಭಾವದಿಂದ ಕಾಣುವುದು ಶೋಚನೀಯ ಎಂದು ಹೇಳುತ್ತೇನೆ. ಕಾರ್ಪೋರೇಷನ್ ಆಡಳಿತದ ಬಗ್ಗೆ ನ್ಯಾಯವಾಗಿ ಹೇಳಿದರೂ ಕೂಡ ನಿಷ್ಠೂರವಾಗಿ ಹೇಳತಕ್ಕಂಥ ಶ್ರೀಮತಿ ನಾಗರತ್ನಮ್ಮನವರು ಆಗಲೇ ವಿವರಣೆ ಹೇಳಿದ್ದಾರೆ. ನಾವು ಹೇಳಿದರೆ ಟೀಕೆಯಾಗುತ್ತದೆ, ರಾಜಕೀಯವಾಗುತ್ತದೆ. ಕಾಂಗ್ರೆಸ್ಸಿಗೆ ಪೂರ್ಣ ಬೆಂಬಲ ಕೊಡತಕ್ಕಂಥ ಕಾಂಗ್ರೆಸ್ಸಿನವರಾದ ಶ್ರೀಮತಿ ನಾಗರತ್ನಮ್ಮನವರು ಹೇಳಿದರೆ ಹಾಗೆ ತಿಳಿದುಕೊಳ್ಳಲಾರರು. ಹೇಳಬೇಕಾದ ವಿಚಾರಗಳನ್ನು ನ್ಯಾಯವಾಗಿ ಹೇಳಿದರೂ ಕೂಡ ಚೆನ್ನಾಗಿ ಹೇಳಿದ್ದಾರೆ.

ಇನ್ನು ಬೆಂಗಳೂರಿನ ನಾಗರೀಕರ ಸಮಸ್ಯೆಯಾದಂಥ ನೀರಿನ ಸಮಸ್ಯೆ ಇನ್ನೂ ಬಗೆಹರಿಸಿಲ್ಲ. ಮತ್ತು 200 ರಿಂದ 500 ರೂಪಾಯಿನವರೆಗೆ ಇರುವ ಯಾವುದೋ ಕಾಲದ ಪ್ರೊಫೆಷನ್ ಟ್ಯಾಕ್ಸನ್ನು ವಸೂಲು ಮಾಡುತ್ತಾ ಇದ್ದರು. ಅದನ್ನು ವಜಾ ಮಾಡಬೇಕು ಎಂದು ಅನೇಕ ಸಾರಿ ಒತ್ತಾಯ

(ಶ್ರೀ ಟಿ. ಆರ್. ಶಾಮಣ್ಣ)

ಮಾಡಿದರೆ ಈಗ ಮಾಡುತ್ತೇನೆ, ಆಗ ಮಾಡುತ್ತೇನೆ ಎಂದು ಹೇಳಿ ಮಾಡದೇ ಇರುವುದು ಶೋಚನೀಯವಾಗಿದೆ. ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ 40 ಸಾವಿರ ರೆವಿನ್ಯೂ ಸೈಟುಗಳನ್ನು ವಿಲೇವಾರಿ ಮಾಡುವ ಬಗ್ಗೆ ಬಡವರಿಗೆ ತೊಂದರೆಯಾಗಿದೆ. ಅನೇಕ ಸಾರಿ ಕೇಳಿಕೊಂಡರೂ ಕೂಡ ತೀರ್ಮಾನವಾಗದೇ ಇದೆ. 6 ಲಕ್ಷ ರೂಪಾಯಿಗಳ ವರಮಾನ ಬರುವ ಯೋಜನೆಗಳನ್ನು ತೋರಿಸಿ ಕೇವಲ 1 ಲಕ್ಷ 13 ಸಾವಿರ ರೂಪಾಯಿ ಬರುವ ಸೈಕಲ್ ಟ್ಯಾಕ್ಸನ್ನು ತೆಗೆಯಿರಿ ಎಂದು ಎಷ್ಟು ಹೇಳಿದರೂ ತೆಗೆಯದೇ ಇರುವುದು, ಈ ರೀತಿ ಅನೇಕ ಸಮಸ್ಯೆಗಳನ್ನು ಬಗೆಹರಿಸದೇ ಇರುವುದ ಬಹಳ ಶೋಚನೀಯ. ಸರ್ಕಾರದವರು ಕಾರ್ಪೋರೇಷನ್ನಿನ ನೀರು ಸರಬರಾಜು ಮತ್ತು ಒಳಚರಂಡಿ ಬಗ್ಗೆ ಕೋಟ್ಯಾಂತರ ರೂಪಾಯಿಯ ಆಸ್ತಿಯನ್ನು ತೆಗೆದುಕೊಂಡರು,ಲೆಕ್ಕ ಇಲ್ಲ, ಜವಾ ಇಲ್ಲ. ಕಾರ್ಪೋರೇಷನ್ ಆಡಳಿತಕ್ಕೆ 34 ಹಳ್ಳಿಗಳನ್ನು ಸೇರಿಸಿಕೊಂಡಾಗ ಸಾಕಾದಷ್ಟು ಸಹಾಯ ಮಾಡುತ್ತೇವೆ ಎಂದು ಮಾತು ಕೊಟ್ಟರು, ಅದರ ಬಗ್ಗೆ ಮಾತನ್ನು ಬದಲಾವಣೆ ಮಾಡುತ್ತಿದ್ದಾರೆ. ಒಂದಾನೊಂದು ಕಾಲದಲ್ಲಿ ಕಾರ್ಪೋರೇಷನ್‌ನಿಂದ ಹಿಡಿದು ಮೈಸೂರು ಬ್ಯಾಂಕ್ ಸ್ಕ್ವೇರ್ ನವರೆಗೂ ಮುನಿಸಿಪಾಲಿಟಿಗೆ ಸೇರಿತ್ತು. ಈಗ ರಸ್ತೆಯನ್ನು ವಿಸ್ತರಣೆ ಮಾಡುವುದಕ್ಕೋಸ್ಕರ ಜಾಗ ಕೊಡಿ ಎಂದರೆ ಚದರಗಜಕ್ಕೆ 100 ರೂಪಾಯಿನಂತೆ ಕೇಳುತ್ತಾ ಇದ್ದೀರಿ. ಯಾವ ರೀತಿಯಾಗಿ ನೋಡಿದರೂ ಕೂಡ ಕಾರ್ಪೋರೇಷನ್ನಿಗೆ ಅನ್ಯಾಯ ಮಾಡುತ್ತಾ ಇದ್ದೀರಿ. ನ್ಯಾಯವಾದ ರೀತಿಯಲ್ಲಿ ವರ್ತಿಸುತ್ತಾ ಇಲ್ಲ. ಬೆಂಗಳೂರು ನಾಗರೀಕರಿಗೆ ಸಂಬಂಧಪಟ್ಟಂತೆ ಅನೇಕ ನ್ಯೂನತೆಗಳನ್ನು ತಂದೊಡ್ಡುತ್ತಿದ್ದೀರಿ. ಬೆಂಗಳೂರು ನಗರಕ್ಕೆ ಸರ್ಕಾರ ಮಾಡುವ ಸಹಾಯ ಕಡಿಮೆ ಆದರೆ ಎಲ್ಲಾ ಅಧಿಕಾರಗಳನ್ನೂ ಇಟ್ಟುಕೊಳ್ಳುವುದಕ್ಕೆ ಪ್ರಯತ್ನಪಡುತ್ತಿದ್ದೀರಿ. ಬೆಂಗಳೂರು ನಗರದಲ್ಲಿ ಎಲ್ಲಾ ಸೌಕರ್ಯಗಳೂ ಇವೆ ಎಂದು ಮಾನ್ಯ ಸದಸ್ಯರು ತಿಳಿದುಕೊಂಡಿರಬಹುದು ಅದು ಬೆಂಗಳೂರು ನಗರದ ಸೌಕರ್ಯಕ್ಕೆ ಬೆಂಗಳೂರಿನ ಜನ ದುಡ್ಡು ಕೊಟ್ಟಿದ್ದಾರೆ, ಸರ್ಕಾರದಿಂದ ಯಾವ ವಿಧವಾದ ಗ್ರಾಂಟೂ ಬರುತ್ತಾ ಇಲ್ಲ, ಬಂದರೂ ಕೂಡ ಸುಮಾರು 100ರಲ್ಲಿ 2 ಪರ್ಸೆಂಟು ಬರುತ್ತಾ ಇರಬಹುದು, ಮಿಕ್ಕ 98 ಪರ್ಸೆಂಟು ಬೆಂಗಳೂರ ನಾಗರೀಕರೇ ಕೊಡುತ್ತಿದ್ದಾರೆ. ಬೆಂಗಳೂರು ನಾಗರೀಕರು ಕೊಡುವ ದುಡ್ಡಿನಿಂದಲೇ ಸೌಲಭ್ಯಗಳು ಆಗಬೇಕು. ಈ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಮಾಡಬೇಕು ಎಂದು ಹೇಳುತ್ತಿದ್ದೇನೆ. ಸರ್ಕಾರದಿಂದ ಯಾವ ಹಣವೂ ಬೇಡ. ಬೆಂಗಳೂರು ನಾಗರೀಕರೇ ದುಡ್ಡನ್ನು ಕೊಡುತ್ತಾರೆ. ಯಾವ ರೀತಿ ಸೌಲಭ್ಯಗಳು ಬೇಕೋ ಆ ರೀತಿ ಸೌಲಭ್ಯಗಳನ್ನು ಮಾಡಕೊಡಿ ಎಂದು ನಾವು ಕೇಳುತ್ತಿದ್ದೇವೆ.

ಈಗ ಕಾರ್ಪೊರೇಷನ್ನನ್ನು ಸೂಪರ್‌ಸೀಡ್ ಮಾಡಿದ ಮೇಲೆ ಅಲ್ಲಿಯ ಆಡಳಿತವೆಲ್ಲಾ ಅಡ್ಮಿನಿಸ್ಟ್ರೇಷನ್ನೆಲ್ಲಾ ಬಹಳ ಚೆನ್ನಾಗಿದೆ ಎಂದು ಮಾನ್ಯ ಮಂತ್ರಿಗಳ ಅಭಿಪ್ರಾಯವಾಗಿರುವಂತೆ ಕಾಣುತ್ತಿದೆ. ಆದರೆ ನಾನು ಈ ವಿಚಾರದಲ್ಲಿ ಹೇಳುವುದಿಷ್ಟೆ: ಅಲ್ಲಲ್ಲೆ ಕೆಲವು ರಸ್ತೆಗಳನ್ನೇನೋ ದೊಡ್ಡದಾಗಿ ಮಾಡಿದ್ದಾರೆ. ಜನರ ಕಣ್ಣಿಗೆ ಬೀಳತಕ್ಕ ದೊಡ್ಡ ರಸ್ತೆಗಳೇನೋ ಸ್ವಲ್ಪಮಟ್ಟಿಗೆ ಚೆನ್ನಾಗಿ ಆದವು. ಇನ್ನು ಅಲ್ಲಲ್ಲೇ ಕೆಲವು ಕಡೆ ಲೈಟುಗಳನ್ನು ಹಾಕಿಸಿದ್ದಾರೆ. ಆದರೆ ಈ ಸೂಪರ್‌ಸೀಡಾಗುವುದಕ್ಕೆ ಮುಂಚೆ ನಾವು ಅಲ್ಲಿ ಯಾವ ಜನರಿಂದ ಓಟುಗಳನ್ನು ತೆಗೆದುಕೊಂಡು ಅಲ್ಲಿಗೆ ಚುನಾಯಿತರಾಗಿ ಬರುತ್ತಿದ್ದೆವೋ ಅಂಥ ಜನರ ಕೇಳಿಕೆಗೆ ಮೊದಲು ಗಮನ ಕೊಡುತ್ತಿದ್ದೆವು. ಅವರಿಗೆ ಅಗತ್ಯವಾಗಿ ಆಗಬೇಕಾಗಿದ್ದ ನಾಗರೀಕ ಸೌಲಭ್ಯಗಳನ್ನು ಒದಗಿಸುತ್ತಿದ್ದೆವು. ಆದರೆ ಈ ದಿವಸ ಯಾರು ಅಧಿಕ ಪ್ರಮಾಣದಲ್ಲಿ ತೆರಿಗೆಯನ್ನು ಕೊಡುತ್ತಿದ್ದಾರೋ ಅಂಥವರಿಗೆ ಏನೇನೂ ಅನುಕೂಲವಾಗಿಲ್ಲ. ಅವರಿಗೆ ದೊರೆಯಬೇಕಾಗಿದ್ದ ಸೌಕರ್ಯಗಳಾಗಲೀ ಸೌಲಭ್ಯಗಳಾಗಲೀ ಒಂದೂ ಅವರಿಗೆ ದೊರೆತಿಲ್ಲ. ಸೂಪರ್‌ಸೀಡಾಗದ ಮೇಲೆ ಅಲ್ಲಿ ಬಹು ಪ್ರಾಮುಖ್ಯವಾಗಿ ಆಗಬೇಕಾಗಿದ್ದ ಸ್ಲಂ ಕ್ಲಿಯರೆನ್ಸ್, ಸೊಳ್ಳೆಗಳ ಕಾಟ ಹಾಗೂ ಅನ್‌ಡೆವಲಪ್ಡ್ ಏರಿಯಾಗಳ ಬಗ್ಗೆ ಇವರೇನು ಕಾರ್ಯಕ್ರಮ ನಡೆಸಿದ್ದಾರೆ? ಬಡವರಿಗೆ ಅತ್ಯಗತ್ಯವಾಗಿ ಬೇಕಾದ ನಾಗರೀಕ ಸೌಲಭ್ಯಗಳನ್ನು ಅಂದರೆ ನೀರು, ದೀಪ, ಒಳಚರಂಡಿ ವ್ಯವಸ್ಥೆ ಇವೆಲ್ಲಾ ಏನಾಗಿವೇ? ನಾವು ಈ ವಿಚಾರಗಳನ್ನು ಆ ಅಡ್ಮಿನಿಸ್ಟ್ರೇಟರ ಹತ್ತಿರ ಚರ್ಚೆ ಮಾಡಿ ಕೇಳಿದರೆ—ಅವರು ಹೋಗರಿ, ನಮಗೆ ಯಾರು ಈ ದಿವಸ ಟ್ಯಾಕ್ಸನ್ನು ಸಲೀಸಾಗಿ ಕೊಡುತ್ತಿದ್ದಾರೋ ಅವರ ಕೆಲಸವನ್ನು ಮಾತ್ರ ಮಾಡುತ್ತೇವೆ. ಟ್ಯಾಕ್ಸ್ ಕೊಡದೆ ಬಾಕಿ ನಿಲ್ಲಿಸಿಕೊಂಡಿರತಕ್ಕವರ ಕೆಲಸವನ್ನು ನಾವೇಕೆ ಮಾಡಬೇಕೆಂದು ಕೇಳುತ್ತಿದ್ದಾರೆ. ಇಂಥ ಒಂದು ಅಡ್ಮಿನಿಸ್ಟ್ರೇಷನ್ ಈ ದಿವಸ ಅಲ್ಲಿ ನಡೆಯುತ್ತಿದೆ. ನಾಗರೀಕರಿಗೆ ಆಗಬೇಕಾದ ಅನುಕೂಲತೆಗಳೊಂದೂ ಆಗಿಲ್ಲ. ಅಲ್ಲಿ ಈ ದಿವಸ ಏನಾದರೂ ಕೆಲಸಗಳು ನಡೆದಿದ್ದರೆ ಅದು ಆ ಕಾರ್ಪೊರೇಷನ್ನಿನಲ್ಲಿರತಕ್ಕ ಆ ಇಂಜಿನಿಯರುಗಳು ಮತ್ತು ಕಂಟ್ರಾಕ್ಟರುಗಳಿಂದ ನಡೆದಿದೆ. ಅದರಿಂದ ಆದ ಪ್ರತಿಫಲ ಏನಪ್ಪಾ ಅಂದರೆ ಇಂಜಿನಿಯರು ಬದುಕಿಹೋದರು—ಕಂಟ್ರಾಕ್ಟರು ಕುಬೇರ

12-00 NOON

ಆದ್ದರಿಂದ ಈ ಕೆಲಸಗಳು ಆಗಬೇಕಾದರೆ ಎಷ್ಟೋ ದಿವಸಗಳಾಗುತ್ತದೆ. ಇದರಿಂದ ನಾಗರೀಕರಿಗೆ ತೊಂದರೆಯಾಗುತ್ತದೆ. ಇಂಥಾ ಅಧಿಕಾರಿಗಳು ಕಾರ್ಪೊರೇಷನ್ನಿನಲ್ಲಿ ಇದ್ದಾರೆ. ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾವು 23 ಜನ ಬರೆದುಕೊಟ್ಟಿದ್ದೇವೆ. ಆದರೂ ಸಹ ಅವರ ಮೇಲೆ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಆ ಅಧಿಕಾರಿಗಳನ್ನು ತಕ್ಷಣ ಬದಲಾಯಿಸಿ ಎಂದು ಮಾನ್ಯ ಮುಖ್ಯಮಂತ್ರಿಗಳಿಗೂ ಹೇಳಿದ್ದೇವೆ. ನಾಗರೀಕರ ಕಷ್ಟ ಸುಖಗಳು ಆ ಅಧಿಕಾರಿಗಳಿಗೆ ಗೊತ್ತಾಗುವುದಿಲ್ಲ. ಆದ್ದರಿಂದ ಅವರನ್ನು ತಕ್ಷಣ ಬದಲಾಯಿಸಿ ಎಂದು ನಾನು ಹೇಳುತ್ತೇನೆ. ಕಾರ್ಪೊರೇಷನ್ನಿನ ಇಂಜಿನಿಯರನ್ನು ಇನ್ನೂ ಬದಲಾಯಿಸಿಯೇ ಇಲ್ಲ. ಈ ಬಗ್ಗೆ ಶ್ರೀಮತಿ ನಾಗರತ್ನಮ್ಮ ಹಿರೇಮಠ್ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಈಗ ಬೆಂಗಳೂರು ಕಾರ್ಪೊರೇಷನ್ನಿನಲ್ಲಿ ಏನು ಕೆಲವು ಅಧಿಕಾರಿಗಳು ಇದ್ದಾರೆ. ಆ ಅಧಿಕಾರಿಗಳು ಅಲ್ಲಿ ಇರುವ ವರೆಗೂ ಬೆಂಗಳೂರಿನ ನಾಗರೀಕರಿಗೆ ಒಳ್ಳೆಯದಾಗುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಬೆಂಗಳೂರಿನ ನಾಗರೀಕರು ಬಿಲ್ಡಿಂಗ್ ಕಟ್ಟುವುದಕ್ಕೆ ಲೈಸೆನ್ಸಿಗೆ ಹಾಕಿದರೆ 6–7 ತಿಂಗಳುಗಳಾದರೂ ಆಗುವುದಿಲ್ಲ. ಹಳೆಯ ಮನೆಗಳನ್ನು ಆಲ್ಟ್ರೇಷನ್ ಮಾಡಬೇಕು ಎಂದು ಲೈಸೆನ್ಸ್ ಕೊಡಿ ಎಂದು ಕೇಳಿದರೆ ಅದನ್ನು ಎಲ್ಲೋ ಮೂಲೆಗೆ ಬಿಸಾಡುತ್ತಾರೆ. ಮಾಮೂಲು ಕೊಟ್ಟರೆ ತಕ್ಷಣ ಕೆಲಸಗಳಾಗುತ್ತವೆ. ಮೊದಲು ಕಾರ್ಪೊರೇಷನ್ನಿನಲ್ಲಿ ಕೆಲಸಗಳು ಬಹಳ ಜಾಗ್ರತೆಯಾಗಿ ನಡೆಯುತ್ತಿದ್ದವು. ಈಗ ಅಧಿಕಾರಿಗಳು ಜಾಸ್ತಿಯಾಗಿ ನಾಗರೀಕರನ್ನು ಯಾರನ್ನೂ ಕಾರ್ಪೊರೇಷನ್ನಿನ ಆಫೀಸಿನ ಒಳಕ್ಕೆ ಸೇರಿಸುವುದೇ ಇಲ್ಲ. ಕಾರ್ಪೊರೇಷನ್ ಆಫೀಸಿನಲ್ಲಿ ಏನಾದರೂ ಕೆಲಸಗಳಾಗಬೇಕಾಗಿದ್ದರೆ ಟೇಬಲ್ ಟೇಬಲ್ಲಿಗೂ ದುಡ್ಡು ಕೊಡಬೇಕು. ನಾನು 10 ವರ್ಷಗಳಿಂದ ಕೌನ್ಸಿಲರ್ ಆಗಿದ್ದೇನೆ. ನಾನೇ ಕಾರ್ಪೊರೇಷನ್ ಆಫೀಸಿನಲ್ಲಿ ಖುದ್ದಾಗಿ ನೋಡಿದ್ದೇನೆ. ಟೇಬಲ್ ಟೇಬಲ್ಲಿಗೂ ದುಡ್ಡು ಕೊಡಬೇಕು. ಇಲ್ಲದಿದ್ದರೆ ಕೆಲಸಗಳು ಆಗುವುದಿಲ್ಲ. ಇದನ್ನು ಯಾರೂ ಸರಿಪಡಿಸಿಲ್ಲ. ಕಾರ್ಪೊರೇಷನ್ ಇಂಜಿನಿಯರ ಬಗ್ಗೆ ಗೋವಿಂದಪ್ಪ ಎನ್ನುವವರು ಒಂದು ಪಿಟಿಷನ್ ಕೊಟ್ಟಿದ್ದರು. ಅವರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ರಿಟೈರ್ ಆಗಿರುವವರನ್ನು ಕಾರ್ಪೊರೇಷನ್ನಿಗೆ ಹಾಕಬೇಡಿ. ಅಂಥವರನ್ನು ಹಾಕಿದರೆ ಅವರು ಬೇಕಾದಷ್ಟು ಆಸ್ತಿಪಾಸ್ತಿಗಳನ್ನು ಮಾಡಿಕೊಳ್ಳುತ್ತಾರೆ. ಜನಗಳ ಕಷ್ಟಸುಖಗಳು ಗೊತ್ತಿರುವವರನ್ನು ಕಾರ್ಪೊರೇಷನ್ನಿಗೆ ಹಾಕಬೇಕು, ಅನುಭವಶಾಲಿಗಳಾದವರನ್ನು ಹಾಕಬೇಕು. ಗುಟ್ಟಹಳ್ಳಿ ಮಷಾಣದೊಳಗೆ ಅನಾಥರೈಜ್ ಆಗಿ ಎಷ್ಟೋ ಜನ ಗುಡಿಸಲುಗಳನ್ನು ಹಾಕಿಕೊಂಡು ವಾಸಮಾಡುತ್ತಿದ್ದಾರೆ. ಅದು ಸ್ಲಮ್ ಏರಿಯಾ ಆಗಿದೆ. ಅಂಥಾದ್ದನ್ನೆಲ್ಲಾ ಕಾರ್ಪೊರೇಷನ್ ಅಧಿಕಾರಿಗಳು ತಕ್ಷಣ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಬೇಕು. ಕಾರ್ಪೊರೇಷನ್ ಆಫೀಸಿಗೆ ನಾಗರೀಕರನ್ನು ಸೇರಿಸುವುದಿಲ್ಲ. ನಾಗರೀಕರಿಗೆ ಸೌಲಭ್ಯವನ್ನು ದೊರಕಿಸುವುದರಲ್ಲಿ ವಿಳಂಬವಾಗುತ್ತಿದೆ. ಸ್ಲಮ್ ಏರಿಯಾವನ್ನು ಕ್ಲಿಯರ್ ಮಾಡುವುದರಲ್ಲಿ ಆಸಕ್ತಿ ವಹಿಸುತ್ತಿಲ್ಲ. ಹೀಗಿರಬೇಕಾದರೆ ಈ ಕಾರ್ಪೊರೇಷನ್ ಏತಕ್ಕೆ ಇರಬೇಕು ? ದಯವಿಟ್ಟು ನಾನು ಅಧಿಕಾರಿಗಳನ್ನು ವಿನಯದಿಂದ ಕೇಳಿಕೊಳ್ಳುತ್ತೇನೆ, ಈ ರೀತಿ ಮಾಡಬಾರದು. ಬೆಂಗಳೂರಿನ ನಾಗರೀಕರಿಗೆ ಸೌಲಭ್ಯವನ್ನು ಒದಗಿಸುವ ಕಡೆ ಗಮನ ಕೊಡಬೇಕು. ಕಾರ್ಪೊರೇಷನ್ ಅಧಿಕಾರಿಗಳು ಮತ್ತು ನೌಕರರು ಪ್ರಾಮಾಣಿಕತೆಯಿಂದ ನಿಸ್ಪೃಹತೆಯಿಂದ ನಡೆದರೆ ಉತ್ತಮ ಫಲ ದೊರೆಯುತ್ತದೆ. ಇಲ್ಲದಿದ್ದರೆ ಖಂಡಿತ ಇಲ್ಲ. ಈಗಾಗಲೇ ಶ್ರೀಮತಿ ನಾಗರತ್ನಮ್ಮ ಹಿರೇಮಠ್ ಅವರು ಹೇಳಿದ್ದಾರೆ. ಸಂಸ್ಥೆಗೆ ಕೆಟ್ಟಹೆಸರು ಬರುತ್ತದೆ. ಆದ್ದರಿಂದ ಅಧಿಕಾರಿಗಳು ಇದನ್ನು ದಯವಿಟ್ಟು ಸರಿಪಡಿಸಬೇಕೆಂದು ನಾನು ವಿನಯದಿಂದ ಕೇಳಿಕೊಳ್ಳುತ್ತೇನೆ. ಇಲ್ಲವಿದ್ದರೆ ನಮ್ಮ ಬೆಂಗಳೂರಿನ ನಾಗರೀಕರ ಪರವಾಗಿ ನಾವು ಕಾರ್ಪೊರೇಷನ್ನಿನ ಮುಂದೆ ಸತ್ಯಾಗ್ರಹ ಮಾಡಬೇಕಾಗುತ್ತದೆ. ದಯವಿಟ್ಟು ಅಧಿಕಾರಿಗಳನ್ನು ಬದಲಾಯಿಸಿ ಎಂದು ನಾನು ಬಹಳ ಒತ್ತಾಯದಿಂದ ಹೇಳುತ್ತೇನೆ. ನಾವು ಬೆಂಗಳೂರಿನ ನಾಗರೀಕರ ಪರವಾಗಿ ಇಲ್ಲಿಗೆ ಆರಿಸಿ ಬಂದಿದ್ದೇವೆ. ಆದ್ದರಿಂದ ನಾವು ಬೆಂಗಳೂರಿನ ನಾಗರೀಕರ ಕಷ್ಟ ಸುಖಗಳನ್ನು ನೋಡಬೇಕು. ಅದಕ್ಕಾಗಿ ನಾವು 23 ಜನ ಸೈನ್‌ಮಾಡಿ ಒಂದು ಪಿಟಿಷನ್ ಅನ್ನು ಮಾನ್ಯ ಮಂತ್ರಿಗಳಿಗೆ ಕೊಟ್ಟಿದ್ದೇವೆ. ನಾವು ಹೇಳಿದ ಹಾಗೆ ಅಧಿಕಾರಿಗಳು ಕೇಳಬೇಕು ಇಲ್ಲದೆ ಇದ್ದರೆ ಕೆಲಸಬಿಟ್ಟು ಹೋಗಬೇಕು. ನಾವು ಸರ್ಕಾರಕ್ಕೆ ಕೊಟ್ಟಂತಹ ಪಿಟಿಷನ್ ಮೇಲೆ ಸರ್ಕಾರದವರು ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಇದು ಬಹಳ ಅನ್ಯಾಯವಾಗುತ್ತದೆ. ಈಗ ಕಾರ್ಪೊರೇಷನ್‌ನಲ್ಲಿ ಕೆಲವು ಅಧಿಕಾರಿಗಳು ಏನು ಇದ್ದಾರೆಯೋ ಅವರನ್ನು ಬದಲಾಯಿಸಿ ಒಳ್ಳೆಯ ಅಧಿಕಾರಿಗಳನ್ನು ಹಾಕಬೇಕು. ಸಂಸ್ಥೆಗೂ ಒಳ್ಳೆಯ ಹೆಸರು ಬರುತ್ತದೆ. ನಾಗರೀಕರಿಗೂ ಅನುಕೂಲವಾಗುವಂತಹ ಒಳ್ಳೆಯ ಕೆಲಸವನ್ನು ಮಾಡುತ್ತಾರೆ.

ಇನ್ನು ಬೆಂಗಳೂರು ನಗರದಲ್ಲಿ ನರ್ಸರಿ ಸ್ಕೂಲುಗಳನ್ನು ಹೆಚ್ಚುಹೆಚ್ಚಾಗಿ ತೆರೆಯುವುದಕ್ಕೆ ಸರ್ಕಾರದವರು ಪ್ರೋತ್ಸಾಹ ಕೊಡಬೇಕು. 3 ವರ್ಷದಿಂದ ಹಿಡಿದು 5 ವರ್ಷದ ವರೆಗಿನ

(ಶ್ರೀ ಎ. ನಂಜಪ್ಪ)

ಮಕ್ಕಳಿಗೆ ವಿದ್ಯಾಭ್ಯಾಸನ್ನು ಕೊಡುವುದಕ್ಕೆ ಅನುಕೂಲವಾಗುವಂತೆ ಮಾಡಲು ವ್ಯವಸ್ಥೆ ಮಾಡಬೇಕು. ನಗರದಲ್ಲಿ ಆಗಬೇಕಾಗಿರತಕ್ಕ ಕೆಲಸಗಳನ್ನು ಮಾಡುವುದಕ್ಕೆ ಅಧಿಕಾರಿಗಳು ಗಮನ ಕೊಡುತ್ತಾ ಇಲ್ಲ. ನಮ್ಮ ಜೊತೆಯಲ್ಲಿ ಕಾರ್ಪೊರೇಷನ್ ಅಧಿಕಾರಿಗಳು ಬರಲಿ ಎಲ್ಲೆಲ್ಲಿ ಏನೇನು ಕೆಲಸಗಳಾಗಬೇಕು ಎಂಬುದನ್ನು ತೋರಿಸುತ್ತೇನೆ ನಾವು ಕೌನ್ಸಿಲರ್ಸ್ ಇಲ್ಲಿ ಇರತಕ್ಕವರಿಗೆ ಏಳು ಡಿವಿಜನ್ ಒಬ್ಬೊಬ್ಬರಿಗೆ ಸೇರುತ್ತದೆ. ಆ ಡಿವಿಜನ್ ಗಳಲ್ಲಿ ಏನೇನು ಕೆಲಸ ಗಳಾಗಬೇಕು ಎಂಬುದನ್ನು ತೋರಿಸುತ್ತೇವೆ. ಆ ಕೆಲಸಗಳನ್ನು ತೆಗೆದುಕೊಳ್ಳ ಬೇಕಾದ ನ್ಯಾಯ ಇದ್ದರೆ ತೆಗೆದು ಕೊಳ್ಳಲಿ, ನ್ಯಾಯ ಇಲ್ಲದಿದ್ದರೆ ತೆಗೆದು ಕೊಳ್ಳುವುದು ಬೇಡ. ನನ್ನ ಡಿವಿಜನ್‌ನಲ್ಲಿ ಯಾವುದೋ ಒಂದು ಕೆಲಸ ಆಗಬೇಕಾಗಿತ್ತು ಒಂದು ವರ್ಷದಿಂದ ಆ ಕೆಲಸ ಮಾಡಿಕೊಡಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಹೇಳಿ ಸಾಕಾಗಿತ್ತು. ಹೋದ ತಿಂಗಳು 31 ನೇ ತಾರೀಕು ಮುಖ್ಯ ಮಂತ್ರಿಗಳನ್ನೇ ಅಲ್ಲಿಗೆ ಕರೆದುಕೊಂಡು ಹೋಗಬೇಕೆಂದು ಅವರ ಹತ್ತಿರ ಮಾತನಾಡಿಕೊಂಡು ಅಲ್ಲಿಗೆ ಮುಖ್ಯ ಮಂತ್ರಿಗಳು ನೋಡುವುದಕ್ಕೆ 31ನೇ ತಾರೀಖು ಬರುತ್ತಾರೆ ಎಂದು ಒಂದು ಕಾಗದವನ್ನು ಬರೆಸಿದೆ ಆವರು ಎಂದರೆ ಮುಖ್ಯ ಮಂತ್ರಿಗಳು ಅಲ್ಲಿಗೆ ಬರುತ್ತಾರೆಂದು ಅಲ್ಲಿ ಮಾಡಬೇಕಾಗಿರತಕ್ಕ ರಸ್ತೆ ಕೆಲಸ ಇತ್ಯಾದಿ ಕೆಲಸಗಳನ್ನು ಒಂದು ವರ್ಷದಿಂದ ಮಾಡಬೇಕಾಗಿರತಕ್ಕ ಕೆಲಸವನ್ನು 2–3 ದಿವಸಗಳಲ್ಲೇ ಮಾಡಿದ್ದಾರೆ. ಆ ಕೆಲಸವನ್ನು ಮೊದಲೇ ಏತಕ್ಕೆ ಮಾಡಬಾರದಾಗಿತ್ತು? ಇನ್ನು ಕೆಲವು ರಸ್ತೆಗಳನ್ನು ಮಾನ್ಯ ಮಂತ್ರಿಗಳಿಗೆ ತೋರಿಸಿದ್ದೇನೆ. ಅವು ನಡೆಯುವುದಕ್ಕೆ ಆಗುವುದಿಲ್ಲ. ಆಗಬೇಕಾದಂತಹ ಕೆಲಸಗಳು ಇನ್ನೂ ಇವೆ. ಆ ಕೆಲಸಗಳನ್ನು ಮಾಡುವುದಕ್ಕೆ ಅಧಿಕಾರಿಗಳು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ನಿಜವಾಗಿಯೂ ಕಾರ್ಪೊರೇಷನ್‌ನಲ್ಲಿ ಬಹಳ ಅನ್ಯಾಯ ನಡೆಯುತ್ತದೆ. ಇದನ್ನೆಲ್ಲ ಸರಿಪಡಿಸಬೇಕೆಂದು ಮಾನ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ. ಪ್ರತಿಯೊಂದು ಕೆಲಸಕ್ಕೂ ಕಾರ್ಪೊರೇಷನ್ ಆಫೀಸಿನಲ್ಲಿ ಟೇಬಲ್‌ಟೇಬಲ್ಲಿಗೂ ಲಂಚ ಕೊಡಬೇಕಾಗುತ್ತದೆ, ಎಂದು ನಾನು ವ್ಯಥೆಯಿಂದ ಹೇಳುತ್ತಿದ್ದೇನೆ. ಅದನ್ನು ಸರಿಪಡಿಸಬೇಕೆಂದು ಮಾನ್ಯ ಮಂತ್ರಿಗಳನ್ನು ಇನ್ನೊಂದು ಸಾರಿ ಕೇಳಿಕೊಳ್ಳುತ್ತೇನೆ.

ಇನ್ನು ನಗರಕ್ಕೆ, ಕಾರ್ಪೊರೇಷನ್ನಿಗೆ ಹೊಸದಾಗಿ 34 ಹಳ್ಳಿಗಳನ್ನು ಸೇರಿಸಿಕೊಂಡಿದ್ದಾರೆ. ಅವರಿಗೆ ಕೊಡಬೇಕಾದಂಥ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿಲ್ಲ. ನಿಮಗೆ ಆ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಶಕ್ತಿ ಇಲ್ಲದಿದ್ದರೆ ಏತಕ್ಕೆ ಆ 34 ಹಳ್ಳಿಗಳನ್ನು ಬೆಂಗಳೂರು ಕಾರ್ಪೊರೇಷನ್ನಿಗೆ ಸೇರಿಸಿಕೊಂಡಿರಿ ಎಂದು ಜನ ಕೇಳುತ್ತಾರೆ. ಬೆಂಗಳೂರಿನ ನಗರದ ಹಾಗೆಯೇ ಆ ಹಳ್ಳಿಗಳಿಗೂ ತೆರಿಗೆಯನ್ನು ಹಾಕಿದ್ದೀರಿ, ಅವರಿಗೆ ಕುಡಿಯುವುದಕ್ಕೆ ನೀರಿಲ್ಲ, ರಸ್ತೆಗಳಿಲ್ಲ, ಲೈಟು ಇಲ್ಲ ಹಾಕಿಸಿಕೊಡಿ ಎಂದು ಆ ಜನಗಳು ಕೇಳುತ್ತಾರೆ. ನೀವು ಇರುವ ಕಡೆ ಎಲ್ಲಾ ಚೆನ್ನಾಗಿದೆ ನಮಗೆ ಏತಕ್ಕೆ ಆ ಸೌಲಭ್ಯಗಳನ್ನು ಒದಗಿಸಿಕೊಟ್ಟಿಲ್ಲ, ತೆರಿಗೆ ಮಾತ್ರ ಕೇಳುತ್ತೀರಿ, ಎಂದು ಅವರು ಕೇಳಿದರೆ ನಾವು ತಲೆತಗ್ಗಿಸುವಂತಾಗಿದೆ. ಅಡುಗೋಡಿಯನ್ನೂ ಬೆಂಗಳೂರು ಕಾರ್ಪೊರೇಷನ್ನಿಗೆ ಸೇರಿಸಿಕೊಂಡಿದ್ದಾರೆ. ಅಲ್ಲಿಗೆ ಕೊಳಾಯಿ ಹಾಕಿಸಿ ಕೊಡಬೇಕೆಂದು ಒಂದು ವರ್ಷದಿಂದ ಹೇಳಿದ್ದೇನೆ. ಇನ್ನೂ ಆ ಕೆಲಸ ಆಗಿಲ್ಲ. ಒಂದು ಪೈಪು ಹಾಕಿಸಿಕೊಡುವುದಕ್ಕೆ ಕಾರ್ಪೊರೇಷನ್ನಿನವರನ್ನು ಕೇಳಿದರೆ ವಾಟರ್ ಬೋರ್ಡಿನವರನ್ನು ತೋರಿಸುತ್ತಾರೆ, ವಾಟರ್ ಬೋರ್ಡಿನವರನ್ನು ಕೇಳಿದರೆ ಕಾರ್ಪೊರೇಷನ್ನಿನವರನ್ನು ತೋರಿಸುತ್ತಾರೆ. ಇದುವರೆಗೂ ಆ ಕೆಲಸ ಆಗಿಲ್ಲ. ಅಲ್ಲಿಯ ಜನಗಳಿಗೆ ನೀರು ಕೊಟ್ಟಿಲ್ಲ. ನಾಗರೀಕರು ಆ ಕೆಲಸವನ್ನು ಏತಕ್ಕೆ ಮಾಡಿಸಿಕೊಡಲಿಲ್ಲ ಎಂದು ಕೇಳಿದರೆ ನಾವು ತಲೆತಗ್ಗಿಸಬೇಕು. ತೆರಿಗೆಯನ್ನು ಕೊಡದಿದ್ದರೆ ಮನೆಯನ್ನು ಜಫ್ತಿಮಾಡುವುದಕ್ಕೆ ಬರುತ್ತೀರಿ, ತೆರಿಗೆ ವಸೂಲು ಮಾಡಿದ ಮೇಲೆ ಆ ಜನಗಳಿಗೆ ಅನುಕೂಲ ಮಾಡಿಕೊಡುವುದು ಬೇಡವೇ ಎಂದು ಜನ ಕೇಳುತ್ತಾರೆ. ನಮಗೆ ರಸ್ತೆ, ನೀರಿನ ಸೌಕರ್ಯ ದೀಪ ಇವುಗಳನ್ನು ಹಾಕಿಸಿ ಅನುಕೂಲ ಮಾಡಿಕೊಡದಿದ್ದರೆ ನಾವು ಕೋರ್ಟಿಗೆ ರಿಟ್ ಹಾಕುತ್ತೇವೆ ಎಂದು ಕಾರ್ಪೊರೇಷನ್ನಿಗೆ ಸೇರಿಸಿಕೊಂಡ ಹಳ್ಳಿಗಳವರು ಹೇಳುತ್ತಾರೆ. ಅವರು ಕೋರ್ಟಿಗೆ ಹೋದರೆ ಕಾರ್ಪೊರೇಷನ್ ಗತಿಯೇನು ? ಅಡುಗೋಡಿಗೆ ವಾಟರ್ ಪೈಪು ಹಾಕಿಕೊಡುವ ವಿಷಯದಲ್ಲಿ ಕಾರ್ಪೊರೇಷನ್ನಿನವರನ್ನು ಕೇಳಿದರೆ ವಾಟರ್ ಸಪ್ಲೈ ಬೋರ್ಡಿನವರನ್ನು ತೋರಿಸುತ್ತಾರೆ, ಅವರನ್ನು ಕೇಳಿದರೆ ಕಾರ್ಪೊರೇಷನ್ನಿನವರನ್ನು ತೋರಿಸುತ್ತಾರೆ. ಹೀಗಾದರೆ ನಾಗರೀಕರ ಗತಿಯೇನು ? ಆದ್ದರಿಂದ ಈ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಂಡು ನಾಗರೀಕರಿಗೆ ಅನುಕೂಲ ಮಾಡಿಕೊಡಬೇಕು. ಬೆಂಗಳೂರು ನಗರದಲ್ಲಿ ಹಾಗೂ ಹೊಸದಾಗಿ ಸೇರಿಸಿಕೊಂಡಿರತಕ್ಕ ಹಳ್ಳಿಗಳಿಗೆ ಬೇಕಾದ ರಸ್ತೆ, ಕೊಳಾಯಿ, ದೀಪ ಇತ್ಯಾದಿ ಸೌಕರ್ಯಗಳನ್ನು ಆದಷ್ಟು ಜಾಗ್ರತೆ ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ. ಸಿವಿಲ್‌ಏರಿಯಾದಲ್ಲಿ ಶಾಂತಿನಗರದಲ್ಲಿ ಒಂದು ಹೆರಿಗೆ ಆಸ್ಪತ್ರೆಯನ್ನು ಕಟ್ಟಿ

2 ವರ್ಷಗಳಾಯಿತು. ಇನ್ನೂ ಸಹ ಅದನ್ನು ಓಪನ್ ಮಾಡಿಲ್ಲ. ಆ ಡಿವಿಜನ್ನಿನ ಜನಗಳು ಒತ್ತಾಯ ಮಾಡುತ್ತಿದ್ದಾರೆ. ಆದ್ದರಿಂದ ಆ ಹೆರಿಗೆ ಆಸ್ಪತ್ರೆಯನ್ನು ತಕ್ಷಣ ಓಪನ್ ಮಾಡಬೇಕು. ಅದಕ್ಕೆ 1 1/2 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಿಸಿ ಅದನ್ನು ಇದುವರೆಗೂ ಏತಕ್ಕೆ ಓಪನ್ ಮಾಡ ಲಿಲ್ಲ? ಇದರಿಂದಲೇ ಗೊತ್ತಾಗುತ್ತದೆ. ಕಾರ್ಪೊರೇಷನ್ನಿನ ಅಧಿಕಾರಿಗಳಿಗೆ ನಾಗರೀಕರ ಸೌಕರ್ಯದ ಕಡೆ ಎಷ್ಟು ಇಂಟರೆಸ್ಟ್ ಇದೆಯೆಂಬುದು.

ಈ ವಿಷಯವನ್ನು ಎಲ್ಲಾ ಆಫೀಸ್‌ಗಳಿಗೂ, ಎಲ್ಲಾ ಆಫೀಸ್‌ನಲ್ಲಿ ಕೆಲಸ ಮಾಡುತ್ತಿರುವ ಕ್ಲಾರ್ಕ್ ಬಳಿಗೂ ಹೋಗಿ ನೋಡಿಕೊಂಡು ಬಂದು ಹೇಳುತ್ತಿದ್ದೇನೆ. ಎಲ್ಲಾ ಕೆಲಸಗಳನ್ನು ಮಂತ್ರಿಗಳ ಗಮನಕ್ಕೆ ತರುವುದಕ್ಕಾಗುವುದಿಲ್ಲ. ಮತ್ತು ಎಲ್ಲಾ ಕೆಲಸಗಳನ್ನು ಮಂತ್ರಿಗಳೇ ಮಾಡುವುದಕ್ಕಾಗುವುದಿಲ್ಲ. ಈಗ ಕಾರ್ಪೊರೇಷನ್‌ನಲ್ಲಿ ಇರುವ ಅಧಿಕಾರಿಗಳನ್ನು ಬದಲಾಯಿಸ ಬೇಕು. ಏಕೆಂದರೆ ಬಹಳ ಅನ್ಯಾಯ ನಡೆಯುತ್ತಿದೆ. ಏನಾದರು ನಾವು ಕಾಗದ ಬರೆದರೆ ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ನಾವು ಇಲ್ಲಿಗೆ ಆಟವಾಡುವುದಕ್ಕೆ ಬಂದಿಲ್ಲ. ಸರಿಯಾಗಿ ಕೆಲಸ ನಡೆಯುತ್ತಿದ್ದರೆ ನಡೆಯುತ್ತಿದೆ ಎಂದು ಹೇಳುತ್ತೇವೆ. ಈಗಿರತಕ್ಕಂಥ ಕಮೀಷನರ್ ಅವರಿಗೆ ಕೆಲಸ ಮಾಡಿದ ಅನುಭವವಿಲ್ಲ. ಇವರನ್ನು ಬದಲಾವಣೆ ಮಾಡಬೇಕೆಂದು ಕೇಳಿಕೊಳ್ಳು ತ್ತೇನೆ. ಅಲ್ಲೇ ಜಿಲ್ಲಾಧಿಕಾರಿಗಳಾದ ಶ್ರೀ ಚನ್ನರಾಜ ಅರಸು ಅವರು ಬಹಳ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಅವರಲ್ಲಿಗೆ ಹೋಗುವ ಜನರನ್ನು ಒಳ್ಳೆಯ ರೀತಿಯಿಂದ ಮಾತನಾಡಿಸುತ್ತಾರೆ. ಅಧಿಕಾರಿಗಳು ಎಂದರೆ ಮಗು ಮಾತನಾಡುವಾಗೆ ಮಾತನಾಡಬೇಕು. ಆದ್ದರಿಂದ ಈಗ ಕಾರ್ಪೊರೇಷನ್‌ನಲ್ಲಿರತಕ್ಕಂಥ ಅಧಿಕಾರಿಗಳನ್ನು ಬದಲಾವಣೆ ಮಾಡಿ ಬೇರೆ ಒಳ್ಳೆಯ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಪೋಲೀಸರಿಗೆ ಹೊಟ್ಟೆತುಂಬಾ ಅನ್ನ ಕೊಡಬೇಕು. ಪೋಲೀಸ್ ಅಧಿಕಾರಿಗಳ ಸಂಬಳಸಾರಿಗೆ ಯನ್ನು ಹೆಚ್ಚು ಮಾಡದಿದ್ದರೆ ಅವರು ಲಂಚ ತೆಗೆದುಕೊಳ್ಳುವುದು ಜಾಸ್ತಿಯಾಗುತ್ತದೆ. ನನ್ನ ಡಿವಿಜನ್‌ನಲ್ಲಿ ಒಂದು ದಿನ ರಾತ್ರಿ 8 ಘಂಟೆಯ ಸಮಯದಲ್ಲಿ ಟೋಪಿ ತೆಗೆದು ಒಂದು ಅಂಗಡಿ ಮುಂದೆ ನಿಂತಿದ್ದೆ. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಎಲ್ಲಾ ಅಂಗಡಿಯಿಂದಲೂ ಹಣ ವಸೂಲು ಮಾಡಿಕೊಂಡು ಒಂದು ಅಂಗಡಿಗೆ ಬಂದು ಚಿಲ್ಲರೆಯನ್ನು ಕೊಟ್ಟು ನೋಟ್ ತೆಗೆದುಕೊಳ್ಳುವಾಗ ನಾನು ಹೋಗಿ ಹಿಡಿದುಕೊಂಡು ಈ ಹಣ ಎಲ್ಲಿಂದ ಬಂತು ಎಂದು ಕೇಳಿದೆ. ಇದು ನನ್ನ ಹಣ ಎಂದು ಹೇಳಿದ. ನಾನು ಸ್ಟೇಷನ್‌ಗೆ ಕರೆದುಕೊಂಡು ಹೋಗುವಾಗ ಇನ್ನೊಂದು ಸಾರಿ ಮಾಡು ವುದಿಲ್ಲ, ಬಿಟ್ಟುಬಿಡಿ ಎಂದು ಕೇಳಿಕೊಂಡ. ಇದನ್ನು ಏತಕ್ಕೆ ಹೇಳಿದೆ ಎಂದರೆ ಇವರ ಸಂಬಳಜಾಸ್ತಿ ಮಾಡಿದರೆ, ಇವರಿಗೆ ಹೊಟ್ಟೆತುಂಬಾ ಅನ್ನ ಕೊಟ್ಟರೆ, ಇಂತಹ ಕೆಟ್ಟ ಕೆಲಸಗಳನ್ನು ಮಾಡುವುದಕ್ಕೆ ಹೋಗುವುದಿಲ್ಲ. ಹೆಚ್ಚು ಸಂಬಳ ಕೊಟ್ಟು ಹೆಚ್ಚು ಕೆಲಸ ತೆಗೆದುಕೊಳ್ಳಿ. 5—6 ವರ್ಷಗಳ ಹಿಂದೆ ಇದ್ದ ರೇಷನ್ ರೇಟ್ ಇವತ್ತು ಇಲ್ಲ. ಇವರುಗಳು ವಾಸಮಾಡುವುದಕ್ಕೆ ನೀವು ಒದಗಿಸಿರುವ ಮನೆಗಳು ಹಟ್ಟಿಗಿಂತ ಕೊನೆಯಾಗಿವೆ. ವೈಟ್ ವಾಷ್ ಮಾಡಿ ಎಷ್ಟೋ ವರ್ಷಗಳಾಗಿ ಹೋಗಿವೆ. ನಾಗಸಂದ್ರ, ಆಡುಗೋಡಿ ಮುಂತಾದ ಕಡೆಗಳಲ್ಲಿ ಕಟ್ಟಿಸಿರುವ ಮನೆಗಳನ್ನು ನೋಡಿದರೆ ಯಾರು ಸಹ ಇವುಗಳನ್ನು ಮನೆಗಳು ಎಂದು ಹೇಳುವುದಿಲ್ಲ. ಈ ಭಾಗಗಳಲ್ಲಿ ಮಾಡಿಸಿರುವ ರಸ್ತೆಗಳಲ್ಲಿ ಓಡಾಡುವುದಕ್ಕೂ ಸಹ ಆಗುವುದಿಲ್ಲ. ಅಷ್ಟು ಕೆಟ್ಟಿವೆ. ಇದನ್ನೆಲ್ಲಾ ರಿಪೇರಿ ಮಾಡಿಸಬೇಕೆಂದು ಮಾನ್ಯ ಮಂತ್ರಿಗಳಿಗೆ ಕಾಗದ ಬರೆದರೆ ಅವರು ಉತ್ತರವನ್ನೇ ಕೊಡಲಿಲ್ಲ. ಪೋಲೀಸಿನವರು ಏನು ಅನ್ಯಾಯ ಮಾಡಿದ್ದಾರೆ ಎಂದು ಕೇಳುತ್ತೇನೆ. ಇವರಿಗೆ ಸರಿಯಾದ ಅನುಕೂಲಗಳನ್ನು ಮಾಡಿಕೊಡಿ, ಚೆನ್ನಾಗಿ ಕೆಲಸ ಮಾಡುತ್ತಾರೆ. ವಾಸ ಮಾಡುವುದಕ್ಕೆ ಒಳ್ಳೆಯ ಮನೆಗಳನ್ನು ಕಟ್ಟಿಸಿಕೊಡಿ, ಹೆಚ್ಚು ಸಂಬಳ ಕೊಡಿ. ನಂತರವೂ ಸಹ ಕೆಟ್ಟ ಕೆಲಸ ಮಾಡಿದರೆ ಡಿಸ್‌ಮಿಸ್‌ಮಾಡಿ. ಇದರಿಂದ ದಿನದ 24 ಗಂಟೆಯೂ ಕೆಲಸ ತೆಗೆದುಕೊಳ್ಳುವುದರಿಂದ, ಹೊಟ್ಟೆತುಂಬಾ ಅನ್ನಕೊಡು ವುದು ನ್ಯಾಯವೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಾಟಾಳ್ ನಾಗರಾಜ್.—ಸನ್ಮಾನ್ಯ ಅಧ್ಯಕ್ಷರೇ, ಈ ಪೋಲೀಸ್ ಡಿಮ್ಯಾಂಡನ್ನು ನಾನು ತೀವ್ರವಾಗಿ ವಿರೋಧ ಮಾಡುತ್ತಾ, ಬೆಂಗಳೂರು ಕಾರ್ಪೊರೇಷನ್ ಬಗ್ಗೆ ಕೆಲವು ಮಾತು ಗಳನ್ನು ಹೇಳಿ ನಂತರ ಪೋಲೀಸ್ ವಿಚಾರಕ್ಕೆ ಬರುತ್ತೇನೆ. ಬೆಂಗಳೂರು ಕಾರ್ಪೊರೇಷನ್ ಚುನಾವಣೆಯನ್ನು ಈ ಘನ ಸರ್ಕಾರದವರು ರದ್ದು ಮಾಡಿದರು. ಈಗ ಕಾರ್ಪೊರೇಷನ್ ಆಡಳಿತ ವನ್ನು ನೋಡಿಕೊಳ್ಳಲು ಒಬ್ಬ ಆಡಳಿತಾಧಿಕಾರಿಯನ್ನು ನೇಮಕ ಮಾಡಿದ್ದಾರೆ. ಇದರಿಂದ 1967ರ ಡಿಸೆಂಬರ್ ತಿಂಗಳವರೆಗೆ ಇರಬೇಕಾಗಿದ್ದ ಕಾರ್ಪೊರೇಟರ್‌ಗಳಿಗೆ ಅನ್ಯಾಯ ಮಾಡಿದಂತಾ

(ಶ್ರೀ ವಾಟಾಳ್ ನಾಗರಾಜ್)

ಯಿತು. 1967ರ ಡಿಸೆಂಬರ್ ತಿಂಗಳ ನಂತರವಾದರೂ ಸಹ ಬೆಂಗಳೂರು ಕಾರ್ಪೊರೇಷನ್ ಚುನಾವಣೆ ನಡೆಸಬಹುದಾಗಿತ್ತು. ಆದರೆ ನನಗನ್ನಿಸುತ್ತದೆ, ಚುನಾವಣೆ ನಡೆಸುವುದರಲ್ಲಿ ಶ್ರೀ ಆರ್. ಎಂ. ಪಾಟೀಲರಿಗೆ ಅಡ್ಡಿ ತರುತ್ತಿರುವುದು ಮುಖ್ಯಮಂತ್ರಿಗಳು ಎಂದು. ಏಕೆಂದರೆ ಚುನಾವಣೆ ನಡೆಸಬೇಕೆಂದು ಶ್ರೀ ಆರ್. ಎಂ. ಪಾಟೀಲರನ್ನು ಕೇಳಿದಾಗಲೆಲ್ಲಾ, ಇದು ನನಗೆ ಸಂಬಂಧಪಟ್ಟ ವಿಷಯವಲ್ಲ, ಇಡೀ ಮಂತ್ರಿಮಂಡಲಕ್ಕೆ ಸೇರಿದ್ದು, ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿರುವ ವಿಷಯ ಎಂದು ಹೇಳುತ್ತಾರೆ. ನಾನು ಶ್ರೀ ಆರ್. ಎಂ. ಪಾಟೀಲರಿಗೆ ಒಂದು ಸವಾಲನ್ನು ಹಾಕುತ್ತೇನೆ, ಏನೆಂದರೆ ಯಾವ ಒಂದು ಉದ್ದೇಶವನ್ನು ನೀವು ಇಟ್ಟುಕೊಂಡು ಕೆಲವು ಕಾರ್ಪೊರೇಟರ್‌ಗಳ ಮೇಲೆ ಚಾರ್ಜುಮಾಡಿ ನಗರಸಭೆಯನ್ನು 1967ನೇ ಡಿಸೆಂಬರ್‌ವರೆಗೆ ರದ್ದು ಮಾಡಿದಿರೋ, ಆ ಸಮಯ ಮುಗಿದುಹೋಗಿದೆ. ಈಗ ಏನಾದರು ನೀವು ಚುನಾವಣೆ ನಡೆಸುವುದಾದರೆ ಕಾಂಗ್ರೆಸ್‌ನ 10 ಜನ ಸದಸ್ಯರೂ ಕೂಡ ಗೆಲ್ಲುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಈಗ ಚುನಾವಣೆಯನ್ನು ನಡೆಸಿ, ನಿಮ್ಮ ಪಕ್ಷ ಬಹುಮತದಲ್ಲಿ ಗೆದ್ದರೆ ನಾನು ಸನ್ಯಾಸಿಯಾಗಿ ಯಾವುದಾದರೊಂದು ಮಠಕ್ಕೆ ಹೊರಟುಹೋಗುತ್ತೇನೆ. ಇಲ್ಲದಿದ್ದರೆ ನೀವು ಸನ್ಯಾಸಿಯಾಗುತ್ತೀರಾ ಎಂದು ಮಾನ್ಯಮಂತ್ರಿಗಳಿಗೆ ಸವಾಲು ಹಾಕುತ್ತೇನೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಸದಸ್ಯರಿಗೆ ಒಂದು ಮಠವನ್ನು ಕೊಡಿಸಿ.

ಶ್ರೀ ಎಸ್. ಬಂಗಾರಪ್ಪ.—ಕಾಂಗ್ರೆಸ್ ಮಠಕ್ಕೆ ಹೋಗುತ್ತೀರೋ ಅಥವಾ ಬೇರೆಯಾವುದಾದರೂ ಮಠಕ್ಕೆ ಹೋಗುತ್ತೀರೋ?

ಶ್ರೀ ವಾಟಾಳ್ ನಾಗರಾಜ್.—ನಾನು ಕಾಂಗ್ರೆಸ್ ಮಠಕ್ಕೂ ಹೋಗುವುದಿಲ್ಲ, ಕಮ್ಯುನಿಸ್ಟ್ ಮಠಕ್ಕೂ ಹೋಗುವುದಿಲ್ಲ. ಸರ್ಕಾರಕ್ಕೆ ನಾನು ಇಷ್ಟು ಮಾತ್ರ ಹೇಳುತ್ತೇನೆ, ನಿಮಗೆ ಕೀರ್ತಿ ಬರಬೇಕಾಗಿದ್ದರೆ, ನಿಮ್ಮ ಮಂತ್ರಿಮಂಡಲದ ಬಗ್ಗೆ ಜನರಿಗೆ ನಂಬಿಕೆ ಬರಬೇಕಾಗಿದ್ದರೆ ಬೆಂಗಳೂರು ನಗರಸಭೆಯ ಚುನಾವಣೆಯನ್ನು ನಡೆಸಿ. ಬೆಂಗಳೂರಿನ 17 ಲಕ್ಷ ಜನರ ಸ್ವಾತಂತ್ರವನ್ನು ಕಡೆಗಣಿಸಿ ನೀವು ಹದ್ದುಮೀರಿ ನಡೆಯುವುದಾದರೆ ನಿಮ್ಮನ್ನು ಎಲ್ಲಿ ಬೇಕಾದರೂ ತಡೆದು ನಿಲ್ಲಿಸಿ ಕೇಳುವ ಶಕ್ತಿ ಜನರಿಗೆ ಇದೆ. ಆ ಒಂದು ಕಾಲಗದಲ್ಲಿ ಜನರು ಗೆಲ್ಲೇ ಗೆಲ್ಲುತ್ತಾರೆ. ಈ ದಿನ ಶ್ರೀ ನಂಜಪ್ಪನವರು ಮತ್ತು ಶ್ರೀಮತಿ ನಾಗರತ್ನಮ್ಮ ಹಿರೇಮಠ್ ಅವರುಗಳು ಏನು ಒಂದು ಸಲಹೆಗಳನ್ನು ಮಾಡಿದರು ಆ ವಿಚಾರದಲ್ಲಿ ನಾನೂ ಸಹ ಅವರ ಜೊತೆಯಲ್ಲಿ ಸ್ವಾಗತ ಮಾಡುತ್ತೇನೆ. ನಾವುಗಳು ಏತಕ್ಕಾಗಿ ಇಲ್ಲಿ ಮಾತನಾಡುತ್ತೇವೆ ಎಂಬುದನ್ನು ಮಂತ್ರಿಗಳಾಗಲೀ ಮುಖ್ಯಮಂತ್ರಿಗಳಾಗಲೀ ತಿಳಿದುಕೊಳ್ಳಬೇಕು. ಬೆಂಗಳೂರು ಕಾರ್ಪೊರೇಷನ್‌ನಲ್ಲಿ ಬಾಲಸುಬ್ರಹ್ಮಣ್ಯಂ ಎಂಬ ಆಡಳಿತಾಧಿಕಾರಿ ಇದ್ದಾರೆ. ಇವರು ಬಹಳ ಸೊಗಸಾಗಿದ್ದಾರೆ, ಕೆಂಪಗಿದ್ದಾರೆ, ಪೇಟ ಹಾಕಿಕೊಂಡಿರುತ್ತಾರೆ. ಇವರು ನಾನೇ ಬೆಂಗಳೂರಿನ ಮಹಾರಾಜ ಎಂದು ತಿಳಿದುಕೊಂಡಿದ್ದಾರೆ. ಮೇಯರ್‌ಗಳಿಗೆ ಏನು ಒಂದು ಅನುಕೂಲಗಳನ್ನು ಕಾರ್ಪೊರೇಷನ್‌ನವರು ಕಲ್ಪಿಸಿಕೊಟ್ಟಿದ್ದಾರೋ ಅದಕ್ಕಿಂತ ಹೆಚ್ಚಿನ ಅನುಕೂಲಗಳನ್ನು ಇವರು ಕಲ್ಪಿಸಿಕೊಂಡಿದ್ದಾರೆ. ಇವರಿಗೆ ಎಲ್ಲಾ ರೀತಿಯ ವೈಭವವೂ ಬೇಕಾಗಿದೆ. ಕುಳಿತುಕೊಳ್ಳುವುದಕ್ಕೆ ದೊಡ್ಡ ಆಸನ ಇವರಿಗೆ. ಇವರು ಆಫೀಸ್ ಒಳಗೆ ಬರುವುದಕ್ಕೆ ಮುಂಚೆ ಹಸಿರು ದೀಪ ಹಾಕಬೇಕು. ಬಂದಮೇಲೆ ಸ್ಕ್ರೀನ್ ತೆಗೆಯಬೇಕು. ಈ ರೀತಿಯ ಪದ್ಧತಿಯನ್ನು ಹಿಂದೆ ಶ್ರೀ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಅನುಸರಿಸುತ್ತಿದ್ದರು. ನಂತರ ಈ ಪದ್ಧತಿಯನ್ನು ಕೆಲ ಸಮಯದ ನಂತರ ತೆಗೆಸಿಬಿಟ್ಟರು. ಮುಖ್ಯ ಮಂತ್ರಿಗಳಿಗೂ ಇಲ್ಲದ ವೈಭೋಗ ಇವರಿಗೆ ಬೇಕಾಗಿದೆ. ಯಾರಾದರು ಇವರನ್ನು ಭೇಟಿ ಮಾಡುವುದಕ್ಕೆ ಹೋದರೆ ಹುಚ್ಚುನಾಯಿ ಮೇಲೆ ಬೀಳುವಂತೆ ಬೀಳುತ್ತಾರೆ. ಚುನಾವಣೆಯಲ್ಲಿ ಗೆದ್ದು ಬಂದಿದ್ದರೆ ಇವರಿಗೆ ಜನರ ಕಷ್ಟಸುಖ ಗೊತ್ತಾಗುತ್ತಿತ್ತು. ಸಾಮಾನ್ಯ ಜನತೆಯ ಕಷ್ಟ ಇವರಿಗೆ ತಿಳಿಯುತ್ತಿಲ್ಲ. ಕೇವಲ ಅಧಿಕಾರಶಾಹಿ ಮನೋಭಾವ ಇವರಲ್ಲಿದೆ. ಮಾನ್ಯ ಮಂತ್ರಿಗಳಾದ ಶ್ರೀ ಆರ್. ಎಂ. ಪಾಟೀಲರನ್ನು ನಾನು ಕೇಳಿಕೊಳ್ಳುವುದು ಇಷ್ಟೆ, ನಗರಸಭೆಯನ್ನು ರದ್ದು ಮಾಡಿ ಈಗಾಗಲೇ ಪಾಪವನ್ನು ಮಾಡಿದ್ದೀರಿ, ಆ ಒಂದು ಪಾಪವನ್ನು ಕಳೆದುಕೊಳ್ಳಬೇಕಾದರೆ ಪ್ರಾಯಶ್ಚಿತವಾಗಿ ಬೆಂಗಳೂರು ನಗರಸಭೆಯ ಚುನಾವಣೆಯನ್ನು ನಡೆಸಿ. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವೇ ಗೆದ್ದು ಬಂದರೆ ನೀವೇ ಬೇಕಾದರೆ ಮೇಯರ್ ಆಗಿ. ಅದು ಬಿಟ್ಟು ಬೆಂಗಳೂರು ನಗರಸಭೆಯ ಚುನಾವಣೆಯನ್ನು ನಡೆಸದೇ ಹೋದರೆ ಜನರು ಘೋರ ಹೋರಾಟ ನಡೆಸಲು ಸಿದ್ಧರಾಗಬೇಕಾಗುತ್ತದೆ. ಮತ್ತು ಬೆಂಗಳೂರು ಜನಕ್ಕೆ ಕಂದಾಯ ಕೊಡಬೇಡಿ ಎಂದು ಚಳುವಳಿ ಮಾಡಿ, ಒಂದು ಪೈಸವೂ ಸಹ ಕೊಡಬೇಡಿ ಎಂದು ಹೇಳುತ್ತೇನೆ. ನಿಮ್ಮ ಸ್ವಾತಂತ್ರವನ್ನು

ಕಿತ್ತುಕೊಂಡಿರುವ ಈ ಮಂತ್ರಿಗಳು ಬೆಂಗಳೂರಿನಲ್ಲಿ ಎಲ್ಲಿಯಾದರು ಬಂದು ಸಭೆ ನಡೆಸಿದರೆ ಅದಕ್ಕೆ ಬಹಿಷ್ಕಾರ ಹಾಕಿ ಎಂದು ಜನರಿಗೆ ಹೇಳುತ್ತೇನೆ. ಬೆಂಗಳೂರಿನಲ್ಲಿ ಪೋಲೀಸ ಅಧಿಕಾರ ಬಂದಿದೆ ಯೆಂದು ಹೇಳಬಹುದು. ನಿಮ್ಮ ಒಂದು ಬೀವಿಗೆ ನಾವು ಹೆದರುವುದಿಲ್ಲವೆಂದು ಹೇಳುತ್ತೇನೆ. ನಿಮಗೇನೋ ತಾವು ಇಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಾಗಿರಬೇಕು ಮತ್ತು ಅಧಿಕಾರಕ್ಕೆ ಅಂಟಿ ಕೊಂಡಿರಬೇಕು ಎಂದು ನೀವು ಠೀವಿಯಿಂದ ನೀವು ನಮ್ಮನ್ನು ಇಲ್ಲಿ ಹೆದರಿಸಿದರೂ ನಾವು ನಿಮಗೆ ಹೆದರುವುದಿಲ್ಲ. ನಿಮ್ಮಂತೆ ನಾನು ಈ ರಾಜ್ಯ ಆಳಬೇಕು ಎಂದು ಹೇಳುತ್ತಿಲ್ಲ. ನೀವೇ ಅಧಿಕಾರ ಮಾಡಿ. ನನಗೆ ಅಧಿಕಾರ ಮಾಡಬೇಕು ಎನ್ನುವ ಉದ್ದೇಶವಿಲ್ಲ. ಆದರೆ ನನಗೆ ಬೇಕಾಗಿರುವುದು ಬೆಂಗಳೂರು ಜನತೆಯ ಉಳಿವು. ಇದಕ್ಕಾಗಿ ಇಲ್ಲಿ ಒತ್ತಾಯವಾಗಿ ಹೇಳುತ್ತಿರುವುದು.

ಲಂಚದ ಬಗ್ಗೆ ಬೇರೆ ಕಡೆ ಇರುವುದನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಿಮ್ಮ ಕಾರ್ಪೊರೇಷನ್‌ನಲ್ಲಿ ಲಂಚ ಯಾವ ರೀತಿ ಇದೆ ಎನ್ನುವುದಕ್ಕೆ ಒಂದೇ ಒಂದು ಉದಾಹರಣೆಯನ್ನು ಇಲ್ಲಿ ತಮಗೆ ಹೇಳುತ್ತಿದ್ದೇನೆ. ಈ ಕಾರ್ಪೊರೇಷನ್ನಿನಲ್ಲಿ ಡೆತ್ ಸರ್ಟಿಫಿಕೇಟು ಎಂದು ಕೊಡುತ್ತಾರೆ. ಇದಕ್ಕಾಗಿ ಒಬ್ಬರು ಅವರ ತಂದೆ ಸತ್ತಾಗ ಅವರ ಡೆತ್ ಸರ್ಟಿಫಿಕೇಟು ಪಡೆಯಬೇಕು ಎಂದು ಅರ್ಜಿ ಹಾಕಿ ಕೊಂಡಾಗ ಅವರಿಕ್ಕೆ ಅವರು ಸುಮಾರು 25 ರೂಪಾಯಿಗಳಷ್ಟು ಖರ್ಚು ಮಾಡಿಕೊಂಡು ತೆಗೆದು ಕೊಂಡು ಬರಬೇಕಾಯಿತು. ಒಂದು ಡೆತ್ ಸರ್ಟಿಫಿಕೇಟಿಗೇ 25 ರೂಪಾಯಿಗಳಷ್ಟು ಲಂಚ ಎಂದು ಪಡೆದರೆ ಇದಕ್ಕೇನು ಹೇಳಬೇಕು ? ಹೀಗೆ ಒಬ್ಬ ಬಡವ ಆತನ ತಂದೆ ಸತ್ತಾಗ ಒಂದು ಡೆತ್ ಸರ್ಟಿಫಿಕೇಟು ಪಡೆಯಲು ಇಷ್ಟು ಲಂಚ ಕೊಡಬೇಕಾದರೆ ಬೇರೆ ಕಡೆಗಳಲ್ಲಿ ಇನ್ನೆಷ್ಟು ಕೊಡಬೇಕಾಗುತ್ತದೋ ಅದನ್ನು ಹೇಳುವುದಕ್ಕೇ ಸಾಧ್ಯವಿಲ್ಲ. ಇವೆಲ್ಲಾ ಕಾರ್ಪೊರೇಷನ್‌ನ ಒಳಗಡೆ ಆಗುತ್ತದೆ. ಇದಕ್ಕಾಗಿ ನಾನು ಸರಕಾರಕ್ಕೆ ಸಲಹೆ ಮಾಡುವುದು ಕಾರ್ಪೊರೇಷನ್‌ನಲ್ಲಿ ಒಳಗಡೆ ಬೇಕಾದಷ್ಟು ಜಾಗ ಇದೆ. ಅಲ್ಲೇ ಲಂಚ ತೆಗೆದುಕೊಳ್ಳುವ ಖಾತೆ ಎಂದು ನೇಮಕ ಮಾಡಿಬಿಡಿ. ಇಲ್ಲಿಯವರೆಗೂ ಜನ ಗುಟ್ಟಾಗಿ ಕೊಡುತ್ತಿದ್ದ ಲಂಚ ಓಪನ್ ಆಗಿ ಕೊಡುತ್ತಾರೆ. ಇದರಲ್ಲಿ ಇಂತಹ ಕೆಲಸಕ್ಕಾಗಿ ಇಷ್ಟು ಫೀಸು ಎಂದು ಒಂದು ರೇಟನ್ನು ನಿಗದಿ ಮಾಡಿಬಿಡಿ. ಜನ ಅದರಂತೆ ರೇಟುಗಳನ್ನು ಕೊಟ್ಟು ತಮ್ಮ ಕೆಲಸ ಗಳನ್ನು ಮಾಡಿಸಬಹುದು. ಒಂದು ಮನೆ ಖಾತೆ ಬದಲಾಯಿಸಬೇಕಾದರೆ ಇಷ್ಟು ರೇಟಿನಲ್ಲಿ ದುಡ್ಡು ಕೊಡಬೇಕು, ಒಂದು ಲೈಸನ್ಸ್ ಹಾಗೂ ಪ್ಲಾನುಗಳನ್ನು ಮಂಜೂರು ಮಾಡಬೇಕಾದರೆ ಇಷ್ಟು ಹಣ ಕೊಡಬೇಕು ಎಂದು ಹೇಳಿದರೆ ಜನ ಅದರಂತೆ ಕೊಡಲು ಸಿದ್ಧರಾಗಿದ್ದಾರೆ.

ಇನ್ನು ನಮ್ಮ ಮಾನ್ಯ ಮಂತ್ರಿಗಳೇನೋ ಬೆಂಗಳೂರು ಸಿಟಿಯಲ್ಲಿ ಅಗಲಗಲವಾದ ರಸ್ತೆ ಗಳನ್ನು ಮಾಡುತ್ತಿದ್ದೇವೆ ಎಂದು ಬಹಳ ದೊಡ್ಡದಾಗಿ ಹೇಳುತ್ತಿದ್ದಾರೆ. ಆದರೆ ಇವೊತ್ತು ಮಾನ್ಯ ಮಂತ್ರಿಗಳು ಬೇಕಾದರೆ ನನ್ನ ಕ್ಷೇತ್ರದಲ್ಲಿ ಬಂದು ನೋಡಲಿ ಅವರಿಗೇ ಗೊತ್ತಾಗುತ್ತದೆ. ಸುಮಾರು ಒಂದು ತಿಂಗಳಿಂದಲೂ ಇಲ್ಲಿನ ಕಸದ ಗುಡ್ಡೆಯನ್ನೇ ಎತ್ತಿಲ್ಲ. ಇದರಿಂದಾಗಿ ಇಂದು ಬೆಂಗಳೂರಿನಲ್ಲಿ ಕಾಲರಾ ರೋಗ ಹೆಚ್ಚಾಗುತ್ತಿದೆ. ಯಾವ ಉದ್ದೇಶಕ್ಕಾಗಿ ಇಂದು ಬೆಂಗಳೂರು ಕಾರ್ಪೊರೇಷನ್ನಿನಲ್ಲಿ ಆರೋಗ್ಯಾಧಿಕಾರಿಗಳನ್ನು ಇಟ್ಟುಕೊಂಡಿದ್ದೀರಿ ! ಮತ್ತು ಆರೋಗ್ಯ ಇಲಾಖೆಯಲ್ಲಿ ಎಷ್ಟು ಅದಕ್ಷತೆಯಿಂದ ಕೆಲಸಗಳು ನಡೆಯುತ್ತಿವೆ ಎನ್ನುವುದನ್ನೇನಾದರೂ ಪರಿಶೀಲನೆ ಮಾಡಿ ನೋಡಿದ್ದೀರಾ ! ನಿಜವಾಗಿಯೂ ಇಂತಹ ಇಲಾಖೆ ಇರುವುದು ಸರಿಯಲ್ಲ. ಮಾನ್ಯ ಮಂತ್ರಿಗಳು ಬೇಕಾದರೆ ಇದನ್ನು ಸರಿಪಡಿಸಬಹುದು ಮತ್ತು ಇನ್ನಾದರೂ ಪರಿಶೀಲನೆ ಮಾಡಿ ಸರಿಪಡಿಸುತ್ತಾರೆ ಎನ್ನುವ ನಂಬಿಕೆ ನನಗೆ ಇದೆ ಮತ್ತು ಅವರು ಸರಿಮಾಡಬಲ್ಲರು ಆದರೆ ಅವರು ಸ್ವಲ್ಪ ಧೈರ್ಯದಿಂದ ಈ ಪ್ರಸಂಗ ಗಳನ್ನು ಬಗೆಹರಿಸುತ್ತಾರೆ ಎನ್ನುವ ಆಸೆ ನಮಗಿದೆ. ಆದರೆ ಅವರೇನೂ ಮಾಡದೇ ಹೋದರೆ ಮುಂದಕ್ಕೆ ಅವರ ಮೇಲೆ ಕೂಡ ಬೀಳುವ ಪ್ರಸಂಗ ಬರಬಹುದು. ಅಂತಹ ಪ್ರಸಂಗ ಬರುವುದಿಲ್ಲ ಎಂದು ನನಗೆ ನಂಬಿಕೆ ಇದೆ.

ಬೆಂಗಳೂರು ನಗರದಲ್ಲಿ ಅನೇಕ ವರ್ಷಗಳಿಂದಲೂ ಸೊಳ್ಳೆ ಕಾಟ ತಪ್ಪಿಸುವುದಕ್ಕೆ ಈ ಕಾರ್ಪೊರೇಷನ್ ಕೈಯಿಂದ ಆಗಲಿಲ್ಲ. ಇದಕ್ಕಾಗಿ ಒಂದು ವರ್ಷದಲ್ಲಿ ಒಂಬತ್ತು ಲಕ್ಷ ರೂಪಾಯಿಗಳಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಇಷ್ಟು ಖರ್ಚು ಮಾಡಿದರೂ ಕೂಡ ಇವರ ಕೈಯಲ್ಲಿ ಇದನ್ನು ತಪ್ಪಿಸುವು ದಕ್ಕೆ ಆಗಲಿಲ್ಲ. ಇದಕ್ಕಾಗಿ ಹಿಂದೆ ನಾನು ಕಾರ್ಪೊರೇಷನ್ನಿನವರಿಗೆ ಒಂದು ಸಲಹೆ ಕೊಟ್ಟಿದ್ದೆ. ಈಗ ಸುಮಾರು ಒಂಬತ್ತು ಲಕ್ಷ ರೂಪಾಯಿಗಳಷ್ಟು ಹಣವನ್ನು ಸೊಳ್ಳೆ ನಿರ್ಮೂಲನಾ ಕೆಲಸಕ್ಕಾಗಿ ಖರ್ಚು ಮಾಡುತ್ತಿದ್ದಾರೆ. ಇದಕ್ಕೆ ಬದಲಾಗಿ ಒಂದು ಸುಲಭವಾದ ಒಂದು ಯೋಜನೆಯನ್ನು ನಾನು ತಮಗೆ ಕೊಡುತ್ತೇನೆ. ಇದಕ್ಕೆ ಸುಮಾರು ಇನ್ನೂ ಐದು ಅಥವಾ ಹತ್ತು ಲಕ್ಷದಷ್ಟು ಖರ್ಚು ಮಾಡಿ ಪ್ರತಿಯೊಂದು ಮನೆಗೂ ಎರಡೆರಡು ಸೊಳ್ಳೆಪರದೆಗಳನ್ನು ಕೊಟ್ಟುಬಿಡಿ. ಇದನ್ನು, ನಿಮ್ಮ ಇಲಾಖೆಯವರು ಮಾಡಬೇಕೆಂದು ಸಲಹೆ ಕೊಡುತ್ತಿದ್ದೇನೆ ಮತ್ತು ವಿನಯದಿಂದ ಸರಕಾರದಲ್ಲೂ ಹೇಳುತ್ತಿದ್ದೇನೆ ಇದನ್ನು ಪರಿಶೀಲನೆ ಮಾಡಿ ನೋಡಬೇಕೆಂದು ಮಾನ್ಯ ಮಂತ್ರಿಗಳಾದ ಶ್ರೀ ಆರ್. ಎಂ. ಪಾಟೀಲ್‌ರವರಿಗೆ ಇಲ್ಲಿ ತಿಳಿಸುತ್ತಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್)

ಬೆಂಗಳೂರು ನಗರ ನಮ್ಮ ಇಡೀ ಭಾರತ ದೇಶಗಳಲ್ಲಿರುವ ನಗರಗಳಿಗಿಂತ ಒಂದು ಆದರ್ಶ ನಗರವಾಗಿದೆ ಎಂದು ಅನೇಕ ಜನ ಇಲ್ಲಿಗೆ ಬಂದು ನೋಡಿಕೊಂಡು ಹೋಗಿರುವವರು ಹೇಳಿದ್ದಾರೆ. ಇಲ್ಲಿಗೆ ಹೊರದೇಶಗಳಿಂದ ಬರುವ ಜನರನ್ನು ನಮ್ಮ ಮಾನ್ಯ ಮಂತ್ರಿಗಳು ಎಲ್ಲೆಲ್ಲಿ ಕರೆದುಕೊಂಡು ಹೋಗಿ ತೋರಿಸುತ್ತಿದ್ದಾರೆ ಎಂದರೆ ಎಲ್ಲಿ ಒಳ್ಳೆಯ ರಸ್ತೆಗಳು ಮಾಡಿರುತ್ತಾರೋ ಅಂತಹ ಜಾಗಗಳಿಗೆ ಪ್ರದರ್ಶನ ಮಾಡಿ ತೋರಿಸಿ ಆ ನಂತರ ಲಾಲ್‌ಬಾಗಿಗೆ ಹೋಗಿ ಅಲ್ಲಿರುವ ಒಳ್ಳೆಫಲ ಪುಷ್ಪಗಳನ್ನು ಅವರಿಗೆ ಕೊಟ್ಟು ಸಂತೋಷ ಪಡಿಸುತ್ತಿದ್ದಾರೆ. ಆದರೆ ಹೊರಗಿನಿಂದ ಬರುವ ಪ್ರವಾಸಿಗರನ್ನು ಶ್ರೀರಾಂಪುರ ಹಾಗೂ ಇನ್ನಿತರ ಸ್ಲಂ ಏರಿಯಾಗಳ ಕಡೆಗೆ ಅವರನ್ನು ಕರೆದು ಕೊಂಡು ಬಂದು ತೋರಿಸಿದ್ದರೆ ಅವರೆಷ್ಟು ಸಂತೋಷ ಪಡುತ್ತಿದ್ದರು ಎನ್ನುವುದು ಗೊತ್ತಾಗುತ್ತಿತ್ತು. ಮತ್ತು ನಮ್ಮ ಸರಕಾರದವರೇನೋ ಬೆಂಗಳೂರನ್ನು ಒಂದು ಆದರ್ಶ ನಗರ ಎಂದು ಹೇಳಿ ಅವರ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡು ಹೋಗಬೇಕೆಂದು ಇದ್ದಾರೆ. ಹಿಂದೆ ಶ್ರೀ ಮಾಧವರಾಯರು ಇದ್ದ ಕಾಲದಲ್ಲಿ ಬೆಂಗಳೂರು ನಗರಕ್ಕೆ ಒಂದು ಮಾಸ್ಟರು ಪ್ಲಾನು ಹಾಕಬೇಕು ಮತ್ತು ನಗರದಲ್ಲಿ ಎಲ್ಲ ವರ್ಗದವರಿಗೂ ಸರಿಯಾದ ಅನುಕೂಲಗಳನ್ನು ಮಾಡಬೇಕು ಎಂದು ಅದರಲ್ಲಿ ವ್ಯಾಪಾರ ಸ್ಥಳ ಇಂತಹ ಕಡೆ ಇರಬೇಕು ಇನ್ನು ಯಾವ ಯಾವ ವರ್ಗಗಳವರು ಎಲ್ಲೆಲ್ಲಿ ಇರಬೇಕು ಎನ್ನುವುದಕ್ಕೆ ಒಂದು ರೀತಿ ಯಾದ ಪ್ಲಾನನ್ನು ಮಾಡಬೇಕು ಎಂದು ತೀರ್ಮಾನ ಮಾಡಿದ್ದರು. ಆದರೆ ಆ ತೀರ್ಮಾನ ಏನಾಯಿತೋ ಇದುವರೆಗೂ ನನಗೆ ಗೊತ್ತಾಗಲಿಲ್ಲ. ಅವರು ಮಾಡಿದಂತಹ ಸಲಹೆಯಂತೆ ನಮ್ಮ ಈ ಬೆಂಗಳೂರು ನಗರಕ್ಕೆ ಒಂದು ಸೂಕ್ತವಾದ ಪ್ಲಾನು ಎಂದು ಮಾಡಿ ಆದರ ಕೀರ್ತಿಯನ್ನು ನಮ್ಮ ಮಾನ್ಯ ಮಂತ್ರಿಗಳು ಈಗಲಾದರೂ ಪಡೆಯಲಿ ಎಂದು ಅವರಲ್ಲಿ ನಾನು ಇಲ್ಲಿ ಒತ್ತಾಯ ಮಾಡಿ ಹೇಳುತ್ತಿದ್ದೇನೆ.

ಇನ್ನು ಜಲಮಂಡಲಿಯ ವಿಚಾರವಾಗಿ ಹೇಳಬೇಕಾದರೆ ಇದರ ಬಗೆಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ಆಗಾಗ್ಗೆ ಇಲ್ಲಿ ಹೇಳುತ್ತಿರುತ್ತಾರೆ. ಇದರ ಬಗ್ಗೆ ಶ್ರೀಮಾನ್ ಶಾಮಣ್ಣನವರು ಒಬ್ಬರೇ ತಜ್ಞರೆಂದೇ ನಾನು ಭಾವಿಸಿದ್ದೇನೆ. ಅವರು ಈ ಸಭೆಯ ಮುಂದೆ ಎಲ್ಲ ವಿಷಯಗಳನ್ನೂ ವಿವರವಾಗಿ ತಿಳಿಸಿದ್ದಾರೆ. ಬೆಂಗಳೂರು ಜನ ನೀರಿಗಾಗಿ ಎಷ್ಟು ಕಷ್ಟಪಡುತ್ತಿದ್ದಾರೆ ಮತ್ತು ಉಚಿತ ನೀರಿನ ಬಗ್ಗೆ ಹಾಗೂ ದರದ ಬಗ್ಗೆ ಎಷ್ಟೋ ಪ್ರಯತ್ನಗಳನ್ನು ಮಾಡಿ ಸರಕಾರದ ಮುಂದೆ ನಮ್ಮ ಬೇಡಿಕೆಗಳನ್ನು ಇಡುತ್ತಿದ್ದಾಗ್ಯೂ ಆ ನಮ್ಮ ಬೇಡಿಕೆ ವಿಫಲವಾಗಿದೆ. ಈಗಾಗಲೇ ಇದರ ಬಗ್ಗೆ ಅನೇಕ ತಿಂಗಳುಗಳಿಂದ, ಹಾಗೂ ಅನೇಕವಾದ ಸಂಧಾನಗಳಿಂದ ಸರಕಾರದ ಜೊತೆಗೆ ಸಂಧಾನ ನಡೆಸಿದರೂ ಕೂಡ ಈ ಸಂಧಾನಗಳಿಂದ ನಮಗೆ ಸರಿಯಾದ ಪ್ರತಿಫಲ ದೊರೆಯಲಿಲ್ಲ. ಇಂತಹ ಅನ್ಯಾಯಗಳಿಗಾಗಿ ನಾವು ಇಲ್ಲಿ ನಮ್ಮ ಪ್ರತಿಭಟನೆಯನ್ನು ಸಲ್ಲಿಸುವುದಕ್ಕೋಸ್ಕರ ಈ ಬೆಂಗಳೂರು ವಿಧಾನ ಸಭೆಯ ಸದಸ್ಯರಾಗಿರುವ ಶಾಸಕರೆಲ್ಲರೂ ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ಈ ಸಭೆಯಲ್ಲೇ ಕುಳಿತು ಸತ್ಯಾಗ್ರಹ ಮಾಡುತ್ತೇವೆ. ನೀರಿನ ಸಮಸ್ಯೆ ಇತ್ಯರ್ಥವಾಗುವವರಗೆ ಇಂತಹ ಪ್ರತಿಭಟನೆ ಮಾಡಬೇಕಾಗಿದೆ. ನೀರಿನ ಸಮಸ್ಯೆ ಬಗ್ಗೆ ಸರಕಾರದವರಿಂದ ಸಮಂಜಸವಾದ ಉತ್ತರ ಬಾರದಿದ್ದರೆ ಇದೇ ನಮ್ಮ ಕೊನೆಯ ಅಸ್ತ್ರ ಎಂದು ಇಲ್ಲೇ ಕುಳಿತು ಸತ್ಯಾಗ್ರಹ ಮಾಡಬೇಕು ಎಂದು ತೀರ್ಮಾನ ಮಾಡಿದ್ದೇವೆ ಮತ್ತು ಇದಕ್ಕೆ ಸಹಕಾರ ಬೇಕು ಎಂದು ಇಲ್ಲ ಕೇಳುತ್ತಿದ್ದೇವೆ.

ಕೊನೆಯದಾಗಿ ಪೋಲೀಸು ಇಲಾಖೆಯ ಬಗ್ಗೆ ಹೇಳಬೇಕಾದರೆ ನನಗಾದರೂ ಅನಿಸುತ್ತದೆ ಪೋಲೀಸು ಮಿನಿಸ್ಟರು ಆಗಿ ಯಾರು ಬಂದರೂ ಕೊನೆಗೆ ಬ್ರಹ್ಮ ಬಂದು ಕುಳಿತರೂ ಈ ಇಲಾಖೆ ಯನ್ನು ಸರಿಪಡಿಸುವುದಕ್ಕೆ ಸಾಧ್ಯವಿಲ್ಲವೇನೋ ಎಂದು ನನಗನಿಸುತ್ತದೆ ಎಂದು ಹೇಳಬೇಕಾಗಿದೆ. ಇವೊತ್ತು ನಾನು ಇಲ್ಲಿ ಹೇಳುತ್ತೇನೆ ಒಂದು ಸಣ್ಣ ಪೋಲೀಸು ಸ್ಟೇಷನ್ನಿಗೆ ಹೋಗಿ ನೋಡಿದರೂ ನಿಮಗೆ ಗೊತ್ತಾಗುತ್ತದೆ. ಈ ನಿಮ್ಮ ಪೋಲೀಸು ಇಲಾಖೆಯಲ್ಲಿ ಆಗುವ ಅಕ್ರಮ, ಅನ್ಯಾಯಗಳು ಅಧಿಕಾರಿಶಾಹಿ ಮನೋಭಾವನೆ, ಲಂಚ ಇತ್ಯಾದಿ ಕೆಲಸಗಳು ಬಹು ಹೆಚ್ಚಾಗಿ ಆಗುತ್ತಿದ್ದರೂ ಇದರ ಕಡೆಗೆ ಯಾರೂ ಗಮನ ಕೊಡುತ್ತಿಲ್ಲ. ಇವೊತ್ತು ಈ ಇಲಾಖೆಯಲ್ಲಿ ಯಾವುದೋ ಓಬಿರಾಯನ ಕಾಲದ ಒಂದು ಪೋಲೀಸು ಕಾಯಿದೆಯನ್ನು ಇಟ್ಟುಕೊಂಡು ಇಲ್ಲಿ ಕೆಲಸ ಮಾಡುತ್ತಿರುವುದರಿಂದ ಪೋಲೀಸು ಡಿಪಾರ್ಟುಮೆಂಟಿನಲ್ಲಿ ಇಂದು ಸರಿಯಾದ ದೃಷ್ಟಿಯಿಂದ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲ. ಯಾವುದೋ ಓಬಿರಾಯನ ಕಾಲದ ದೃಷ್ಟಿಕೊಂಡು ಇಲ್ಲಿರುವ ಕಾನೂನನ್ನು ಇನ್ನೂ ಬದಲಾವಣೆ ಮಾಡಿಲ್ಲ. ಇಂದು ಒಂದು ರೀತಿಯಾದ ಹೊಸ ದೃಷ್ಟಿಯಿಂದ ಪೋಲೀಸು ಇಲಾಖೆಯ ಕಾನೂನನ್ನು ಬದಲಾವಣೆ ಮಾಡಬೇಕು. ಇಂದು ಪ್ರಜಾಪ್ರಭುತ್ವದಲ್ಲಿ ಪೋಲೀಸು ಇಲಾಖೆಯ ಜವಾಬುದಾರಿ ಬಹಳ ಮಹತ್ತರವಾದುದು. ಇದು ಬೇರೆ ಇಲಾಖೆಯಂತೆ ಅಲ್ಲ. ಆದರೆ ಇಂದು ನಮ್ಮ ದೇಶದಲ್ಲ

ಪೋಲೀಸು ಇಲಾಖೆ ಜನರ ರಕ್ಷಕರಾಗಿ ಕೆಲಸ ಮಾಡುತ್ತಿಲ್ಲ. ಇವರು ಪೋಲೀಸು ರಕ್ಷಕರಲ್ಲ, ಪೋಲೀಸು ರಾಕ್ಷಸರಾಗಿದ್ದಾರೆ. ಇದಕ್ಕೋಸ್ಕರ ಪೋಲೀಸು ಇಲಾಖೆಯ ಒಂದು ಆಡಳಿತವನ್ನು ಸುಧಾರಣೆ ಮಾಡುವುದಕ್ಕಾಗಿ ಒಂದು ಮಂಡಲಿಯನ್ನು ನೀವು ನೇಮಕ ಮಾಡಿ. ಅದರಲ್ಲಿ ಇಲ್ಲಿ ನಡೆಯುವ ಅನೀತಿ, ಅಕ್ರಮಗಳು, ಅನ್ಯಾಯಗಳು, ಅವ್ಯವಸ್ಥೆಗಳು ಇವನ್ನೆಲ್ಲಾ ಪರಿಶೀಲನೆ ಮಾಡಿ ಸರಿಪಡಿಸುವುದಕ್ಕೆ ಅವಕಾಶವಾಗುತ್ತದೆ. ಮತ್ತು ಇದರಿಂದ ದೇಶದ ಜನತೆಗೂ ಅನುಕೂಲವಾಗುತ್ತದೆ. ಈಗ ಇರುವ ಪೋಲೀಸು ಖಾತೆಯಿಂದ ನಾಗರಿಕರಿಗೆ ಯಾವ ಅನುಕೂಲಗಳೂ ಆಗುತ್ತಿಲ್ಲ. ಈ ಇಲಾಖೆ ಇಂದು ಪ್ರಜಾಪ್ರಭುತ್ವ ಉಳಿಯತಕ್ಕ ರೀತಿಯಲ್ಲಿ ಮಾಡಬೇಕು ಎಂದು ತಮ್ಮಲ್ಲಿ ಒತ್ತಾಯದಿಂದ ಹೇಳುತ್ತಿದ್ದೇನೆ ಮತ್ತು ಇದಕ್ಕಾಗಿ ಒಂದು ಆಡಳಿತ ಸುಧಾರಣಾ ಮಂಡಲಿಯನ್ನು ನೇಮಿಸಬೇಕೆಂದು ಹೇಳುತ್ತೇನೆ.

ಮತ್ತು ಈ ಇಲಾಖೆಯಲ್ಲಿ ಯಾವ ರೀತಿಯಾಗಿ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದಕ್ಕೆ ಇಲ್ಲಿಗೆ ಬಂದಿರುವ ಹಿರಣ್ಯಯ್ಯ ನಾಟಕ ಮಂಡಲಿಯವರು ಭ್ರಷ್ಟಾಚಾರ ಎನ್ನುವ ನಾಟಕವನ್ನು ಇಲ್ಲಿ ನಾಗರಿಕರಿಗೆ ಪ್ರದರ್ಶನ ಮಾಡುತ್ತಿದ್ದಾರೆ. ಇದನ್ನು ತಾವೆಲ್ಲರೂ ಈಗಾಗಲೇ ನೋಡಿರಬಹುದು. ಈ ನಾಟಕದಲ್ಲಿ ಲಂಚ ಎನ್ನುವುದನ್ನು ಬಹಳ ಚೆನ್ನಾಗಿ ತೋರಿಸಿದ್ದಾರೆ. ಅವನ್ನೆಲ್ಲಾ ಇಲ್ಲಿ ಹೇಳುತ್ತಿಲ್ಲ. ಆದರೆ ಇಲ್ಲಿ ಒಬ್ಬ ಶ್ರೀಮಂತನ ಲಾರಿ ಒಂದು ಮಗುವಿನ ಮೇಲೆ ಬಿದ್ದು ಅಪಘಾತವಾಗುತ್ತದೆ. ಇದನ್ನು ತಪ್ಪಿಸಲು ಆ ಶ್ರೀಮಂತ ಪುಡಾರಿಯಾದವನು ಅಲ್ಲಿರುವ ಸಬ್ ಇನ್ಸ್‌ಪೆಕ್ಟರವರಿಗೆ ಇದನ್ನು ಹೇಗಾದರೂ ಮಾಡಿ ಮುಚ್ಚಿಸಬೇಕು ಎಂದು ಬಹಳ ಪ್ರಯತ್ನ ಮಾಡುತ್ತಾನೆ ಈ ಕೇಸನ್ನು ಹೇಗಾದರೂ ಮಾಡಿ ಬದಲಾವಣೆ ಮಾಡಿಸಬೇಕು ಸಬ್‌ಇನ್ಸ್‌ಪೆಕ್ಟರವರಲ್ಲಿ ಬಹು ಪ್ರಯತ್ನ ಮಾಡಿ ಅಲ್ಲಿ ಅವರು ಬರೆಯುವ ರಿಪೋರ್ಟಿನಲ್ಲಿ ಲಾರಿ ಹುಡುಗನ ಮೇಲೆ ಬರಲಿಲ್ಲ, ಹುಡುಗನೇ ಬಂದು ಲಾರಿಗೆ ಸಿಕ್ಕಿಕೊಂಡು ಎನ್ನುವಂತೆ ತಿರುಗಿಸಿ ರಿಪೋರ್ಟು ಬರೆಸಬೇಕೆಂದು ಪೋಲೀಸು ಸ್ಟೇಷನ್ನಿಗೆ ಹೋಗಿ ಹೇಳಿದಾಗ ಅಲ್ಲಿನ ಸಬ್‌ಇನ್ಸ್‌ಪೆಕ್ಟರು ಹಾಗೂ ದಫೇದಾರ್‌ರವರಿಗೆ ಈ ಲಾರಿ ರಾಂಗು ಸೈಡ್‌ನಲ್ಲಿ ಹೋಗಿಲ್ಲ ಎಂದು ಕೇಸು ತಿರುಗಿಸಬೇಕಾದರೆ ಆ ದಫೇದಾರನಾದವನು ಒಂದು ಲಕಾರ ಮತ್ತು ತಕಾರ ಎಂದರೆ ಲಕ್ಷಾಂತರ ರೂಪಾಯಿಗಳಷ್ಟು ಬೇಕು ಎಂದು ಕೇಳುತ್ತಾರೆ. ಈ ಮನುಷ್ಯ ಮಂತ್ರಿಗಳಿಗೆ ಬೇಕಾದವರು ಮತ್ತು ಶ್ರೀಮಂತರಾಗಿರುವವರು ಎಂದು ಇವರು ಪೋಲೀಸಿನವರಿಗೆ ಯಾವ ರೀತಿಯಾಗಿ ಲಂಚ ಎನ್ನುವುದನ್ನು ಕೊಡುತ್ತಾರೆ ಮತ್ತು ಲಂಚ ಯಾರು ಕೊಡುವವರು ಮತ್ತು ಯಾರು ತೆಗೆದುಕೊಳ್ಳುವವರು ಎನ್ನುವುದನ್ನು ಚೆನ್ನಾಗಿ ಇದರಲ್ಲಿ ತೋರಿಸುತ್ತಾರೆ. ಇದನ್ನು ಎಲ್ಲರೂ ನೋಡಬೇಕು. ಇಲ್ಲಿ ತಪ್ಪು ಮಾಡಿದ ಲಾರಿ ಶ್ರೀಮಂತರಾಗಿರುವವರು ಲಾರಿಗೆ ಸಿಕ್ಕಿದ ಹುಡುಗನ ತಂದೆ ದೂರು ಕೊಡಲು ಬಂದಾಗ ಅವರಲ್ಲಿ ಬಿ ಚಾರ್ಜುಷೀಟು ಕೊಡುವಾಗ ಹೇಗೆ ತಿರುಗಿಸುತ್ತಾರೆ ಎನ್ನುವುದನ್ನು ಇದರಲ್ಲಿ ಚೆನ್ನಾಗಿ ಹೇಳುತ್ತಾರೆ. ಹುಡುಗನೇ ಲಾರಿ ಹತ್ತಿರ ಬಂದು ಸಿಕ್ಕಿಕೊಂಡ ಎನ್ನುವಂತೆ ಬರೆಸುತ್ತಾರೆ. ಲಂಚ ಕೊಡಬೇಕು ಎಂದು ಕೇಳುತ್ತಾರೆ. ಲಂಚ ಕೊಡದೆ ಯಾವ ಕೆಲಸವಾಗುವುದಿಲ್ಲ. ಲಂಚ ತೆಗೆದುಕೊಳ್ಳುವ ಕಾರ್ಯ ಸೊಗಸಾಗಿ ನಡೆದಿದೆ. ಇನ್ನೊಂದು ಸ್ವಾರಸ್ಯವಾದ ಕಥೆ ಹೇಳಿ ನನ್ನ ಮಾತು ಮುಗಿಸುತ್ತೇನೆ.

12-30 P.M.

ಒಂದು ದಿನ ಒಂದು ಬೀದಿಯಲ್ಲಿ ಒಂದು ಹುಲಿ ಬಂತು. ಆ ಬೀದಿಯಲ್ಲಿ ಇರುವವರು ಒಬ್ಬರು ಪಕ್ಕದ ಪೋಲೀಸ್ ಸ್ಟೇಷನ್ನಿಗೆ ಫೋನ್ ಮಾಡಿ ಹುಲಿ ಬಂದಿದೆ ಹೊಡೆಯಬೇಕು ಎಂದು ತಿಳಿಸಿದರು. ಈ ಬೀದಿ ನಮ್ಮ ಪೋಲೀಸ್ ಸ್ಟೇಷನ್ನಿಗೆ ಸಂಬಂಧಪಟ್ಟದ್ದಲ್ಲ, ಪಕ್ಕದ ಪೋಲೀಸ್ ಸ್ಟೇಷನ್ನಿಗೆ ಫೋನ್ ಮಾಡಿ ಎಂದು ತಿಳಿಸಿದರು. ಪಕ್ಕದ ಪೋಲೀಸ್ ಸ್ಟೇಷನ್ನಿಗೆ ಫೋನ್ ಮಾಡಲು ಅವರು ಹೇಳಿದ್ದೇನೆಂದರೆ ಹುಲಿ ಹಿಡಿಯುವ ಅಧಿಕಾರ ನಮಗಿಲ್ಲ, ನೀವು ಅರಣ್ಯ ಇಲಾಖೆಗೆ ತಿಳಿಸಿ ಎಂದು ಹೇಳಿದರು. ಆ ನಂತರ ಅರಣ್ಯ ಇಲಾಖೆಗೆ ತಿಳಿಸಲು, ಅದು ನಮಗೆ ಸೇರಿದ್ದಲ್ಲ ಮಾರ್ಗದೊಳಗಿನ ಹುಲಿ ಹೊಡೆಯುವ ಅಧಿಕಾರ ಇಲ್ಲ, ಅರಣ್ಯದೊಳಗೆ ಹುಲಿ ಹೊಡೆಯುತ್ತೇವೆ ಎಂದು ತಿಳಿಸಿದರು. ಇಷ್ಟಾಗುವುದರೊಳಗೆ ಅವರು ಹಾರ್ಟ್ ಫೇಲ್ ಆಗಿ ಸತ್ತು ಹೋಗಿಬಿಟ್ಟರು. ಈ ರೀತಿ ಇದೆ ಆಡಳಿತ. ಆದುದರಿಂದ ಆಡಳಿತ ಸುಧಾರಣೆ ಮಾಡಲು ಒಂದು ಸಮಿತಿ ನೇಮಕ ಮಾಡಿ ಎಂದು ಹೇಳಿ, ನನಗೆ ಮಾತನಾಡಲು ಅತ್ಯಂತ ಕಡಿಮೆ ಕಾಲ ಕೊಟ್ಟಂಥ ತಮಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತು ಮುಗಿಸುತ್ತೇನೆ.

MR. DEPUTY SPEAKER.—I would like to inform that the discussions on these Demands will continue up to 1-30 P.M. The Minister will reply at 3 P.M. The Demands will be put to vote at 4 P.M.

Sri AZEEZ SAIT (Narasimharaja).—Sir, the House may sit till 1 O'clock instead of till 1-30 P.M. because all the members will have to go for lunch and come back within 3 P.M. The Ministers have their anterooms and can get their lunch but we have to go to our rooms.

† **ಶ್ರೀ ಬಿ. ವಿಠ್ಠಲದಾಸಶೆಟ್ಟಿ** (ಪುತ್ತೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಗೃಹ ಮಂತ್ರಿಗಳು ನಮ್ಮ ಮುಂದೆ ಇಟ್ಟು ಕೇಳಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ, ನಮ್ಮ ಪೋಲೀಸ್ ಸಿಬ್ಬಂದಿ ವಿಚಾರದಲ್ಲಿ ಕೆಲವು ಸೂಚನೆ ಕೊಡಲು ಇಚ್ಛಿಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 100 ರಲ್ಲಿ 90 ಜನ ಪೋಲೀಸರು ಮಲಬಾರಿನಿಂದ ಬಂದಿರುವವರು ಆಗಿದ್ದಾರೆ. ಮಲಬಾರಿನವರು ಹೇಗೆ ಬಂದು ಸೇರಿಕೊಳ್ಳುತ್ತಾರೆ ಎನ್ನುವುದು ಗೊತ್ತಿಲ್ಲ. ಅವರ ಬಗ್ಗೆ ನಮಗೆ ಯಾವ ಸಂಕುಚಿತ ಭಾವನೆ ಇಲ್ಲ. ನಮ್ಮ ಭಾರತ ದೇಶದಲ್ಲಿ ಒಂದು ರಾಜ್ಯದವರು ಎಲ್ಲಿ ಬೇಕಾದರೂ ನೌಕರಿ ಮಾಡಬಹುದು. ನಮ್ಮ ಜಿಲ್ಲೆಯಲ್ಲಿ ಮಾತ್ರ ಪೋಲೀಸ್ ಇಲಾಖೆಯಲ್ಲಿ ಮಲಬಾರಿಗಳು ಹೆಚ್ಚಾಗಿ ಇದ್ದಾರೆ. ಇವರು ಇರುವುದರಿಂದ ಕೇರಳಕ್ಕೆ ಅಕ್ಕಿ ಸಾಗಾಣಿಕೆಯು ಸಲೀಸಾಗಿ ನಡೆದಿದೆ. ಅವರ ಜನರು ಅಲ್ಲಿ ಇರುವುದರಿಂದ ಮನುಷ್ಯ ಸ್ವಭಾವಕ್ಕೆ ಅನುಸಾರವಾಗಿ ಗಡಿ ಪ್ರದೇಶದಲ್ಲಿ ತಮ್ಮ ಜನರಿಗೆ ಹೋಗುವ ಅಕ್ಕಿ ಸಾಗಾಣಿಕೆಯನ್ನು ಅವರು ತಡೆಗಟ್ಟುವುದಿಲ್ಲ. ಈ ಪೋಲೀಸರನ್ನು ಬೇರೆ ಜಿಲ್ಲೆಗಳಿಗೆ ಟ್ರಾನ್ಸ್‌ಫರ್ ಮಾಡುವುದಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿ ಸಾಗಾಣಿಕೆಯನ್ನು ಹಿಡಿಯುವುದಿಲ್ಲ ಮತ್ತು ಕೇಸು ಹಾಕುವುದಿಲ್ಲ. ಆದುದರಿಂದ ಈ ಪೋಲೀಸ್ ಸಿಬ್ಬಂದಿಯನ್ನು ತೆಗೆದು ಬೇರೆ ಪ್ರತ್ಯೇಕ ಸಿಬ್ಬಂದಿ ಇರಬೇಕು ಹಾಗೆ ಇಟ್ಟರೆ ಮಾತ್ರ ಏನಾದರೂ ಫಲಕಾರಿಯಾಗಬಹುದು ಎಂದು ಸೂಚಿಸಲು ಇಚ್ಛಿಸುತ್ತೇನೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ತುಳು ಭಾಷೆ ಎಲ್ಲರ ಮನೆ ಭಾಷೆಯಾಗಿದೆ. ಅನೇಕರಿಗೆ ಕನ್ನಡ ಗೊತ್ತಿರುವುದಿಲ್ಲ. ಇಲ್ಲಿಯ ತುಳು ಭಾಷೆ ಮಾತನಾಡುವ ಪೋಲೀಸ್ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿ ಬೇರೆ ಕಡೆ ಒಯ್ಯಲ್ಪಡುತ್ತಾರೆ. ಇಲ್ಲಿಗೆ ಬರುವ ಅಧಿಕಾರಿಗಳಿಗೆ ತುಳು ಭಾಷೆ ಬಾರದೇ ಇರುವುದರಿಂದ ಒಂದು ಕೇಸು ಹಾಕುವಾಗ ಜನರ ಹೇಳಿಕೆ ತೆಗೆದುಕೊಳ್ಳುವಾಗ ತೊಂದರೆಯಾಗುತ್ತದೆ. ಒಳ್ಳೆ ರೀತಿಯಿಂದ ಕೇಸು ನಡೆಸಲು ಆಗುವುದಿಲ್ಲ. ಬೆಂಗಳೂರಿನಲ್ಲಿ ಒಳ್ಳೇ ಅಧಿಕಾರಿಗಳನ್ನು ನೋಡುತ್ತೇವೆ. ಒಳ್ಳೇ ಅಧಿಕಾರಿಗಳನ್ನು ಬೆಂಗಳೂರಿನಲ್ಲಿ ಇಟ್ಟುಕೊಂಡಿದ್ದಾರೆ ಎಂದು ಕಾಣುತ್ತದೆ. ಒಳ್ಳೆಯವರನ್ನು ವರ್ಗ ಮಾಡುವುದಿಲ್ಲ. ಯಾರಾದರೂ ಕೆಟ್ಟವರು ಇದ್ದರೆ ಅಂಥವರನ್ನು ವರ್ಗ ಮಾಡುತ್ತಾರೆ, ಇದರಿಂದ ಪ್ರಯೋಜನವಾಗುವುದಿಲ್ಲ. ಒಂದು ಮನೆಯಲ್ಲಿ ಇರುವ ಸರ್ಪವನ್ನು ತೆಗೆದು ಇನ್ನೊಂದು ಮನೆಯಲ್ಲಿ ಹಾಕುವುದರಿಂದ ಅದು ಪರಿಣಾಮಕಾರಿಯಾಗುವುದಿಲ್ಲ. ಒಬ್ಬ ಅಧಿಕಾರಿಯನ್ನು ವರ್ಗ ಮಾಡುವುದು ಅಂದರೆ ಅದು ಒಂದು ಶಿಕ್ಷೆ ಮಾಡಿದ ಹಾಗೆ ಎಂದು ತಿಳಿದುಕೊಂಡಿದ್ದಾರೆ. ಪೋಲೀಸ್ ಅಧಿಕಾರಿಗಳು ಏನಾದರೂ ಮಾಡಿದರೆ ವರ್ಗ ಮಾಡುವುದು ಅದೊಂದು ಶಿಕ್ಷೆ ಎಂದು ಈ ಇಲಾಖೆಯಲ್ಲಿ ರೂಢಿಯಾಗಿದೆ. ಅದರೆ ವರ್ಗ ಮಾಡುವುದರಿಂದ ಯಾವ ಪರಿಣಾಮವಾಗುವುದಿಲ್ಲ. ಯಾವುದೇ ಆಫೀಸರ್ ಮೇಲೆ ಅಪಾದನೆ ಬಂದರೆ ಸರಿಯಾಗಿ ಶಿಕ್ಷೆ ಮಾಡಬೇಕು. ಹಿಂದಕ್ಕೆ ಬ್ರಿಟಿಷರ ಕಾಲದಲ್ಲಿ ಐ.ಪಿ.ಎಸ್. ಆಫೀಸರುಗಳು ಇದ್ದರು, ಅವರು ಒಳ್ಳೇ ಕೆಲಸ ಮಾಡಿದ್ದಾರೆ ಎಂದು ಹೇಳುವುದು ರೂಢಿಯ ಮಾತು. ಇತ್ತೀಚೆಗೆ ಐ.ಪಿ.ಎಸ್. ಆಫೀಸರುಗಳು ಹೊಸಬರು ಬಂದಿದ್ದಾರೆ ಅವರ ಬಗ್ಗೆ ವ್ಯಸನಪೂರ್ವಕವಾಗಿ ಒಂದು ಮಾತು ಹೇಳಬೇಕಾಗಿದೆ. ಇವರು ಯಾವುದೋ ಸ್ವರ್ಗದಿಂದ ಬಂದಿದ್ದೇವೆ ನಮ್ಮನ್ನು ಕೇಳುವವರು ಯಾರೂ ಇಲ್ಲ ಎಂಬ ಮನೋಪ್ರವೃತ್ತಿ ಇವರಲ್ಲಿ ಬೆಳೆದುಕೊಂಡು ಬಂದಿದೆ. ಇದು ಒಳ್ಳೆಯದಲ್ಲ. ಇವರನ್ನು ಟ್ರಾನ್ಸ್‌ಫರ್ ಮಾಡುವುದು ಆಗಲಿ ಅಥವಾ ಯಾವುದೇ ಕ್ರಮ ಕೈಕೊಳ್ಳದ ರೀತಿಯಲ್ಲಿ ಇವರಿಗೆ ರಕ್ಷಣೆ ಕಾನೂನಿನಲ್ಲಿದೆ. ಮಾನ್ಯ ಮಂತ್ರಿಗಳು ಮನಸ್ಸು ಮಾಡಿ ನ್ಯಾಯವಾದ ರೀತಿಯಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ಮಾಡುವುದಕ್ಕೆ ಪ್ರಯತ್ನಪಡಬೇಕು. ಆಲ್ ಇಂಡಿಯಾ ಕೇಡರ್ ಇರುವುದರಿಂದ ಅವರಿಗೆ ರಕ್ಷಣೆ ಇದೆ. ಈ ಸಭೆಯ ಸದಸ್ಯರು ಏನಾದರೂ ಹೇಳುವುದಕ್ಕೆ ಹೋದರೆ, ಏನೇನೋ ಮಾತನಾಡುತ್ತಾರೆ. ಐದು ವರ್ಷದ ನಂತರ ಎಂ.ಎಲ್.ಎ. ಇರಲಿ ಮಂತ್ರಿ ಇರಲಿ ಅವರು ಹೊರಟುಹೋಗುತ್ತಾರೆ, ತಾವು ಮಾತ್ರ ಪರ್ಮನೆಂಟಾಗಿ ಉಳಿಯುತ್ತೇವೆ ಎಂದು ಹೇಳುತ್ತಾರೆ. ಇವರಲ್ಲಿ ಕೆಲವರು ಮಾತ್ರ ಒಳ್ಳೆಯವರು ಇದ್ದಾರೆ. ಇವರು ಬುದ್ಧಿವಂತರು ಆಗಿದ್ದಾರೆ. ತಮ್ಮ ಬಗ್ಗೆ ಜನರಿಗೆ ಕೇಳುವ ಹಕ್ಕು ಇಲ್ಲ ಎಂಬ ಮನೋ ಪ್ರವೃತ್ತಿ ಅವರಲ್ಲಿ ಬೆಳೆದಿರುವುದು ದೇಶದ ಪ್ರಗತಿಯ ದೃಷ್ಟಿಯಿಂದ ಇದು ಒಳ್ಳೆಯದಲ್ಲ. ಇದನ್ನು ನಿವಾರಣೆ ಮಾಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇತ್ತೀಚಗೆ ನನ್ನ ಮನೆ ಎದುರಿಗೆ ಒಂದು ಆಕ್ಸಿಡೆಂಟ್ ಆಯಿತು. ಒಂದು ಲಾರಿ ಬಿದ್ದು ಇಬ್ಬರಿಗೆ ಬಹಳ ಜಖಂ ಆಗಿ ಒಬ್ಬರು ಅಲ್ಲೇ ಸತ್ತು ಹೋದರು. ಸತ್ತು ಹೋದ ಜನರನ್ನು ತೆಗೆದುಕೊಂಡು ಹೋಗುವುದಕ್ಕೆ ಪೋಲೀಸರ ಹತ್ತಿರ ಯಾವ ವ್ಯವಸ್ಥೆಯೂ ಇರುವುದಿಲ್ಲ. ಹರಿಜನರನ್ನೋ ಅಥವಾ ಯಾರನ್ನೋ ಹಿಡಿದುಕೊಂಡು ಹತ್ತು ಮೈಲಿ ದೂರವಿರುವ ಆಸ್ಪತ್ರೆಗೆ ಪೋಸ್ಟ್ ಮಾರ್ಟಂ ಮಾಡುವುದಕ್ಕೆ ಹೊರಿಸಿಕೊಂಡು ಹೋಗಬೇಕು. ಪ್ರಕೃತ ವಾತವರಣದಲ್ಲಿ ಹರಿಜನರಾಗಲೀ ಅಥವಾ ಯಾರೇ ಆಗಲಿ ಮೊದಲು ಆ ಕೆಲಸ ಮಾಡುತ್ತಿದ್ದರೂ ಈಗ ಅಂಥ ಕೆಲಸ ಮಾಡುವುದಕ್ಕೆ ಮುಂದೆ ಬರುವುದಿಲ್ಲ. ಇದಕ್ಕೆ ನನ್ನ ಸೂಚನೆ ಏನೆಂದರೆ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರಿನಲ್ಲಿ ಪೋಲೀಸರ ಕೈಯಲ್ಲಿ ಒಂದು ವಾಹನ ಇದಕ್ಕಾಗಿ ಇಡಬೇಕು. ಸತ್ತು ಹೋದ ಜನರನ್ನು ತೆಗೆದುಕೊಂಡು ಹೋಗುವುದರಲ್ಲಿ ನಿಧಾನವಾಗಿ ಒಂದೆರಡು ದಿನ ಉಳಿಯುವುದೂ ಉಂಟು. ಬಲಾತ್ಕಾರ ಮಾಡಿ ಸತ್ತವರನ್ನು ತೆಗೆದುಕೊಂಡು ಹೋಗತಕ್ಕ ಕಾಲ ಮುಗಿದು ಹೋಯಿತು. ಡಾಕ್ಟರನ್ನೇ ಕರೆಸುವಂಥ ಪರಿಸ್ಥಿತಿ ಬರುತ್ತದೆ. ವಿಠಲದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಅಲ್ಲಿ ನಾಲ್ಕೈದು ಸಾವಿರ ರೂಪಾಯಿ ಖರ್ಚು ಮಾಡಿದರೆ ಒಂದು ಪೋಸ್ಟ್ ಮಾರ್ಟಂ ಷೆಡ್ ಕಟ್ಟಿಸಬಹುದು. ಆರೋಗ್ಯ ಇಲಾಖೆಯವರನ್ನು ಇದರ ಬಗ್ಗೆ ಕೇಳಿದರೆ ಅದು ನಮಗೆ ಸಂಬಂಧಿಸಿದ್ದಲ್ಲ. ಪೋಲೀಸಿನವರಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತಾರೆ, ಪೋಲೀಸಿನವರನ್ನು ಹೇಳಿದರೆ ಅದು ನಮಗೆ ಸಂಬಂಧವಿಲ್ಲ ಎಂದು ಹೇಳುತ್ತಾರೆ. ಇದು ಯಾರ ಜವಾಬ್ದಾರಿ ಎಂದು ಗೊತ್ತಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರ ಇರುವಂಥ ಸ್ಥಳದಲ್ಲಿ ಒಂದು ಪೋಸ್ಟ್ ಮಾರ್ಟಂ ಷೆಡ್ ಹಾಕಿದರೆ ಅನುಕೂಲವಾಗುತ್ತದೆ. ಮಾನ್ಯ ಮಂತ್ರಿಗಳು ಈ ವಿಚಾರ ಪರಿಶೀಲನೆ ಮಾಡಿ ಎಲ್ಲೆಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ, ಎಲ್ಲೆಲ್ಲಿ ಆಸ್ಪತ್ರೆಗಳಿವೆ ಅಲ್ಲೆಲ್ಲ ಪೋಸ್ಟ್ ಮಾರ್ಟಂ ಷೆಡ್ ಮಾಡಿಸಿಕೊಡಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

ಮೆರಿಟ್ ಪ್ರಮೋಷನ್‌ಗಳೆಂದು ಮದ್ರಾಸ್ ರಾಜ್ಯದಲ್ಲಿ ಇತ್ತು. ಪೋಲೀಸ್ ಅಧಿಕಾರಿಗಳಲ್ಲಿ ಸಬ್ ಇನ್‌ಸ್ಪೆಕ್ಟರಾಗಲೀ, ಹೆಡ್ ಕಾನ್‌ಸ್ಟೇಬಲ್ ಆಗಲೀ ಯಾರು ದಕ್ಷತೆಯಿಂದ ಕೆಲಸ ಮಾಡುತ್ತಾರೆ, ಯಾರು ನಿಸ್ಪೃಹತೆಯಿಂದ ಕೆಲಸ ಮಾಡುತ್ತಾರೆ ಅಂಥವರಿಗೆಲ್ಲ ಪ್ರಮೋಷನ್ ಕೊಡುತ್ತಿದ್ದರು. ಒಳ್ಳೆಯ ಕೆಲಸ ಮಾಡಿದವರಿಗೆ ಪ್ರಮೋಷನ್ ಕೊಡುವ ಪದ್ಧತಿ ಇತ್ತು. ಈ ಪದ್ಧತಿ ಹೋಗಿ ಎಷ್ಟು ಕಾಲದಿಂದ ಸರ್ವಿಸ್ ಮಾಡಿದ್ದಾನೆ ಎಂದು ಆ ಸರ್ವಿಸ್ ಮೇಲೆ ಎಲ್ಲ ನೌಕರ ವರ್ಗದವರಿಗೂ ಕೊಡುವಂತೆ ಇವರಿಗೂ ಪ್ರಮೋಷನ್ ಕೊಡುತ್ತಿದ್ದಾರೆ. ಒಳ್ಳೆಯ ಕೆಲಸ ಮಾಡಿದವನಿಗೆ ಪ್ರಾಮಾಣಿಕನಾಗಿ ಕೆಲಸ ಮಾಡಿದವನಿಗೆ ಪ್ರಮೋಷನ್ ಕೊಡುವುದರಲ್ಲಿ ಪ್ರಾಶಸ್ತ್ಯವನ್ನು ಕೊಡದೆ ಇರುವುದರಿಂದ ಅವರಲ್ಲಿ ನಿರುತ್ಸಾಹ ಹೆಚ್ಚಾಗಿದೆ. ಮೆರಿಟ್ ಪ್ರಮೋಷನಗಳಿಲ್ಲದೆ ಸರ್ವಿಸ್ ಮಾಡಿರುವುದನ್ನು ನೋಡಿಕೊಂಡು ಪ್ರಮೋಷನ್ ಕೊಡುವುದರಿಂದ ಲಂಚಕೋರ ಅಧಿಕಾರಿಗಳು ಮತ್ತು ಕೆಟ್ಟ ಅಧಿಕಾರಿಗಳು ಮೇಲಿನ ಕೆಲಸಗಳಿಗೆ ಬಂದು ಪ್ರಾಮಾಣಿಕರಾದ ಅಧಿಕಾರಿಗಳು ಅವರ ಕೈಕೆಳಗೆ ಕೆಲಸ ಮಾಡುವಂಥ ಸ್ಥಿತಿ ಬರುತ್ತಿದೆ. ದೊಡ್ಡ ಅಧಿಕಾರಿಗಳು ಹೇಳಿದಹಾಗೆ ಕೇಳಿಕೊಂಡು ಕೆಲಸ ಮಾಡುತ್ತ ಇಡೀ ಪೋಲೀಸ್ ಇಲಾಖೆಯೇ ನಿರುತ್ಸಾಹ ಹೊಂದಿ ಕೆಲಸ ಮಾಡುವಂಥದ್ದು ಒಳ್ಳೆಯದಲ್ಲ. ಇದನ್ನು ಪುನರ್ಪರಿಶೀಲಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಮಂತ್ರಿಗಳು ಆಗಾಗ್ಗೆ ಟೂರ್ ಮಾಡುತ್ತಾರೆ. ಬಹಳ ಒಳ್ಳೆಯದು. ಗೃಹ ಮಂತ್ರಿಗಳಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ ಅವರು ಸರ್ವೇ ಸಾಮಾನ್ಯವಾಗಿ ಎಲ್ಲಿಯೂ ಟೂರ್ ಮಾಡುವ ಅವಶ್ಯಕತೆ ಇರುವುದಿಲ್ಲ. ಎಲ್ಲಿ ಗೊಂದಲ, ಗಲಭೆ ಆಗುತ್ತದೆ ಅಲ್ಲಿಗೆ ಗೃಹ ಮಂತ್ರಿಗಳು ಹೋಗುವಂಥ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡರೆ ಗಲಭೆಯಾದ ಸ್ಥಗಳಿಗೆ ಗೃಹಮಂತ್ರಿಗಳು ಸಂದರ್ಶನ ಕೊಟ್ಟರೆ ಬಹುಶಃ ಅದರಿಂದ ಪರಿಣಾಮ ಒಳ್ಳೆಯದಾಗುತ್ತದೆ. ಎಂದು ಕಾಣುತ್ತದೆ ಯಾವುದೋ ಅಧಿಕಾರಿಯನ್ನು ಕಳುಹಿಸಿ, ಅವರು ಕಳುಹಿಸಿದ ವರದಿಯನ್ನು ನಮ್ಮ ಮುಂದೆ ಇಡುವ ಬದಲು ಮಂತ್ರಿಗಳೇ ಸ್ಥಳಕ್ಕೆ ಭೇಟಿ ಕೊಟ್ಟು ಸತ್ಯ ಪರಿಸ್ಥಿತಿಯನ್ನು ತಿಳಿದುಕೊಂಡರೆ ಇಂಥ ಪ್ರಮೇಯಗಳು ಬರುವುದಿಲ್ಲ. ಯಾರೋ ಹೊಡೆಯುತ್ತಾರೆ, ಯಾರೋ ಗಲಭೆ ಮಾಡುತ್ತಾರೆ, ಗಂಡಾತರ ಮಾಡುತ್ತಾರೆ ದಬ್ಬಾಳಿಕೆ ಮಾಡುತ್ತಾರೆ, ಅಕ್ರಮಗಳನ್ನು ಮಾಡುತ್ತಾರೆ. ಅಂಥ ಸ್ಥಳಗಳಿಗೆ ದೊಡ್ಡ ದೊಡ್ಡ ಅಧಿಕಾರಿಗಳೇ ಭೇಟಿ ಕೊಡಬಹುದು. ಇವೊತ್ತು ಪರಿಸ್ಥಿತಿ ಏನಾಗಿದೆ ಎಂದರೆ ರೆವೆನ್ಯೂ ಖಾತೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಶ್ಯಾನುಭೋಗರ ರಿಪೋರ್ಟ್ ಮೇಲೆ ಆಧಾರ ಮಾಡಿ ಇಲ್ಲಿ ಹೇಳುವುದು ಪೋಲೀಸ್ ಖಾತೆಗೆ ಸಂಬಂಧಪಟ್ಟ ವಿಷಯಗಳಲ್ಲಿ ಸಬ್ ಇನ್‌ಸ್ಪೆಕ್ಟರ್ ಅಥವಾ ಹೆಡ್ ಕಾನ್‌ಸ್ಟೇಬಲ್ ಕಳಿಸಿದ ವರದಿಯನ್ನು ತೆಗೆದುಕೊಂಡು ನಮ್ಮ ಮುಂದೆ ಹೇಳುವುದು ಅಷ್ಟಾಗಿ ಒಳ್ಳೆಯದಲ್ಲ. ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದು ಏನೆಂದರೆ ಅವರು ಪ್ರತ್ಯಕ್ಷವಾಗಿ ಹೋಗಿ ನೋಡಿ, ಪರಿಶೀಲಿಸಿ ಅನುಭವಿಸಿ ಅದರ ನಂತರ ಮಾತ್ರ ನಮ್ಮ ಮುಂದೆ ಆ ವಿಚಾರದ ಬಗ್ಗೆ ಹೇಳಿಕೆಯನ್ನು ಕೊಟ್ಟರೆ ಅನೇಕ ಗಂಡಾಂತರಗಳಿಗೆ ಅವಕಾಶವಿರುವುದಿಲ್ಲ.

(ಶ್ರೀ ಬಿ. ವಿಠಲದಾಸ್ ಶೆಟ್ಟಿ)

ಲಂಚಕೋರತನದ ವಿಷಯದಲ್ಲಿ ಅನೇಕ ಗೆಳೆಯರು ಮಾತನಾಡಿದ್ದಾರೆ. ಇದರ ಬಗ್ಗೆ ಇರುವ ಕಾಯಿದೆ ಸರಿಯಿಲ್ಲ ಎಂದು ನನಗೆ ಕಾಣತ್ತದೆ. ಒಬ್ಬ ಲಂಚ ಪಡೆಯುವವನನ್ನು ಹಿಡಿಯಬೇಕಾಗಿದ್ದರೆ, ಅವನ ಹೆಂಡತಿಹತ್ತಿರ ಕೊಟ್ಟರೆ ಅದು ಲಂಚವಾಗುವುದಿಲ್ಲ, ಮಗನ ಹತ್ತಿರ ಕೊಟ್ಟರೆ ಲಂಚವಾಗುವುದಿಲ್ಲ. ಲಂಚ ತೆಗೆದುಕೊಳ್ಳುವವನ ಕೈಗೆ ದುಡ್ಡನ್ನು ಕೊಟ್ಟು ಅವನು ಅದನ್ನು ತೆಗೆದುಕೊಂಡ ನಂತರ ಅವನ ಕೈಗೆ ನೀರನ್ನು ಹಾಕಿದಾಗ ಕೆಂಪು ಬಣ್ಣಕ್ಕೆ ಬಂದರೆ ಆಗ ಲಂಚ ತಗೆದುಕೊಂಡಿದ್ದಾನೆಂದು ಹೇಳುತ್ತಾರೆ. ಇಂಥ ಕಾನೂನಿನಿಂದ ಲಂಚ ನಿಲ್ಲಿಸುವುದಕ್ಕೆ ಆಗುತ್ತದೆಯೇ ಎಂದು ಕೇಳುತ್ತೇನೆ. ನ್ಯಾಯವಾಗಿ ಕೆಲಸ ಮಾಡುವವರು, ಒಳ್ಳೆಯವರು ಕೆಲವರು ಇದ್ದಾರೆ. ಪ್ರಕೃತ ಇರುವ ಕಾಯಿದೆಯಿಂದ ಲಂಚಕೋರ ತನವನ್ನು ನಿಲ್ಲಿಸುವುಕ್ಕೆ ಸಾಧ್ಯವಿಲ್ಲ. ಲಂಚ ಪಡೆದಿದ್ದಾರೆಂದು ಕೇಸು ಹಾಕಿದರೂ ಕೋರ್ಟ್‌ನಲ್ಲಿ ಅವರನ್ನು ಬಿಡುತ್ತಾರೆ. ಲಂಚ ತೆಗೆದುಕೊಳ್ಳುವುದನ್ನು ಕಂಡು ಹಿಡಿಯಲು ಡೆಪ್ಯುಟಿ ಸೂಪರಿಂಟೆಂಡೆಂಟರಿಗೆ ಮೇಲ್ಪಟ್ಟ ಅಧಿಕಾರಿಯೇ ಆಗಬೇಕು ಅವರೇ ನೋಡಬೇಕು, ಇಬ್ಬರು ಸಾರ್ವಜನಿಕರು ಲಂಚ ತೆಗೆದುಕೊಳ್ಳುತ್ತಿದ್ದ ಎಂದು ಹೇಳಬೇಕು ಲಂಚ ಕೊಡುವ ದಿವಸ ಈ ಹಣವನ್ನು ಕೊಡಿರಿ ಎಂದು ಹೇಳಬೇಕು ಮತ್ತು ಡೆಪ್ಯುಟಿ ಸೂಪರಿಂಟೆಂಡೆಂಟರು ಸಂಬಂಧಪಟ್ಟವರನ್ನು ಹಿಡಿಯಬೇಕು. ಹೀಗೆ ಇರುವುದರಿಂದ ಲಂಚಕೋರತನವನ್ನು ಬಂದ ಮಾಡಲಿಕ್ಕೆ ಆಗುವುದಿಲ್ಲ. ಈಗ ಇರುವ ಕಾನೂನಿನಲ್ಲಿ ಕೆಲವು ಬದಲಾವಣೆಗಳು ಆಗಬೇಕಾಗಿವೆ. ಆ ಬದಲಾವಣೆಗಳನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇಷ್ಟು ಸಮಯವನ್ನು ಒದಗಿಸಿದ್ದಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಸನ್ಮಾನ್ಯ ಅಧ್ಯಕ್ಷರೇ, ಈ ಮನೆಯಲ್ಲಿ ಮಾನ್ಯ ಗೃಹ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತ ನಾನು ಪ್ರಾಮುಖ್ಯವಾಗಿ ರಕ್ಷಣೆ ಇಲಾಖೆ ಎಂದರೆ ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಬೇಡಿಕೆ ಬಗ್ಗೆ ಮಾತ್ರ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ದೇಶದಲ್ಲಿ ಪೋಲೀಸ್ ಬಗ್ಗೆ ಜನತೆ ಯಾವ ಅಭಿಪ್ರಾಯ ತಾಳಿದೆ ಅದರ ಒಂದು ಭಾಗ ಮೈಸೂರು ರಾಜ್ಯದಲ್ಲಿ ಕೂಡ ಇದೆ. ಸಾಮಾನ್ಯವಾಗಿ ನಮಗೆ ಎರಡು ಅಭಿಪ್ರಾಯ ಪೋಲೀಸ್ ಇಲಾಖೆಯ ಬಗ್ಗೆ ಕಣ್ಣಿಗೆ ಮೂಡುತ್ತವೆ. ಒಂದನೆಯದು ಪೋಲೀಸ್ ಇಲಾಖೆ ಇರಬೇಕೇ ಅಥವಾ ಬೇಡವೇ ಎನ್ನತಕ್ಕ ಪ್ರಶ್ನೆ. ಒಂದು ವೇಳೆ ಇದ್ದರೆ ಈ ಇಲಾಖೆ ಯಾವರೀತಿ ಇರಬೇಕು ಎನ್ನುವುದು ಮತ್ತೊಂದು ಪ್ರಶ್ನೆ ಸುಮಾರಾಗಿ ನಾನು ಮೈಸೂರು ರಾಜ್ಯದ ಅನೇಕ ಭಾಗಗಳನ್ನು ಅಥವಾ ಎಲ್ಲ ಭಾಗಗಳನ್ನು ತಿರುಗಾಡಿ ನೋಡಿ ಪೋಲೀಸ್ ಇಲಾಖೆ ಇರಬೇಕು ಅಥವಾ ಬೇಡ ಎನ್ನತಕ್ಕ ಪ್ರಶ್ನೆಯನ್ನು ಬಗೆಹರಿಸುವುದರಲ್ಲಿ ಪ್ರಯತ್ನ ಮಾಡಿಲ್ಲ. ಏನಾದರೂ ಕೂಡ ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ನಾನು ಕೂಲಂಕಷವಾಗಿ ಅಭ್ಯಾಸ ಮಾಡಿದ್ದೇನೆ. ಕನಿಷ್ಟಪಕ್ಷ ಮಂತ್ರಿವರ್ಯರು ಶಿವಮೊಗ್ಗ ಜಿಲ್ಲೆಯ ವಿಚಾರದಲ್ಲಿ ನಾನು ಕೊಡತಕ್ಕ ಸಲಹೆಯನ್ನು ಕಾರ್ಯಗತ ಮಾಡುವುದಾದರೆ ಸುಮಾರಾಗಿ ಪ್ರಯೋಗಾರ್ಥವಾಗಿ ಒಂದು ಹೆಜ್ಜೆ ಇಡಬಹುದು ಎಂದು ಭಾವನೆ ಮಾಡಿಕೊಂಡಿದ್ದೇನೆ. ಶಿವಮೊಗ್ಗ ಜಿಲ್ಲೆಗೆ ಪೋಲೀಸ್ ಖಾತೆ ಬೇಡ ಎಂದು ನಾನು ಹೇಳುತ್ತೇನೆ. ನನ್ನ ಕ್ಷೇತ್ರವಾದ ಸೊರಬ, ಪಕ್ಕದಲ್ಲಿರುವ ಸಾಗರ, ಶಿಕಾರಿಪುರ ಇಲ್ಲೆಲ್ಲ ಪೋಲೀಸ್ ಖಾತೆ ಬೇಡ ಎಂದು ನಾನು ಹೇಳಿದರೆ ಆಶ್ಚರ್ಯವಾಗಬಹುದು. ಅದಕ್ಕೆ ಕಾರಣವಿದೆ. ನಾನು ಸಕಾರಣಗಳನ್ನು ನಿಮ್ಮ ಮುಂದೆ ಇಟ್ಟು ಅದಷ್ಟೂ ನಿಮ್ಮ ಮನಸ್ಸನ್ನು ಒಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನನ್ನ ಕ್ಷೇತ್ರದಲ್ಲಿರತಕ್ಕ ಪೋಲೀಸ್ ಠಾಣೆಗಳಿಗೆ, ಶಿವಮೊಗ್ಗ ಜಿಲ್ಲೆಯಲ್ಲಿರುವ ಪೋಲೀಸ್ ಠಾಣೆಗಳಿಗೆ ಬಹಳ ಜನ ಹೋಗಿ ದೂರುಗಳನ್ನು ಕೊಡುತ್ತಾರೆ. ಆ ದೂರುಗಳ ಪರಿಣಾಮವಾಗಿ ಬರತಕ್ಕ ತನಿಖೆಯ ಫಲಿತಾಂಶ ಜನತೆಗೆ ಏನೂ ಉಪಯೋಗವಾಗಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಏನೂ ಅನ್ಯಾಯಗಳು ಆಗುತ್ತಿಲ್ಲವೇ, ಜನತೆ ಏನೂ ತಕ್ರೀರು ಮಾಡುತ್ತಿಲ್ಲವೇ ಎಂದು ಕೇಳಬಹುದು ಮಾಡುತ್ತಿದ್ದಾರೆ ಅಥವಾ ಇಲ್ಲಾ ಎಂದು ನಾನು ಹೇಳುವುದಿಲ್ಲ. ಪೋಲೀಸ್ ಇಲಾಖೆಯಿಂದ ತೃಪ್ತಿಕರವಾಗಿ ತನಿಖೆ ನಡೆದು ಅದರಿಂದ ಒಳ್ಳೆಯ ಫಲಿತಾಂಶವನ್ನು ಪಡೆದುಕೊಳ್ಳತಕ್ಕ ವ್ಯವಸ್ಥಿತ ರೀತಿಯಲ್ಲಿ ಪೋಲೀಸ್ ಇಲಾಖೆ ಇಲ್ಲದೆ ಇರುವುದರಿಂದ ನಮ್ಮ ಜಿಲ್ಲೆಗೆ ಪೋಲೀಸ್ ಇಲಾಖೆ ಬೇಡ ಎಂದು ಹೇಳುತ್ತಿದ್ದೇನೆಯೇ ವಿನಾ ಅಲ್ಲಿ ತಕ್ರೀರುಗಳು ನಡೆಯುತ್ತಿಲ್ಲ ಎನ್ನುವುದು ನನ್ನ ಅಭಿಪ್ರಾಯವಲ್ಲ. ಆದರೆ ಬಹಳ ಕಡಿಮೆ ತಕ್ರೀರಾಗುತ್ತಿದೆ. ಪೋಲೀಸ್ ಠಾಣೆಗೆ ಕಂಪ್ಲೈಂಟ್ ಬಂದರೆ ಯಾರು ದೂರು ಕೊಡುತ್ತಾರೋ ಅವರನ್ನು ಮೊದಲು ಒಳಗೆ ಹಾಕುತ್ತಾರೆ, ಪೋಲೀಸು ಇಲಾಖೆಯವರು

ಬಹಳ ಹುಷಾರಾಗಿದ್ದಾರೆ. ಅಪರಾಧಿಯನ್ನು ಹಿಡಿಯಲು ನಿಧಾನವಾಗುವುದರಿಂದ ಯಾರು ಮೊದಲು ಸಿಕ್ಕುತ್ತಾರೋ ಅವರನ್ನು ಒಳಗೆ ಹಾಕಿ ಅವರಿಂದ ಲಂಚ ತೆಗೆದುಕೊಳ್ಳುತ್ತಾರೆ. ದೂರು ಕೊಡಲು ಹೋದ ತಪ್ಪಿಗೆ ಅವರಿಗೆ ಮೊದಲು ಶಿಕ್ಷೆ ಹೀಗೆ ಆಗುತ್ತದೆ. ನಾನು ಈ ವಿಚಾರದಲ್ಲಿ ಪೋಲೀಸು ಸೂಪರಿಂಟೆಂಡೆಂಟರಿಗೆ ದೂರು ಕೊಟ್ಟಿದ್ದೇನೆ. ಆದರೂ ಕೂಡ ಏನೂ ಪ್ರಯೋಜನವಾಗಿಲ್ಲ, ಇವತ್ತಿನವರೆಗೂ ಯಾರು ದೂರು ಕೊಡುತ್ತಾರೋ ಅವರಿಂದಲೂ ಮತ್ತು ಯಾರ ಮೇಲೆ ದೂರಿದೆಯೋ ಅವರಿಂದಲೂ ಎರಡೂ ಕಡೆ ಲಂಚ ತೆಗೆದುಕೊಳ್ಳುತ್ತಾರೆ. ಹೀಗೆ ತೆಗೆದುಕೊಳ್ಳುವುದರಲ್ಲಿ ಎರಡು ಸುಖವಿದೆ. ದೂರು ಕೊಟ್ಟವರಿಗೂ ಮತ್ತು ಯಾರ ಮೇಲೆ ಫಿರ್ಯಾದು ಇದೆಯೋ ಅವರಿಗೂ ತೊಂದರೆಮಾಡುತ್ತಾರೆ. ಇದರಿಂದ ಯಾರೂ ಕೂಡ ದೂರು ಕೊಡಲು ಇಷ್ಟಪಡುತ್ತಿಲ್ಲ. ಮಂತ್ರಿಗಳು ಇದನ್ನು ಗಮನಿಸಬೇಕು. ಶಿವಮೊಗ್ಗದಲ್ಲಿ ನಾನೊಂದು ದೂರು ಕೊಟ್ಟೆ, ಸರ್ಕಲ್ ಇನ್‌ಸ್ಪೆಕ್ಟರು ಶಿಕಾರಿಪುರಕ್ಕೆ ಎನ್‌ಕ್ವೈರಿಗೆ ಹೋಗಿದ್ದಾರೆಂದು ಹೇಳಿದರು, ಅದೇನಾಯಿತೋ ಗೊತ್ತಿಲ್ಲ. ಪೋಲೀಸರಲ್ಲಿ ಜನರಿಗೆ ನಂಬಿಕೆಯಿಲ್ಲ. ಆದುದರಿಂದ ನಮ್ಮ ಶಿವಮೊಗ್ಗ ಜಿಲ್ಲೆಗೆ ಪೋಲೀಸು ಇಲಾಖೆ ಬೇಕಾಗಿಲ್ಲ, ಅಲ್ಲಿರುವ ಎಲ್ಲಾ ಪೋಲೀಸು ಸ್ಟೇಷನ್ನುಗಳನ್ನೂ ಮತ್ತು ಸೂಪರಿಂಟೆಂಡೆಂಟರನ್ನೂ ರದ್ದುಮಾಡಿ ಎಂದು ನಾನು ಹೇಳುತ್ತೇನೆ. ಇಷ್ಟು ತಿಂಗಳಲ್ಲಿ ಇಷ್ಟು ಕೇಸುಗಳನ್ನು ದಾಖಲು ಮಾಡಬೇಕು ಎಂದು ಕಾನೂನು ಮಾಡಿದ್ದಾರೆ, ಹಾಗೆ ಹಾಕದಿದ್ದರೆ ಕ್ರಮ ತೆಗೆದುಕೊಳ್ಳುತ್ತಾರೆ. ಅದಕ್ಕಾಗಿ ಏನಾದರೂ ಮಾಡಿ ಕೇಸು ಹಾಕುತ್ತಾರೆ. ಜನರಿಗೆ ಹೇಳಿ ಅಸತ್ಯವಾದ ದೂರುಗಳನ್ನು ಪಡೆಯುತ್ತಾರೆ. ಮಲೆನಾಡಿನಲ್ಲಿ ಸಾಮಾನ್ಯವಾಗಿ ಕೆಟ್ಟ ಜನರು ಕಡಮೆ, ಸೇಕಡ 5 ಮಂದಿ ಇರಬಹುದು. ಇಂಥ ಕೆಟ್ಟ ದರಬಾರು ಮಾಡುವುದಕ್ಕೆ ಪೋಲೀಸು ಇಲಾಖೆಯೇಕೆ ಇರಬೇಕು? ಇದಕ್ಕೇನು ಹೆಸರಿಡಬೇಕೋ ಗೊತ್ತಿಲ್ಲ. ಈ ಇಲಾಖೆಯಲ್ಲಿ ಮಾನನೀಯತೆಯ ಲಕ್ಷಣ ಒಡಮೂಡಿ ಬರಬೇಕು, ತಕಸೀರನ್ನು ಕಂಡುಹಿಡಿಯುವ ಶಕ್ತಿ ಬರಬೇಕು, ಸೈಕಲಾಜಿಕಲ್ ಸ್ಟಡಿ ಇರಬೇಕು. ಹೀಗೆ ಮಾಡದೆ ಜನರನ್ನು ಹೊಡೆದು ಬೆದರಿಸಿದರೆ, ಬೂಟ್ ಕಾಲಿನಿಂದ, ಒದ್ದು ದೊಣ್ಣೆಯಿಂದ ಹೊಡೆದು ಹಿಂಸೆ ಮಾಡಿದರೆ, ಅರೆಸ್ಟು ಮಾಡುವುದಾದರೆ ಆಡಳಿತ ಯಾವ ಮಟ್ಟದಲ್ಲಿದೆಯೆಂಬುದು ಗೊತ್ತಾಗುವುದು. ತಕಸೀರನ್ನು ಪತ್ತೆಮಾಡಬೇಕಾದರೆ ಜನರ ಮನಸ್ಸಿನಲ್ಲೇನಿದೆ ಎಂಬುದನ್ನು ತಿಳಿದು ಮಾನವೀಯತೆಯಿಂದ ವರ್ತಿಸಬೇಕು. ಸ್ಕಾಟ್ ಲೆಂಡ್ ಯಾರ್ಡ್ ಪೋಲೀಸರು ಜನತೆಯನ್ನು ಹಿಂಸೆಮಾಡದೆ ಸಹಾಯ ಮಾಡುತ್ತಲಿದ್ದಾರೆ. ಇಂದು ಕೋರ್ಟುಗಳಲ್ಲಿ ಪೋಲೀಸರ ಮೇಲೆ ಕೇಸುಗಳಿವೆ, ಜನರನ್ನು ಹಿಡಿದು 24 ಗಂಟೆಗಳ ಮೇಲೆ ಪೋಲೀಸು ಸ್ಟೇಷನ್ನಿನಲ್ಲಿಡಬೇಕಾದರೆ ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿರುವ ಒಂದು ಸೆಕ್ಷನ್ನನ್ನು ಬೇಕಾದರೆ ಉಪಯೋಗ ಮಾಡಿಕೊಳ್ಳಬಹುದು, ಬೇರೆ ಕಾನೂನು ಇಲ್ಲ. ತಪ್ಪಿದ್ದರೆ ಕೇಸು ಹಾಕಲಿ. ಹಾಗೆ ಮಾಡದೆ ಒಳಗಿಟ್ಟುಕೊಂಡು ತೊಂದರೆ ಕೊಟ್ಟು ಲಂಚ ತೆಗೆದುಕೊಳ್ಳುವುದಕ್ಕೆ ವೈಯಕ್ತಿಕ ದ್ವೇಷವನ್ನು ತೀರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವರೇ ಹೊರತು ಬೇರೆ ಏನೂ ಮಾಡುವುದಿಲ್ಲ. 10 ತಿಂಗಳ ಹಿಂದಿರಬಹುದು, ಪತ್ರಿಕೆಯಲ್ಲಿ ನಗರದಲ್ಲಿ ಪೋಲೀಸು ಡಿ. ಸಿ. ಯಾರನ್ನೋ ಬೂಟ್‌ನಲ್ಲಿ ಒದ್ದರೆಂದು ವರದಿಯಾಗಿತ್ತು. ಹಾಗೆ ಮಾಡದ ಹೊರತು ಅವರಿಗೆ ಸಮಾಧಾನವಾಗುವುದಿಲ್ಲ, ಪೋಲೀಸು ಇಲಾಖೆಯವರು ಈ ಕೆಲಸ ಮಾಡಲೇಬೇಕು ಎಂಬ ಭಾವನೆ ಇದೆ, ಸ್ವಪ್ರತಿಷ್ಠೆ ಪ್ರಶ್ನೆ ಬಂದಾಗ ತಾವು ದೊಡ್ಡವರೆಂದು ತೋರಿಸಿಕೊಳ್ಳಲು ಜನರನ್ನು ಹೊಡೆಯುವುದು, ಹಿಂಸೆಮಾಡುವುದು, ಒದೆಯುವುದು ಇದೆಲ್ಲಾ ಮಾಡುವುದುಂಟು. ಅದೇ ಸ್ಕಾಟ್‌ಲೆಂಡ್ ಯಾರ್ಡ್‌ನಲ್ಲಿ ಮಕ್ಕಳು ನೀರಿನಲ್ಲಿ ಆಟವಾಡುತ್ತಿದ್ದಾಗ ನೋಡಿ ಅವರಿಗೆ ತೊಂದರೆಯಾಗುವುದೆಂದು ತಿಳಿದಾಗ ಮಕ್ಕಳನ್ನು ಹೊರಕ್ಕೆ ಕರೆತಂದು ಮೈ ಒರಸಿ ಬಟ್ಟೆ ಹಾಕಿ ರಸ್ತೆ ದಾಟಿಸಿ ತೊಂದರೆಯಾಗದಂತೆ ಅವರನ್ನು ಮನೆಗೆ ಕಳಿಸಿಕೊಟ್ಟರು. ಅಲ್ಲಿ ಪೋಲೀಸರು ಹೀಗೆ ಮಾಡುತ್ತಾರೆ. ಇದು ಒಪ್ಪತಕ್ಕದ್ದಾಗಿದೆ. ಆದರೆ ನಮ್ಮವರು ಅಂಥ ಒಂದಾದರೂ ಸದ್ಗುಣಗಳನ್ನು ಕಲತು ಕೊಂಡಿಲ್ಲ. ಅಂಥ ಉದಾಹರಣೆಯಿದ್ದರೆ ಶಾಬಾಸುಗಿರಿ ಕೊಡೋಣ. ರೆವಿನ್ಯೂ ವಸೂಲು ಮಾಡಲು ಪೋಲೀಸರನ್ನು ಉಪಯೋಗಿಸುತ್ತಾರೆ, ಅದು ಬೇಕಾಗಿರಲಿಲ್ಲ. ಪೋಲೀಸರು ಸುಮ್ಮನೆ ಜೊತೆಯಲ್ಲಿದ್ದರೆ ಸಾಕು, ಪೋಲೀಸ್ ಎಂದು ಕೂಗಿದರೆ ಸಾಕು ಜನರಿಗೆ ಹೆದರಿಕೆಯಾಗುತ್ತದೆ. ಶಿವಮೊಗ್ಗದ ನೂರು ರೂಪಾಯಿಗಳ ಖೋಟಾ ನೋಟಿನ ಪ್ರಕರಣದಲ್ಲಿ ಪೋಲೀಸರು ಲಕ್ಷಾಂತರ ರೂಪಾಯಿಗಳ ಲಂಚ ಹೊಡೆದಿದ್ದಾರೆ. ಅವರಿಗೆ ಖೂನಿ ಕೇಸು ಸಿಕ್ಕಿದರೆ ಲಂಚ ತಿನ್ನುವುದಕ್ಕೆ ಅನುಕೂಲ. ಸಾಗರದಲ್ಲಿ ಆಗಿರುವ 4 ಕೊಲೆ ಪ್ರಕರಣಗಳು ಪತ್ತೆಯಾಗಿಲ್ಲ, ಬೆಂಗಳೂರಿನ ಚಾಮರಾಜಪೇಟೆಯಲ್ಲಾಗಿರುವ ಕೊಲೆ ಇನ್ನೂ ಪತ್ತೆಯಾಗಿಲ್ಲ, ಈ ರೀತಿ ಜನರನ್ನು ಉದ್ಧಾರ ಮಾಡುತ್ತಿದ್ದಾರೆ. ಕಾಂಗ್ರೆಸ್ ಸರಕಾರದಲ್ಲಿರುವ ರಕ್ಷಣಾ ಇಲಾಖೆ ದೊಡ್ಡದೊಡ್ಡ ಕೊಲೆ ಪ್ರಕರಣಗಳನ್ನು ಸಹ ಪತ್ತೆಮಾಡಿಲ್ಲ. ಪೋಲೀಸು ಇಲಾಖೆ ಸಮರ್ಥ ರೀತಿಯಿಂದ ನಡೆಯುತ್ತಿಲ್ಲ. ಇನ್ನು ಮೇಲಾದರೂ ಶ್ರೀಮಾನ್ ಪಾಟೀಲರು ಈ ಇಲಾಖೆಯ ಕಡೆ ಹೆಚ್ಚು ಗಮನ ಹರಿಸಿ ಹೊಸ

(ಶ್ರೀ ಎಸ್. ಬಂಗಾರಪ್ಪ)

ವ್ಯವಸ್ಥೆಯನ್ನು ಮಾಡಬೇಕು. ಪೋಲೀಸರಿಗೆ ಕ್ವಾರ್ಟರ್ಸ್ ಕಟ್ಟಿಸಿಕೊಡಬೇಕು, ಸಂಬಳ ಜಾಸ್ತಿ ಮಾಡಿ ಲಂಚಕ್ಕೆ ಕೈ ಒಡ್ಡುವುದಕ್ಕೆ ಅವಕಾಶ ಕೊಡಬಾರದು ಎಂದು ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

1-00 P.M.

† ಶ್ರೀ ಬಿ. ನಂಜಪ್ಪ (ಗಂಡಸಿ).—ಅಧ್ಯಕ್ಷರೇ, ಈ ದಿವಸ ಪೋಲೀಸ್ ಇಲಾಖೆಯ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ಸೂಚನೆಗಳನ್ನು ಕೊಡಬಯಸುತ್ತೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಬೇಡಿಕೆಯ ಪರವಾಗಿಯೂ ಮತ್ತು ಬೇಡಿಕೆಯ ವಿರುದ್ಧವಾಗಿಯೂ ಕೂಡ ಕಟುವಾಗಿ ಮಾತನಾಡಿದ್ದಾರೆ. ಪೋಲೀಸ್ ಇಲಾಖೆ ದೇಶದ ರಕ್ಷಣೆಯನ್ನು ಮಾಡುವ ಹೊಣೆಯನ್ನು ಹೊತ್ತಿರತಕ್ಕ ಒಂದು ಜವಾಬ್ದಾರಿಯುತವಾದ ಇಲಾಖೆಯಾಗಿದೆ. ಇದು ಎಲ್ಲಾ ಮಟ್ಟದಲ್ಲೂ ಕೂಡ ಅತ್ಯುತ್ತಮವಾದ ರೀತಿಯಲ್ಲಿ ಕೆಲಸ ಮಾಡಬೇಕು, ಹಾಗೆ ನಿಜವಾಗಿಯೂ ಕೂಡ ಕೆಲಸ ಮಾಡುತ್ತಲೂ ಇದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಬಂಗಾರಪ್ಪನವರು ಕಳ್ಳನೋಟಿನ ಪ್ರಕರಣವನ್ನು ಉದಹರಿಸುತ್ತಾ ಲಕ್ಷಾಂತರ ರೂಪಾಯಿ ಲಂಚ ಹೊಡೆದಿದ್ದಾರೆ ಎಂದು ಹೇಳಿದರು. ಅದು ನಿಜವಾಗಿಯೂ ಕೂಡ ಒಂದು ಶೋಚನೀಯವಾದ ವಿಚಾರ. ನಮ್ಮ ದೇಶದ ಆರ್ಥಿಕ ಸ್ಥಿತಿಯನ್ನು ಬುಡ ಮೇಲು ಮಾಡುವಂತಹ ವ್ಯಕ್ತಿಗಳು ಕಳ್ಳನೋಟುಗಳನ್ನು ಮಾಡುತ್ತಿರುವಂತಹದನ್ನು ಕಂಡುಹಿಡಿದು, ಇವತ್ತಿನ ದಿವಸ ಅದನ್ನು ಅಮೂಲಾಗ್ರವಾಗಿ ಶೋಧನೆ ಮಾಡಿ, ಅದು ಇನ್ನು ಮುಂದೆ ನಡೆಯದಂತೆ ಮಾಡಬೇಕು ಎಂಬ ಉದ್ದೇಶದಿಂದ ಕೆಲಸ ಮಾಡುತ್ತಾ ಇರತಕ್ಕ ಅಧಿಕಾರಿಗಳು ನಮ್ಮ ದೇಶದಲ್ಲಿ ಇದ್ದು, ಯಾರು ಅದನ್ನು ಇವತ್ತಿನದಿವಸ ಕಂಡುಹಿಡಿದಿದ್ದಾರೆ ಅವರಿಗೆ ಶಹಬಾಸ್‌ಗಿರಿ ಕೊಡಬೇಕು. ಅದನ್ನು ? ಟ್ಟು ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿಕೊಂಡು ಬಿಟ್ಟಿದ್ದಾರೆ ಎಂದರೆ ನಿಷ್ಠಾವಂತ ಅಧಿಕಾರಿಗಳು, ಹಗಲು ರಾತ್ರಿ ದುಡಿದು, ಜೀವನ ಹಂಗೇ ತೊರೆದು ಕೆಲಸ ಮಾಡುತ್ತಿದ್ದಾರೆ ಅವರಿಗೆ ಎಷ್ಟು ಉತ್ತೇಜನ ಕೊಟ್ಟಂತೆ ಆಗುತ್ತದೆ, ಅವರು ಯಾವ ರೀತಿಯಲ್ಲಿ ಕೆಲಸ ಮಾಡಬೇಕು ಎಂಬುವನ್ನು ನಾವು ಯೋಚನೆ ಮಾಡಬೇಕಾಗಿದೆ. ಇದೇ ರೀತಿ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ, ಪೋಲೀಸ್‌ನವರು ದೌರ್ಜನ್ಯ ಅಷ್ಟಿದೆ, ಇಷ್ಟಿದೆ ಅಂತ ಹೇಳಿದರು. ಕಳವು ಮಾಡಿಕೊಂಡು ಬಂದಿದ್ದಾನೆ ಎಂದು ಹೇಳಿದರೆ ಯಾರೂ ಕೂಡ ಸುಮ್ಮನೆ ಒಪ್ಪಿಕೊಳ್ಳುವುದಿಲ್ಲ. ಅಲ್ಪಸ್ವಲ್ಪ ಕ್ರಮವನ್ನು ಅನುಸರಿಸಿದರೆ ಮತ್ತೆ ಆಗುತ್ತದೆ. ಶ್ರೀಮಾನ್ ಬಂಗಾರಪ್ಪನವರು ಪೋಲೀಸ್ ಇಲಾಖೆಯೇ ಬೇಡ ಎಂದು ಹೇಳಿದರು. ಪೋಲೀಸ್ ಇಲಾಖೆ ಬೇಡ ಎಂದರೆ ಏನು ಮಾಡಬೇಕು ? ನಾನಾದರೂ ಕೂಡ ಪೋಲೀಸ್ ಇಲಾಖೆ ಅತ್ಯುತ್ತಮವಾಗಿ ಕೆಲಸ ಮಾಡುತ್ತಾ ಇದೆ ಎಂದು ಹೇಳುತ್ತೇನೆ. ಅಲ್ಪಸ್ವಲ್ಪ ದೋಷ ಇರಬಹುದು. ಆ ವಿಚಾರವನ್ನೂ ಕೂಡ ಇವತ್ತಿನ ದಿವಸ ತಮ್ಮ ಮುಂದೆ ಇಡುತ್ತಾ ಇದ್ದೇನೆ. ಇದು ಉತ್ತಮವಾಗಿ ಕೆಲಸ ಮಾಡುತ್ತಾ ಇದೆ, ಆದರೆ ಅವರಿಗೆ ನವೀನವಾದ ಶ್ರೀಮಾನ್ ಅಗ್ನಿಹೋತ್ರಿಯವರು ಹೇಳಿದ ಹಾಗೆ ಸಹಾಯ ಸಲಕರಣೆಗಳನ್ನು ಒದಗಿಸಿಕೊಟ್ಟರೆ ಇನ್ನೂ ಕೂಡ ಉತ್ತಮವಾಗಿ ಕೆಲಸ ಮಾಡುತ್ತದೆ. ಆ ರೀತಿ ಉತ್ತೇಜನ ಕೊಡಬೇಕು. ಲೋಪದೋಷಗಳೂ ಇವೆ. ಪೋಲೀಸ್ ಇಲಾಖೆಗೆ ಇವತ್ತಿನ ದಿವಸ ಲಂಚನಿರೋಧ ಇಲಾಖೆಯನ್ನು ವಹಿಸಿದ್ದೇವೆ. ನಿಜವಾಗಿಯೂ ಕೂಡ ಅದು ಒಳ್ಳೆಯದಲ್ಲ ಎಂದು ನನ್ನ ಸ್ವಂತ ಅನುಭವದ ಮೇಲೆ ಹೇಳುತ್ತೇನೆ. ದುದ್ದ ಪೋಲೀಸ್ ಸ್ಟೇಷನ್‌ನಲ್ಲಿ ಒಬ್ಬ ಸಬ್ ಇನ್‌ಸ್ಪೆಕ್ಟರು 50 ರೂಪಾಯಿ ಲಂಚ ಕೊಡಬೇಕೆಂದು ಕೇಳಿದ. ಯಾರನ್ನು ಕೇಳಿದನೋ ಆತ ತಕ್ಷಣ ಬಂದು ಈ ರೀತಿ ಕೇಳುತ್ತಾ ಇದ್ದಾನೆ ಏನು ಮಾಡುವುದು ಅಂತ ನನ್ನ ಹತ್ತಿರ ಬಂದು ಹೇಳಿದ, ನಾನು ಮೈಸೂರು ಡಿವಿಜನ್ ಆಂಟಿ ಕರಪ್‌ಷನ್ ಡಿ.ಎಸ್.ಪಿ.ಗೆ ಫೋನ್ ಮಾಡಿ ಹೀಗೆ ಕೇಳುತ್ತಾ ಇದ್ದಾನೆ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಿ ಎಂದು ಹೇಳಿದೆ. ಅವರು ತಕ್ಷಣ ಬರುತ್ತೇನೆ ಎಂದು ಹೇಳಿ ಸುಮಾರು ಎರಡು ಗಂಟೆವಳಗೆ ಮೈಸೂರಿನಿಂದ ಹಾಸನಕ್ಕೆ ಬಂದರು. ಬಂದು ಅಲ್ಲಿದ್ದವರನ್ನು ಎಲ್ಲಾ ವಿಚಾರಿಸಿದರು. ಯಾರು ಲಂಚ ಕೇಳಿದನೋ ಅವನ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಅಂತ ಹೇಳಿದರು. ಆಮೇಲೆ ನನ್ನ ಹತ್ತಿರ ಬಂದು ಆ ಡಿ.ಎಸ್.ಪಿ. ಅವರು ಪೋಲೀಸ್‌ನವರ ನಿಷ್ಠೂರ ಕಟ್ಟಿಕೊಳ್ಳುವುದು ಬೇಡ, ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ ಹೊರಟು ಹೋಗಿ ಅಂತ ಹೇಳಿದರು, ಯಾರನ್ನು ಲಂಚ ಕೊಡು ಎಂದು ಹೇಳಿದ್ದನೋ ಅವನನ್ನೂ ಹೊರಟು ಹೋಗು ಅಂತ ಹೇಳಿ ಕಳುಹಿಸಿಬಿಟ್ಟರು. ಇಂತಹ ಅಧಿಕಾರಿಗಳನ್ನು ಆಂಟಿಕರಪ್‌ಷನ್‌ನಲ್ಲಿ ಇಟ್ಟುಕೊಂಡು ಲಂಚ ಕಡಿಮೆ ಮಾಡುತ್ತೇವೆ ಎಂದರೆ ಹೇಗೆ ಸಾಧ್ಯವಾಗುತ್ತದೆ? ಆದ್ದರಿಂದ ಆಂಟಿಕರಪ್‌ಷನ್‌ನ್ನು ಪೋಲೀಸ್ ಇಲಾಖೆಗೆ ವಹಿಸದೆ ಅದನ್ನು

ಬೇರೆ ಯಾರಾದರೂ ಇಟ್ಟುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಕೊಲೆಗಳ ವಿಚಾರದಲ್ಲೂ ಕೂಡ ಕೆಳಮಟ್ಟದಲ್ಲಿ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಎರಡು ನಿದರ್ಶನಗಳನ್ನು ಕೊಡುತ್ತೇನೆ, ಸುಮಾರು ಒಂದೂವರೆ ವರ್ಷದ ಕೆಳಗೆ ಅರಸೀಕೆರೆಯಲ್ಲಿ—ಅದು ರೈಲ್ವೆ ಜಂಕ್ಷನ್, ರಾತ್ರಿ ಎಲ್ಲಾ ಜನಗಳು ತಿರುಗಾಡುತ್ತಾರೆ, ಅಂತಹ ಜಾಗದಲ್ಲಿ ಒಂದು ಮನೆಯಲ್ಲಿ 3 ಜನರನ್ನು ಕೊಲೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸಬ್ ಇನ್ಸ್‌ಪೆಕ್ಟರು ಲಕ್ಷಾಧೀಶ್ವರರಾದರು. ಯಾರು ಕೊಲೆ ಮಾಡಿದ್ದಾರೆ ಅನ್ನುವುದು ಗೊತ್ತು, ಕೊಲೆ ಮಾಡಿಸಿದವರು ಯಾರು ಅನ್ನುವುದೂ ಕೂಡ ಗೊತ್ತು. ಇನ್‌ವೆಸ್ಟಿಗೇಷನ್ ಮಾಡುವ ಸಂದರ್ಭದಲ್ಲಿ ಅವರ ಹತ್ತಿರ ಎರಡು ಸಾವಿರ ರೂಪಾಯಿ ಲಂಚ ತಗೆದುಕೊಂಡು ಸುಮ್ಮನೆ ಇರುವುದು. ಇದೇ ರೀತಿ ಅರಸೀಕೆರೆಯಲ್ಲಿ ಎರಡು ತಿಂಗಳ ಹಿಂದೆ ಒಬ್ಬ ಮಹಿಳೆಯನ್ನು ಅಮಾನುಷ ರೀತಿಯಲ್ಲಿ ಕೊಲೆ ಮಾಡಿದ್ದಾರೆ. ಅದು ಯಾರು ಏನು ಅಂತ ಅನ್ನುವುದನ್ನು ಉನ್ನತಮಟ್ಟದ ಅಧಿಕಾರಿಗಳಿಗೂ ಮತ್ತು ಡಿ.ಎಸ್.ಪಿ.ಗೂ ಕೂಡ ಹೇಳಿದ್ದೇನೆ. ಈ ವಿಚಾರದಲ್ಲಿ ಇದುವರೆಗೂ ಕೂಡ ಒಂದು ಶಬ್ದ ಕೂಡ ಮಾತನಾಡಿಲ್ಲ ಎಂದ ಮೇಲೆ ಇದರ ಅರ್ಥ ನಮಗೆ ಆಗುವುದಿಲ್ಲ. ಅವರು ಯಾವ ತರಹ ಇನ್‌ವೆಸ್ಟಿಗೇಷನ್ ಮಾಡುತ್ತಾರೋ ಏನೋ ಗೊತ್ತಿಲ್ಲ. ಇನ್ನೊಂದು ವಿಷಯ, ಹಾಸನದಲ್ಲಿ ಸುಮಾರು ಒಂದು ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಗಂಧದ ಕಳುವಿನ ಕೇಸು ನಡೆಯುತ್ತಾ ಇದೆ. ಮೊನ್ನೆ ಮೊನ್ನೆ ಕೂಡ ನನ್ನ ಕಾನ್‌ಸ್ಟಿಟ್ಯೂಯನ್ಸಿಗೆ ಸೇರಿದ ಜಾಗದಿಂದ ಎರಡು ಲಕ್ಷ ರೂಪಾಯಿನಷ್ಟು ಗಂಧದ ಕಳುವು ಆಗಿದೆ. ಯಾರೋ ಗೊತ್ತಿರುವವರೇ ಸಾಗಾಣಿಕೆ ಮಾಡುವವರು. ಅವರು ಯಾರು, ಎಷ್ಟು ಜನ ಅನ್ನುವುದೂ ಕೂಡ ಡಿ.ಎಸ್.ಪಿ. ಅವರಲ್ಲಿ ಹೇಳಿದ್ದೇನೆ. ಅರಣ್ಯ ಮಂತ್ರಿಗಳಲ್ಲೂ ಕೂಡ ಹೇಳಿದ್ದೇನೆ. ಆದರೂ ಕೂಡ ಅದು ಇನ್ನೂ ಫಲಪ್ರದವಾಗಿಲ್ಲ. ಹಾಸನ ಕಸಬ ಸಬ್ ಇನ್ಸ್‌ಪೆಕ್ಟರ್ ರಂಗನಾಥ್ ಅಂತ ಇದ್ದಾರೆ. ಗಂಧದ ಮರ ಕಡಿದವರು ಇಂಥವರೇ ಅಂತ ಗೊತ್ತಿದ್ದರೂ ಕೂಡ, ಅವರನ್ನು ಹಿಡಿಯುವುದು ಅವರಿಂದ ನೂರಾರು ರೂಪಾಯಿಗಳನ್ನು ಕಸಿದುಕೊಳ್ಳುವುದು ಇದೇ ಅವರ ಕೆಲಸವಾಗಿದೆ. ಸಾವಿರಾರು ಜನರನ್ನು ಈ ರೀತಿ ಕೈಬಿಟ್ಟು ಕುಳಿತುಕೊಂಡಿದ್ದಾರೆ. ಇಂತಹ ಸಬ್ ಇನ್ಸ್‌ಪೆಕ್ಟರಿಂದ ಇವತ್ತಿನ ದಿವಸ ನಮ್ಮ ಈ ಇಲಾಖೆಗೆ ಕೆಟ್ಟ ಹೆಸರು ಬಂದು ನಿಷ್ಠಾವಂತ ಅಧಿಕಾರಿಗಳು ಯಾರು ಚೆನ್ನಾಗಿ ಕೆಲಸ ಮಾಡುತ್ತಾ ಇದ್ದಾರೋ ಅವರ ಮೇಲೂ ಕೂಡ ಕೆಟ್ಟ ಪರಿಣಾಮವಾಗುತ್ತಾ ಇದೆ ಎಂದು ಹೇಳುತ್ತಾ ಇದ್ದೇನೆ. ಆದ್ದರಿಂದ ಈ ಇಲಾಖೆಯಲ್ಲಿ ಇನ್ನೂ ಉತ್ತಮವಾದ ರೀತಿಯಲ್ಲಿ ಕೆಲಸ ಮಾಡಬೇಕೆಂದು ಹೇಳಿ ನಾನು ಈ ಬೇಡಿಕೆಯ ಮೇಲೆ ಮಾತನಾಡುವುದಕ್ಕೆ ಅವಕಾಶಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

†ಶ್ರೀ ಗಂಗಾಬೋವಿ (ಗೂಳೂರು).—ಸ್ವಾಮಿ, ಈ ದಿವಸ ಮಂಡಿಸಿರತಕ್ಕ ಈ ಪೋಲೀಸ್ ಇಲಾಖೆಯ ಡಿಮ್ಯಾಂಡನ್ನು ವಿರೋಧ ಮಾಡುತ್ತಾ ನನ್ನ ಕ್ಷೇತ್ರದಲ್ಲಿ ನಡೆದಂತಹ ಘಟನೆಗಳ ವಿಚಾರವಾಗಿ ಎರಡು ಮಾತುಗಳನ್ನು ಹೇಳುತ್ತೇನೆ. ಕೆಲವು ಜನ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಕೆಲವು ಜನ ಈ ವಿಷಯದಲ್ಲಿ ಕೆಲವು ಅಂಕಿಅಂಶಗಳನ್ನೂ ಕೂಡ ಹೇಳಿದ್ದಾರೆ. ತುಮಕೂರು ತಾಲ್ಲೂಕಿನ ಒಂದು ಹಳ್ಳಿಯಿಂದ ಒಬ್ಬ ಮಹಿಳೆಯನ್ನು ತಂದು ಬೆಂಗಳೂರು—ನೆಲಮಂಗಲದ ಹತ್ತಿರ ಇರುವ ದಾಬಸ್‌ಪೇಟೆಯಲ್ಲಿ ಕತ್ತರಿಸಿ ಹಾಕಿದ್ದಾರೆ. ಅದಕ್ಕೆ ಪ್ರತಿಯೊಂದೂ ಕೂಡ ಸಾಕ್ಷಿ ಇದೆ. ವಿವರವಾಗಿ ಬೇಕಾದರೆ ಹೇಳುತ್ತೇನೆ. ಈ ವಿಷಯದಲ್ಲಿ ಯಾವ ಕ್ರಮವನ್ನೂ ಕೂಡ ಕೈಗೊಂಡಿಲ್ಲ. ಯಾವ ಒಂದು ವಿಧವಾದ ಇನ್‌ವೆಸ್ಟಿಗೇಷನ್ ಕೂಡ ನಡೆದಿಲ್ಲ. ಇದು ನಡೆದ 20 ದಿವಸದಲ್ಲಿ ಇದೇ ಬೆಂಗಳೂರು—ನೆಲಮಂಗಲ ತಾಲ್ಲೂಕಿನ ಗುಂಡಮ್ಮನ ಪಾಳ್ಯ ಅಂತ ಅನ್ನುವ ಕಡೆ ಒಂದು ದೇವಸ್ಥಾನದಲ್ಲಿ ಪೂಜೆ ಮಾಡುವ ಉದ್ದೇಶದಿಂದ ಭಕ್ತಾದಿಗಳು ಬರುತ್ತಾ ಇದ್ದರು. ಆರೀತಿ ಬರುತ್ತಾ ಇದ್ದ ಒಬ್ಬ ಅಜ್ಜಿ ಮತ್ತು 12 ವರ್ಷದ ಹೆಣ್ಣುಮಗಳನ್ನು ಒಬ್ಬ ಟೀಚರ್ ವೆಂಕಟರಾಮಯ್ಯ ಅಂತ ಅನ್ನುವವರು, ಚನ್ನಬೋರಯ್ಯ ಅಂತ ಅನ್ನುವವರು ಮತ್ತು ಹನುಮಯ್ಯ ಅಂತ ಅನ್ನುವ ಮುಖಂಡರು ಸೇರಿಕೊಂಡು ಅಪಹರಿಸಿಕೊಂಡು ಹೋದರು, ಎಷ್ಟೋ ದಿವಸ ಅವರ ಬಂಧುಗಳಿಗೆ ಗೊತ್ತಾಗಲಿಲ್ಲ. ಗೊತ್ತಾದ ಮೇಲೆ ಪೋಲೀಸ್‌ನವರಿಗೆ ತಿಳಿಸಿದ್ದಾರೆ. ಅಲ್ಲಿಯವರೆವಿಗೂ ಕೂಡ ಅವರು ಯಾವ ಒಂದು ವಿಚಾರಣೆಯನ್ನೂ ಮಾಡಿಲ್ಲ. ಇಂತಹ ಘಟನೆಗಳು ಇಂತಹ ಅನ್ಯಾಯಗಳು ನಡೆಯುತ್ತಾ ಇರುವುದನ್ನು ನೋಡಿದರೆ ದೇಶದಲ್ಲಿ ಸಾಮಾನ್ಯ ಜನ ವಾಸ ಮಾಡುವುದು ಹೇಗೆ ಅಂತ ಹೇಳಿ ಯೋಚನೆ ಮಾಡಬೇಕಾಗಿದೆ. ಸಾಮಾನ್ಯವಾಗಿ ಬಡವರಿಗೆ, ಸಾಮಾನ್ಯ ಜನರಿಗೆ ಕಷ್ಟ ಬಂದಂತಹ ಸಂದರ್ಭದಲ್ಲಿ ಪೋಲೀಸ್ ಇಲಾಖೆಯ ಸಹಾಯಕ್ಕಾಗಿ ಅವರೇನಾದರೂ ಹೋದರೆ ಅವರಿಗೆ ಯಾವ ವಿಧವಾದ ಪ್ರತಿಫಲವೂ ಸಿಕ್ಕುವುದಿಲ್ಲ. ಭಾರಿ ದುಡ್ಡು ಇರತಕ್ಕವರಿಗೆ ಮತ್ತು ದೌರ್ಜನ್ಯ ನಡೆಸತಕ್ಕ ಜನರಿಗೆ ಮಾತ್ರ ಪೋಲೀಸ್ ಇಲಾಖೆಯಲ್ಲಿ ಸಹಾಯ ರಕ್ಷಣೆ ಸಿಕ್ಕುತ್ತದೆ. ನಿಜವಾಗಿ ಕೊಲೆ ಮಾಡತಕ್ಕ ಜನರ ಮೇಲೆ ಕ್ರಮ ಅವರು ತೆಗೆದುಕೊಳ್ಳುತ್ತಾ ಇಲ್ಲ. ಅದು ಕ್ರಮಬದ್ಧವಾಗಿ ನಡೆಯುತ್ತಾ ಇಲ್ಲ. ತುಮಕೂರಿನಲ್ಲಿ ನೋಡಿದ್ದೇನೆ. ನನ್ನ ಕ್ಷೇತ್ರದಲ್ಲಿಯೂ

(ಶ್ರೀ ಗಂಗಾಬೋವಿ)

ನೋಡಿದ್ದೇನೆ. ಇಂತಹ ಘಟನೆಗಳು ಬೇಕಾದಷ್ಟು ಇವೆ. ಇವುಗಳನ್ನು ವಿಚಾರಮಾಡಿ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನು ಗುಂತಮ್ಮನಪಾಳ್ಯದಲ್ಲಿ ಬೇರೆ ತರಹ ಎರಡು ಕೇಸುಗಳು ಆಗಿವೆ. ಅದರ ಬಗ್ಗೆಯೂ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಂಡಿಲ್ಲ. ಇನ್ನು ದಾಬ್ಸ್‌ಪೇಟೆಯಲ್ಲಿ ನಡೆದಿರತಕ್ಕದು ಏನೆಂದರೆ ಹಗಲಿನಲ್ಲಿಯೇ ಒಬ್ಬ ತನ್ನ ಹೆಂಡತಿಯನ್ನು ಕತ್ತರಿಸಿದ್ದು. ಅದರ ಬಗ್ಗೆಯೂ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಇನ್ನೊಂದು ಸಂದರ್ಭದಲ್ಲಿ 12 ವರ್ಷದ ಹುಡುಗಿಯನ್ನು ಕಾರಿನಲ್ಲಿ ಮಧ್ಯರಾತ್ರಿಯಲ್ಲಿ ಅಪಹರಿಸಿ ತೆಗೆದುಕೊಂಡು ಹೋಗಿರುವುದು. ಇದರ ಬಗ್ಗೆಯೂ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆಂಬುದು ಗೊತ್ತಾಗಲಿಲ್ಲ.

ಇಷ್ಟು ಹೊತ್ತು ನನಗೆ ಇಲ್ಲಿ ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಕೆ. ಲೀಲಾವತಿ ರೈ (ಬಂಟ್‌ವಾಳ್).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಂಡಿಸಿದ ಡಿಮ್ಯಾಂಡನ್ನು ಪುಷ್ಟೀಕರಿಸುತ್ತಾ ಒಂದೆರಡು ಸಲಹೆಗಳನ್ನು ಹೇಳಬಯಸುತ್ತೇನೆ. ಈಗಾಗಲೇ ಕೆಲವೊಂದು ಸಲಹೆಗಳ್ನು ನಮ್ಮ ಕ್ಷೇತ್ರದ ಸದಸ್ಯರು ಹೇಳಿದರು. ಇನ್ನು ಕೆಲವು ವಿಷಯಗಳನ್ನು ಮಾತ್ರ ನಾನು ಹೇಳುತ್ತೇನೆ. ಆಹಾರದ ಸಾಗಾಣಿಕೆಯಲ್ಲಿ ಜನರಿಗೆ ಅಕೃತ್ಯ ನಡೆಸುತ್ತಿದ್ದಾರೆ. ನಮ್ಮ ಗಡಿ ಪ್ರದೇಶದಲ್ಲಿ ಮೊನ್ನೆ ಒಂದು ವಿಶೇಷವಾದಂಥ ಒಂದು ಕಾರ್ಯಕ್ರಮವುದಲ್ಲಿ ಬಹಳ ಗಲಾಟೆಯಾಯಿತು. ಈ ಸಂದರ್ಭವನ್ನು ಏಕೆ ಪೋಲೀಸ್ ಅಧಿಕಾರಿಗಳು ಕಲ್ಪಿಸಿಕೊಡುತ್ತಾರೋ ಗೊತ್ತಿಲ್ಲ. ಪೋಲೀಸ್ ಸ್ಟೇಷನ್ನುಗಳಲ್ಲಿ ಪೋಲೀಸ್ ಅಧಿಕಾರಿಗಳು ಅದರಲ್ಲಿಯೂ ಮೇಲಧಿಕಾರಿಗಳು ಒಳ್ಳೆಯ ರೀತಿಯಿಂದ ನಡೆದುಕೊಂಡರೆ, ಕೆಳಗಿನ ಅಧಿಕಾರಿಗಳೂ ಸಹ ಸರಿಯಾಗಿ ಇರುತ್ತಾರೆಂದು ನಾನು ಹೇಳಬಯಸುತ್ತೇನೆ. ಇನ್ನು ಗಡಿ ಪ್ರದೇಶಗಳಲ್ಲಿ ಪೋಲೀಸ್ ಅಧಿಕಾರಿಗಳನ್ನು ಹಾಕುತ್ತಿದ್ದಾರೆ. ಅಲ್ಲಿಗೆ ಅವರನ್ನು ಹಾಕಿದರೂ ಜನರನ್ನು ಕೇಳುವವರೇ ಇರುವುದಿಲ್ಲ. ಮೊನ್ನೆ ಬಹಳ ಅನಾಚಾರಗಳು ಆದುವು. ಎಲ್ಲಿ ಹಳ್ಳಿಯ ಹೆಣ್ಣುಮಕ್ಕಳು ಇರುತ್ತಾರೋ ಆ ಕಡೆಯಲ್ಲಿ ಪೋಲೀಸಿನವರು ಇರುತ್ತಾರೆ. ಅವರು ಗಡಿಯಲ್ಲಿ ಇರುವುದೇ ಇಲ್ಲ. ಹೆಣ್ಣುಮಕ್ಕಳು ಸೊಪ್ಪು, ಸೌದೆಗೆ ಯಾವಾಗ ಹೋಗುತ್ತಾರೆಯೋ, ಎಲ್ಲೆಲ್ಲಿ ಹೆಣ್ಣುಮಕ್ಕಳು ಇರುತ್ತಾರೋ ಅಂತಹ ಕಡೆಗಳಲ್ಲಿ ಮಾತ್ರವೇ ಪೋಲೀಸಿನವರು ಇರುತ್ತಾರೆ. ನಾನು ಒಂದು ಪ್ರಶ್ನೆಯನ್ನು ಕೇಳಬೇಕಾಗಿದೆ, ಪೋಲೀಸಿನವರು ಗಡಿಯನ್ನು ಕಾಯುವುದಕ್ಕೆ ಇದ್ದಾರೋ ಅಥವಾ ಹೆಣ್ಣುಮಕ್ಕಳು ಇರುವ ಕಡೆ ಒಡಾಡಿಕೊಂಡು ಇರುವುದಕ್ಕೆ ಇದ್ದಾರೋ ? ಅದರಿಂದ ಮಾನ್ಯ ಮಂತ್ರಿಗಳು ರಾತ್ರಿಯಲ್ಲಿ ಬಂದು ಈ ಪ್ರದೇಶಗಳನ್ನು ಭೇಟಿಮಾಡಬೇಕೆಂದು ನಾನು ಬಹಳ ವಿನಯಪೂರ್ವಕವಾಗಿ ಹೇಳುತ್ತೇನೆ. ಇಂತಹ ಅನಾಚಾರಗಳು ನಮ್ಮ ದೇಶದಲ್ಲಿ ನಡೆದರೆ, ನಮ್ಮ ದೇಶದ ಹೆಣ್ಣುಮಕ್ಕಳಿಗೆ ರಕ್ಷಣೆ ಎಲ್ಲಿ ? ಪೋಲೀಸ್ ಕಾನ್‌ಸ್ಟೇಬಲ್ಸ್ ರಾತ್ರಿ ಹೊತ್ತು ಮನೆಗಳಿಗೆ ಟಾರ್ಚ್‌ಲೈಟ್ ಹಿಡಿದುಕೊಂಡು ಹೋಗಿ ಲೈಟ್‌ಬಿಡುತ್ತಾರೆ. ಇದನ್ನು ಯಾರು ಕೇಳಬೇಕು ? ಇಂತಹ ಕೆಲಸಗಳನ್ನು ಅವರು ಮಾಡಬಾರದು. ಮೇಲಧಿಕಾರಿಗಳು ನಮ್ಮನ್ನು ಈ ವಿಚಾರವಾಗಿ ಕೇಳುವುದಕ್ಕಾಗುವುದಿಲ್ಲವೆಂದು ಹೇಳಿದಮೇಲೆ ಕೆಳಗಿನ ಅಧಿಕಾರಿಗಳ ಹತ್ತಿರ ಈ ವಿಚಾರವನ್ನು ಮಾತನಾಡುವುದಕ್ಕೆ ಹೋಗುವ ಹಾಗೆ ಇಲ್ಲ. ಪೋಲೀಸ್ ಸ್ಟೇಷನ್ನಿನಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್-ಇವರುಗಳೆಲ್ಲಾ ಇರುತ್ತಾರೆ. ಆದರೆ ಅವರು ತಪ್ಪು ಮಾಡಿದರೆ ತನಿಖೆಮಾಡುವ ಪರಿಸ್ಥಿತಿ ಇರಬೇಕು. ಅವರನ್ನು ಒಂದು ಗಡಿಯಲ್ಲಿ ಹಾಕಿದರೆ ಮುಂದೆ ಅವರನ್ನು ಬದಲಾಯಿಸುವ ಕ್ರಮ ಇಲ್ಲದೇ ಇದ್ದರೆ ಅವರು ಹಳ್ಳಿಗಳಿಗೆ ಹೋಗಿ ಏನು ಮಾಡುತ್ತಾರೆ? ಅವರು ತನಿಖೆಮಾಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಅದಕ್ಕಾಗಿ ಮಂತ್ರಿಗಳು ತಕ್ಕ ಏರ್ಪಾಡು ಮಾಡಬೇಕು. ಮೊನ್ನೆ ನಾಲ್ಕು ಜನ ಹೆಣ್ಣುಮಕ್ಕಳನ್ನು ಹೊಡೆದಿದ್ದಾರೆ. ಅಂತಹ ಅಚಾತುರ್ಯ ಕೆಲಸವನ್ನು ನಮ್ಮವರೇ ಆದ ಪೋಲೀಸರು, ಮಾಡುತ್ತಿದ್ದಾರೆ. ಇದೆಷ್ಟು ಬೇಸರವಾದ ಸಂಗತಿ, ದುಃಖಕರವಾದ ಸಂಗತಿ ? ಇಂತಹ ಕೆಲಸಗಳು ಇನ್ನುಮುಂದೆ ನಡೆಯದಂತೆ ನೋಡಿಕೊಳ್ಳಲು ಈಗ ಐ. ಪಿ. ಎಸ್. ಅಧಿಕಾರಿಗಳನ್ನು ನೇಮಕಮಾಡಿದ್ದೀರಿ. ಅಂತಹವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಸರಿಯಾದ ರೀತಿಯಲ್ಲಿ ನಡೆಸಿ. ಮೇಲಧಿಕಾರಿಗಳು ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು. ಈ ಬಗ್ಗೆ ಮಾನ್ಯ ಸದಸ್ಯರೊಬ್ಬರು ಏನು ಮಾಡಬೇಕೆಂದು ಕೇಳಿದರು. ಕೆಲವು ಕಡೆಗಳಲ್ಲಿ ಪೋಲೀಸ್ ಅಧಿಕಾರಿಗಳು 3-4 ವರ್ಷಗಳು ಇದ್ದರೂ ಬದಲಾವಣೆಮಾಡುವುದಿಲ್ಲ. 3 ವರ್ಷಗಳು ಒಂದೇ ಕಡೆ ಇರುವುದೂ ಸಹ ಕಷ್ಟವೆಂದು ಕೆಲವು ಪೋಲೀಸ್ ಅಧಿಕಾರಿಗಳೇ ಹೇಳಿದ್ದಾರೆ. ಇದರಿಂದ ಈ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು ಅಕ್ಕಿ ಸಾಗಣಿಕೆ ಟ್ಯಾಕ್ಸಿಗಳಲ್ಲಿ ಹೋಗುತ್ತಿದೆ. ಅದನ್ನು ಕೇಳುವವರೇ ಇಲ್ಲ. ಬಸ್ ಸ್ಟ್ಯಾಂಡಿನಲ್ಲಿ ಅಕ್ಕಿ ಲೋಡ್ ತೆಗೆದುಕೊಂಡು ಹೋದರೆ, 15 ರೂಪಾಯಿಗಳ ಡಿಮ್ಯಾಂಡ್ ಮಾಡುತ್ತಾರೆ. ಇದನ್ನು ಕಿವಿಯಾರೆ ಕೇಳಿದ್ದೇನೆ. ನಮ್ಮ ಬಂಡವಾಳ ತಾಲ್ಲೂಕಿನಲ್ಲಿ ಪ್ರೈವೇಟ್ ಟ್ಯಾಕ್ಸಿಯಲ್ಲಿ ಅಕ್ಕಿ ತೆಗೆದುಕೊಂಡು ಹೋಗುತ್ತಾರೆ. ಏನು ಕ್ರಮವನ್ನು ನಮ್ಮ ಪೋಲೀಸಿನವರು ತೆಗೆದುಕೊಂಡಿದ್ದಾರೆ? ನಮ್ಮ ತಾಲ್ಲೂಕಿನಲ್ಲಿ ಒಬ್ಬ ಸಬ್ ಇನ್‌ಸ್ಪೆಕ್ಟರ್ ಇದ್ದಾರೆ. ಅವನಿಗೆ ಇಬ್ಬರು ಹೆಂಡತಿಯರು. ಅವರು ಎಲ್ಲಿಯೂ ಹೋಗುವುದಿಲ್ಲ. ಮನೆಯಲ್ಲಿಯೇ ಇರುವುದು. ನಾನು ಮೂರು ವರ್ಷಗಳಿಂದಲೂ ತಾಲ್ಲೂಕು ಬೋರ್ಡ್ ಅಧ್ಯಕ್ಷಿಣಿಯಾಗಿದ್ದೇನೆ. ಎಂ. ಎಲ್. ಎ. ಆಗಿದ್ದೇನೆ. ಅವರ ಮುಖ ಕಂಡಿಲ್ಲ. ಅವರನ್ನು ನೋಡಲೂ ಇಲ್ಲ. ಅವರು ಎಲ್ಲಿ ಹೋಗುತ್ತಾರೋ, ಏನು ತನಿಖೆಮಾಡುತ್ತಾರೋ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀಮತಿ ಲೀಲಾವತಿ ರೈ ಅವರಿಗೆ ಹೋಂ ಡಿಪಾರ್ಟ್‌ಮೆಂಟ್ ಕೊಟ್ಟರೆ, ಅಲ್ಲಿ ಚೆನ್ನಾಗಿ ಕೆಲಸಮಾಡುತ್ತಾರೆ.

ಶ್ರೀಮತಿ ಕೆ. ಲೀಲಾವತಿ ರೈ.—ಆ ವಿಷಯವನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಆ ಅಧಿಕಾರಿಗಳ ಮೇಲೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಕೊನೆಯದಾಗಿ ಸಬ್ ಇನ್‌ಸ್ಪೆಕ್ಟರ್ ಆಗಿರುವವರು ದಕ್ಷತೆಯಿಂದ ಕೆಲಸಕಾರ್ಯಗಳನ್ನು ಮಾಡಬೇಕು. ನಮ್ಮ ದೇಶದ ರಕ್ಷಣೆಯನ್ನು ಮಾಡುವವರು ಪೋಲೀಸ್ ಇಲಾಖೆ. ಎಲ್ಲಾ ಇಲಾಖೆಗಳಲ್ಲಿ ಆಗುವ ಅನಾಚಾರಗಳನ್ನು ರಕ್ಷಣಮಾಡುವವರೂ ಅವರೇ, ಒಟ್ಟಿನಲ್ಲಿ ಅವರು ಈ ದೇಶದ ರಕ್ಷಣೆ ಚೆನ್ನಾಗಿ ಮಾಡಲಿ ಎಂದು ಕೇಳಿಕೊಂಡು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಪಿ. ಗಂಗಾಧರ್.—ಸನ್ಮಾನ್ಯ ಸಭಾಪತಿಗಳೇ, ಈ ದೇಶದಲ್ಲಿನ ಲಂಚದ ವಿಷಯವಾಗಿ ಮತ್ತು ಆಡಳಿತದ ಅದಕ್ಷತೆಯ ಬಗ್ಗೆ ನನ್ನ ಸ್ನೇಹಿತರು ಅನೇಕರು ಮಾತನಾಡಿದ್ದಾರೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈಗ ಒಳಾಡಳಿತದ ಒಂದು ರಾಜ್ಯಭಾರ ಈ ದೇಶದಲ್ಲಿ ಕುಸಿದುಬಿದ್ದಿದೆಯೆಂದು ಹೇಳಿದರೆ ಅದೇನೂ ಅತಿಶಯೋಕ್ತಿಯಾಗಲಾರದು. ನಾನು ಕೇವಲ ಎರಡು ನಿದರ್ಶನಗಳನ್ನು ಕೊಡುತ್ತೇನೆ. ಮಾನ್ಯ ಶ್ರೀ ಸಿದ್ಧವೀರಪ್ಪನವರು ಮಾತನಾಡುತ್ತಾ ರಾಜಕೀಯ ಹಸ್ತಕ್ಷೇಪ ನಡೆಯುತ್ತಿದೆ, ಆದ್ದರಿಂದ ಈಗಿನ ಆಡಳಿತ ಸ್ವಚ್ಛ ಇದೆಯೆಂದು ಹೇಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ಹಾಗೆ ಹೇಳುವಾಗ ಒಬ್ಬ ಉಮಂತ್ರಿ ವಿಷಯವಾಗಿಯೂ ಹೇಳಿದರು. ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ನಾನು ಒಂದು ಕೊಲೆ ಮೊಕದ್ದಮೆ ಬಗ್ಗೆ ಮೊಟ್ಟಮೊದಲು ಮಾತನಾಡುತ್ತೇನೆ. ಫಿರ್ಯಾದಿ ಕೊಡಲು ಹೋದರೆ ಫಿರ್ಯಾದಿ ಕೊಟ್ಟ ವ್ಯಕ್ತಿಗೇ ತೊಂದರೆಯಾಗುತ್ತದೆ. ಈ ಊರಿನ ಜನಗಳು ಬಂದು ದೂರು ಕೊಟ್ಟರೆ ತಪ್ಪುಮಾಡಿದವನನ್ನು ಕೆಲವರು ಕಾಂಗ್ರೆಸ್ ಭಕ್ತರು ಹಾಗೂ ಜಿಲ್ಲಾ ಕಾಂಗ್ರೆಸ್ ಸದಸ್ಯರು ಮತ್ತು ತಾಲ್ಲೂಕು ಕಾಂಗ್ರೆಸ್ ಕಮಿಟಿ ಸದಸ್ಯರು ಸರ್ಟಿಫೈ ಮಾಡಿದ್ದರೆ ಮೇಲೆ ಇನ್‌ಕ್ವೆಸ್ಟ್ ಮಾಡಲಿಲ್ಲ. ಯಾರು ಕಂಪ್ಲೇಂಟ್ ಕೊಟ್ಟಿದ್ದು, ಎಲ್ಲ ವಿವರಗಳನ್ನು ಬೇಕಾದರೆ ಹೇಳುತ್ತೇನೆ. ಈ ಮಧ್ಯೆ 3 ಜನ ಸಾಕ್ಷಿಗಳು ಓಡಿ ಹೋದರು. ಎಲ್ಲಾ ಕಥೆಗೊತ್ತು. ಇದರಲ್ಲಿ ಏನು ಸ್ಯಾಂಕ್ಟಿಟಿ ಇದೆಯೆಂಬುದನ್ನು ನೋಡಬೇಕು. ಇದು ಒಂದು ಡೆಮೊಕ್ರಟಿಕ್ ಸೆಟಪ್ ಎಂದು ಹೇಳುತ್ತೀರಿ. ಈ ಮಾನ್ಯ ಸಭೆಯಲ್ಲಿ ಪೊಲಿಟಿಷಿಯನ್ಸಿಗೆ ಏನು ಪ್ರೊಟೆಕ್ಷನ್ ಇದೆ? ಈ ಕೇಸಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ರಬ್ ಆಫ್ ಮಾಡಿದ್ದಾರೆ. ಆ ಎಲ್ಲಾ ಕಾಗದಪತ್ರಗಳನ್ನು ತೆಗೆಸಿನೋಡಿದರೆ ಗೊತ್ತಾಗುತ್ತದೆ. ಇದೇ ಸಮಯದಲ್ಲಿ ತಾಲ್ಲೂಕು ಬೋರ್ಡ್ ಸದಸ್ಯ ಶ್ರೀ ಮುದ್ದನಗೌಡ, ಅವರ ಮಾವ ಶ್ರೀ ಗಂಗೇಗೌಡ ಮತ್ತು ಅವರ ಅತ್ತೆ—ಈ ಮೂರು ಜನರನ್ನು ಇನ್‌ಸರ್ಟ್ ಮಾಡಿದರು. ಮೂರು ಜನ ಜೈಲಿನಲ್ಲಿ ಇರಬೇಕು ಎಂದು ಒತ್ತಾಯ ಮಾಡಿದರು. ಸಬ್ ಇನ್‌ಸ್ಪೆಕ್ಟರು ಏತಕ್ಕೆ ಹಾಗೆ ಮಾಡಿದರು ಎನ್ನುವ ವಿಷಯವನ್ನು ಬೇರೆ ಕಡೆ ತಿಳಿದುಕೊಂಡಾಗ ಅವರಿಗೆ ಮೇಲಾಧಿಕಾರಿಯ ಒತ್ತಾಯ ಬಂತು ಆ ಜನರನ್ನು ಬಿಡುವುದು ಸರಿಯಿಲ್ಲ ಎಂದು ಹೇಳಿದರಂತೆ. ಹೊಸದಾಗಿ ಹೋಗಿರತಕ್ಕ ಸಬ್‌ಇನ್‌ಸ್ಪೆಕ್ಟರು ಮೇಲಾಧಿಕಾರಿಗಳಿಗೆ ವಿರುದ್ಧವಾಗಿ ಹೋಗುವುದಕ್ಕೆ ಇಷ್ಟ ಇರಲಿಲ್ಲ. ಅದರಿಂದ ಅದನ್ನು ರಬ್ ಮಾಡಿ ಸಣ್ಣದಾಗಿ ಇವರ ಹೆಸರುಗಳನ್ನು ಸೇರಿಸಿದರು. ಹೀಗೆ ಮಾಡಿದರೆ ಪೋಲೀಸ್ ಆಡಳಿತಕ್ಕೆ ಸ್ಯಾಂಕ್ಟಿಟಿ ಇದೆಯೇ? ಹೈಕೋರ್ಟಿಗೆ ಹೋಯಿತು. ಅವರು ಈರೀತಿ ಇನ್‌ಸ್ಟ್ರಕ್ಷನ್ ಮಾಡಿರುವುದು ಅನ್ಯಾಯ ಎಂದು ಹೇಳಿ ಬೇಲಿನ ಮೇಲೆ ಅವರನ್ನು ಬಿಟ್ಟರು. ಅವರನ್ನು ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಇದು ಇನ್‌ಸರ್ಷನ್ ಎಂದು ಬರೆದಿದ್ದರಿಂದ ಡಿಸ್‌ಛಾರ್ಜ್ ಮಾಡಿದರು. ಹೀಗೆ ರಾಜಕೀಯದಲ್ಲಿ ವಿರೋಧವಾಗಿದ್ದ ಜನರನ್ನು ಜೈಲಿಗೆ ಕಳುಹಿಸಬೇಕು ಎಂದ ಪೋಲೀಸ್ ಪೇಪರ್‌ನಲ್ಲಿ ಇನ್‌ಸರ್ಟ್ ಮಾಡಿ ಜೈಲಿಗೆ ಕಳುಹಿಸಿದರೆ ಪ್ರಜಾಪ್ರಭುತ್ವದಲ್ಲಿ ನಂಬ

(ಶ್ರೀ ಬಿ. ಪಿ. ಗಂಗಾಧರ್)

ಇರುತ್ತದೆಯೇ ಎನ್ನುವ ಪ್ರಶ್ನೆಯನ್ನು ಕೇಳಬೇಕಾಗಿದೆ. ಈರೀತಿ ಅವಹೇಳನ ಕೆಲಸ ಮುಂದೆ ಎಾದೂ ಜರುಗದಂತೆ ನೋಡಿಕೊಳ್ಳಬೇಕಾದುದು ನಿಮ್ಮ ಕರ್ತವ್ಯ. ಯಾವ ಕೋರ್ಟಿಗೆ ಹೋಗಿದ್ದರೂ ಚಿಂತೆಯಿಲ್ಲ. ಸಂಬಂಧಪಟ್ಟ ಪೇಪರುಗಳನ್ನು ತರಿಸಿಕೊಂಡು ಯಾವರೀತಿ ಟ್ಯಾಂಪರ್ ಮಾಡಿದ್ದಾರೆ, ಯಾವರೀತಿ ಇನ್‌ಸರ್‌ಷನ್ ಮಾಡಿದ್ದಾರೆ ಎನ್ನುವುದನ್ನು ನೋಡಬೇಕು. ಯಾವ ಅಧಿಕಾರಿ ಹಾಗೆ ಮಾಡಿದ್ದಾನೆ ಎಂದು ಕಂಡಹಿಡಿಯಬೇಕು ಮತ್ತು ಅವನ ಮೇಲೆ ಡಿಪಾರ್ಟ್‌ಮೆಂಟಲ್ ಆಕ್ಷನ್ ತೆಗೆದುಕೊಳ್ಳಬೇಕು. ಅವನಿಗೆ ಸಾಕಷ್ಟು ಪನಿಷಮೆಂಟ್ ಕೊಡಬೇಕು. ಅಂತಹ ಜನಗಳಿಗೆ ಶಿಕ್ಷೆ ಆಗದಿದ್ದರೆ ಪೋಲೀಸ್ ಅಧಿಕಾರಿಗಳನ್ನು ನಂಬುವುದಕ್ಕಾಗುವುದಿಲ್ಲ. ನನ್ನ ಕೇಸಿನಲ್ಲಿಯೇ ನನ್ನ ಮೇಲೆ ಛಾರ್ಜ್‌ಷೀಟ್ ಮಾಡಿದರು. ಚೆನ್ನಿಗರಾಮಯ್ಯನವರ ಮನೆ ಮುಂದೆ ಕಲ್ಲು ಎಸೆದೆ ಎಂದು. ಆ ಕೇಸು 5 ವರ್ಷ ನಡೆಯಿತು. ಈ ಕೇಸಿಗಾಗಿ ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟ್‌ರ್ ಒಬ್ಬರನ್ನು ನೇಮಿಸಿದರು. ಇದರಲ್ಲಿ ಒಂದು ಮುಖ್ಯ ವಿಷಯ ಏನೆಂದರೆ ನಾನು ಡೆಪ್ಯೂಟಿ ಕಮಿಷನರು ಮತ್ತು ಡಿ. ಎಸ್. ಪಿ. ಅವರು ಇದ್ದ ಟಿ. ಬಿ. ಗೆ ಹೋಗಿ ಅಲ್ಲಿ ಇರತಕ್ಕ ಸಿಚುಯೇಷನ್ ಹೇಗೆ ಕಂಟ್ರೋಲ್ ಮಾಡಬೇಕು ಎಂದು ಡಿಸ್ಕಸ್ ಮಾಡಿದೆವು. ಆ ದಿವಸ ಏನೇನೂ ನಡೆಯಲಿಲ್ಲ. ಮನೆಗೆ ಹೋದ ಮೇಲೆ ಮರುದಿವಸ ಹಿಂದಿನ ತಾರೀಖಿನಲ್ಲಿ ಮಹಜರ್ ತಯಾರು ಮಾಡಿ ನನ್ನನ್ನು ತುಮಕೂರು ರಾಜಕೀಯದಿಂದ ಕಿತ್ತು ಹಾಕಬೇಕೆಂದು ನನ್ನ ಮೇಲೆ ಅಪಾದನೆ ಹೊರಿಸಿದರು. ಶ್ರೀಮಾನ್ ಚೆನ್ನಿಗರಾಮಯ್ಯನವರು ಕೋರ್ಟಿನಲ್ಲಿ ವಿಟ್ನೆಸ್ ಭಾಗದಲ್ಲಿ ಇದ್ದಾಗ ಅವರು ಮಹಜರ್‌ಗೆ ರುಜು ಯಾವತ್ತು ಹಾಕಿದರು ಎಂದು ಕೇಳಿದಾಗ ಮರುದಿವಸ ಡೇಟ್ ಹಾಕಿದರು ಎಂದು ಹೇಳಿದರು. ಆದರೆ ಪೋಲೀಸ್ ಅಧಿಕಾರಿ ಹೇಳುತ್ತಾರೆ; ಹಿಂದಿನ ದಿವಸ 5 ಗಂಟೆಗೆ ಬರೆದಿದ್ದೇನೆ ಎಂದು. ಹೀಗೆ ಆಂಟಿ ಡೇಟ್ ಮಾಡಿದ ಅಧಿಕಾರಿ ಯಾರೋ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಿ ಎಂದು ಹೇಳಿದೆ. ಆದರೆ ಇವೊತ್ತಿನವರೆಗೂ ಏನೂ ಆಕ್ಷನ್ ತೆಗೆದುಕೊಂಡಿಲ್ಲ. ನೀವೇ ಹೇಳಿಸಿ ಅವರ ಮುಖಾಂತರ ಮಾಡಿಸಿದ್ದೀರಿ ಎನ್ನುವ ಅನುಮಾನ ನನಗೆ ಬರುತ್ತದೆಯೋ ಇಲ್ಲವೋ ಯೋಚನೆ ಮಾಡಿ. ಈಗಲೂ ಸಹ ವೇಳೆಯಾಗಿಲ್ಲ. ಪ್ಯೂರಿಟಿ ಆಫ್ ಅಡ್ಮಿನಿಸ್ಟ್ರೇಷನ್ ದೃಷ್ಟಿಯಿಂದ ಇಲಾಖೆಗಳ ಆಡಳಿತ ಜರುಗಬೇಕು. ತಪ್ಪು ಮಾಡಿದ ಅಧಿಕಾರಿ ಉನ್ನತಮಟ್ಟದ ಅಧಿಕಾರಿಯಾಗಿರಲಿ, ಕೀಳುದರ್ಜೆ ಅಧಿಕಾರಿಯಾಗಿರಲಿ ಯಾರೇ ಇರಲಿ ಅವರಿಗೆ ಶಿಕ್ಷೆ ಆಗಬೇಕಾದುದು ಧರ್ಮ. ಈ ದೃಷ್ಟಿಯಿಂದ ಎರಡು ನಿದರ್ಶನವನ್ನು ಹೇಳುತ್ತಿದ್ದೇನೆ. ಕಾಗದ ಪತ್ರಗಳನ್ನು ತೋರಿಸಿ ಯಾರ ಯಾರ ಮೇಲೆ ಛಾರ್ಜಸ್ ಫ್ರೇಂ ಮಾಡಬೇಕೋ ಮಾಡಿ. ನಾನು ಹೇಳಿದ ವಿಷಯ ನಿಜ ಎಂದು ಕಂಡುಬಂದ ಪಕ್ಷದಲ್ಲಿ ಅವರಿಗೆ ಶಿಕ್ಷೆ ಮಾಡಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ರತ್ನಕುಮಾರಶೆಟ್ಟಿ (ಮೂಡಬಿದ್ರೆ).—ಮಾನ್ಯ ಅಧ್ಯಕ್ಷರೇ, ಇಂದಿನ ಗೃಹಖಾತೆಯ ಡಿಮ್ಯಾಂಡಿನ ಬಗ್ಗೆ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ವಯಸ್ಸು ಆದಕೂಡಲೇ ಬುದ್ಧಿ ಬಂದಂತಾಗುವುದಿಲ್ಲ. ಅದೇ ರೀತಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ 20 ವರ್ಷವಾದರೂ ಕೂಡ ಗೃಹಖಾತೆಯಲ್ಲಿ ಯಾವ ಸುಧಾರಣೆಯೂ ಆಗಲಿಲ್ಲ. ದೇಶದಲ್ಲಿ ಕೆಟ್ಟವರು ಇರುತ್ತಾರೆ, ಉತ್ತಮರೂ ಇರುತ್ತಾರೆ. ಅವರನ್ನೆಲ್ಲಾ ಸರಿಪಡಿಸಿಕೊಂಡು ನಾಗರಿಕರ ಹಕ್ಕುಭಾಧ್ಯತೆಗಳಿಗೂ ಮತ್ತು ಮನುಷ್ಯನ ಗೌರವಕ್ಕೂ ಯಾವ ರೀತಿಯೂ ಧಕ್ಕೆ ಬಾರದಂತೆ ನೋಡಿಕೊಳ್ಳುವುದು ಗೃಹಖಾತೆಯ ಕರ್ತವ್ಯವಾಗಿದೆ. ಮಾನ್ಯ ಮಂತ್ರಿಗಳು ಮಹಾತ್ಮಾ ಗಾಂಧಿಯ ಶಿಷ್ಯರಾದರೂ ಈ ಖಾತೆಯಲ್ಲಿ ಯಾವ ರೀತಿಯ ಸುಧಾರಣೆಯೂ ಬಂದಿಲ್ಲ. ನನ್ನ ಇಚ್ಛೆಯ ಪ್ರಕಾರ ನಡೆಯಬೇಕು ಎನ್ನುವ ಅಹಂಭಾವದಿಂದ ಆಡಳಿತ ನಡೆಸಿ ಇಷ್ಟು ಅವನತಿಗೆ ಇಳಿದಿದ್ದಾರೆ. ಕಾರಣ ಮಾನ್ಯಮಂತ್ರಿಗಳು ಅಡ್ವೋಕೇಟ್ ಆಗಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದರು. ಆದ್ದರಿಂದ ಪೋಲೀಸ್ ಖಾತೆಯಲ್ಲಿ ಜೈಲಿನಲ್ಲಿ ಯಾವರೀತಿ ನಡೆಯುತ್ತಿದೆ ಎನ್ನುವ ಅಭಿಪ್ರಾಯ ಅವರಿಗೆ ತಿಳಿದೇ ಇದೆ. ಬಹುಶಃ ಅವರು ಈ ಪೋಲೀಸ್ ಖಾತೆ ನಮ್ಮ ಸ್ವಂತ ಪಡೆ ಖೈದಿಗಳು ನಮ್ಮ ದೇಶಕ್ಕೆ ಯಾರೋ ಪರದೇಶದಿಂದ ಧಾಳಿ ಮಾಡಿದಂಥ ವೈರಿಗಳು ಎನ್ನುವ ಭಾವನೆ ತಾಳಿರಬಹುದು. ಕಳೆದ ವರ್ಷ ಬಡ್ಜೆಟ್ ಅಧಿವೇಶನದಲ್ಲಿ ಕೆಲವು ಸೂಚನೆಗಳನ್ನು ಕೊಟ್ಟಿದ್ದೆ ಆದರೆ ಗೃಹ ಖಾತೆಯಲ್ಲಿ ಯಾವ ರೀತಿಯ ಸುಧಾರಣೆಯೂ ಆಗಿಲ್ಲ. ಇದು ಯಾವ ರೀತಿ ಇದೆ ಎಂದರೆ ಗೋರ್‌ಕಲ್ ಮೇಲೆ ನೀರೆರೆದಂತೆ ಆಗಿದೆ. ಮಾತನಾಡಿದ್ದನ್ನು ಪುನಃ ರಿಪೀಟ್ ಮಾಡಬೇಕು ಎಂದರೆ ನಮ್ಮ ಮಾತಿಗೆ ಯಾವ ಬೆಲೆಯೂ ಸಿಕ್ಕುವುದಿಲ್ಲ. ಬಹುಶಃ ನಾವೆಲ್ಲಾ ತಿಳಿಯದೇ ಇರುವವರು ಎನ್ನುವ ಭಾವನೆ ಇರಬಹುದು. ಅದನ್ನು ನಾನು ಒಪ್ಪುವುದಿಲ್ಲ. ಜೈಲಿಗೆ ಹೋಗತಕ್ಕವರು ಲೋಕದಲ್ಲಿ ನಾನಾ

ಅನ್ಯಾಯಗಳನ್ನು ಮಾಡಿದವರಿದ್ದಾರೆ. ಸಮಾಜದಲ್ಲಿ ಹೀನವಾದ ದುಷ್ಕೃತ್ಯಗಳನ್ನು ಮಾಡಿ ಜೈಲಿಗೆ ಹೋಗತಕ್ಕವರಿದ್ದಾರೆ. ಇನ್ನೊಬ್ಬರ ದುಷ್ಕಾರ್ಯಕ್ಕೆ ಒಳಗಾಗಿ ಜೈಲಿಗೆ ಹೋಗತಕ್ಕವರಿದ್ದಾರೆ. ಲಂಚವನ್ನು ತೆಗೆದುಕೊಂಡು ಜೈಲಿಗೆ ಹೋಗತಕ್ಕವರಿದ್ದಾರೆ. ಇನ್ನು ಕೆಲವರು ತಮ್ಮ ವೈಯಕ್ತಿಕ ದ್ವೇಷ ಸಾಧನೆಯಿಂದ ಜೈಲಿಗೆ ಹೋಗತಕ್ಕವರಿದ್ದಾರೆ. ಹೀಗೆ ನಾನಾ ರೀತಿಯಿಂದ ಜನರು ಜೈಲಿಗೆ ಹೋಗುತ್ತಾರೆ. ಇದು ಅವರವರ ದುಷ್ಕರ್ಮಕ್ಕೆ ಸೇರಿದ ವಿಚಾರ. ಆದರೆ ಹೀಗೆ ಜೈಲಿಗೆ ಬರತಕ್ಕ ವ್ಯಕ್ತಿಗಳಿಗೆ ಅವರ ಮನಸ್ಸಿನ ಮೇಲೆ ಒಂದು ಒಳ್ಳೆಯ ಪರಿಣಾಮವನ್ನುಂಟು ಮಾಡಲು ಅವರಿಗೆ ಅಲ್ಲಿ ಒಂದು ಉತ್ತಮ ರೀತಿಯ ಎಜುಕೇಷನನ್ನು ಕೊಡಬೇಕು. ಅದರಿಂದ ಅವರ ಒಂದು ಸುಧಾರಣೆ ಆಗಬಹುದೆಂದು ನನ್ನ ಭಾವನೆ.

1-30 P.M.

ಇನ್ನು ನಮ್ಮ ಪೋಲೀಸ್ ರಕ್ಷಣೆಯ ಪಡೆಯನ್ನು ಒಂದು ಶಾಂತಿದಳ ರಕ್ಷಣೆಯ ದಳ ಎಂದು ಕರೆದಿದ್ದಾರೆ. ಆದರೆ ಇದು ಸರಿಯಿಲ್ಲ. ಇದನ್ನು ಹಾಗೆ ಶಾಂತಿ ರಕ್ಷಣೆಯ ದಳ ಎಂದು ಕರೆಯುವುದಕ್ಕಿಂತ ಅಶಾಂತಿ ರಕ್ಷಣೆಯ ದಳ ಎಂದಿದ್ದರೆ ಬಹಳ ಚೆನ್ನಾಗಿತ್ತು. ಅಂಥಾ ಒಂದು ತುಚ್ಛವಾದ ರೀತಿಯಲ್ಲಿ ನೀಚವರ್ತನೆಯಿಂದ ಜನರನ್ನು ಇವರು ನೋಡುತ್ತಿದ್ದಾರೆ. ದೇಶದ ಪ್ರಜೆಗಳೇ ಬೇರೆ, ಜನತೆಯೇ ಬೇರೆ, ಪೋಲೀಸಿನವರೇ ಬೇರೆ ಮತ್ತು ಅಧಿಕಾರಿಗಳೇ ಬೇರೆ ಅನ್ನುವ ಭಾವನೆಯಿಂದ ಇವರು ಜನರನ್ನು ನೋಡುತ್ತಿದ್ದಾರೆ. ಇವರು ಜನರಿಗೆ ಈ ದಿವಸ ಯಾವ ಯಾವ ನಮೂನೆಯಲ್ಲಿ ತೊಂದರೆ ಕಿರುಕುಳವನ್ನು ಕೊಡುತ್ತಿದ್ದಾರೆಂಬುದನ್ನು ವರ್ಣನೆ ಮಾಡುವುದು ಬಹಳ ಕಷ್ಟವಾಗಿದೆ. ಇಲ್ಲಿ ನಾವು ಅಧ್ಯಕ್ಷರಲ್ಲಿ ಎಷ್ಟೇ ವಿನಂತಿ ಮಾಡಿಕೊಂಡರೂ ನಮ್ಮ ಅಹವಾಲನ್ನು ಇಲ್ಲಿ ಕೇಳತಕ್ಕವರು ಯಾರೂ ಇಲ್ಲ. ಇದನ್ನು ಅರಿತುಕೊಂಡೇ ಅಲ್ಲಿರತಕ್ಕ ಆ ಪೋಲೀಸಿನವರು ನಮ್ಮನ್ನು ದಂಡಿಸತಕ್ಕವರು ಯಾರೂ ಇಲ್ಲ, ಹಾಗೂ ಒಂದು ವೇಳೆ ಉನ್ನತ ಇಲಾಖೆಯ ಅಧಿಕಾರಿಗಳಿಗೆ ಒಂದು ದೂರನ್ನು ಕೊಟ್ಟರೆ ಅವರು ಹೇಗೂ ನಮ್ಮನ್ನು ಬಿಟ್ಟುಕೊಡುವುದಿಲ್ಲ, ಆ ಉನ್ನತ ಅಧಿಕಾರಿಗಳನ್ನು ಮೇಲೆ ರಾಜ್ಯಮಟ್ಟದಲ್ಲಿರತಕ್ಕ ಮಂತ್ರಿಗಳೂ ಅವರನ್ನು ಬಿಟ್ಟು ಕೊಡುವುದಿಲ್ಲ ಮಾನ್ಯ ಗೃಹ ಮಂತ್ರಿಗಳೂ ಮತ್ತು ಮುಖ್ಯ ಮಂತ್ರಿಗಳೂ ಒಂದು ರೀತಿಯಲ್ಲಿ ಪೋಲೀಸ್ ಪಡೆಯನ್ನು ತಮ್ಮ ಸ್ವಂತ ಪಡೆಯೆಂದು ಭಾವಿಸುತ್ತಾರಾದ್ದರಿಂದ ನಮಗೇನೂ ತೊಂದರೆ ಇರುವುದಿಲ್ಲ ಎಂದು ಅವರಲ್ಲಿ ಈ ಒಂದು ಭಾವನೆ ಬಂದಿದೆ. ಹೀಗಾಗಿ ಅವರು ಈ ದಿವಸ ಸರಿಯಾದ ಖಟ್ಲೆಗಳು ಬಂದರೆ ಅವನ್ನು ಕೈಬಿಡುತ್ತಾರೆ. ಕೆಲಸಕ್ಕೆ ಬಾರದ ವಿಷಯದಲ್ಲಿ ಕೈಹಾಕಿ ಖಟ್ಲೆಗಳನ್ನು ಮಾಡುತ್ತಾರೆ. ಹಾಗೂ ಅವರಿಗೆ ಮನಸ್ಸು ಬಂದರೆ ಕೇಸು ಎಷ್ಟೇ ಒಳ್ಳೆಯದಾಗಿದ್ದರೂ ಮಧ್ಯೆ ಎವಿಡೆನ್ಸ್ ಕೊಡತಕ್ಕ ಕಾಲದಲ್ಲಿ ಅದನ್ನು ಕೆಡಿಸುತ್ತಾರೆ. ಅಂಥ ಸಂದರ್ಭಗಳಲ್ಲಿ ಏಕೆ ಕೇಸನ್ನು ಕೆಡಿಸಿದರು. ಎಂಬುದನ್ನು ಚೆಕ್ ಮಾಡತಕ್ಕವರು ಇಲ್ಲ. ಹೀಗಾಗಿ ಈ ಪೋಲೀಸ್ ಇಲಾಖೆಯಲ್ಲಿ ನಡೆಯುತ್ತಿರುವ ಅನ್ಯಾಯಗಳು ಎಲ್ಲೆ ಮೀರಿರುತ್ತವೆ. ಇಂಥಾ ಅನ್ಯಾಯಗಳನ್ನು ಇವರು ಸರ್ವೀಸಿನಲ್ಲಿದ್ದಾಗ ಮಾಡುತ್ತಿದ್ದುದರಿಂದಲೇ ಇವರು ಅಲ್ಲಿಂದ ರಿಟೈರಾದ ಮೇಲೆ ಇವರಿಗೆ ಖಾಯಿಲೆಗಳಿವೆಯಲ್ಲ ಅವಕ್ಕೆ ಯಾವ ಮದ್ದನ್ನು ಕೊಟ್ಟರೂ ಆ ರೋಗಕ್ಕೆ ಹಿಡಿಯುವುದಿಲ್ಲ. ಅಂಥ ರೋಗಗಳು ಅವರಿಗೆ ಬರುತ್ತವೆ. ಒಟ್ಟಿನಲ್ಲಿ ನಾನು ಮುಖ್ಯವಾಗಿ ಹೇಳತಕ್ಕದ್ದು ಇಷ್ಟೇ. ಪೋಲೀಸಿನವರು ಜನರ ಮೇಲೆ ಕೈಮಾಡತಕ್ಕದ್ದು ಮತ್ತು ಅವರನ್ನು ತುಚ್ಛರೀತಿಯಲ್ಲಿ ಅವಹೇಳನ ಮಾಡತಕ್ಕದ್ದನ್ನು ಖಂಡಿಸುತ್ತೇನೆ ಇನ್ನು ಉದ್ದೇಶಪಟ್ಟೇ ಕೆಲವು ಕೇಸುಗಳಲ್ಲಿ ಅದು ಎಷ್ಟೇ ನ್ಯಾಯವಾದ ಕೇಸಾಗಿದ್ದರೂ ಕೋರ್ಟಿಗೆ ಕೊಟ್ಟ ಛಾರ್ಜ್‌ಷೀಟನ್ನು ಕೆಲವು ವ್ಯಕ್ತಿಗಳ ಪ್ರಭಾವಕ್ಕೆ ಒಳಗಾಗಿ ಅವುಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾರೆ. ಇಂಥಾದನ್ನು ಕೇಳತಕ್ಕವರೇ ಇಲ್ಲ. ಹಾಗೆ ಒಂದು ವೇಳೆ ಆ ಛಾರ್ಜ್‌ಷೀಟನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡದಿದ್ದರೆ ಅದರಲ್ಲಿ ಸಾಕ್ಷ್ಯವನ್ನು ಕೊಡತಕ್ಕ ಕಾಲದಲ್ಲಿ ಆ ಕೇಸನ್ನು ಹಾಳುಮಾಡಿಬಿಡುತ್ತಾರೆ. ಹಾಗೆ ಆ ಕೇಸ್ ಏತಕ್ಕೆ ಹಾಳಾಯಿತು ಎಂದು ಕೇಳತಕ್ಕವರಿಲ್ಲ. ಈ ದಿವಸ ಒಬ್ಬ ಅಕ್ಯೂಜ್ಡ್‌ನನ್ನು ಅರೆಸ್ಟ್ ಮಾಡಿದರೆ ಆತನನ್ನು ಕಾನೂನು ಪ್ರಕಾರ 24 ಗಂಟೆಗಳೊಳಗಾಗಿ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಬೇಕು, ರಿಮ್ಯಾಂಡನ್ನು ಪಡೆಯಬೇಕು, ಆದರೆ ಪೋಲೀಸರು ಹಾಗೆ ಮಾಡುತ್ತಿಲ್ಲ. ರಿಮ್ಯಾಂಡ್ ಇಲ್ಲದೆಯೇ ಪೋಲೀಸ್ ಕಸ್ಟಡಿಯಲ್ಲಿ ವಾರಗಟ್ಟಲೆ ಆ ಅಕ್ಯೂಜ್ಡ್ ಪರ್ಸನ್ಸ್‌ನ್ನು ಇಟ್ಟುಕೊಳ್ಳುತ್ತಿದ್ದಾರೆ. ಇದನ್ನೆಲ್ಲಾ ನೋಡಿದರೆ ಈ ಪೋಲೀಸ್ ಇಲಾಖೆಯಲ್ಲಿ ನಡೆಯತಕ್ಕ ಅನಾಚಾರ ಅತ್ಯಾಚಾರಗಳನ್ನು ಕೇಳತಕ್ಕವರೇ ಯಾರೂ ಇಲ್ಲವೇನೋ ಎಂದೆನಿಸುತ್ತಿದೆ. ಇದೇ ಸಭೆಯಲ್ಲಿ ಈಗಾಗಲೇ ಈ ಪೋಲೀಸರ ಅತ್ಯಾಚಾರಗಳ ಬಗ್ಗೆ ಆ ಮಧುಗಿರಿ ಪ್ರಕರಣವಾಯಿತು, ನಮ್ಮ ಬೈಂದೂರಿನಲ್ಲಿ ವಿಠಲದಾಸ ಸೆಟ್ಟರು ಹೇಳಿದ ಪ್ರಕರಣವಾಯಿತು, ಆ ವೈಯಾಲಿಕಾವಲಿನ ಪ್ರಕರಣವಾಯಿತು. ಇನ್ನು ತಾ|| 10ನೇ ಏಪ್ರಿಲ್

(ಶ್ರೀ ಕೆ. ರತ್ನಕುಮಾರಶೆಟ್ಟಿ)

68 ರಲ್ಲಿ ಪೂಜೆ ಮಾಡುವುದಕ್ಕೆ ಹೋಗುತ್ತಿದ್ದ ಹರಿಜನರನ್ನು ಹೊಡೆದಿರತಕ್ಕ ಪ್ರಕರಣ ಇದು ಒಂದು ಹೊಸದು. ಇದರ ಜೊತೆಗೆ ಪತ್ರಿಕೆಗಳಲ್ಲಿ ವರದಿಯಾಗಿರತಕ್ಕ ಪ್ರಕಾರ ಆ ಹೊಸೂರಿನಲ್ಲಿ ಒಬ್ಬ ವರ್ತಕನಿಂದ ನಮ್ಮ ಮೈಸೂರು ರಾಜ್ಯದ ಒಬ್ಬ ಸಬ್‌ಇನ್‌ಸ್ಪೆಕ್ಟರ್ ಮತ್ತು ಇಲ್ಲಿಯ ಒಬ್ಬ ಮ್ಯಾಜಿಸ್ಟ್ರೇಟರೂ ಮತ್ತು ಒಬ್ಬ ಅಡ್ವೋಕೇಟ್ ಇಷ್ಟು ಜನರೂ ಸೇರಿಕೊಂಡು ಭಾರಿ ಮೊತ್ತದ ಡೈಮಂಡುಗಳನ್ನು ಕಿತ್ತುಕೊಂಡಿರತಕ್ಕ ಪ್ರಸಂಗ ಒಂದು. ಇವೆಲ್ಲಾ ಹೊಸ ಪ್ರಕರಣಗಳು. ಆ ಕೃತ್ಯ ಇಲ್ಲಿ ನಡೆದಿದ್ದರೂ ಇವರ ಬಗ್ಗೆ ಅತ ಕಂಪ್ಲೇಂಟನ್ನು ಕೊಟ್ಟಿರುವುದು ಮದ್ರಾಸಿನಲ್ಲಿ ಅಂದರೆ ಮೈಸೂರಿನಲ್ಲಿ ಆ ಕಂಪ್ಲೇಂಟನ್ನು ಕೊಟ್ಟರೆ ಅದು ಸಾರ್ಥಕವಾಗುವುದಿಲ್ಲ ಎಂಬ ಭಾವನೆಯಿಂದ ಆ ವರ್ತಕನು ಹಾಗೆ ಮದ್ರಾಸಿನಲ್ಲಿ ಕಂಪ್ಲೇಂಟ್ ಮಾಡಬೇಕಾಗಿದ್ದರೆ ನಮ್ಮ ಮೈಸೂರಿನ ಪೋಲೀಸ್ ಬೆಲೆ ಏನಾಯಿತು ಅನ್ನುವುದನ್ನು ನಾನು ಹೆಚ್ಚಿಗೆ ವರ್ಣನೆ ಮಾಡುವುದು ಬೇಕಾಗಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಪೋಲೀಸ್ ಇಲಾಖೇಲಿ ಎಷ್ಟರಮಟ್ಟಿಗೆ ರಾಜಕೀಯ ನಡೆಯುತ್ತಿದೆ ಎನ್ನುವುದು ನಮ್ಮ ಮಂತ್ರಿಗಳಿಗೂ ಗೊತ್ತಿದೆ. ಇದೇ ವಿಚಾರದಲ್ಲಿ ಮೊನ್ನೆ ಇಂಡಿಯನ್ ಎಕ್ಸ್‌ಪ್ರೆಸ್ ಪೇಪರಿನಲ್ಲಿ ಒಬ್ಬ ಆಸ್ಟ್ರೇಲಿಯನ್ ಲೇಡಿ ಏನು ಹೇಳಿದ್ದಾಳೆಂದರೆ ಇಲ್ಲಿಯ ಅಂದರೆ ಮೈಸೂರ್ ಪೋಲೀಸಿನಲ್ಲಿರತಕ್ಕ ಎಫಿಷಿಯೆನ್ಸಿ ಎಷ್ಟರಮಟ್ಟಿಗೆ ಎಂದರೆ ಇಲ್ಲಿ ಟ್ರಾಫಿಕ ಕಂಟ್ರೋಲ್ ಮಾಡತಕ್ಕವರು ಅವರು ಅಲ್ಲೇನು ಡ್ಯೂಟಿ ಮಾಡುತ್ತಿದ್ದಾರೆಂಬುದೇ ಗೊತ್ತಾಗುವುದಿಲ್ಲ, ಅವರು ಅಲ್ಲಿ ನಿಂತು ಸುಮ್ಮನೆ ಒಂದು ರೀತಿಯ ಡ್ಯಾನ್ಸನ್ನು ಮಾಡುವುದಕ್ಕೆ ಇರುತ್ತಾರೇ ವಿನಾ ಅವರಿಗೆ ಸರಿಯಾದ ರೀತಿಯಲ್ಲಿ ಟ್ರಾಫಿಕ್ಕನ್ನು ಕಂಟ್ರೋಲ್ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದಾಳೆ. ರಾತ್ರಿ ವೇಳೆಯಲ್ಲಿ ಪ್ರಯಾಣ ಮಾಡತಕ್ಕವರಿಗೆ ಎಲ್ಲಿ ಸರ್ಕಲ್ ಇದೆ, ಎಲ್ಲಿ ಪೋಲೀಸ್‌ನವರು ನಿಂತಿದ್ದಾರೆ ಎನ್ನುವುದೇ ಗೊತ್ತಾಗುವುದಿಲ್ಲ. ಇಲ್ಲಿರತಕ್ಕ ಟ್ರಾಫಿಕ್ ಪೋಲೀಸಿನವರಿಗೆ ಸರಿಯಾಗಿ ಟ್ರಾಫಿಕ್ ಕಂಟ್ರೋಲ್ ಮಾಡತಕ್ಕ ವಿಚಾರ ಅವರಿಗೆ ತಿಳಿಯದು ಎನ್ನುವುದು ನಿರ್ವಿವಾದವಾದದ್ದು. ಇನ್ನು ಈ ಬೆಂಗಳೂರು ನಗರಕ್ಕೆ ಸಂಸಾರಿಗಳು ಯಾರು ಬಂದು ಇಲ್ಲಿಯ ಹೋಟಲುಗಳಲ್ಲಿ ಉಳಿಯುವಂತಿಲ್ಲ. ರಾತ್ರಿ ಕಾಲದಲ್ಲಿ ಅದರಲ್ಲೂ ಮಧ್ಯರಾತ್ರಿಯಲ್ಲಿ ಪೋಲೀಸಿನವರು ಹೋಟಲುಗಳಲ್ಲಿ ಬಂದು ಫ್ಯಾಮಿಲಿ ಪರ್ಸನ್ಸ್‌ಗೆ ಬಹಳ ಕಿರುಕುಳ ಕೊಡುತ್ತಾರೆ. ಅವರು ಅವರ ಸಂಸಾರದೊಂದಿಗೆ ಅಲ್ಲಿ ಇದ್ದಾಗ್ಗೂ ಯಾರನ್ನೋ ವ್ಯಭಿಚಾರ ಮಾಡುವುದಕ್ಕೆ ಕರೆದುಕೊಂಡು ಬಂದಿದ್ದೀರಿ, ಬನ್ನಿ ಪೋಲೀಸ್ ಸ್ಟೇಷನಿಗೆ ಎಂದು ಹೇಳುತ್ತಿದ್ದಾರೆ. ಆ ಅವ್ಯಾಳದ ಹೊತ್ತಿನಲ್ಲಿ ಪೋಲೀಸ್ ಸ್ಟೇಷನ್ನಿಗೆ ಹೋಗುವುದೆಂದರೇನು ? ಇಷ್ಟೆಲ್ಲವನ್ನೂ ಆ ಪೋಲೀಸಿನವರು ತಮ್ಮ ಒಂದು ಮಾಮೂಲಿಗಾಗಿ ಜನರಿಗೆ ಕಿರುಕುಳವನ್ನು ಕೊಡುತ್ತಿದ್ದಾರೆ. ಇನ್ನು ಮುಂದೆ ಇಂಥ ಪೋಲೀಸ್ ಅತ್ಯಾಚಾರಗಳನ್ನು ತಡೆಗಟ್ಟಲು ಯಾವ ಪೋಲೀಸ್ ಅಧಿಕಾರಿಯೇ ಆಗಲಿ ಹಾಗೆ ರಾತ್ರಿಕಾಲದಲ್ಲಿ ಹೋಟಲುಗಳಲ್ಲಿ ನುಗ್ಗಿ ಹೀಗೆಲ್ಲಾ ಸರ್ಚ್ ಮಾಡಬೇಕಾಗಿದ್ದರೆ ಅವರು ಮುಂಗಡವಾಗಿ ಒಬ್ಬ ಮ್ಯಾಜಿಸ್ಟ್ರೇಟರಿಂದ ಪರ್ಮಿಷನ್ ಪಡೆಯದೆ ನುಗ್ಗುವುದಕ್ಕೆ ಅವಕಾಶ ಕೊಡದಂತೆ ಕೊಡಬಾರದೆಂದು ಹೇಳುತ್ತೇನೆ. ಇಂಥ ಒಂದು ನಿರ್ಬಂಧವನ್ನು ಹಾಕದಿದ್ದರೆ ಸಾರ್ವಜನಿಕರಿಗೆ ಬಹಳ ಹಾನಿಯಾಗುತ್ತದೆ ಮತ್ತು ತೊಂದರೆಗಳಾಗುತ್ತವೆ. ನನಗೆ ಅನಿಸುತ್ತಿದೆ ಮುಖ್ಯವಾಗಿ ಈ ಪೋಲೀಸ್ ಇಲಾಖೆಯಲ್ಲಿ ನಡೆಯುತ್ತಿರುವ ಅನ್ಯಾಯಗಳೂ ಅನಾಚಾರಗಳೂ ಕಡಮೆಯಾಗಬೇಕಾದರೆ ಅವರಿಗೆಲ್ಲಾ ಒಂದು ಟ್ರೈನಿಂಗನ್ನು ಕೊಡತಕ್ಕ ಕಾಲದಲ್ಲಿ ಅವರಿಗೆ ಧರ್ಮಶಾಸ್ತ್ರವನ್ನು ಬೋಧಿಸುವುದಕ್ಕೆ ಒಂದು ಕಡ್ಡಾಯವಾದ ನಿಯಮವನ್ನು ಹಾಕುವುದು ಒಳ್ಳೆಯದೆಂದು ನನಗೆ ಅನ್ನಿಸುತ್ತಿದೆ. ಆದರೆ ಈ ದಿವಸ ಗಾಂಧಿಭಕ್ತರಾಗಿರತಕ್ಕವರೆಲ್ಲಾ ಗಾಂಧಿಯಂತೆ ಧರ್ಮವನ್ನು ಅನುಸರಿಸುತ್ತಿದ್ದಾರೆಯೋ ಎಂದು ಕೇಳಬಹುದು. ಆದರೆ ನನಗೆ ಇದನ್ನು ಅವರಿಗೆ ಕಡ್ಡಾಯ ಮಾಡಿ ಅದನ್ನು ಅವರಿಗೆ ಒಂದು ಎಗ್ಸಾಮಿನೇಷನ್ ಮಾಡಬೇಕೆಂದು ಹೇಳುತ್ತೇನೆ. ಮುಖ್ಯವಾದ ಕೇಸುಗಳು ಬಂದಾಗ ಇವರು ಖಟ್ಲೆ ಹಾಕುವುದಿಲ್ಲ. ಇಂಥಾದ್ದನ್ನು ತಡೆಗಟ್ಟಲು ನನ್ನ ಒಂದು ಸಲಹೆ ಏನೆಂದರೆ ಪ್ರತಿಯೊಂದು ಜಿಲ್ಲೆಗೂ ಒಂದು ಸಮಿತಿಯನ್ನು ಮಾಡಬೇಕೆಂದೂ ಮತ್ತು ಆ ಸಮಿತಿಯಲ್ಲಿ ಆ ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟರೂ ಅಲ್ಲಿರತಕ್ಕ ಬಾರ್ ಅಸೋಷಿಯೇಷನ್ನಿನ ಒಬ್ಬ ಸದಸ್ಯರು, ಮತ್ತು ಆ ಜಿಲ್ಲೆಗೆ ಸಂಬಂಧಪಟ್ಟ ಎಲ್ಲಾ ಎಂ.ಎಲ್.ಎ. ಗಳೂ ಎಲ್ಲಾ ಎಂ. ಎಲ್. ಸಿ. ಗಳೂ ಮತ್ತು ಆ ಪ್ರದೇಶದ ಎಂ. ಪಿ. ಇಷ್ಟು ಜನರು ಅದರಲ್ಲಿ ಸದಸ್ಯರಿರಬೇಕು ಹೀಗೆ ಒಂದು ಸಮಿತಿಯನ್ನು ಮಾಡಿ ಇಂಥ ಅಕ್ರಮಗಳು ಅಲ್ಲಿ ನಡೆದಾಗ ವಿಚಾರಣೆ ಮಾಡಿ ಅನಂತರ ಆ ಬಗ್ಗೆ ಅವರು ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸುವಂತೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಪೋಲೀಸಿನವರು ಕೋರ್ಟಿಗೆ ಎಫ್.ಐ. ಆರನ್ನು ಕೊಟ್ಟ ಬಳಿಕ ಮತ್ತು ಅಕ್ಯೂಸ್ಡ್ ಪರ್ಸನನ್ನು ಕೋರ್ಟಿನ ಮುಂದೆ ಇವರು ಹಾಜರ್ಮಾಡಿದ ಮೇಲೆ ಆ ಅಕ್ಯೂಜ್ಡ್ ಪರ್ಸನ್ನಿಗೆ ಜಾಮೀನು ಮೇಲೆ

ಬಿಡುಗಡೆ ಹೊಂದುವುದಕ್ಕೆ ಅವಕಾಶ ಇರಬೇಕು. ಇದಾದ ನಂತರ ಇನ್ನು ಪೋಲೀಸಿನವರು ಕೆಲವರ ಮೇಲೆ ಅಪರಾಧಗಳನ್ನು ಹೊರಿಸಲು ಕೆಲವರನ್ನು ಕೋರ್ಟಿಗೆ ಅಕ್ಯೂಸ್ಡ್ ಪರ್ಸನ್ಸ್ ಎಂದು ಯಾರನ್ನು ತೆಗೆದುಕೊಂಡು ಹೋಗಿ ಅಲ್ಲಿ ಅವರ ಬಗ್ಗೆ ಒಂದು ರಿಮ್ಯಾಂಡನ್ನು ಪಡೆಯುತ್ತಾರೋ ಆಗ ಆ ಅಕ್ಯೂಸ್ಡ್ ಪರ್ಸನ್ ಮ್ಯಾಜಿಸ್ಟ್ರೇಟರ ಕಸ್ಟಡಿಗೆ ಸೇರಿದವನಾಗುತ್ತಾನೆ. ಅಂಥವನ ಬಗ್ಗೆ ಬತ್ತೆ ಇನ್ನೂ ಸಾಬೀತಾಗಿರುವುದಿಲ್ಲ. ಹಾಗಿದ್ದಾಗ ಅಂಥವರನ್ನು ಖೈದಿಗಳ ಜೊತೆಯಲ್ಲಿ ಒಟ್ಟಿಗೆ ಸೇರಿಸತಕ್ಕದ್ದು ಬಹಳ ಖಂಡನೀಯವಾದದ್ದು. ಇವರಿಬ್ಬರನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಇಡುವುದಕ್ಕೆ ಅವಕಾಶ ಒದಗಿಸಬೇಕೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ಇವೊತ್ತು ಈ ಸಭೆಯ ಮುಂದೆ ಪೋಲೀಸು, ಜೈಲು ಮತ್ತು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಈ 3 ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆಗಳು ಇವೆ. ಈ ಮೂರು ಇಲಾಖೆಗಳ ಬಗ್ಗೆ 5 ನಿಮಿಷಗಳಲ್ಲಿ ಮಾತನಾಡಿ ಮುಗಿಸುವುದು ಕಷ್ಟ. ಅದ್ದರಿಂದ ಕೆಲವು ಪಾಯಿಂಟ್‌ಗಳ ಮೇಲೆ ಯಾವುದು ಮುಖ್ಯವೋ ಅಂಥಾದ್ದನ್ನು ಮಾತ್ರ ಹೇಳುತ್ತೇನೆ. ಮೊಟ್ಟ ಮೊದಲನೆಯದಾಗಿ ಜೈಲಿನ ಬಗ್ಗೆ ಹೇಳುವುದಾದರೆ, ಈಗಾಗಲೇ ನನ್ನ ಸ್ನೇಹಿತರಿಬ್ಬರು ಈ ಜೈಲಿನ ಬಗ್ಗೆ ಎಲ್ಲಾ ವಿಚಾರಗಳನ್ನೂ ಮಾತನಾಡಿದ್ದಾರೆ. ಈ ಮೂರು ಇಲಾಖೆಗಳ ಬಗ್ಗೆ ನನಗೆ ನಿಕಟ ಸಂಬಂಧ ಇದೆ. ನಾನು ಅನೇಕ ಸಾರಿ ಜೈಲಿಗೆ ಹೋಗುತ್ತೇನೆ. ಪೋಲೀಸಿನವರಿಂದ ಏಟನ್ನು ತಿನ್ನುತ್ತಿದ್ದೇನೆ. ಆ ಮೇಲೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ನಿಗೂ ನಮಗೂ ಸಂಬಂಧ ಬಿಟ್ಟೇ ಇಲ್ಲ. ಜೈಲಿನ ಬಗ್ಗೆ ಹೇಳುವುದಾದರೆ ಶ್ರೀ ಅಗ್ನಿಹೋತ್ರಿಯವರು ಮತ್ತು ಶ್ರೀಮತಿ ನಾಗರತ್ನಮ್ಮನವರು ಜೈಲ್ ರಿಫಾರಮ್ಸ್ ಬೇಡ ಎಂದು ಹೇಳಿದರು. ಅವರು ಇತ್ತೀಚೆಗೆ ಹೊಸದಾಗಿ ಜೈಲಿಗೆ ಹೋಗಿಲ್ಲ ಎಂದು ಕಾಣುತ್ತದೆ. ಶ್ರೀಮತಿ ನಾಗರತ್ನಮ್ಮನವರಿಗೆ ಈಗ ಸೆಂಟ್ರಲ್ ಜೈಲಿನಲ್ಲಿ ಯಾವ ರೀತಿ ಇದೆಯೆಂಬುದೂ ಸಹ ಅವರಿಗೆ ಗೊತ್ತಿಲ್ಲ. ಈಗ ಅಸೆಂಬ್ಲಿಯಲ್ಲಿರತಕ್ಕ ಅನೇಕ ಜನ ಕಾಂಗ್ರೆಸ್ಸಿನವರು ಯಾವಾಗ ಜೈಲಿಗೆ ಹೋಗಿದ್ದರೋ ಗೊತ್ತಿಲ್ಲ. ಆ ಹೊತ್ತಿಗೂ ಈ ಹೊತ್ತಿಗೂ ಬದಲಾವಣೆಯಾಗಿದೆ. ಈಗ ಜೈಲುಗಳಲ್ಲಿ ಅದರಲ್ಲಿಯೂ ಸೆಂಟ್ರಲ್ ಜೈಲಿನಲ್ಲಿ ಬಹಳ ಮೋಸ ನಡೆಯುತ್ತಿದೆ. ಅಲ್ಲಿ ಇವೊತ್ತು ಮಾನವೀಯತೆಯ ದೃಷ್ಟಿಯೇ ಇಲ್ಲ. ಅದ್ದರಿಂದ ಈ ಜೈಲುಗಳ ಬಗ್ಗೆ ಸರ್ಕಾರದವರು ಗಮನ ಕೊಟ್ಟು ಅವುಗಳನ್ನು ಸುಧಾರಣೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈಗ ಈ ಜೈಲುಗಳ ಬಗ್ಗೆ ಸ್ಟ್ಯಾಂಡಿಂಗ್ ಅಡ್ವೈಸರಿ ಬೋರ್ಡ್ ಎಂದು ಇದೆ. ಅದರಲ್ಲಿ ಎಂ.ಎಲ್.ಎ. ಮತ್ತು ಎಂ.ಎಲ್.ಸಿ.ಗಳು ಇದ್ದಾರೆ. ಈ ಜೈಲಿನ ವಿಷಯದಲ್ಲಿ ಕೆಲವು ಸುಧಾರಣೆಗಳನ್ನು ಮಾಡತಕ್ಕ ವಿಷಯದಲ್ಲಿ ಮತ್ತು ಕೆಲವು ಖೈದಿಗಳನ್ನು ಬಿಡುಗಡೆ ಮಾಡತಕ್ಕ ವಿಷಯದಲ್ಲಿ ಸ್ಟ್ಯಾಂಡಿಂಗ್ ಅಡ್ವೈಸರಿ ಬೋರ್ಡಿನವರು ತೀರ್ಮಾನ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದರೂ ಕೂಡ ಅವುಗಳನ್ನು ಒಪ್ಪಿಕೊಳ್ಳುವುದಕ್ಕೆ ಸರ್ಕಾರದವರು ತಯಾರಾಗಿಲ್ಲ. ಅವು ಅಲ್ಲಿಯೇ ಕೊಳೆಯುತ್ತಿವೆ.

ಆಮೇಲೆ ಜೈಲುಗಳಿಗೆ ಒಂದು ಯೂನಿಫಾರಂ ರೂಲ್ಸ್ ಬೇಕು. ಏತಕ್ಕೆಂದರೆ ಗುಲ್ಬರ್ಗದಲ್ಲಿ ಒಂದು ರೀತಿ, ಬಳ್ಳಾರಿಯಲ್ಲಿ ಒಂದು ರೀತಿ, ಬೆಂಗಳೂರಿನಲ್ಲಿ ಒಂದು ರೀತಿ, ಇರುವುದು ಸರಿಯಲ್ಲ. ಎಲ್ಲಾ ಕಡೆಗಳಲ್ಲೂ ಒಂದೇ ರೀತಿಯಲ್ಲಿ ರೂಲ್ಸ್ ಯೂನಿಫಾರಂ ಆಗಿರಬೇಕು. ಆಮೇಲೆ ಟ್ರೀಟ್‌ಮೆಂಟ್ ಆಫ್ ಪ್ರಿಜನರ್ಸ್ ಜೈಲುಗಳಲ್ಲಿ ಸರಿಯಾಗಿಲ್ಲ. ಅದ್ದರಿಂದ ಜೈಲುಗಳಲ್ಲಿ ಖೈದಿಗಳನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕು. ಜೈಲಿನಲ್ಲಿರತಕ್ಕ ಖೈದಿಗಳು ಕೆಲಸ ಮಾಡಿದಾಗ ಅವರಿಗೆ ಕೊಡತಕ್ಕ ಕೂಲಿ ಏನಿದೆ ಅದು ಒಂದಕ್ಕೊಂದಕ್ಕೆ ತಾರತಮ್ಯ ಇದೆ. ಕೆಲವು ಕಡೆ 6 ಅಣೆ 8 ಆಣೆ ಕೂಲಿಯನ್ನು ಕೊಡುತ್ತಿದ್ದಾರೆ. ಗುಲ್ಬರ್ಗಾದಲ್ಲಿ 12 ಅಣೆ ಕೊಡುತ್ತಿದ್ದಾರೆ. ಅದ್ದರಿಂದ 12 ಅಣೆ ಕೂಲಿಯನ್ನು ಕೊಡುವುದು ತೀರಾ ಕಡಿಮೆ. ಈ ದೃಷ್ಟಿಯಿಂದ ಖೈದಿಗಳು ಕೆಲಸ ಮಾಡುವಾಗ ಕೊಡತಕ್ಕ ಕೂಲಿ ಏನಿದೆ ಅದನ್ನು ಎಲ್ಲಾ ಕಡೆಗಳಲ್ಲಿಯೂ ಎರಡು ರೂಪಾಯಿ ಮಾಡಬೇಕು. ಹಬ್ಬ ಹರಿದಿನಗಳಲ್ಲಿ ಜೈಲಿನಲ್ಲಿರತಕ್ಕ ಖೈದಿಗಳಿಗೆ ಸ್ವೀಟು ಹಂಚುವುದಕ್ಕಾಗಿ ಒಬ್ಬೊಬ್ಬರಿಗೆ 4 ಅಣೆ ಕೊಡುತ್ತಾರೆ. ಇದು ಸಾಕಾಗುವುದಿಲ್ಲ. ಇನ್ನೂ ಸ್ವಲ್ಪ ಜಾಸ್ತಿ ಕೊಡಬೇಕು. ಇದರ ಸುಧಾರಣೆಯನ್ನು ಮಾಡತಕ್ಕದ್ದು ಬಹಳ ಮುಖ್ಯವಾದದ್ದು. ಖೈದಿಗಳಿಗೆ ರಿಮಿಷನ್ ಕೊಡತಕ್ಕ ವಿಷಯದಲ್ಲಿ ಕೇರಳದಲ್ಲಿ 5 ವರ್ಷ ಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಒಂದೂವರೆ ವರ್ಷ ರಿಮಿಷನ್ ಕೊಡುತ್ತಿದ್ದಾರೆ. ಇದು ಸರಿಯಲ್ಲ. ಉತ್ತಮ ರೀತಿಯಲ್ಲಿ ವರ್ತನೆ ಮಾಡತಕ್ಕ ಖೈದಿಗಳಿಗೆ ಶಿಕ್ಷೆಯನ್ನು ಇಳಿಸಬೇಕು. ಈಗ ರಾಷ್ಟ್ರಾದ್ಯಂತ ಬಸವೇಶ್ವರರ 8 ನೇ ಶತಮಾನದ ಜಯಂತಿಯನ್ನು ಆಚರಿಸುತ್ತಿದ್ದಾರೆ. ಖೈದಿಗಳಿಗೆ ಸರ್ಕಾರದವರು ರಿಮಿಷನ್ ಕೊಡುತ್ತಿದ್ದಾರೆಯೇ? ಅದಕ್ಕೋಸ್ಕರ ಮಾನವೀಯತೆಯ ದೃಷ್ಟಿಯಿಂದ ಉತ್ತಮ ರೀತಿಯಲ್ಲಿ ವರ್ತನೆ ಮಾಡತಕ್ಕ ಖೈದಿಗಳಿಗೆ ರಿಮಿಷನ್ ಕೊಡಬೇಕು, ಶಿಕ್ಷೆಯನ್ನು ಇಳಿಸಬೇಕು ಎಂದು ನಾನು ಹೇಳುತ್ತೇನೆ.

(ಶ್ರೀ ಎಂ. ಎಸ್. ಕೃಷ್ಣನ್)

ಜೈಲುಗಳಲ್ಲಿ ವಾರ್ಡರುಗಳಿಗೆ ಯೂನಿಫಾರಂ ಕೊಡುವ ವಿಷಯದಲ್ಲಿ ಹೇಳುವುದಾದರೆ ಕಾಕಿ ಯೂನಿಫಾರಂ ಆಗಲೀ ಖಾದಿ ಯೂನಿಫಾರಂ ಆಗಲೀ ಕೊಡತಕ್ಕದ್ದು ಸರಿಯಲ್ಲ. ಅವರಿಗೆ ಒಳ್ಳೆಯ ಯೂನಿಫಾರಂ ಕೊಡುವ ವ್ಯವಸ್ಥೆಯನ್ನು ಮಾಡಬೇಕು.

ಇನ್ನು ಪೋಲೀಸ್ ಖಾತೆಯ ವಿಷಯದಲ್ಲಿ ಏನು ಹೇಳುವುದೋ ಗೊತ್ತಿಲ್ಲ. ನನ್ನ ಸ್ನೇಹಿತ ರಾದ ಶ್ರೀ ವಾಟಾಳ್ ನಾಗರಾಜ್ ಅವರು ಈ ವಿಷಯದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಪೋಲೀಸಿನವರ ಮನೋಭಾವ ಮತ್ತು ಧೋರಣೆ ಬದಲಾವಣೆಯಾಗದೇ ಹೋದರೆ ಇವೊತ್ತು ಅನ್ಯಾಯ ಮತ್ತು ಅಕ್ರಮಗಳನ್ನು ಪೋಲೀಸರಿಂದ ತಡೆಯುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ ಅನ್ಯಾಯಗಳು ಮಿತಿಮೀರಿ ನಡೆಯುತ್ತವೆ. ಈ ಇಲಾಖೆಯಲ್ಲಿರತಕ್ಕ ಕೆಲವು ಲೋಪದೋಷಗಳನ್ನು ಸರಿಪಡಿಸಬೇಕೆಂದು ನಾನು ಶ್ರೀಮಾನ್ ರಾಮರಾಯರಿಗೂ ಹೇಳಿದೆ ಆದರೆ ಅವರು ಅದಕ್ಕೆ ಗಮನ ಕೊಡಲಿಲ್ಲ. ಒಟ್ಟಿನಲ್ಲಿ ಪೋಲೀಸಿನವರ ಹೃದಯ ಪರಿವರ್ತನೆಯಾಗಬೇಕು. ಪೋಲೀಸಿನವರು ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕು. ಲಾ ಅಂಡ್ ಆರ್ಡರ್ ಬಗ್ಗೆ ಹೇಳಬೇಕಾದರೆ, ಸ್ಟ್ಯಾಟಿಸ್ಟಿಕ್ಸ್ ಕೊಡಬೇಕಾಗಿದ್ದರೆ ನನ್ನ ಹತ್ತಿರ ಕೆಲವು ಸ್ಟ್ಯಾಟಿಸ್ಟಿಕ್ಸ್‌ಗಳು ಇವೆ. 1961 ರಿಂದ 1966 ರವರೆಗೂ ನಡೆದಂತಹ ಕೊಲೆಗಳು, ಡಕಾಯಿತಿಗಳು, ಹೌಸ್ ಬ್ರೇಕಿಂಗ್‌ಗಳು, ಕಳ್ಳತನಗಳು, ದರೋಡೆಗಳು ಜಾಸ್ತಿಯಾಗುತ್ತಿವೆಯೇ ವಿನಾ ಕಡಿಮೆಯಾಗುವುದು ಕಾಣಲಿಲ್ಲ. ಕ್ರೈಮ್ಸ್ ಲಾ ಅಂಡ್ ಆರ್ಡರ್ ಬಗ್ಗೆ ಹೇಳುವುದಾದರೆ ಬಹಳ ಮೋಸ ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ, ಅದರಲ್ಲೂ ಬೆಂಗಳೂರಿನಲ್ಲಿ ಎಷ್ಟೋ ಪ್ರಕರಣಗಳು ನಡೆದಿವೆ. ಬೇರೆ ಕಡೆ ನಡೆದಿರತಕ್ಕ ಪ್ರಕರಣ ಗಳು ಹಾಗಿರಲಿ, ಬೆಂಗಳೂರಿನಲ್ಲಿ ವೈಯ್ಯಾಲಿಕಾವಲಿನಲ್ಲಿ ನಡೆದಿರತಕ್ಕ ಒಂದೇ ನಿದರ್ಶನ ಸಾಕು. ಶ್ರೀಮಾನ್ ಆರ್. ಎಂ. ಪಾಟೀಲರು ಈ ಪೋಲೀಸು ಖಾತೆಯನ್ನು ವಹಿಸಿಕೊಂಡ ಮೇಲೆ ಒಂದು ಹೊಸ ಧೋರಣೆಯನ್ನು ತಾಳಿರುವ ಹಾಗೆ ಕಾಣುತ್ತದೆ. ನಾನು ಹೇಳುವುದೇನೆಂದರೆ ಕಾರ್ಮಿಕರ ವಿಚಾರಕ್ಕೆ ಪೋಲೀಸಿನವರ ಧಾಳಿ ಆಗಬಾರದು. ಯಾವುದಾದರೂ ಬೇಡಿಕೆಗಳಿಗೋಸ್ಕರ ಕಾರ್ಮಿಕರು ಮೆರವಣಿಗೆ ಹೊರಟರೆ ಕಾರ್ಮಿಕರಿಗಿಂತ ಪೋಲೀಸಿನವರೇ ಜಾಸ್ತಿ ಇರುತ್ತಾರೆ.

ಒಬ್ಬ ಮಾನ್ಯ ಸದಸ್ಯರು.—ಅದು ಗಾರ್ಡ್ ಆಫ್ ಆನರ್.

ಶ್ರೀ ಎಂ. ಎಸ್. ಕೃಷ್ಣನ್.—ಅದು ಕಾಂಗ್ರೆಸ್ಸಿನವರಿಗೆ, ನಮಗಲ್ಲ. ಮೊನ್ನೆ ಭಾರತ್ ಎಲೆಕ್ಟ್ರಾನಿಕ್ ಫ್ಯಾಕ್ಟರಿಯ ಒಬ್ಬ ಕೆಲಸಗಾರನನ್ನು ಮಲ್ಲೇಶ್ವರಂ ಪೋಲೀಸ್ ಸ್ಟೇಷನ್ನಿನವರು ಹಿಡಿದುಕೊಂಡು ಹೋಗಿ ಲಾಕಪ್‌ನಲ್ಲಿ ಹಾಕಿದ್ದರು. ಅವನನ್ನು ಪೋಲೀಸಿನವರು ತಮಿಳು, ಮಲೆಯಾಳಿ, ತೆಲುಗು ಭಾಷೆಯಲ್ಲಿ ಬೈಯ್ದಿದ್ದಾರೆ. ಈ ರೀತಿಯಾಗಿ ಒಬ್ಬ ಸಾಧಾರಣ ಕೆಲಸ ಗಾರನ ವಿಷಯದಲ್ಲಿ ಪೋಲೀಸಿನವರು ಯಾವರೀತಿ ವರ್ತನೆ ಮಾಡುತ್ತಿದ್ದಾರೆ ಎಂಬುದು ಇದ ರಿಂದಲೇ ಗೊತ್ತಾಗುತ್ತದೆ. ಆಮೇಲೆ ನಾನು ಆ ಪೋಲೀಸ್ ಸ್ಟೇಷನ್‌ಗೆ ಹೋಗಿ ಪೋಲೀಸ್ ಇನ್‌ಸ್ಪೆಕ್ಟರ್ ಹತ್ತಿರ ಮಾತನಾಡಿ ಅವನನ್ನು ಬಿಡಿಸಿಕೊಂಡು ಬರಬೇಕಾಯಿತು. ಆ ನಂತರ ಇದೇ ರೀತಿ ಒಬ್ಬ ಕೆಲಸಗಾರ ರಾಜು ಎಂಬುವವನನ್ನು ಪೋಲೀಸಿನವರು ನಾನ್ ಬೇಲೇಬಲ್ ವಾರಂಟ್ ಮೇಲೆ ಹಿಡಿದುಕೊಂಡು ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಲಾಕಪ್ಪಿಗೆ ಹಾಕಿದ್ದರು. ಆಗ ಅದಕ್ಕೆ ಸಂಬಂಧಪಟ್ಟವರಿಗೆಲ್ಲಾ ಫೋನ್ ಮಾಡಿ ಹೇಳಿಸಿ ನಂತರ ಅವನನ್ನು ನಾನು ಜಾಮೀನಿನ ಮೇಲೆ ಬಿಡಿಸಿಕೊಂಡು ಬಂದೆ. ಇಂಥಾ ಪ್ರಸಂಗಗಳು ನಡೆಯುತ್ತಿವೆ. ಅದಕ್ಕೋಸ್ಕರವಾಗಿ ನಾನು ಹೇಳುವುದೇನೆಂದರೆ ಪೋಲೀಸಿನವರು ಮಾನವೀಯತೆಯ ದೃಷ್ಟಿಯಿಂದ ವರ್ತನೆ ಮಾಡ ಬೇಕು ಎಂದು.

ಇನ್ನು ಈ ಹೋಂ ಗಾರ್ಡುಗಳು ಏನಿದ್ದಾರೆ ಅವರನ್ನು ಸ್ಟ್ರೈಕ್, ಮುಷ್ಕರ ಇವುಗಳನ್ನು ಮುರಿಯುವುದಕ್ಕೆ ಉಪಯೋಗಿಸಬೇಡಿ. ನಾವು ನೋಡಿರುವ ಹಾಗೆ ಅವರನ್ನು ಆ ಕೆಲಸಗಳಿಗೆ ಸರ್ಕಾರದವರು ಉಪಯೋಗಿಸುತ್ತಿದ್ದಾರೆ. ಇದು ಸರಿಯಲ್ಲ. ಇದರ ಬಗ್ಗೆ ಎನ್‌ಕ್ವೈರಿ ನಡೆಸ ಬೇಕು. ವೈಯ್ಯಾಲಿಕಾವಲ್ ಪ್ರಕರಣದ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿ ಅದರಲ್ಲಿ ನೊಂದ ವರಿಗೆ ಪರಿಹಾರವನ್ನು ಕೊಡಬೇಕೆಂದು ನಾನು ಸರ್ಕಾರದವರನ್ನು ಒತ್ತಾಯ ಮಾಡುತ್ತೇನೆ.

ಇನ್ನು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ ಪ್ರೊಫೆಷನಲ್ ಟ್ಯಾಕ್ಸ್ ರದ್ದು ಮಾಡಬೇಕೆಂಬ ವಿಷಯ ಬಹಳ ವರ್ಷಗಳಿಂದಲೂ ಇದೆ. ಇದಕ್ಕೆ ಕಾರಣಗಳು ಬೇಕಾದಷ್ಟು ಇವೆ. ಆದ್ದರಿಂದ ಈ ಪ್ರೊಫೆಷನಲ್ ಟ್ಯಾಕ್ಸನ್ನು ರದ್ದು ಮಾಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳು ತ್ತೇನೆ. ಸರ್ಕಾರದವರು ಕಾರ್ಪೋರೇಷನ್‌ನನ್ನು ಸೂಪರ್‌ಸೀಡ್ ಮಾಡುವುದಕ್ಕೆ ಮುಂಚೆ

ಎಂದರೆ ಕೌನ್ಸಿಲರುಗಳು ಇದ್ದಾಗ್ಗೆ ಬೆಂಗಳೂರು ಕಾರ್ಪೋರೇಷನ್ನಿನ, ಬೆಂಗಳೂರು ನಗರದ ಕೆಲಸ ಕಾರ್ಯಗಳು ಬಹಳ ಚೆನ್ನಾಗಿ ನಡೆದುಕೊಂಡು ಹೋಗುತ್ತಿದ್ದವು. ಈಗ ಕಾರ್ಪೋರೇಷನ್ನಿನಲ್ಲಿ ಯಾವ ಕೆಲಸಕಾರ್ಯಗಳು ಆಗಬೇಕಾದರೂ ಲಂಚವನ್ನು ಕೊಡದಿದ್ದರೆ ಮುಂದಕ್ಕೆ ಪ್ರೊಸೀಡ್ ಮಾಡುವುದಕ್ಕೇ ಆಗುವುದಿಲ್ಲ. ನಮ್ಮ ಆರ್. ಎಂ. ಪಾಟೀಲರಿಗೆ ಕಾರ್ಪೋರೇಷನ್ನಿನಲ್ಲಿ ನಂಬಿಕೆಯೇ ಇಲ್ಲ. ಕಾರ್ಪೋರೇಷನ್ ಸೂಪರ್‌ಸೀಡ್ ಮಾಡಿರುವುದೇ ಸರಿ ಎಂದು ಉತ್ತರ ಕೊಡುತ್ತಾರೆ. ಕಾರ್ಪೋರೇಷನ್ನಿನಲ್ಲಿ ಲಂಚ ಕೊಟ್ಟು ಹೊರತು ಬಿಲ್ಡಿಂಗ್ ಕಟ್ಟುವುದಕ್ಕೆ ಒಂದು ಲೈಸೆನ್ಸ್ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ಮತ್ತು ಅಲ್ಲಿ ಅಧಿಕಾರ ದುರುಪಯೋಗ ಜಾಸ್ತಿಯಾಗುತ್ತಿದೆ. ಅಲ್ಲಿ ಪ್ರಶ್ನೆಗಳು ಬಗೆಹರಿಯುವುದೇ ಇಲ್ಲ. ಈಗ ಒಂದು ವರ್ಷದ ಹಿಂದೆ ಮಾರಪ್ಪನ ಪಾಳ್ಯದಲ್ಲಿ ಒಂದು ನಲ್ಲಿಯನ್ನು ಹಾಕುವುದಕ್ಕಾಗಿ ಕಾರ್ಪೋರೇಷನ್ ಕಮೀಷನರಿಗೆ ಒಂದು ಕಾಗದವನ್ನು ಬರೆದಿದ್ದೆ. ಇಲ್ಲಿಯ ವರೆಗೂ ಅಲ್ಲಿಗೆ ನಲ್ಲಿ ಬರಲಿಲ್ಲ.

ಕಾರ್ಪೋರೇಷನ್ನಿನವರು 34 ಹಳ್ಳಿಗಳನ್ನು ಸೇರಿಸಿಕೊಂಡಿದ್ದಾರೆ. ಅವರಿಗೆ ಕುಡಿಯುವ ನೀರು ಇತ್ಯಾದಿ ನಾಗರೀಕ ಸೌಲಭ್ಯಗಳನ್ನು ಕೊಡುತ್ತಾ ಇಲ್ಲ. ಆದರೆ ಅವರಿಂದ ತೆರಿಗೆಯನ್ನು ಮಾತ್ರ ವಸೂಲು ಮಾಡುತ್ತಾರೆ. ಅವರು ತೆರಿಗೆಯನ್ನು ಕೊಡದಿದ್ದರೆ ಅವರ ಮನೆಯನ್ನು ಕಾರ್ಪೋರೇಷನ್ನಿನವರು ಜಫ್ತಿ ಮಾಡುತ್ತಾರೆ. ಅವರ ಫರ್ನೀಚರನ್ನು ಹೊರಗಡೆ ಹಾಕುತ್ತಾರೆ. ಹೀಗಿರುವಾಗ ಅವರಿಗೆ ಕುಡಿಯುವ ನೀರು, ದೀಪ, ರಸ್ತೆ ಇತ್ಯಾದಿ ನಾಗರಿಕ ಸೌಲಭ್ಯಗಳನ್ನು ಏತಕ್ಕೆ ಒದಗಿಸಿಕೊಡುವುದಿಲ್ಲ? ಇದು ಪ್ರಜಾಪ್ರಭುತ್ವ ನೀತಿಯೇ, ಇದು ನನಗಂತೂ ಸರಿ ಕಾಣುವುದಿಲ್ಲ. ಕುಡಿಯುವ ನೀರಿನ ಸರಬರಾಜಿನ ವಿಷಯದಲ್ಲಿ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಚೆನ್ನಾಗಿ ಮಾತನಾಡಿದ್ದಾರೆ. ಇದರ ಬಗ್ಗೆ ನಾವು ಬೇಕಾದಷ್ಟು ಪ್ರತಿಭಟನೆಗಳನ್ನು ಮಾಡಿದ್ದೇವೆ. ಆದರೂ ಕೂಡ ಅದು ಇನ್ನೂ ಇತ್ಯರ್ಥವಾಗದೇ ಹಾಗೆಯೇ ಉಳಿದಿದೆ. ಇದನ್ನು ಆದಷ್ಟು ಜಾಗ್ರತೆ ಮಾಡಬೇಕು. ಇಲ್ಲದೇ ಹೋದರೆ ಇದರ ಬಗ್ಗೆ ನಾವು ಸತ್ಯಾಗ್ರಹ ಮಾಡುತ್ತೇವೆ. ಈಗ ಬೆಂಗಳೂರು ಸಿಟಿಯಲ್ಲಿ ಅನೇಕ ಕಡೆ ವಾಟರ್ ಬೋರ್ಡಿನವರು ಹಿಂದಿನ ರೇಟಿನ ಪ್ರಕಾರ ನೀರಿನ ಬಿಲ್ಲುಗಳನ್ನು ಕಟ್ಟಬೇಕು ಇಲ್ಲದಿದ್ದರೆ ನಲ್ಲಿಗಳನ್ನು ಡಿಸ್‌ಕನೆಕ್ಟ್ ಮಾಡುತ್ತೇವೆಂದು ಜನಗಳಿಗೆ ಬೆದರಿಕೆ ಹಾಕುತ್ತಿದ್ದಾರೆಂದು ಗೊತ್ತಾಗಿದೆ. ಅದು ಸರಿಯಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಈ ಕುಡಿಯುವ ನೀರಿನ ಸಮಸ್ಯೆಯನ್ನು ಬೇಗ ಸರ್ಕಾರದವರು ಇತ್ಯರ್ಥ ಮಾಡಬೇಕು. ಇಲ್ಲದೇ ಹೋದರೆ ನಾವು ಸತ್ಯಾಗ್ರಹ ಮಾಡುತ್ತೇವೆಂದು ಹೇಳಿ, ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಮಾನ್ಯ ಸಭಾಪತಿಗಳೇ, ಮಾನ್ಯ ಗೃಹ ಸಚಿವರು ಪೋಲೀಸ್ ಡಿಮ್ಯಾಂಡ್ ಬಗ್ಗೆ ಕೇಳಿರತಕ್ಕಂಥ 8 ಕೋಟಿ 15 ಲಕ್ಷ ರೂಪಾಯಿಗಳ ಬೇಡಿಕೆಯನ್ನು ನಾನು ವಿರೋಧಿಸುತ್ತಾ ಕೆಲವಾರು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಚಿಕ್ಕಮಗಳೂರಿನ ಗರ್ಲ್ಸ್ ಹೈಸ್ಕೂಲ್ ಬಗ್ಗೆ ಒಂದು ಅಲ್ಪಕಾಲಾವಧಿ ಪ್ರಶ್ನೆಯನ್ನು ಸರ್ಕಾರಕ್ಕೆ ಈ ಸಭೆಯ ಮೂಲಕ ಕಳಿಸಿದಾಗ ಅದಕ್ಕೆ ಮಾನ್ಯ ಗೃಹಸಚಿವರು ಈ ರೀತಿ ಉತ್ತರ ಕೊಟ್ಟಿದ್ದಾರೆ:

"The Head Mistress of the School has given a statement denying stone-throwing and injuries".

ಇದೇ ಸಂದರ್ಭದಲ್ಲಿ ನನಗೆ ಚಿಕ್ಕಮಗಳೂರಿನಲ್ಲಿರುವ ಮಲೆನಾಡು ಎಜುಕೇಷನ್ ಸೊಸೈಟಿಯ ಮುಖ್ಯ ಉಪಾಧ್ಯಾಯಿನಿಯವರು ಒಂದು ಕಾಗದವನ್ನು ಬರೆದಿದ್ದಾರೆ. ಆ ಕಾಗದದಲ್ಲಿ ಏನು ಹೇಳಿದ್ದಾರೆ ಎಂಬುದನ್ನು ಮಾನ್ಯ ಗೃಹ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ:

"C. M. S. Sastry, M.L.A.

Respected Sir,

On 4th March 1968, our School Day was celebrated. The function commenced at about 5 P.M. Our Deputy Commissioner presided over the function. I celebrated the function inside the Hall of our School. About 50 members were present in the Hall including the Chief Guest. On the verandah some teachers and students were watching. A mob entered the M.E.S. compound and demanded that they wanted to see the function. Some of

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

them threw stones and they fell on the forehead of our Music Teacher. So, I stopped the function and phoned to the Police and the mob dispersed.

After some days, the Police came to our house at about 10 P.M. and asked me to come to the Police Station and give a declaration about the incident. I was in a fix and refused to go to the Police Station and that at an odd hour. I was not inclined to invite them to our house as only women folk were in the House."

ಈ ರೀತಿಯಾಗಿ ನನಗೆ ಕಾಗದ ಬರೆದಿದ್ದಾರೆ. ಈ ವಿಚಾರದಲ್ಲಿ ನಾನು ಒಂದೇ ಒಂದು ಪ್ರಶ್ನೆಯನ್ನು ಮಾಡುತ್ತೇನೆ, ಏನೆಂದರೆ ಪೋಲೀಸಿನವರು ರಾತ್ರಿ ಹತ್ತು ಗಂಟೆಯ ಸಮಯದಲ್ಲಿ ಹೆಡ್ ಮಿಸ್‌ಟ್ರೆಸ್ ಮನೆಗೆ ಹೋಗಿ ಸ್ಟೇಟ್‌ಮೆಂಟ್ ತೆಗೆದುಕೊಳ್ಳತಕ್ಕಂಥ ಅವಶ್ಯಕತೆ ಏನಿತ್ತು. ಸಾರ್ವಜನಿಕರ ಹಿತದೃಷ್ಟಿಯಿಂದ ಇಂತಹ ಘಟನೆಗಳು ಮುಂದೆ ನಡೆಯಬಾರದೆಂಬ ದೃಷ್ಟಿಯಿಂದ ನಡೆದಂಥ ಘಟನೆಯ ಬಗ್ಗೆ ಪ್ರಶ್ನೆ ಕೇಳಿದಾಗ ಸಂಬಂಧಪಟ್ಟ ಸಚಿವರು ಪೋಲೀಸ್ ಅಧಿಕಾರಿಗಳಿಂದ ಸರಿಯಾದ ಉತ್ತರ ತರಿಸಿ ಹೇಳಬೇಕು. ಪೋಲೀಸ್ ಅಧಿಕಾರಿಗಳು ಸರಿಯಾದ ಉತ್ತರವನ್ನು ಸರ್ಕಾರಕ್ಕೆ ಒದಗಿಸದಿರುವುದರಿಂದ ಇಂತಹ ಗಲಾಟೆಗಳು ಮೇಲಿಂದ ಮೇಲೆ ನಡೆಯುವುದಕ್ಕೆ ಅವಕಾಶವಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಳೆದ ಜನವರಿ ತಿಂಗಳಲ್ಲಿ ಒಂದು ದೊಡ್ಡ ದುರ್ಘಟನೆ ನಡೆಯಿತು. ಈ ದುರ್ಘಟನೆ ನಡೆಯಬಹುದು ಎಂಬುದಾಗಿ ಮೊದಲೇ ಸರ್ಕಾರಕ್ಕೆ ತಿಳಿಸಿದ್ದರೂ ಸಹ, ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಳ್ಳದಿದ್ದುದರಿಂದ ಈ ರೀತಿಯ ದುರ್ಘಟನೆ ನಡೆಯಿತು. ಈ ರೀತಿ ನಡೆದುದಕ್ಕೆ ಸರ್ಕಾರವೇ ಕಾರಣ ಎಂದು ಹೇಳಿದರೆ ತಪ್ಪಾಗಲಾರದು. ಎಂ.ಇ.ಎಸ್.ನ ಸೂಲ ಡೇ ದಿವಸ ಸುಮಾರು 460 ಹೆಣ್ಣುಮಕ್ಕಳು ಸ್ಕೂಲ್‌ನಲ್ಲಿ ಸೇರಿದ್ದರು. ಆದರೆ ಪೋಲೀಸಿನವರು ಕೇವಲ 20 ಹೆಣ್ಣುಮಕ್ಕಳು ಇದ್ದರು ಎಂಬುದಾಗಿ ಹೆಡ್ ಮಿಸ್‌ಟ್ರೆಸ್ ಬಳಿ ಒತ್ತಾಯದಿಂದ ಸ್ಟೇಟ್‌ಮೆಂಟ್ ತೆಗೆದುಕೊಂಡು ಬಂದು ಗೃಹಮಂತ್ರಿಯವರಿಗೆ ತಲುಪಿಸಿದ್ದಾರೆ. ಈ ರೀತಿ ಅಧಿಕಾರಿ ಕೊಟ್ಟ ಹೇಳಿಕೆಗಳನ್ನು ನಿಜಾಂಶ ತಿಳಿದುಕೊಳ್ಳದೆ ಮಂತ್ರಿಗಳು ಸಭೆಗೆ ಹೇಳುವುದನ್ನು ನಿಲ್ಲಿಸಬೇಕು. ಯಾವಾಗಲೂ ನಿಜಾಂಶವನ್ನು ಸಭೆಗೆ ತಿಳಿಸುವುದು ಸರಿಯಾದ ಮಾರ್ಗವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಗೃಹಸಚಿವರ ಗಮನಕ್ಕೆ ಇನ್ನೊಂದು ವಿಚಾರವನ್ನು ತಿಳಿಸಬಯಸುತ್ತೇನೆ. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಉರುಸ ನಡೆಯುತ್ತದೆ. ಈ ಸಮಯದಲ್ಲಿ ಗಲಾಟೆ ನಡೆಯಬಾರದೆಂದು ಸರ್ಕಾರದವರು ಮುಂಜಾಗ್ರತೆ ಕ್ರಮ ತೆಗೆದುಕೊಂಡು ಸುಮಾರು 2 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಹಣ ಯಾರದು, ಈ ಹಣವನ್ನು ಖರ್ಚು ಮಾಡುವುದಕ್ಕೆ ಯಾರು ಕಾರಣಕರ್ತರಾದರು ಎಂದು ಸರ್ಕಾರಕ್ಕೆ ಪ್ರಶ್ನೆ ಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಮೊದಲು ಆದಂಥ ದುರ್ಘಟನೆ ನಡೆಯದಂತೆ ಸರ್ಕಾರದವರು ನೋಡಿಕೊಂಡಿದ್ದರೆ ಉರುಸ ಸಮಯದಲ್ಲಿ ಇಷ್ಟು ಹಣ ಖರ್ಚು ಮಾಡುವ ಅಗತ್ಯವಿರಲಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಪೋಲೀಸ್ ಇಲಾಖೆ ಏತಕ್ಕೋಸ್ಕರ ಇದೆ ಎಂಬುದನ್ನು ವಿಚಾರ ಮಾಡುವುದಾದರೆ, ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕ ಬಂಡವಾಳಗಾರರನ್ನು ಸಂರಕ್ಷಣೆ ಮಾಡುವುದಕ್ಕೋಸ್ಕರ. ಸಮತಾವಾದ ಎಂದು ಬಾಯಲ್ಲಿ ಹೇಳಿಕೊಂಡು ಈ ಸರ್ಕಾರದವರು ಪಟ್ಟಣಗಳಲ್ಲಿರತಕ್ಕಂಥ ಬಂಡವಾಳಗಾರರನ್ನು ಸಂರಕ್ಷಣೆ ಮಾಡುವುದಕ್ಕಾಗಿ ಇವತ್ತು 8 ಕೋಟಿ ರೂಪಾಯಿಗಳನ್ನು ಒದಗಿಸಿಕೊಡಬೇಕೆಂದು ಕೇಳಿದ್ದಾರೆ. ಖಂಡಿತವಾಗಿಯೂ ಈ ರಾಜ್ಯದಲ್ಲಿ ಪೋಲೀಸ್ ಇಲಾಖೆಯು ಮಾಡಬೇಕಾದಂಥ ಕೆಲಸವನ್ನು ಮಾಡುತ್ತಿಲ್ಲ. ವರ್ಷೇವರ್ಷೇ ಮಾತ್ರ ಪೋಲೀಸ್ ಇಲಾಖೆಗೆ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಈ ಇಲಾಖೆಗೆ ಖರ್ಚು ಮಾಡತಕ್ಕಂಥ ಹಣವನ್ನು ಕಡಿಮೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪೋಲೀಸರ ರಕ್ಷಣೆಯನ್ನು ಎಲ್ಲರಿಗೂ ಕೊಡಬೇಕು. ಇವತ್ತಿನ ದಿವಸ ಪೋಲೀಸರ ರಕ್ಷಣೆ ಕೇವಲ ಬಂಡವಾಳಗಾರರಿಗೆ ಮತ್ತು ವ್ಯಾಪಾರಸ್ಥರಿಗೆ ಸಿಗುತ್ತದೆ. ಈ ಕಾರಣದಿಂದ ಇವರುಗಳು ಬೆಳೆದು ಬೆಳೆದು ಒಂದು ರೀತಿಯಿಂದ ಹಣವನ್ನು ಮಾಡಿಕೊಳ್ಳುತ್ತಿದ್ದಾರೆ. ಕೇವಲ ಇವರನ್ನು ರಕ್ಷಣೆ ಮಾಡುವುದಕ್ಕಾಗಿ ಪೋಲೀಸ್ ದಳವನ್ನು ಇಟ್ಟಿದೀರಾ ಎಂದು ಕೇಳುತ್ತಿದ್ದೇನೆ. ಇವತ್ತಿನ ದಿವಸ ಜನಸಾಮಾನ್ಯರಿಗೆ ಪೋಲೀಸರ ಸಹಾಯ ಸಿಗುತ್ತಿಲ್ಲ. ನಮ್ಮ ಸ್ನೇಹಿತರುಗಳು ಹೇಳಿದ ಹಾಗೆ, ಸಾಮಾನ್ಯ ಮನುಷ್ಯನೇನಾದರೂ ಪೋಲೀಸ್ ಸ್ಟೇಷನ್‌ಗೆ ಕಂಪ್ಲೇಂಟ್ ಕೊಡುವುದಕ್ಕೆ ಹೋದರೆ, ಅವರಿಗೇ ಒಂದು ರೀತಿಯ ಶಿಕ್ಷೆಯ ರೂಪದಲ್ಲಿ ಹಣವನ್ನು ಕಿತ್ತುಕೊಂಡು ಹೊರಗೆ ಕಳಿಸುತ್ತಿದ್ದಾರೆಂದು.

ಕೇವಲ ಮಂತ್ರಿಗಳಿಗೆ, ಬಂಡವಾಳಗಾರರಿಗೆ ಮಾತ್ರ ಪೋಲೀಸ್ ರಕ್ಷಣೆ ಸಿಗುತ್ತಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇದೇ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಹೇಳುತ್ತೇನೆ. ಪೋಲೀಸ್ ಖಾತೆಯವರು ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ಜನವರಿ ತಿಂಗಳಿನಲ್ಲಿ ನಮ್ಮ ಜಿಲ್ಲೆಯಲ್ಲಿ ಆದಂಥ ಘಟನೆಯನ್ನು ಈಗಾಗಲೇ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಮತ್ತೊಂದು ಘಟನೆಯನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರದಿದ್ದರೆ ತಪ್ಪಾಗುತ್ತದೆಂದು ತಿಳಿದುಕೊಂಡಿದ್ದೇನೆ. ಎರಡನೆಯ ಘಟನೆಯೆಂದರೆ ಈ ಮನೆಯ ಸದಸ್ಯರಾದ ಶ್ರೀ ಹಂಜಿಶಿವಣ್ಣನವರ ಮನೆಗೆ ಕೆಲವರು ನುಗ್ಗಿ ಅವರನ್ನು ಹೊಡೆದಿರುವುದು. ಈ ಕೇಸ್ ಬಗ್ಗೆ ಪೋಲೀಸರು ಎಷ್ಟರ ಮಟ್ಟಿಗೆ ವಿಚಾರಣೆ ಮಾಡಿದ್ದಾರೆ, ಯಾರನ್ನು ಹಿಡಿದು ಶಿಕ್ಷೆ ಮಾಡಿದ್ದಾರೆಂಬುದನ್ನು ನಾನು ಕೇಳುತ್ತಿದ್ದೇನೆ. ಇದುವರೆಗೆ ಯಾರನ್ನೂ ಹಿಡಿದು ಶಿಕ್ಷೆ ಮಾಡದಿದ್ದರೆ, ತಪ್ಪಿತಸ್ಥರನ್ನು ಹಿಡಿದು ಶಿಕ್ಷೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೂರನೆಯ ಘಟನೆಯೆಂದರೆ ಈ ಮನೆಯ ಮಾಜಿ ಎಂ.ಎಲ್.ಎ. ಆದಂಥ ಶ್ರೀಮತಿ ಸುಬ್ಬಮ್ಮನವರ ಮನೆಗೆ ರಾತ್ರಿ ಎಂಟೂವರೆ ಗಂಟೆಯಲ್ಲಿ ಬಾಗಿಲನ್ನು ಒಡೆದು ಕುಡಿದಂಥ ಕೆಲವರು ನುಗ್ಗಿ ಅವರಿಗೆ ತೊಂದರೆ ಕೊಟ್ಟಿರುವುದು. ಈ ವಿಚಾರ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿರಬಹುದು. ಇತ್ತೀಚಿಗೆ ನಮ್ಮ ಜಿಲ್ಲೆಯಲ್ಲಿ ಕುಡಿಯುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಈ ರೀತಿ ಕುಡಿದು ಗಲಾಟೆ ಮಾಡುವವರನ್ನು ಹಿಡಿದು ಅವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಶಾಂತ ವಾತಾವರಣವಿರುವಂತೆ ಸರ್ಕಾರದವರು ನೋಡಿಕೊಳ್ಳದಿದ್ದರೆ ಇನ್ನೂ ದೊಡ್ಡ ದೊಡ್ಡ ಘಟನೆಗಳು ಆಗಬಹುದೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಎಚ್ಚರಿಕೆ ಕೊಡುವುದಕ್ಕೆ ಬಯಸುತ್ತಿದ್ದೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಶ್ರೀಮತಿ ಸುಬ್ಬಮ್ಮನವರ ಮನೆಗೆ ಜನರು ನುಗ್ಗುವುದಕ್ಕೆ ಯಾವ ಪಾರ್ಟಿಯವರು ಕಾರಣ?

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈ ವಿಚಾರವನ್ನು ನಾನು ಹೇಳಬಾರದು ಎಂದು ಇದ್ದೆ, ಆದರೆ ಮಾನ್ಯ ಕಾಂಗ್ರೆಸ್ ಸದಸ್ಯರು ಕೇಳುತ್ತಿರುವುದರಿಂದ ಉತ್ತರ ಕೊಡುತ್ತೇನೆ. ಕಾಂಗ್ರೆಸ್ ಪಾರ್ಟಿಯ ಇಬ್ಬರು ಸದಸ್ಯರೇ ಇವರ ಮನೆಗೆ ಕೆಲವರನ್ನು ನುಗಿಸಿ ತೊಂದರೆ ಕೊಡಿಸಿದ್ದಾರೆ. ಈ ವಿಚಾರವನ್ನು ಈ ಮನೆಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ.

2-00 P.M.

ಈ ಸಂದರ್ಭದಲ್ಲಿ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಫೈರ್ ಬ್ರಿಗೇಡ್ ಸ್ಥಾಪನೆ ಮಾಡಬೇಕು ಮತ್ತು ಪೋಲೀಸು ಇಲಾಖೆಯವರಿಂದ ಒಂದು ರೀತಿಯಾಗಿ ಸುವ್ಯವಸ್ಥೆಯಾದ ಏರ್ಪಾಡು ಮಾಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ. ಚಿಕ್ಕಮಗಳೂರು ಟೌನಿನಲ್ಲಿ ಜನರಿಗೆ ಶಾಂತಿಯಿಂದ ಇರಲು ಅನುಕೂಲವಾಗುವಂತೆ ಅವರಿಗೆ ರಕ್ಷಣೆಯನ್ನು ಒದಗಿಸಿಕೊಡಬೇಕು. ಪೋಲೀಸಿನವರು ಏತಕ್ಕಾಗಿ ಹೀಗೆ ಮಾಡುತ್ತಿದ್ದಾರೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಆದುದರಿಂದ ಸರಕಾರಕ್ಕೆ ನಾನು ಇಲ್ಲಿ ಸಲಹೆ ಮಾಡುವುದು ನಿಮ್ಮ ಪೋಲೀಸು ಇಲಾಖೆಯಲ್ಲಿರುವ ಅಧಿಕಾರಿಗಳನ್ನು ಸ್ಕಾಟ್‌ಲೆಂಡ್ ಯಾರ್ಡ್ ಎನ್ನುವಂತಹ ಸ್ಥಳಗಳಿಗೆ ಕಳುಹಿಸಿ ಅಲ್ಲಿ ಅವರಿಗೆ ತರಬೇತಿ ಕೊಡಿಸಿ ಮತ್ತೆ ಇಲ್ಲಿ ಪೋಲೀಸು ಇಲಾಖೆಯಲ್ಲಿ ಕೆಲಸ ಮಾಡುವಂತೆ ಮಾಡಿದರೆ ಆಗ ನಮ್ಮ ಅಧಿಕಾರಿಗಳೂ ಒಳ್ಳೆಯ ದಕ್ಷರಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಮಾನ್ಯ ಮಂತ್ರಿಗಳು ಪೋಲೀಸು ಇಲಾಖೆಯಲ್ಲಿರುವ ಉನ್ನತ ಅಧಿಕಾರಿಗಳನ್ನು ತರಬೇತಿಗಾಗಿ ಸ್ಕಾಟ್‌ಲಂಡ್ ಯಾರ್ಡಿಗೆ ಕಳುಹಿಸಿ ಅವರಿಗೆ ಒಳ್ಳೆಯ ತರಬೇತು ಕೊಟ್ಟು ಶಿಸ್ತಿನಿಂದ ಕೆಲಸ ಮಾಡುವಂತೆ ಮಾಡಿ, ಇದರಿಂದ ನಿಮ್ಮ ಪೋಲೀಸು ಇಲಾಖೆಯಲ್ಲಿ ದಕ್ಷತೆಯೂ ಬೆಳೆಯುತ್ತದೆ ಮತ್ತು ಜನರಿಗೂ ಒಳ್ಳೆಯದಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಸರಕಾರ ತಕ್ಕ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಹೋಂಗಾರ್ಡ್ಸ್‌ಗಳ ಬಗ್ಗೆ ನಮ್ಮ ಸ್ನೇಹಿತರು ಇಲ್ಲಿ ಹೇಳಿದ್ದಾರೆ. ಇವರನ್ನು ಸಮಾಜದ ಜನರಿಗೆ ಸಹಾಯ ಮಾಡುವುದಕ್ಕಾಗಿ ಅಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಇದರಲ್ಲಿ ದಕ್ಷರೂ ಹಾಗೂ ಒಳ್ಳೆಯ ಯೋಗ್ಯರೂ ಬಂದು ಕೆಲಸ ಮಾಡುತ್ತಾರೆ. ಆದರೆ ಇವರು ಸರಿಯಾಗಿ ರೂಲ್ಸಿಗೆ ಅನುಸರವಾಗಿ ಕೆಲವು ಕಡೆಗಳಲ್ಲಿ ಕೆಲಸ ಮಾಡುತ್ತಿಲ್ಲ. ಇವರನ್ನು ಸಮಾಜಘಾತುಕ ಕೆಲಸಗಳಿಗೆ

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ತೆಗೆದುಕೊಳ್ಳುವುದು ಸರಿಯಲ್ಲ. ನಿಜವಾಗಿಯೂ ಒಳ್ಳೆಯ ದಕ್ಷರಾಗಿ ಕೆಲಸ ಮಾಡುವ ಹೋಂಗಾರ್ಡ್ಸ್‌ಗಳು ಇಂದು ಫ್ರೀಯಾಗಿ ಬಂದು ಕೆಲಸ ಮಾಡುತ್ತಿದ್ದಾರೆ. ಇವರು ಸರ್ವೀಸು ಮಾಡಬೇಕೆಂದು ಮಾಡುತ್ತಿದ್ದಾರೆ. ಅವರ ಫ್ರೀ ಸರ್ವೀಸನ್ನು ದುರುಪಯೋಗಪಡಿಸಿಕೊಳ್ಳಬಾರದು. ಮತ್ತು ದೇಶದ ಜನರ ಅನುಕೂಲಕ್ಕಾಗಿ ಎಲ್ಲ ಜಿಲ್ಲೆಗಳಲ್ಲಿಯೂ ಇಂತಹ ಹೋಂಗಾರ್ಡ್ಸ್‌ಗಳೆಂದು ಮಾಡಿದ್ದಾರೆ. ಆದರೆ ಇವರಿಗೆ ಸರಿಯಾದ ವಾರ್ಗಗಳನ್ನು ಮಾಡಿಕೊಡುತ್ತಿಲ್ಲ. ಇವರಿಗೆಲ್ಲಾ ವಾರ್ಡುರ್ಗಳನ್ನು ಒದಗಿಸಿಕೊಡಬೇಕು ಮತ್ತು ಎಲ್ಲ ಕಡೆಗಳಲ್ಲಿಯೂ ಇವರಿಗೆ ವಾಹನ ಸೌಕರ್ಯಗಳನ್ನು ಒದಗಿಸಿಕೊಡಬೇಕು. ನನಗೆ ಸಾಕಾದಷ್ಟು ಅವಕಾಶ ದಿವಸ್ಯಾಂದು ಮಾತನಾಡುವಾಗಲೂ ಸಿಗಲಿಲ್ಲ. ಈಗ ಸ್ವಲ್ಪ ಕಾಲಾವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The Discussion on the these Demands is concluded. The hon. Minister will begin his reply at 3 P. M..

Now the House will adjourn and meet at 3 P. M.

The House rose at five Minutes past Two of the Clock to re-assemble a Three of the Clock.

The House re-assembled at Ten Minutes past Three of the Clock

[Mr. DEPUTY SPEAKER in the Chair]

ಶ್ರೀ ಟಿ. ಆರ್. ಶಾಮಣ್ಣ.—ನೀರಿನ ಸಮಸ್ಯೆಯ ಬಗ್ಗೆ ಪರಿಹಾರ ದಯೆಯಿಟ್ಟು ಕೊಡಬೇಕು.

ಶ್ರೀ ಆರ್. ಎಂ. ಪಾಟೀಲ್.—ಎರಡು ಮೂರು ಸಲ ಆ ವಿಚಾರ ಹೇಳಿದೆ. ಸನ್ಮಾನ ಸಭಾಧ್ಯಕ್ಷರೇ, ಇಲ್ಲಿಯವರೆಗೆ ನಾಲ್ಕು ಬೇಡಿಕೆಗಳಮೇಲೆ ಸನ್ಮಾನ್ಯ ಸದಸ್ಯರು ಸದಭಿಪ್ರಾಯಗಳನ್ನು, ಸೌಹಾರ್ದದ ಅನೇಕ ಸೂಚನೆಗಳನ್ನು ಕೊಟ್ಟಿದ್ದನ್ನು ಅಭಿಲಾಷೆಯಿಂದ ಮತ್ತು ಕುತೂಹಲತೆಯಿಂದ ನಾನು ಕೇಳಿದ್ದೇನೆ. ಒಂದು ಸಂತೋಷದ ಸಂಗತಿಯೇನೆಂದರೆ ಪೋಲೀಸು ಇಲಾಖೆ, ಜೈಲು ಇಲಾಖೆ, ಮುನಿಸಿಪಲ್ ಆಡಳಿತ ಮತ್ತು ಕಾರ್ಪೊರೇಷನ್ ಆಡಳಿತದ ಬಗ್ಗೆ ಬಹಳ ಕೂಲಂಕಷವಾಗಿ ವಿಚಾರಮಾಡಿ ಮಾತನಾಡಿದ್ದಾರೆ. ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಅವನ್ನು ಸರಿಯಾಗಿ ಕೊಟ್ಟಿದ್ದಕ್ಕಾಗಿ ನಾನು ಎಲ್ಲಾ ಸದಸ್ಯರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ಹಲಕೆಲವರು ಸದಸ್ಯರು ಮಾತನಾಡುವಾಗ ಬರೇ ಸಂಗತಿಗಳನ್ನು ಹೇಳಿದರೆ ಒಳ್ಳೆಯದಿತ್ತು. ಆದರೆ ಭಾವನಾಪರವಶರಾಗಿ ವ್ಯಕ್ತಿಶಃ ಮಾತನಾಡುವುದು ಈ ಸಭೆಗೆ ಸಮಂಜಸವಾದುದಲ್ಲ ಎಂದು ಹೇಳದೆ ಇರಲಾರೆ. ಇನ್ನುಮುಂದಾದರೂ ಇಂಥ ವಿಷಯಗಳನ್ನು ಮಾತನಾಡುವಾಗ ಗಂಭೀರವಾಗಿ ಗೌರವದಿಂದ ಭೂಷಣಪ್ರಾಯವಾಗಿ ಮಾತನಾಡಿದರೆ ಬಹಳ ಒಳ್ಳೆಯದು ಎಂದು ನಾನು ಅವರಿಗೆ ಮನವಿ ಮಾಡಿಕೊಳ್ಳುತ್ತೇನೆ.

ಪೋಲೀಸು ಇಲಾಖೆಯ ಬಗ್ಗೆ ಹೇಳುವಾಗ ಅದರ ಹಿನ್ನಲೆ ಹೇಳಿದರೆ ಒಳ್ಳೆಯದು, ಬಹಳ ದೊಡ್ಡ ಹಿನ್ನಲೆ ಇದೆ. ಸಂರಕ್ಷಣೆಗಾಗಿ, ಜನತೆಯ ಶಾಂತಿಗಾಗಿ, ಜನರ ಆಸ್ತಿಪಾಸ್ತಿಯ ರಕ್ಷಣೆಗಾಗಿ, ಮತ್ತು ಜೀವನದ ರಕ್ಷಣೆಗಾಗಿ ಈ ಖಾತೆಗೆ ಹಿಂದೆ ಅಡ್ಮಿನಿಸ್ಟ್ರೇಟರ್ ಇದ್ದರು, ಆಡಳಿತಗಾರರಿದ್ದರು, ಅವರು ಪೋಲೀಸು ಖಾತೆಯನ್ನು ಪರಂಪರೆಯಾಗಿ ಬೆಳೆಸಿಕೊಂಡು ಉಳಿಸಿಕೊಂಡು ಅದನ್ನು ಯಾವ ಯಾವ ರೀತಿಯಿಂದ ಕಾಲಕಾಲಕ್ಕೆ ಅನುಸರಿಸಿ ಸೌಲಭ್ಯಗಳನ್ನೊದಗಿಸುವುದು ಆಗಲಿ, ಶಿಕ್ಷಣವನ್ನು ಒದಗಿಸುವುದಾಗಲಿ ಅದನ್ನು ಕಾಲಕ್ಕೆ ತಕ್ಕಂತೆ ಒದಗಿಸಿಕೊಂಡುಬಂದಿ

ದ್ದಾರೆ. 1947 ನೆಯ ಇಸವಿಗಿಂತ ಮೊದಲು ವಿಚಾರಮಾಡುವಾಗ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಮೊದಲಿದ್ದ ಬಿಗಿ ಇಲ್ಲಿಲ್ಲ ಎಂದು ಹೇಳಿದರೆ ಅದೇನೂ ತಪ್ಪಾಗಲಾರದು. ಅದಾದನಂತರ ಇಡೀ ರಾಜ್ಯವೇ ಆರ್ಥಿಕ ಪ್ರಗತಿಗಾಗಿ ಹೋರಾಡುವಾಗ ಮತ್ತು ಜನತೆಗೆ ಬೇಕಾಗಿರುವುದು ಆರ್ಥಿಕ ಸ್ವಾತಂತ್ರ್ಯ ಮತ್ತು ರಾಜಕೀಯ ಸ್ವಾತಂತ್ರ್ಯಗಳಿಸಿದನಂತರ ಆರ್ಥಿಕ ಸ್ವಾತಂತ್ರ್ಯ ಗಳಿಸುವುದು ಒಂದು ಮಹತ್ವವಾದ ಧ್ಯೇಯ ಎಂಬ ಭಾವನೆಯಿಂದ ರಾಜ್ಯ ಸರಕಾರದವರಿಗೆ, ರಾಷ್ಟ್ರ ಸರ್ಕಾರದವರಿಗೆ ಅಥವಾ ಜನತೆಗೆ ಇತ್ತು. ಆದುದರಿಂದ ಹೆಚ್ಚು ಅಧಿಕಾರ ಉಳಿದಿರುವುದು ಪೋಲೀಸು ಇಲಾಖೆಗೆ ಇದ್ದೇ ಇರುತ್ತದೆ, ಪೋಲೀಸು ಇಲಾಖೆ ಕೆಲಸ ನಡೆಸಿಕೊಂಡು ಹೋಗುತ್ತಿದೆ. ಇದಕ್ಕೋಸ್ಕರ ಹೆಚ್ಚಿನ ಸೌಕರ್ಯ, ಸಲಕರಣೆ ಅಥವಾ ಸೌಲಭ್ಯ ಆಗಲಿ ಒದಗಿಸಿಕೊಡುವುದು, ಇದರಿಂದ ಹೆಚ್ಚಿನ ರಿಟರ್ನ್ ಇಲ್ಲ ಎಂಬ ಭಾವನೆಯಿಂದ ಕೆಲವು ವರ್ಷಗಳಿಂದ ಈ ರೀತಿಯ ಮನೋಭಾವನೆ ಸರಕಾರದಲ್ಲಿದ್ದುದು ಕಂಡುಬರುತ್ತದೆ. ನಿಜವಾಗಿಯೂ ಯಾವುದಾದರೂ ಒಂದು ಸಮಾಜದ ಊರ್ಜಿತ ಸ್ಥಿತಿಗೆ ಯಾವುದಾದರೂ ರಾಜ್ಯ ಅಥವಾ ರಾಷ್ಟ್ರದ ಊರ್ಜಿತ ಸ್ಥಿತಿಗೆ ಭದ್ರವಾದ ಶಾಂತಿ ಸ್ಥಾಪನೆ ಆಗಬೇಕು, ಅದಾಗುವವರೆಗೆ ಸುಖೀರಾಜ್ಯವಾಗಲಾರದು. ಈ ಭಾವನೆ ಕಳೆದ ಎರಡು ವರ್ಷಗಳಿಂದ ಬರುವುದಕ್ಕೆ ಹತ್ತಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಪಾಕೀಸ್ಥಾನದ ಆಕ್ರಮಣದ ಕಾಲದಲ್ಲಿ, ಚೈನಾ ದೇಶದ ಆಕ್ರಮಣದ ಕಾಲದಲ್ಲಿ ಇಡೀ ರಾಷ್ಟ್ರದಲ್ಲಿ ಹೊಸ ಚೈತನ್ಯ ಪ್ರಾಪ್ತವಾಗಿ ಅದರಿಂದ ಎಲ್ಲಾ ಸಂಸ್ಥೆಗಳಲ್ಲಿ ಅದರಲ್ಲೂ ಪೋಲೀಸು ಸಂಸ್ಥೆಯಲ್ಲಿ ಪೋಲೀಸು ಖಾತೆಗೆ ಒಂದು ತೀಕ್ಷ್ಣವಾದ ಭಾವನೆ ಬಂದು ಅದರ ಸಂಘಟನೆ ಹೆಚ್ಚು ನಡೆದಿದೆ. ಆದರೆ ಈ ಸಂಘಟನೆ ಯಾವ ರೀತಿ ಆಗಬೇಕು, ಯಾವ ಮಟ್ಟದಲ್ಲಿರಬೇಕು ಎಂಬುದು ಇನ್ನೂ ತೀರ್ಮಾನಮಾಡಬೇಕಾಗಿದೆ. ಈ ಮಾತನ್ನು ಒಪ್ಪಲೇಬೇಕು. ಕಳೆದ ನಾಲ್ಕೈದು ವರ್ಷಗಳಿಂದ ವಿಚಾರಮಾಡಿದರೆ ಅನೇಕ ಸೌಲಭ್ಯಗಳನ್ನು ಪೋಲೀಸು ಖಾತೆಗೆ ಕೊಟ್ಟಿರುವುದುಂಟು. ಉದಾಹರಣೆಗೆ ಪೋಲೀಸು ಖಾತೆಯಲ್ಲಿ ಪುನರ್ವ್ಯವಸ್ಥೆಯಾಗಬೇಕು ಎನ್ನುವಾಗ ಆ ರೀತಿ ಒಂದು ಯೋಜನೆಯನ್ನು ಮಂಡಿಸಿದಾಗ ಪುನರ್ವ್ಯವಸ್ಥೆಯಾಯಿತು. ಅದೇ ರೀತಿಯಲ್ಲಿ ಒಂದು ಪೋಲೀಸು ಪಡೆಯ ಪುನರ್ವ್ಯವಸ್ಥೆಯಾಯಿತು. ಆದರೆ ಇಷ್ಟು ಸಾಲದು ಎಂಬ ಭಾವನೆ ಇದ್ದು ಕೇವಲ ಪರ್ಸನಲ್, ಜನತೆ, ಆಫೀಸರು, ಅಧಿಕಾರಿಗಳು ಇದ್ದರೆ ಸಾಲದು, ಆ ಆಫೀಸರುಗಳಿಗೆ ಅಥವಾ ಅಧಿಕಾರಿಗಳಿಗೆ ಯಾವ ರೀತಿಯ ಶಿಕ್ಷಣ ಅವಶ್ಯಕವಾಗಿ ಬೇಕು ಎಂಬುದನ್ನು ಯೋಚಿಸಿ ಅವರಿಗೆ ಶಿಕ್ಷಣ ಕೊಡಲು ಮೈಸೂರಿನಲ್ಲಿ ಒಂದು ಪೋಲೀಸು ಟ್ರೈನಿಂಗ್ ಕಾಲೇಜನ್ನು, ಚನ್ನಪಟ್ಟಣದಲ್ಲಿ ಪೋಲೀಸು ಕಾನ್‌ಸ್ಟೇಬಲ್ಲುಗಳ ಟ್ರೈನಿಂಗ್ ಶಾಲೆ ತೆರೆದಿದೆ. ಇದರ ಜೊತೆಗೆ ಆಗಿರುವುದಕ್ಕಿಂತ ಒಳ್ಳೆಯ ಪ್ರತಿಭಾವಂತರಿಂದ ಇನ್‌ವೆಸ್ಟಿಗೇಷನ್ ಆಗಬೇಕು, ನ್ಯೂನತೆ ಇರಬಾರದು, ಎರಡನೆಯ ರಾಜ್ಯದ ವ್ಯವಸ್ಥೆಯ ಮೇಲೆ ಕೈ ಊರಬಾರದು ಎಂಬ ಭಾವನೆಯಿಂದ ಇಲ್ಲಿ ಒಂದು ಫಾರೆನ್ಸಿಕ್ ಲ್ಯಾಬೊರೇಟರಿಯನ್ನು 1963 ರಿಂದ ಸಂಘಟನೆ ಮಾಡುತ್ತಿದ್ದಾರೆ. ಇದಕ್ಕಿಂತಲೂ ಹೆಚ್ಚಿನ ಸೌಕರ್ಯ, ಸೌಲಭ್ಯ, ಸಲಕರಣೆ ಪೋಲೀಸು ಇನ್‌ವೆಸ್ಟಿಗೇಷನ್ನಿಗೆ ಬೇಕು ಎಂದು ಮೊನ್ನೆ ಒಂದು ಡಾಗ್ ಸ್ಕ್ವಾಡ್ ಮಾಡಿದೆ. ಇದೆಲ್ಲಾ ಪ್ರಗತಿಯ ಲಕ್ಷಣ. ರಾಜ್ಯ ಸರಕಾರ ಎಷ್ಟೋ ರೀತಿಯಿಂದ ಪೋಲೀಸು ಪಡೆಯ ದಕ್ಷತೆ, ಅರ್ಹತೆ ಮತ್ತು ಇತರ ಜ್ಞಾನಾರ್ಜನೆಗೆ ಎಷ್ಟು ಪ್ರಯತ್ನ ಮಾಡಬೇಕೋ, ಎಷ್ಟು ಸಹಾಯಮಾಡಬೇಕೋ, ಅಷ್ಟೆಲ್ಲಾ ಮಾಡುತ್ತಿದೆ, ಇದರಲ್ಲಿ ಯಾವರೀತಿಯ ನ್ಯೂನತೆಯೂ ಇಲ್ಲ. ಇದರ ಜೊತೆಗೆ ಅವರು ಮಾಡಿದ್ದು ಸರಿಯೇ, ಅಲ್ಲವೇ ಎಂದು ತಿಳಿದುಕೊಳ್ಳುವುದಕ್ಕೆ ಕೋರ್ಟಿನಲ್ಲಿ ಜಡ್ಜ್‌ಮೆಂಟ್ ಪಾಸಾಗುತ್ತಿದೆ ಅದನ್ನು ಪರೀಕ್ಷೆಮಾಡಿ ನ್ಯೂನತೆಯಿದ್ದರೆ ಅದನ್ನು ಎತ್ತಿ ಹೇಳಿ ಪೋಲೀಸು ಇನ್‌ವೆಸ್ಟಿಗೇಟಿಂಗ್ ಆಫೀಸರಿಗೆ ಸರ್ಕ್ಯುಲರ್ ಮೂಲಕ ತಿಳಿಸುತ್ತಲಿದೆ. ಇದಕ್ಕಾಗಿ ಒಂದು ಲಾ ಸೆಕ್ಷನ್ ಡಿ. ವೈ. ಎಸ್. ಪಿ. ಕೆಲವು ತಜ್ಞರು ಅಥವಾ ಅನುಭವವಿರುವವರು ಮುಂತಾದವರ ಒಂದು ಸೆಕ್ಷನ್ ಕಳೆದ ಆರು ವರ್ಷಗಳಿಂದ ಅವ್ಯಾಹತವಾಗಿ ಕೆಲಸಮಾಡುತ್ತಿದೆ. ಎ. ಎಸ್. ಪಿ. ಆಗಲಿ, ಡಿವೈ. ಎಸ್. ಪಿ. ಆಗಲಿ ತನ್ನ ಡಿವಿಜನ್, ತನ್ನ ಡಿಸ್ಟ್ರಿಕ್ಟಿನೊಳಗೆ ಇನ್‌ಸ್ಪೆಕ್ಷನ್ ಮಾಡತಕ್ಕ ಆಫೀಸರುಗಳನ್ನು ಮತ್ತು ಕೆಳದರ್ಜೆಯ ಆಫೀಸರುಗಳನ್ನು ಕರೆಸಿ ಕಾನ್‌ಫರೆನ್ಸ್ ಮಾಡಿ ಅವರಿಗೆ ಈ ಬಗ್ಗೆ ಕಾನೂನಿನ ತಿಳುವಳಿಕೆ ಕೊಟ್ಟು ಇಂಥಾದ್ದು ಒಂದು ವ್ಯವಸ್ಥೆ ಮಾಡುವುದಲ್ಲದೆ, ಮೇಲಿಂದ ಮೇಲೆ ರೆಫ್ರೆಷರ್ ಕೋರ್ಸ್ ಕೊಡುವಂತಹ ಒಂದು ಯೋಜನೆಯನ್ನು ಮಾಡಿದ್ದಾಗಿದೆ. ಒಂದು ಮಾತನ್ನು ಹೇಳಬಲ್ಲೆ, ಒಬ್ಬ ಪೋಲೀಸ್ ಆಫೀಸರನ್ನು ತಯಾರು ಮಾಡಲಿಕ್ಕೆ ಯಾವ ಯಾವ ಸಲಕರಣೆಗಳು ಬೇಕೋ ಸಲಹೆಗಳು ಬೇಕೋ, ಸೌಕರ್ಯಗಳು ಬೇಕೋ ಅವುಗಳನ್ನೆಲ್ಲಾ ಸರ್ಕಾರ ತನ್ನ ಏನೊಂದು ಆರ್ಥಿಕ ಮಟ್ಟ ಇದೆ ಆ ಆರ್ಥಿಕ ಮಟ್ಟದಲ್ಲಿ ಸಾಕಾದಷ್ಟು ನೆರವನ್ನು ನೀಡಿದೆ ಎಂದು ಹೇಳುವಾಗ ಬಹಳ ಅಭಿಮಾನದಿಂದ ಹೇಳುತ್ತಾ ಇದ್ದೇನೆ. ಇದರ ಜೊತೆಗೆ ಮತ್ತೊಂದು ವಿಷಯವೇನೆಂದರೆ ಆಫೀಸರ್ಸ್ ಆಗಲಿ,

(ಶ್ರೀ ಆರ್. ಎಂ. ಪಾಟೀಲ್)

ಎಸ್. ಪಿ. ಆಗಲಿ ಡಿವೈ. ಎಸ್. ಪಿ. ಆಗಲಿ, ಮತ್ತು ಇನ್ಸ್‌ಪೆಕ್ಟರುಗಳಾಗಲಿ ಅವರೂ ಸಹಿತ ಪ್ರತಿಯೊಂದು ಪೋಲೀಸ ಸ್ಟೇಷನ್‌ನಲ್ಲಿ ಯಾವ ರೀತಿಯಿಂದ ಇನ್‌ಸ್ಪೆಕ್ಷನ್ ಮಾಡಬೇಕು ಮತ್ತು ಯಾವ ರೀತಿಯಿಂದ ಮೇಲಿಂದಮೇಲೆ ರಿಪೋರ್ಟ್ ಕಳುಹಿಸಬೇಕು ಎಂದು ಇದೆಯೋ ಅವಕ್ಕೆ ಯಾವುದಾದರೂ ರೀತಿಯಿಂದ ಚ್ಯುತಿ ಬಂದದ್ದೇ ಆದರೆ ಆ ಬಗ್ಗೆ ದಕ್ಷತೆ ಬರಬೇಕೆಂಬ ದೃಷ್ಟಿಯಿಂದ ಸೂಕ್ತವಾದ ಕ್ರಮಗಳನ್ನು ತೆಗೆದುಕೊಂಡು ಅದಷ್ಟು ಅವನನ್ನು ದಕ್ಷನನ್ನಾಗಿ ಮಾಡಲಿಕ್ಕೆ ಸಾಧ್ಯವಾದರೆ ಆ ರೀತಿ ಮಾಡುತ್ತಾರೆ. ಯಾವ ಆಫೀಸರಿಗೆ ಏನು ಮಾಡಿದರೂ ಸಾಧ್ಯವಿಲ್ಲ ಅಂತ ಆದರೆ ಅಂಥವರನ್ನು ಕಾನೂನು ಪ್ರಕಾರವಾಗಲಿ ಅಥವಾ ಎನ್‌ಕ್ವೈರಿ ಮಾಡಿಯಾಗಲಿ ಅಥವಾ ರೂಲ್ಸ್ ಪ್ರಕಾರವಾಗಲಿ 285ರ ಕೆಳಗೆ ರಿಟೈರ್ ಮಾಡಲಿಕ್ಕೆ ಸಾಧ್ಯ ಇದೆ. ರಿಟೈರ್ ಮಾಡಲಾಗುತ್ತದೆ. ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದ ಹಾಗೆ ನಿರ್ದಾಕ್ಷಿಣ್ಯವಾಗಿ ನಿಷ್ಪಕ್ಷಪಾತದಿಂದ ಯಾರು ದಕ್ಷರಲ್ಲವೋ ಅಂತಹವರನ್ನು ಅಲ್ಲಿಂದ ಹೊರಗೆ ಹಾಕಲಿಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುತ್ತೀರಾ ಅಂತ ಕೇಳಿದಾಗ ಈ ಪ್ರಶ್ನೆ ಉದ್ಭವಿಸಿದ್ದರಿಂದ ಈ ಮಾತನ್ನು ಹೇಳಿದ್ದೇನೆ. ಇದು ಕಳೆದ 4-6 ವರ್ಷಗಳಿಂದ ಬಂದದ್ದು, ಎಷ್ಟು ಸಾಧ್ಯವಾದರೆ ಅಷ್ಟು ವಿಶೇಷವಾದಂತಹ ಪ್ರಯತ್ನ ಮಾಡಿ ಆಫೀಸರ್ಸನ್ನು ಯಾವ ರೀತಿಯಿಂದ ತರಬೇತಿ ಮಾಡಬೇಕೋ ಆ ರೀತಿಯಿಂದ ತರಬೇತು ಮಾಡಲಿಕ್ಕೆ ಸಾಧ್ಯವಾದಷ್ಟು ಪ್ರಯತ್ನ ನಡೆದಿದೆ ಎಂದು ಹೇಳುತ್ತಾ ಇದ್ದೇನೆ. ಇದು ಪೋಲೀಸ್ ಇಲಾಖೆಯ ದಕ್ಷತೆಯ ವಿಷಯ.

ಇನ್ನು ಈಗ ಕಳೆದ ಒಂದು ಒಂದೂವರೆ ವರ್ಷದಿಂದ ನಾವೆಲ್ಲಾ ಬಹಳ ಜಾಗರೂಕರಾಗಿ ಇರುವಂತಹ ಕಾಲ ಬಂದಿದೆ ಎಂದು ನಾನೂ ಕೂಡ ನಿಮ್ಮ ಜೊತೆಯಲ್ಲಿ ಹೇಳಬೇಕಾಗಿದೆ. ಏಕೆಂದರೆ ಅನೇಕ ರಾಷ್ಟ್ರದ ಸಮಸ್ಯೆಗಳು, ಸಾಮಾಜಿಕ ಸಮಸ್ಯೆಗಳು, ಸರ್ವಸಾಧಾರಣವಾಗಿ ಸಾಮಾನ್ಯ ಮನುಷ್ಯರನ್ನು ಪ್ರಚೋದನೆಗೊಳಿಸುವಂತಹ ಕಾರ್ಯಕ್ರಮಗಳು ಏನಿವೆ ಅವು ಆಗಿಲ್ಲ ಅಂತ ಹೇಳುವುದಕ್ಕಾಗುವುದಿಲ್ಲ, ಉದಾಹರಣಾರ್ಥವಾಗಿ ಪ್ರಿವೆನ್‌ಷನ್ ಆಫ್ ಕೌ ಸ್ಲಾಟರ್, ಈ ಒಂದು ದೊಡ್ಡ ಆಂದೋಲನ ಉತ್ತರ ಹಿಂದೂಸ್ಥಾನದಲ್ಲಿ ಆಯಿತು. ಅದರಿಂದಲೂ ಒಂದು ರೀತಿಯ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಗಂಭೀರವಾಗಿಯೇ ಕೆಲವು ತಿಂಗಳು ಇತ್ತು. ಎರಡನೆಯದು ಲ್ಯಾಂಗ್ವೇಜ್ ಇಷ್ಯೂ. ಇದರ ತನ್ಮಧ್ಯೆ ಮೈಸೂರು ಮತ್ತು ಮಹಾರಾಷ್ಟ್ರ ಬಾರ್ಡರ್ ಇಷ್ಯೂ ಸಮಾಜದಲ್ಲಿರುವಂತಹ ಶಾಂತಿಯನ್ನು ಕದಲಿಸುವಂತಹ ವಿಷಯಗಳಾಗಿವೆ. ಇದರಿಂದ ಇಂಡಿವಿಜ್ಯುಯಲ್ ಲಿಬರ್ಟಿ ಮತ್ತು ಇಂಡಿವಿಜ್ಯುಯಲ್ ರೈಟ್ ಅಫೆಕ್ಟ್ ಆಗುವುದಕ್ಕಿಂತಲೂ ಜನತೆಯಲ್ಲಿ ಎದ್ದ ಒಂದು ಉದ್ರೇಕಯುಕ್ತವಾದ ಕಾರ್ಯಕ್ರಮವಾದಂತಹ ವಿಷಯವಾಗಿದೆ. ಕೆಲವು ಸಂದರ್ಭಗಳಲ್ಲಿ ಇದು ಯಾರು ಸೈಕಾಲಜಿಸ್ಟ್ಸ್ ಇದ್ದಾರೆ ಮನಶ್ಶಾಸ್ತ್ರಜ್ಞರು ಇದ್ದಾರೆ ಮನಶ್ಶಾಸ್ತ್ರವನ್ನು ಅಭ್ಯಾಸ ಮಾಡಿಕೊಂಡಿದ್ದಾರೆ, ಅದರ ಬಗ್ಗೆ ಪರಿಣತಿಯನ್ನು ಪಡೆದುಕೊಂಡಿದ್ದಾರೆ ಅವರಿಗೆ ಇದು ಒಂದು ದೊಡ್ಡ ಪ್ರಶ್ನೆಯಾಗಿಯೇ ಇದೆ. ಮತ್ತು ರಾಜಕೀಯ ತತ್ವಜ್ಞಾನಿಗಳಿಗೂ ಕೂಡ ಇದು ಒಂದು ಸಮಸ್ಯೆಯೇ ಆಗಿದೆ. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಭಾರತ ದೇಶದ ಸಂಸ್ಕೃತಿಯನ್ನು ಓದಿ ಅದರ ಇತಿಹಾಸವನ್ನು ತಿಳಿದುಕೊಂಡಂಥವರಿಗೂ ಕೂಡ ಇದು ಎಲ್ಲಕ್ಕಿಂತಲೂ ಜಟಿಲವಾದ ಪ್ರಶ್ನೆಯಾಗಿ ಬರುತ್ತದೆ. ಈ ವಿಷಯವನ್ನು ಏಕೆ ಹೇಳುತ್ತೇನೆ ಎಂದರೆ ಕೇವಲ ಯಾರೋ ನಾಲ್ಕು ಮಂದಿ ಆಫೀಸರ್ಸ್‌ಗೆ ಸಂಬಂಧಿಸಿದ್ದಲ್ಲ ಮತ್ತು 209 ಮಂದಿ ಸದಸ್ಯರು ತಿಳಿಸಿದ್ದಾರೆ ಅಂತ ಅಲ್ಲ, ಇವತ್ತಿನ ದಿವಸ ಈ ಸಭೆಯಲ್ಲಿ ಚರ್ಚೆಯಲ್ಲಿ ಭಾಗವಹಿಸಿದಂತಹ ಸದಸ್ಯರು ಹೇಳಿದಂತಹ ವಿಷಯಗಳ ಬಗ್ಗೆ ಏನೋ ಒಂದು ಸಮಾಧಾನ ಮಾಡುವ ಭಾವನೆಯಿಂದ ಹೇಳುತ್ತಾ ಇಲ್ಲ. ಈ ಸಮಸ್ಯೆ ದೇಶದಾದ್ಯಂತ ನಡೆದಿರುವಂತಹ ಸಮಸ್ಯೆ. ಈ ಸಮಸ್ಯೆಯನ್ನು ಪರಿಹರಿಸಬೇಕೆಂದರೆ ಸರ್ವೇ ಸಾಧಾರಣವಾಗಿ ಒಬ್ಬ ಪೋಲೀಸ್ ಅಧಿಕಾರಿಯಾಗಲಿ, ಒಂದು ಪೋಲೀಸ್ ಡಿಪಾರ್ಟ್‌ಮೆಂಟಾಗಲಿ ಅದರಿಂದ ಸಾಧ್ಯವಿಲ್ಲ. ಈಗ ಉದಾಹರಣಾರ್ಥವಾಗಿ ತೆಗೆದುಕೊಳ್ಳಿ, ಮೈಸೂರು ರಾಜ್ಯವನ್ನು ತೆಗೆದುಕೊಂಡರೆ 2 ಕೋಟಿ 87 ಲಕ್ಷ ಜನ ಈ ರಾಜ್ಯದಲ್ಲಿ ಇದ್ದಾರೆ. ಇದರಲ್ಲಿ ವಯಸ್ಕರು ಎಷ್ಟು ಜನ ಇದ್ದಾರೆ ಎಂದರೆ ಒಂದು ಕೋಟಿ 40 ಲಕ್ಷದಷ್ಟು ಆಗುತ್ತಾರೆ. ಇಂತಹವರನ್ನು ಪೋಲೀಸ್ ಖಾತೆಯಲ್ಲಿರತಕ್ಕ 21 ಸಾವಿರ ಜನ ಪೋಲೀಸ್‌ನವರು ಸಂರಕ್ಷಣೆ ಮಾಡಬೇಕು. ಇದರೊಳಗೆ ಐ. ಜಿ. ಪಿ. ಅವರೂ ಇದ್ದಾರೆ. 21 ಸಾವಿರ ಜನ ಪೋಲೀಸ್ ಕಾನ್‌ಸ್ಟೇಬಲ್ಸ್ ಇದ್ದಾರೆ. ಮನುಷ್ಯನಿಗೆ ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ಬೇಕಾಗಿರುವಂತಹದು ಏನೆಂದರೆ ಮನಸ್ಸಿನ ಒಂದು ಸಂಯಮತೆ. ನಾವು ಮಾಡತಕ್ಕ ಕರ್ತವ್ಯ, ನಾವು ಆಡತಕ್ಕ ನುಡಿ, ಇದು ಯೋಗ್ಯವಾದದ್ದು ಆಗದ ಹೊರತು ಆ ನುಡಿ ನುಡಿಯಬಾರದು ಆ ಭಾಷೆ ಮಾತ

ನಾಡಬಾರದು, ಅದರ ಜೊತೆಗೆ ಸಂಸ್ಕೃತಿ, ಪ್ರಜಾಪ್ರಭುತ್ವಾತ್ಮಕ ರಾಜ್ಯದಲ್ಲಿ ಮಾತನಾಡುವ ಹಕ್ಕು, ಪಬ್ಲಿಕ್ ಪ್ರೊಸೆಷನ್ ತೆಗೆದುಕೊಂಡು ಹೋಗುವ ಹಕ್ಕು ಎಲ್ಲರಿಗೂ ಇದೆ. ಎಲ್ಲಿಯವರೆಗೆ ಶಾಂತಯುತವಾಗಿ ಪ್ರೊಸೆಷನ್ ನಡೆಯುತ್ತದೆ ಅಲ್ಲಿಯವರೆಗೆ ಎಲ್ಲರಿಗೂ ಹಕ್ಕು ಇದೆ. ಆದರೆ ಆ ರೀತಿಯಿಂದ ಮಾಡುವುದರಿಂದ ಸಮಾಜದಲ್ಲಿ ಯಾರಿಗಾದರೂ ತೊಂದರೆಯಾಗಬಹುದು ಅಂತ ಅನ್ನುವ ಪ್ರಶ್ನೆ ಬಂದಾಗ ಆ ರೀತಿ ವರ್ತಿಸಕೂಡದು ಎಂಬುದು ಪ್ರಜಾಪ್ರಭುತ್ವಾತ್ಮಕ ನೀತಿ ಅದನ್ನು ನಾವು ಒಪ್ಪಿಕೊಂಡರೂ ಕೂಡ 21 ಸಾವಿರ ಜನ ಪೋಲೀಸರಿಂದ ಆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ ನಿಮಗೆ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಬೆಂಗಳೂರು ನಗರದಲ್ಲಿ 13 ಲಕ್ಷ ಜನ ಇದ್ದಾರೆ, ಎಷ್ಟೋ ವಾಹನಗಳು ಓಡುತ್ತಾ ಇವೆ ಮತ್ತು ಇನ್ನು ಇತರ ರೀತಿಯಲ್ಲಿ ಎಷ್ಟೋ ಜನ ಅಡ್ಡಾಡುತ್ತಾ ಇರುತ್ತಾರೆ. ತಮ್ಮ ಮನಸ್ಸಿಗೆ ಬಂದ ಹಾಗೆ ಎಲ್ಲರೂ ಅಡ್ಡಾಡುತ್ತಾ ಹೋದರೆ ಯಾವ ಒಂದು ರೆಗ್ಯುಲೇಷನ್, ಯಾವ ಒಂದು ಪರಿಪಾಠ ಇಲ್ಲದೇ ಹೋದರೆ ಬೆಂಗಳೂರು ನಗರದಲ್ಲಿರತಕ್ಕ 300 ಜನ ಟ್ರಾಫಿಕ್ ಪೋಲೀಸರಿಂದ ಟ್ರಾಫಿಕ್‌ನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ.

3-30 P.M.

ಇದು ನಿಮಗೂ ಗೊತ್ತಿರುವ ವಿಷಯ. ಎಲ್ಲಿಯವರೆಗೆ ನಾವು ಕಾನೂನು ಪ್ರಕಾರ ನಡೆಯಲು ಮನಸ್ಸು ಮಾಡುವುದಿಲ್ಲವೋ, ಎಲ್ಲಿಯವರೆಗೆ ರಾಜಕೀಯ ಪಕ್ಷವಾಗಲೀ, ರಾಜಕಾರಣಿಗಳೇ ಆಗಲೀ, ಸಾಮಾನ್ಯ ಜನತೆಯಾಗಲೀ ಕಾನೂನು ಅನುಸರಿಸಿ ನಡೆಯುವುದಿಲ್ಲವೋ ಅಲ್ಲಿಯವರೆಗೆ ತೊಂದರೆ ಬರುವುದು ಸಹಜ. ಆದರೆ ನಮ್ಮ ರಾಜ್ಯ ಸುಖೀರಾಜ್ಯವಾಗಬೇಕೆಂದು ಹೇಳಿದರೆ, ಆಗ ಎಲ್ಲರೂ ಕೂಡ ಯಾವುದಾದರೂ ಒಂದು ಕಾನೂನು ಕಟ್ಟಳೆಯ ಚೌಕಟ್ಟಿನಲ್ಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆ ರೀತಿ ಪೋಲೀಸ್ ದಳವೂ ಕೆಲಸ ಮಾಡಬೇಕು. ದೋಷಗಳು ಏನಿವೆ ಎಂಬುದನ್ನು ನೋಡಿ ಅವನ್ನು ನಿವಾರಣೆ ಮಾಡುವುದು ಮುಖ್ಯ. ಅಧಿಕಾರಿಗಳಲ್ಲಿ ಜಾಣರೂ ಇದ್ದಾರೆ, ದಕ್ಷರೂ ಇದ್ದಾರೆ. ಎಲ್ಲಿ ನೋಡಿದರೂ ಕರಪ್ಷನ್ ಇದೆಯೆಂದು ಹೇಳುತ್ತಾರೆ. ಅವನ್ನು ತಿಳಿದೂ ಮಾಡುತ್ತಾರೆ; ತಿಳಿಯದೆಯೂ ಮಾಡುತ್ತಾರೆ; ಗೊತ್ತಿದ್ದೂ ಮಾಡುತ್ತಾರೆ, ಗೊತ್ತಿಲ್ಲದೆಯೂ ಮಾಡುತ್ತಾರೆ. ಸಾಮಾನ್ಯವಾಗಿ ಇಲಾಖೆಗಳಲ್ಲಿ ಅಪ್ರಾಮಾಣಿಕನಾಗಿರಲಿ, ಅಯೋಗ್ಯನಾಗಿರಲಿ, ಯಾವೊಂದೇ ಕಾಮಗಾರಿಯಲ್ಲಿ ಇರಲಿ, ಅವನು ಇಲ್ಲಿಂದ ಬಂದವನೇ, ಅವನನ್ನು ಇಂಗ್ಲೀಷರು ಬಿಟ್ಟು ಹೋಗಲಿಲ್ಲ. ಪರದೇಶಗಳಿಂದ ಬಂದವನಲ್ಲ. ಅವನು ನಿಮಗೂ ನಮಗೂ ಸಂಬಂಧಿಕ. ಒಬ್ಬ ಇಂಡಸ್ಟ್ರಿಯಲಿಸ್ಟ್ ಇದ್ದಾನೆ, ಒಬ್ಬ ಸಾರ್ವಜನಿಕ ಸೇವೆಯಲ್ಲಿದ್ದಾನೆ, ಅವನು ನಿಜವಾಗಿಯೂ ಅಪ್ರಾಮಾಣಿಕನೇ ಎಂಬ ಸಂಶಯ ಬಂದಾಗ ಅವನನ್ನು ನಿವಾರಣೆ ಮಾಡಬೇಕಾದರೆ, ಅದರ ಬಗ್ಗೆ ಚರ್ಚೆ ಮಾಡಬೇಕು, ಪ್ರೋಬ್ ಮಾಡಬೇಕು. ತಪ್ಪು ಇದೆಯೋ ಇಲ್ಲವೋ ನೋಡಬೇಕು. ತಪ್ಪು ಇದೆಯೆಂದು ಸಾಕ್ಷಿಯಾದಾಗ ವಿಚಾರ ಮಾಡಿ ಕೋರ್ಟಿಗೆ ರೆಫರ್ ಮಾಡಿದರೆ ಅದರಿಂದೇನೂ ಕಷ್ಟವಾಗುವುದಿಲ್ಲ. ಇದಕ್ಕೆ ಬದಲು ಸಾಮೂಹಿಕವಾಗಿ ಒಂದು ಅವಹೇಳನ ಮಾಡಿದರೆ, ನಿಜವಾಗಿ ಯಾರೂ ಪ್ರಾಮಾಣಿಕರೂ ಇಲ್ಲ ಎಂದು ಅನೇಕರ ಮನಸ್ಸಿನಲ್ಲಿ ಬರುವುದು ಒಂದು ಸಂಭವ.

ಇನ್ನೂ ಅನೇಕ ವಿಷಯಗಳ ಬಗ್ಗೆ ಬೇರೆ ಬೇರೆ ಕಟ್ ಮೋಷನ್‌ಗಳಲ್ಲಿ ಮತ್ತು ಭಾಷಣಗಳಲ್ಲಿ ಹೇಳಿರುವ ಎಲ್ಲಾ ವಿಷಯಗಳ ಬಗ್ಗೆ ನಾನು ಈಗ ಉತ್ತರ ಹೇಳುವುದಕ್ಕಾಗುವುದಿಲ್ಲ. ಪೊಲೀಸ್ ಡಿಮ್ಯಾಂಡ್ ಬಗ್ಗೆ ಒಬ್ಬೊಬ್ಬರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಉತ್ತರ ಕೊಡುವುದಕ್ಕಾಗುವುದಿಲ್ಲ. ಒಂದು ವಿಷಯ ಮಾತ್ರ ಹೇಳುತ್ತೇನೆ. ನನ್ನ ಇಲಾಖೆ ಸಂಬಂಧವಾಗಿ ಯಾವ್ಯಾವ ವಿಷಯಗಳನ್ನು ಹೇಳಿದ್ದೀರೋ ಅವನ್ನು ಕೂಲಂಕುಷವಾಗಿ ವಿಚಾರ ಮಾಡಿ ಅದರ ಬಗ್ಗೆ ಯೋಗ್ಯವಾದಂಥ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ಅವನ್ನೆಲ್ಲಾ ಹೇಳುತ್ತಾ ಹೋದರೆ, ಬಹಳ ಕಾಲವಾಗುತ್ತದೆ. ನನಗೆ ಕೊಟ್ಟಿರುವ ವೇಳೆ ಕೇವಲ 40 ನಿಮಿಷಗಳು ಎಂಬುದಾಗಿ ಹೇಳಿದ್ದಾರೆ. ನಿಮ್ಮ ಕನ್‌ಸೆಂಟ್ ತೆಗೆದುಕೊಂಡು 5—10 ನಿಮಿಷಗಳು ಜಾಸ್ತಿ ತೆಗೆದುಕೊಂಡರೆ ತಪ್ಪಾಗುವುದಿಲ್ಲವೆಂದು ನನಗನ್ನಿಸುತ್ತದೆ, ಇದು ಜಟಿಲ ಸಮಸ್ಯೆ. ಇಡೀ ಸಮಾಜವನ್ನೇ ಪುನರ್ರಚನೆ ಮಾಡಬೇಕು. ಇಂತಹ ಸಂದರ್ಭದಲ್ಲಿ ಭದ್ರವಾದಂಥ ತಳಹದಿ ಇರಬೇಕೆಂಬುದಾಗಿ ನಾನು ಆ ವಿಷಯವನ್ನು ಒತ್ತಿ ಹೇಳಿದ್ದೇನೆ.

ಎರಡನೆಯದು ಜೈಲಿನ ಬಗ್ಗೆ ಹೇಳುವುದಾದರೆ, ಈಗಿರುವುದಕ್ಕಿಂತ ಹೆಚ್ಚು ಅದನ್ನು ಸುಧಾರಿಸಬೇಡಿ, ಹಾಗೆ ಸುಧಾರಿಸಿದರೆ, ಮತ್ತೆ ಎಲ್ಲರೂ ಅಲ್ಲಿ ಹೋಗಿ ಕೂತುಕೊಳ್ಳುತ್ತಾರೆಂಬ ಭಾವನೆ ಬಂದಿದೆ. ಅದು ಆ ರೀತಿ ಅಲ್ಲ. ಅದು ಸೋಷಿಯಲ್ ವೆಲ್‌ಫೇರಿನ ಒಂದು ಅಂಗ. ಅಲ್ಲಿ

(ಶ್ರೀ ಆರ್. ಎಂ. ಪಾಟೀಲ್)

ದೀನದಲಿತರು ಏನಾದರೂ ಒಂದು ಕೃತಿ ಮಾಡುವಾಗ ಅದರಲ್ಲಿ ಚ್ಯುತಿ ಆಗಿರುತ್ತದೆ. ನಾವು ಎಷ್ಟರಮಟ್ಟಿಗೆ ಅವರ ಬಗ್ಗೆ ನಮ್ಮ ಮನಸ್ಸಿನ ಅನುಕಂಪವನ್ನು ತೋರಿಸಬೇಕೋ ಅಷ್ಟನ್ನು ಅವಶ್ಯಕವಾಗಿ ತೋರಿಸಬೇಕು. ಅದಕ್ಕೆ ಬೇಕಾದ ದೃಷ್ಟಾಂತಗಳನ್ನು ಹಿಂದಿನ ಮಹಾಭಾರತ ಮತ್ತು ರಾಮಾಯಣಗಳಲ್ಲಿ ನಾವು ಕಾಣಬಹುದು. ಒಬ್ಬ ಮನುಷ್ಯ ತಪ್ಪು ಮಾಡಿದನೆಂದು ಅವನನ್ನು ಕಡೆಯವರೆಗೂ ಕಂಡೆಂಮ್ ಮಾಡುವುದು ಮನುಷ್ಯನ ಸ್ವಭಾವವಲ್ಲ, ನೀತಿಯಲ್ಲ. ಆ ತಪ್ಪಿಗೆ ಎಷ್ಟು ಶಿಕ್ಷೆಯಾಗಬೇಕೋ ಆ ಶಿಕ್ಷೆಯಾದ ನಂತರ ಪುನಃ ಅವನು ಸಮಾಜದಲ್ಲಿ ಯಾವ ರೀತಿ ಅವನ ಸ್ಥಾನಮಾನಗಳನ್ನು ಗಳಿಸುವುದಕ್ಕೆ ಸಾಧ್ಯವಿದೆಯೆಂದು ನೋಡಿ, ಅವನಿಗೆ ತಕ್ಕ ಸವಲತ್ತುಗಳನ್ನು ಕೊಡುವುದೇ ಸರ್ಕಾರದ ಉದ್ದೇಶ. ಉದಾಹರಣೆಗೆ ಹೇಳುವುದಾದರೆ, ಗುಲ್ಬರ್ಗಾ ಜೈಲಿನೊಳಗೆ ಅನೇಕ ಒಳ್ಳೆಯ ಮನೆತನದವರು, ಒಕ್ಕಲುತನ ಮಾಡತಕ್ಕವರು, ಕೆಲವರು ಒಳ್ಳೆಯ ಕಸುಬುದಾರರು ಅಂತಹವರು ಏನೋ ಒಂದು ಕಾರಣದಿಂದ ಒಂದು ಖೂನಿ ಕಟ್ಲೆಯೊಳಗೆ ಸಿಕ್ಕಿಬಿದ್ದು ಶಿಕ್ಷೆಯಾದವರೂ ಇದ್ದಾರೆ. ಅವರೆಲ್ಲರೂ ಈಗ ಹಿಂದಿ ಕಲಿತು ಒಬ್ಬಿಬ್ಬರು ಪಂಡಿತ ಪರೀಕ್ಷೆಯಲ್ಲಿ ಪಾಸ್ ಆದರು. ಅಂತಹವರು ಹೊರಗೆ ಬಂದರೆ ನೂರಾರು ರೂಪಾಯಿಗಳ ಸಂಬಳ ಸಿಗಬಹುದು. ಅದೇ ರೀತಿಯಲ್ಲಿ ಕಸುಬುದಾರನಾದವನು ಕೆಲವು ಡಿಜೈನ್ ಮಾಡುತ್ತಿದ್ದಾನೆ. ಅವನ ಡಿಜೈನ್ಸ್ ಬಹಳ ಉತ್ತಮವಾದಂಥವುಗಳು. ಇವತ್ತಿನ ದಿವಸ ದೊಡ್ಡಬಳ್ಳಾಪುರದಲ್ಲಿ ಆ ಡಿಸೈನ್ಸ್ ನಂತೆ ಸೀರೆ ನೇದರೆ ಅದರಿಂದ ಸಾವಿರಾರು ರೂಪಾಯಿಗಳು ಸಿಗುತ್ತವೆ. ಅಂತಹ ಉತ್ತಮ ತರಬೇತಿಯನ್ನು ಜೈಲುಗಳಲ್ಲಿ ಪಡೆಯುತ್ತಿದ್ದಾರೆ. ಅವರಿಗೆ ಈ ರೀತಿ ತರಬೇತಿಯನ್ನು ಅಲ್ಲಿ ಕೊಡುವುದರಿಂದ, ಯಾವ ಮನುಷ್ಯನಿಗೇ ಆಗಲಿ ದೈವದತ್ತವಾದ ಬುದ್ಧಿ ಇರುತ್ತದೆ, ಆ ಬುದ್ಧಿ ಬೆಳವಣಿಗೆಗೆ ಒಂದು ಅಸ್ಪದ ಮಾಡಿಕೊಟ್ಟಂತಾಗುತ್ತದೆ. ಇನ್ನು ಕಂಡುಹಿಡಿದು ಜೈಲಿನ ಇಲಾಖೆಯವರು ಮೇಲಿಂದ ಮೇಲೆ ಅನೇಕ ಸುಧಾರಣೆಯ ಜನೆಗಳನ್ನು ಮಾಡುತ್ತಿದ್ದಾರೆ ಅದರೊಳಗೆ ಶಿಕ್ಷೆ 20 ವರ್ಷಗಳಾದರೂ ಸಹ ಅವರ ನಡೆವಳಿಕೆಯಿಂದ, ಅವರ ನೀತಿಯಿಂದ, ಅವರ ಗುಣಗಳಿಂದ ಅವರಿಗೆ ಅಷ್ಟು ವರ್ಷಗಳ ರಿಮಿಷನ್ ಕೊಡುವ ಯೋಜನೆಗಳು ಇದ್ದೇ ಇವೆ, ಇಲ್ಲದೆ, ಯಾರು ಉತ್ತಮರು ಅನಿಸಿಕೊಂಡಿದ್ದಾರೋ ಅಂತಹವರಿಗೆ ರಿಪಬ್ಲಿಕ್ ಡೇ ದಿವಸ ಅಥವಾ ಸ್ವಾತಂತ್ರ್ಯ ದಿನ ಜನರಲ್ಲಾಗಿ ಅಮ್ನೆಸ್ಟೀ ಕೊಡುವ ಕಾಲಕ್ಕೆ ಅವರಿಗೂ ಕೊಡುತ್ತಿದ್ದೇವೆ. ಇದಲ್ಲದೆ ಈಗಾಗಲೇ ಅಂತಹವರಿಗೆ ಅನೇಕ ಸವಲತ್ತುಗಳನ್ನು ಕೊಟ್ಟಿದ್ದೇವೆ. ಅಂತಹ ಸವಲತ್ತುಗಳಲ್ಲಿ ತಮ್ಮ ಮನೆ ಮಂದಿಯನ್ನು ನೋಡಲು ಹೋಗುತ್ತೇವೆ ಎಂದು ಹೇಳಿದರೆ, ಯಾರಾದರೂ ಸಿಕ್ ಇದ್ದರೆ ಅಂತಹವರನ್ನು ನೋಡಿಕೊಂಡು ಬರಲು ಪೆರೋಲ್ ಮೇಲೆ ಹೋಗುವ ಅವಕಾಶ ಮಾಡಿದ್ದೇವೆ. ಇದರ ಜೊತೆಗೆ ಉತ್ತಮವಾದ ಆಹಾರವನ್ನು ವೇಳೆವೇಳೆಗೆ ಕೊಡುತ್ತಿದ್ದಾರೆ.

[MR. CHAIRMAN (SRI S. D. KOTHAVALE) in the Chair]

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರಿನ ಜೈಲಿನಲ್ಲಿ ಆ ರೀತಿ ಇಲ್ಲ.

ಶ್ರೀ ಆರ್. ಎಂ. ಪಾಟೀಲ್.—ಅವರಿಗೆ ಇಂತಹ ಉತ್ತಮವಾದಂಥ ಜೀವನವನ್ನು ಅಲ್ಲಿ ಕೊಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಅದಕ್ಕಿಂತಲೂ ಹೆಚ್ಚಾಗಿ ಇತ್ತೀಚೆಗೆ ನಾವು ಒಕ್ಕಲನ ಮಾಡುವುದು, ತೋಟಗಾರಿಕೆ ಮಾಡುವುದು ಮತ್ತು ಹಳ್ಳಿಗಳಲ್ಲಿ ಕೆಲಸ ಮಾಡುವ ಕಾರ್ಯಕ್ರಮಗಳನ್ನು ಸೇರಿಸುತ್ತಿದ್ದೇವೆ. ದಿನೇ ದಿನೇ ಇವರು ಅಭಿವೃದ್ಧಿಯಾಗಿ ಬರುತ್ತಿದ್ದಾರೆ. ಹೆಚ್ಚು ಶ್ರದ್ಧೆ ಮತ್ತು ಯೋಗ್ಯತೆಯಿಂದ ಕೆಲಸ ಮಾಡುವವರನ್ನು ಕಂಡುಕೊಂಡು ಈಗ ಮಲಪ್ರಭಾ ಯೋಜನೆಯ ಒಳಗೆ ಕಾಲುವೆ ತೆಗೆಯುವ ಯೋಜನೆಯಲ್ಲಿ ಮೊದನೆಯ ಹಂತದಲ್ಲಿ 750 ಜನ ಕೈದಿಗಳಿಗೆ ಒಂದು ಓಪನ್ ಏರ್ ಜೈಲ್ ಎಂಬುದಾಗಿ ಎಸ್ಟಾಬ್ಲಿಷ್ ಮಾಡಿ ಅಲ್ಲಿ ಅವರನ್ನೆಲ್ಲಾ ಕೆಲಸಕ್ಕೆ ಹಚ್ಚಬೇಕೆಂಬ ಯೋಚನೆ ಇದೆ. ಅದು ಬಹುತರವಾಗಿ ಈ ತಿಂಗಳ ಅಖೈರ್ ಒಳಗೆ ಕಾರ್ಯರೂಪದಲ್ಲಿ ಬರುತ್ತದೆ. 3 ವರ್ಷದ ಹಿಂದೆ ಇದೇ ಸಭೆಯಲ್ಲಿ ಈ ವಿಚಾರವಾಗಿ ಹೇಳಿದ್ದು ಉಂಟು. ಈರೀತಿ ಜೈಲಿನ ಸುಧಾರಣೆ ಮತ್ತು ಜೈಲು ಖಾತೆ ಬೆಳವಣಿಗೆ ಇವುಗಳ ಬಗ್ಗೆ ಹೇಳುವಾಗ ಒಂದು ಅಭಿಮಾನದಿಂದ ಹೇಳುತ್ತೇನೆ. ಮೈಸೂರು ರಾಜ್ಯದಲ್ಲಿ ಜೈಲಿನಲ್ಲಿರುವ ಕೈದಿಗಳು ಉಳಿದ ರಾಜ್ಯದ ಜೈಲಿನಲ್ಲಿರುವ ಕೈದಿಗಳಿಗಿಂತಲೂ ಸುಖವಾಗಿದ್ದಾರೆ ಎಂದು ಹೇಳಿದರೆ ನಾನು ಅತಿಶಯೋಕ್ತಿಯಿಂದ ಹೇಳುತ್ತೇನೆ ಎಂದು ತಾವು ಭಾವಿಸಿಕೊಳ್ಳಬಾರದು.

ಶ್ರೀ ಎಸ್. ಶಿವಪ್ಪ.—ನಿಮ್ಮ ಹಿತದೃಷ್ಟಿಯಿಂದ ಜೈಲಿನ ಸುಧಾರಣೆ ಆಗಬೇಕು. ಈ ಜೈಲಿಗೆ ನಿಮ್ಮನ್ನು ಜಾಸ್ತಿ ಕಳುಹಿಸಬೇಕಾಗುತ್ತದೆ ಆ ದೃಷ್ಟಿಯಿಂದ ಜೈಲಿನ ಸುಧಾರಣೆ ಆಗುವುದು ಒಳ್ಳೆಯದು.

ಶ್ರೀ ಆರ್. ಎಂ. ಪಾಟೀಲ್.—ಯಾರು ಜೈಲಿಗೆ ಹೋಗುವ ಮನಸ್ಸು ಇದೆಯೋ ಅವರು ಸುಧಾರಣೆ ಆಗಲಿ ಎನ್ನುವ ಕಳಕಳಿ ಇದ್ದೇ ಇರುತ್ತದೆ. ಜೈಲು ಸುಧಾರಣೆ ಆಗುವುದರಿಂದ ಎಲ್ಲರಿಗೂ ಉಪಯೋಗವಾಗುತ್ತದೆ. ಅದನ್ನು ಉಪಯೋಗ ಮಾಡಿಕೊಳ್ಳುವಂತೆ ಬುದ್ಧಿಯೂ ಬೇಕು. ನಿಮಗೆ ಉದಾಹರಣೆ ಹೇಳುತ್ತೇನೆ. ಮಾಂಡಲೆ ಜೈಲಿನೊಳಗೆ ಬಾಲಗಂಗಾಧರ್ ತಿಲಕ್ ಇದ್ದಾಗ ಆ ಜೈಲಿನ ಪರಿಸ್ಥಿತಿ ಮತ್ತು ಅವರ ಇರುವಿಕೆಯ ಪರಿಸ್ಥಿತಿ ಅದನ್ನು ವಿಚಾರಿಸಿದರೆ ಅಲ್ಲಿ ನಮ್ಮ ರಾಷ್ಟ್ರದ ನಾಯಕರು 6 ರಿಂದ 8 ವರ್ಷಗಳ ಕಾಲ ಅಂತಹ ಕಡೆ ಕುಳಿತುಕೊಂಡು ಭಗವದ್ಗೀತೆ ಸಾರವನ್ನು ಬರೆದರು. ಭಗವದ್ಗೀತೆಯನ್ನು ವ್ಯಾಸರೂ ಬರೆದರು. ಜೈಲಿನಲ್ಲಿ ಮಹಾತ್ಮರು ಬರೆದಂಥ ಗ್ರಂಥವನ್ನು ತುಲನ ಮಾಡಿದರೆ ಜೈಲುವಾಸ ಉತ್ತಮರಿಗೂ ಬೇಕು ಎಂದು ಹೇಳದೇ ಇರಲಾರೆ. ಇಂತಹ ಗ್ರಂಥವನ್ನು ಬರೆಯುತ್ತಾರೆ. ಮಾನ್ಯ ಶಿವಪ್ಪನವರು ಅಂತಹ ಗ್ರಂಥವನ್ನು ಬರೆಯುತ್ತೇನೆ ಎಂದು ಇಚ್ಛಿಸಿ ಜೈಲಿಗೆ ಹೋಗುತ್ತೇನೆಂದು ಇಚ್ಛಿಸಿದಲ್ಲಿ ಅದಕ್ಕಿಂತಲೂ ಹೆಚ್ಚಿನ ಸೌಕರ್ಯ ಒದಗಿಸಿಕೊಡಲಿಕ್ಕೆ ತಜವೀಜು ಮಾಡಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಅವರಿಗೆ ಮಾತ್ರ ಆ ಟ್ರೀಟ್‌ಮೆಂಟ್ ಕೊಡುತ್ತೀರೋ ಅಥವಾ ಎಲ್ಲರಿಗೂ ಟ್ರೀಟ್‌ಮೆಂಟ್ ಕೊಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಅವರು ಅಪೋಸಿಷನ್ ಲೀಡರ್, ಅವರಿಗೆ ಕೊಡದಿದ್ದರೆ ಹೇಗೆ !

ಶ್ರೀ ಎಂ. ಎಸ್. ಕೃಷ್ಣನ್.—ಅದು ಏನೇ ಇರಲಿ ಸಾಧಾರಣ ಖೈದಿಗಳಿಗೆ ಕೊಡುವ ಅನುಕೂಲತೆಗಳನ್ನು ಸುಧಾರಣೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಆರ್. ಎಂ. ಪಾಟೀಲ್.—ಇನ್ನು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವಾಗ ರಾಜ್ಯಾದ್ಯಂತ ಸರ್ವೇಸಾಧಾರಣವಾಗಿ ಹೊಸ ಕಾನೂನು ಬಂದನಂತರ ಕಳೆದ 6 ತಿಂಗಳಿನಿಂದ ಬಹುತರವಾಗಿ ಎಲ್ಲಾ ಮುನಿಸಿಪಾಲಿಟಿಯವರೂ ಎಂದರೆ ಶೇಕಡ 80 ಪರ್ಸೆಂಟು ಕಂದಾಯ ಏರಿಸಲಿಕ್ಕೆ ಪ್ರಯತ್ನಪಟ್ಟಿದ್ದಾರೆ. ಅದುದರಿಂದ ಈ ಸಂಸ್ಥೆ ಆದಾಯ ಆಗುವಂಥಾದ್ದು ಶುಭ ಲಕ್ಷಣ ಎಂದು ಕಾಣುತ್ತದೆ. ಇದರ ಜೊತೆಗೆ ರಾಜ್ಯದಲ್ಲಿರುವ 219 ಮುನಿಸಿಪಾಲಿಟಿಗಳೊಳಗೆ ಸರ್ವೇಸಾಧಾರಣವಾಗಿ 140 ಮುನಿಸಿಪಾಲಿಟಿಯಲ್ಲಿ ವಾಟರ್ ಸಪ್ಲೈ ಒಂದಲ್ಲ ಒಂದು ತರಹ ಅರೇಂಜ್‌ಮೆಂಟ್ ಇದೆ. ಉಳಿದ 61 ನಗರಗಳ ಪೈಕಿ ಹೊಸದಾಗಿ ಯೋಜನೆಗಳನ್ನು ಹಾಕಬೇಕಾಗಿದೆ. ಈ ಯೋಜನೆಗಳು ಇಲ್ಲಿಯವರೆಗೆ ಬಹಳ ಖರ್ಚಿನ ಯೋಜನೆಗಳು ಎಂದು ಅನ್ನಿಸಿದೆ. ಸಣ್ಣ ಮುನಿಸಿಪಾಲಿಟಿಗಳಿಗೆ ಇಷ್ಟು ಎಂದು ಇತ್ತು. ಅದಕ್ಕೆ ಕೇಂದ್ರ ಸರ್ಕಾರದವರು, ರಾಜ್ಯ ಸರ್ಕಾರದವರ ಕನ್‌ಸೆಂಟ್ ತೆಗೆದುಕೊಂಡು ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಮ್ ಯೋಜನೆಯನ್ನು 20 ಸಾವಿರ ಜನಸಂಖ್ಯೆ ಇರುವ ಯಾವ ನಗರಗಳು ಇವೆಯೋ ಅವೆಲ್ಲಕ್ಕೂ ಸವಲತ್ತು ಕೊಡಬೇಕು ಎಂದು ಈ ಪ್ರಕಾರ ಮಾಡಿದ್ದೇವೆ. ಅದರ ಲಾಭ ಸರ್ವೇಸಾಧಾರಣವಾಗಿ 61 ನಗರಗಳ ಪೈಕಿ 50-55 ನಗರಗಳಿಗೆ ಉಪಯೋಗವಾಗುತ್ತದೆ ಎಂದು ಹೇಳುತ್ತೇನೆ. ಇದಲ್ಲದೆ ದೊಡ್ಡ ನಗರಗಳಿಗೆ ಅಂಡರ್ ಗ್ರೌಂಡ್ ಡ್ರೈನೇಜ್ ಸವಲತ್ತನ್ನು ಕೇಂದ್ರ ಸರ್ಕಾರ ಕೆಲವು ಮಟ್ಟಿಗೆ ಕೊಡುತ್ತಾ ಇದ್ದಾರೆ. ಅನೇಕ ಮುನಿಸಿಪಾಲಿಟಿಯವರು ಎಲ್ಲೆಲ್ಲಿ ವಾಟರ್ ಸಪ್ಲೈ ಸಾಕಷ್ಟು ಇದೆಯೋ ಅಂತಹವರೆಲ್ಲರೂ ಈ ಸವಲತ್ತನ್ನು ಪಡೆಯಲಿಕ್ಕೆ ಪ್ರಯತ್ನಪಡುತ್ತಿದ್ದಾರೆ.

ಇನ್ನು ಎರಡನೆಯದಾಗಿ ಈ ಸಂಸ್ಥೆಗಳು ಒಂದು ರೀತಿಯಿಂದ ದಕ್ಷ ಆಡಳಿತಕ್ಕೆ ಒಳಪಡಬೇಕು ಎಂದರೆ ಇಲ್ಲಿರುವ ನೌಕರದಾರರು ಬದಲಾವಣೆಯಾಗಬೇಕು, ಟ್ರೈನಿಂಗ್ ಆಗಬೇಕು, ಇವೆರಡೂ ಆಗಬೇಕು ಎಂದು ಹೇಳುವುದು ನಿರ್ವಿವಾದ ಮಾತು. ಅಲ್ಲಿರುವ ನೌಕರರ ಇತಿಹಾಸ ನೋಡಿದರೆ ಯಾವ ಹುಡುಗನಿಗೆ ನೌಕರಿ ಸಿಕ್ಕುವುದಿಲ್ಲವೋ ಅಂತಹವನು ಮುನಿಸಿಪಲ್ ಕೌನ್ಸಿಲರ್ ಬೆನ್ನುಹತ್ತಿ ಮುನಿಸಿಪಾಲಿಟಿಯ ಒಳಗೆ ನೌಕರಿ ತೆಗೆದುಕೊಂಡಿದ್ದಾನೆ. ಇದು ಅವನ ಮೊದಲನೆ ಯೋಗ್ಯತೆ. ಅವನು ನಮ್ಮಿಂದ ಬಂದವ ಎನ್ನುವ ಭಾವನೆಯಿಂದ ಅವನು ಕೆಲಸ ಕಲಿಯಲಿ ಕಲಿಯದೇ ಇರಲಿ ಹಾಗೆ ಕಂಟಿನ್ಯೂ ಆಗಿ ಬಂದಿದ್ದಾನೆ. ಇದು ಕಾರಕೂನನಿಂದ ಹಿಡಿದು ಚೀಫ್ ಆಫೀಸರವರೆಗೂ ಆಗಿದ್ದಾರೆ. ಇದು ಅವರ ಅದಕ್ಷತೆಯ ಲಕ್ಷಣ ಕಂಡುಬರುತ್ತದೆ. ಅಂತಹ ನೌಕರದಾರ ತಪ್ಪು ಮಾಡಿದರೆ ಅವನನ್ನು ಕಿತ್ತು ಹಾಕಿದರೆ ಕೌನ್ಸಿಲರ್ ಕಡೆ ಇರುವುದರಿಂದ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಅನೇಕ ಮುನಿಸಿಪಾಲಿಟಿಗಳಲ್ಲಿ ಈ ದಕ್ಷತೆ ಅಭಾವ ಕಂಡುಬಂದಿದ್ದರಿಂದ ಹೊಸದಾಗಿ ಮುನಿಸಿಪಾಲಿಟಿ ಆಕ್ಟಿನೊಳಗೆ ಒಂದು ಯೋಜನೆ ಮಾಡಿ ಅದಕ್ಕೆ ತಕ್ಕಂತೆ ನೇಮಕಗಳನ್ನು ಮಾಡಿ ಆ ರೂಲ್ಸನ್ನು ಅನುಸರಿಸಿ ಅವರುಗಳನ್ನು ರೆಕ್ರೂಟ್ ಮಾಡಬೇಕು ಮತ್ತು ಟ್ರಾನ್ಸ್‌ಫರ್ ಮಾಡಬೇಕು ಎನ್ನುವ ಭಾವನೆಯಿಂದ ಇದನ್ನು ಪಿ.ಎಸ್.ಸಿ. ಅವರಿಗೆ ಕಳುಹಿಸಿದ್ದೇವೆ. ಅವರಿಂದ ಎಕ್ಸಾಮಿನ್ ಆಗಿ

(ಶ್ರೀ ಆರ್. ಎಂ. ಪಾಟೀಲ್)

ಬಂತು. ಇದು 29-3-68ರಲ್ಲಿ ಮೈಸೂರು ಗೆಜೆಟ್‌ನಲ್ಲಿ ಪಬ್ಲಿಷ್ ಆಗಿದೆ. ಸಲಹೆ ಕೊಡುವಂತಹವರು ಮತ್ತು ಯಾವುದಾದರೂ ತಕರಾರು ಕೊಡುವಂತಹವರು ಕೊಡಬಹುದು ಎಂದು ನೋಟಿಫಿಕೇಷನ್ ಇಷ್ಯೂ ಆಗಿರುವುದರಿಂದ ನಾನು ತಮಗೆ ಹೇಳುವುದು ಏನೆಂದರೆ ಇದರಿಂದ ಕೆಲವೊಂದು ಮಟ್ಟಿಗೆ ತೊಂದರೆ ಆದರೂ ಸಾಮಾನ್ಯವಾಗಿ ಆಡಳಿತಕ್ಕೆ ಉಪಯೋಗವಾಗುತ್ತದೆ ಎಂದು ಮಾಡಿದ್ದೇವೆ. ಇದರಲ್ಲಿ ತೊಂದರೆ ಏನು ಎಂದರೆ ಎಷ್ಟೋ ಸಂಬಳ ಬರಲಿ ಇದ್ದ ಊರಿನಲ್ಲೇ ನೌಕರಿ ಮಾಡಿಕೊಂಡು ಇರುತ್ತಾರೆ. ಇವೊತ್ತಿನ ದಿವಸ ಟ್ರಾನ್ಸ್‌ಫರ್ ಮಾಡಿದರೆ ಎರಡನೇ ಕಡೆ ಹೋದರೆ ಅವನಿಗೆ ಕಷ್ಟವಾಗುತ್ತದೆ ಎನ್ನುವ ಭಾವನೆ ಇದೆ. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಅದು ಉಪಕಾರವಾಗುವುದರಿಂದ ಈ ಕ್ರಮ ತೆಗೆದುಕೊಂಡಿದ್ದೇವೆ. ಇದು ಸಂಸ್ಥೆಯ ಹಿತದೃಷ್ಟಿಯಿಂದ ಬೇಕಾದ ಕಾರ್ಯಕ್ರಮವಾಗಿರುವುದರಿಂದ 1½-2 ತಿಂಗಳೊಳಗೆ ರೂಲ್ಸ್ ಫೈನಲೈಸ್ ಮಾಡಿ ಕಾನೂನು ಅನುಸರಿಸಿ ಅಮಲ್ ಬಜಾವಣಿಗೆ ಬರಬೇಕು. ಇದು ಸರ್ವೇ ಸಾಮಾನ್ಯವಾಗಿ ಎಲ್ಲಾ ಮುನಿಸಿಪಾಲಿಟಿಗಳಿಗೂ ಅನ್ವಯಿಸುವಂಥ ವಿಷಯ.

ಇನ್ನು ಎರಡನೆಯದು ಬೆಂಗಳೂರು ನಗರದ ಒಂದು ವಿಷಯ ಮಾತನಾಡುವಾಗ ಬಹಳ ಮಂದಿ ಸದಸ್ಯರು ಇದರೊಳಗೆ ಬೆಂಗಳೂರಿನಿಂದ ಬಂದಂಥ ಪ್ರತಿನಿಧಿಗಳು ನೀರಿನ ದರದ ವಿಷಯವಾಗಿ ತಕರಾರು ಮಾಡುತ್ತಾ ಇದ್ದಾರೆ. ಕೆಲಸ ಆಗಿದೆ. ಅನೇಕ ಮುಖ್ಯ ರಸ್ತೆಗಳಲ್ಲಿ ಬೇಕಾದಷ್ಟು ಕೆಲಸವಾಗಿದೆ. ನಗರಕ್ಕೆ ಸೌಂದರ್ಯವೂ ಬಂದಿದೆ. ಆದರೆ ನಗರದ ಒಳಭಾಗದಲ್ಲಿ ಜನರು ಹೆಚ್ಚಿಗೆ ವಾಸಮಾಡತಕ್ಕ ಕಡೆ ಈ ಕೆಲಸ ಆಗಿಲ್ಲ ಎಂದು ಹೇಳುತ್ತಿದ್ದಾರೆ. ಹಾಗೆ ಹೇಳತಕ್ಕದ್ದು ಸ್ವಾಭಾವಿಕವೇ. ಆದರೆ ಮುಂಜಾನೆ ಎದ್ದ ಕೂಡಲೆ ಯಾವುದನ್ನು ಮೊದಲು ಸ್ವಚ್ಛ ಮಾಡುತ್ತಾರೆ ಮೊದಲು ಹೇಗೆ ಸ್ವಚ್ಛ ಮಾಡತಕ್ಕದ್ದು ಯಾವುದೆಂದರೆ ಮನೆಯ ಮುಂಭಾಗದಲ್ಲಿರತಕ್ಕ ಹೊಸಿಲು. ಅದನ್ನು ಸಾರಿಸಿ ಅಲ್ಲಿ ರಂಗವಲ್ಲಿ ಎನ್ನು ಹಾಕಿ, ಅರಿಶಿನ ಕುಂಕುಮಗಳನ್ನು ಹಾಕಿ ಅಲಂಕಾರ ಮಾಡುತ್ತಾರೆ ಏಕೆ? ಜನರು ಮೊದಲು ಬಂದು ನೋಡತಕ್ಕ ಸ್ಥಳ ಅದು ಎಂದು. ಅದೇ ರೀತಿ ಇಲ್ಲಿಯೂ ಸಹಾ ನಮ್ಮ ಅಧಿಕಾರಿಗಳು ಹೊರಗಡೆಯಿಂದ ಜನರು ಬರತಕ್ಕಂಥ ತಿರುಗಾಡತಕ್ಕಂಥ ರಸ್ತೆಗಳು ಯಾವ್ಯಾವು ಇವೆಯೋ ಅವುಗಳನ್ನು ಮೊದಲು ಮಾಡಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ತಕರಾರು ಮಾಡದಿದ್ದರೆ ಇದರಿಂದ ಅವರಿಗೇ ಹೆಚ್ಚಿನ ಲಾಭವುಂಟು. ಈಗೇನು ಅವರು ರಸ್ತೆಗಳ ಕೆಲಸವನ್ನು ತೆಗೆದುಕೊಂಡಿದ್ದಾರೆ ಅವೆಲ್ಲವೂ ಬಹಳ ದೊಡ್ಡ ದೊಡ್ಡ ರಸ್ತೆಗಳು. ಅವುಗಳನ್ನೇನು ಈಗ ಒಂದು ದುರಸ್ತಿ ಮಾಡಿದಾರಲ್ಲ ಅದು ಸಹಜವಾಗಿ 4-5 ವರ್ಷಗಳ ಕಾಲ ಬಂದೇ ಬರುತ್ತೆ. ಆ ರಸ್ತೆಗಳಿಗೆಲ್ಲಾ ಒಂದು ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚುಮಾಡತಕ್ಕ ಶಕ್ತಿ ಇರತಕ್ಕ ಆ ಸಂಸ್ಥೆಗೆ ಸಣ್ಣ ಓಣಿಗಳನ್ನು ರಿಪೇರಿ ಮಾಡುವುದಕ್ಕೆ ಶಕ್ತಿ ಇಲ್ಲವೇ? ಆದ್ದರಿಂದ ಅವುಗಳನ್ನು ಮಾಡುವುದಕ್ಕೆ ಅವರಿಗೆ ಅಂಥಾ ಕಷ್ಟವೇನೂ ಆಗುವುದಿಲ್ಲ. ಅಲ್ಲಿ ಒಂದು ಫುಟ್ ಕೆಲಸ ಮಾಡುವುದೂ ಒಂದೇ ಇಲ್ಲಿ ಮಾನ್ಯ ಸದಸ್ಯರು ಕೇಳತಕ್ಕ ಕಡೆ 6 ಫುಟ್ ಕೆಲಸ ಮಾಡುವುದೂ ಒಂದೇ. ಇಲ್ಲಿ ಒಂದು ಮೈಲಿ ಕೆಲಸ ಮಾಡುವುದೂ ಒಂದೇ ಅಲ್ಲಿ 10 ಮೈಲಿಗಳ ಕೆಲಸ ಮಾಡುವುದು ಒಂದೇ. ಅವೆಲ್ಲಾ ಸಣ್ಣ ಸಣ್ಣ ಓಣಿಗಳು. ಇಡೀ ನಗರದಲ್ಲಿ ಎಲ್ಲೆಲ್ಲಿ ಕೊಳಕು ಪ್ರದೇಶವಿದೆಯೋ ಅದನ್ನೆಲ್ಲಾ ಶುದ್ಧಮಾಡಬೇಕು ಅನ್ನುವ ಕಾಳಜಿ ಮತ್ತು ಕಳಕಳಿ ಮಾನ್ಯ ಸದಸ್ಯರಿಗೆ ಎಷ್ಟು ಇದೆಯೋ ಸರ್ಕಾರಕ್ಕೂ ಅಷ್ಟೇ ಕಳಕಳಿ ಮತ್ತು ಕಾಳಜಿ ಇದೆ. ಅಷ್ಟೇ ಅಲ್ಲದೆ ಎಲ್ಲೆಲ್ಲಿ ಹೆವಿ ಟ್ರಾಫಿಕ್ ಇದೆಯೋ ಅಲ್ಲೆಲ್ಲಾ ಸಿಮೆಂಟ್ ರಸ್ತೆಗಳನ್ನು ಮಾಡುವುದಕ್ಕೆ ಅವರು ಆಗಲೇ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಆದ್ದರಿಂದ ಅದರ ಬಗ್ಗೆ ಈಗ ವ್ಯಸನ ಪಡಬೇಕಾದ ಅಗತ್ಯವಿಲ್ಲ ಎಂದು ಹೇಳುತ್ತೇನೆ. ಈ ದಿವಸ ಕಾರ್ಪೊರೇಟರಗಳು ಮಾಡತಕ್ಕ ಒಂದು ಹೊಣೆಗಾರಿಕೆ ಕೆಲಸಗಳೇನಿದ್ದವು ಅವುಗಳನ್ನು ನಡೆಸುವುದಕ್ಕಾಗಿ ಆ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಂಡಿದೆ, ಇಲ್ಲಿ ಮಾನ್ಯ ಸದಸ್ಯರೇನು ಸಲಹೆಗಳನ್ನು ಕೊಡುತ್ತಿದ್ದಾರೋ ಅದರಲ್ಲಿ ಅವರಾಗಲೇ 100ಕ್ಕೆ 90ರಷ್ಟು ಕೆಲಸಗಳನ್ನು ಮುಗಿಸಿದ್ದಾರೆ. ಆದರೆ ನಾನು ಶ್ರೀ ಕೃಷ್ಣನ್‌ರವರಿಗೆ ಒಂದು ಪ್ರಶ್ನೆ ಕೇಳುವುದಕ್ಕೆ ಇಚ್ಛಿಸುತ್ತೇನೆ. ಅವರು ಆರಿಸಿ ಬಂದಿರತಕ್ಕದ್ದು ಆದರೆ ಅವರು ಆ ಸ್ಥಳಕ್ಕೆ ಎಷ್ಟು ಸಾರಿ ಭೇಟಿ ಕೊಟ್ಟಿದ್ದಾರೆ, ನಾನು ಅಲ್ಲಿಗೆ ಎಷ್ಟು ಸಾರಿ ಭೇಟಿ ಕೊಟ್ಟಿದ್ದೇನೆಂಬುದನ್ನು ಅಲ್ಲಿರತಕ್ಕ ಜನರನ್ನು ಕೇಳೋಣ. ಅದಕ್ಕೆ ಅವರು ಒಪ್ಪುತ್ತಾರೆಯೇ? ಆದರೆ ನಾನಿನ್ನು ಶ್ರೀ ಶಾಮಣ್ಣನವರ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಅವರ ಪ್ರಜಾಸತ್ತಾತ್ಮಕ ಆಡಳಿತವನ್ನು ಬಹಳ ತಪ್ಪಾಗಿ ತಿಳಿದುಕೊಂಡಿರುವಂತೆ ಕಂಡುಬರುತ್ತಿದೆ. ಯಾರು ಏನೇ ತಪ್ಪು ಮಾಡಲಿ ಏನೇ ಅನ್ಯಾಯ ಮಾಡಿರಲಿ ಅವರೇ ಅಲ್ಲಿ ಇರಬೇಕು ಎನ್ನುವುದು ಅವರ ಅಭಿಪ್ರಾಯವಾಗಿದೆ. ಆದರೆ ಅದು ಸರಿಯಲ್ಲ. ಒಂದು ಸಂಸ್ಥೆಯಲ್ಲಿ ಸೇರಿಕೊಂಡ ನಂತರ ಅಲ್ಲಿ ಸರಿಯಾದ ಯೋಗ್ಯತೆ ಇಟ್ಟುಕೊಂಡು ಕೆಲಸ

ಮಾಡುವುದಕ್ಕೆ ಆಗದೆ ಇದ್ದಾಗ ಅಂಥವರನ್ನು ಅವರು ಅಲ್ಲೇ ಇರಲಿ ಅನ್ನುವುದಾದರೆ ಅಂಥಾ ಪ್ರಜಾಸತ್ತಾತ್ಮಕ ಆಡಳಿತವನ್ನು ಇಟ್ಟುಕೊಂಡೇನು ಪ್ರಯೋಜನ ! ಅವರೇ ಹೇಳಲಿ.

[MR. DEPUTY SPEAKER in the chair]

ಇನ್ನು ವಾಟರ್ ಸಪ್ಲೈಯ ಬಗ್ಗೆ ಶ್ರೀ ಶಾಮಣ್ಣನವರು ಮಾಡಿದತಕ್ಕ ವಾದವನ್ನು ನಾವು 5 ಭಾಗವಾಗಿ ವಿಭಾಗ ಮಾಡಬಹುದು. ಒಂದು – ಈಗಿನ ನೀರಿನ ದರಗಳು ಹೆಚ್ಚಾಗಿವೆ, ಆ ದರಗಳನ್ನು ಏರಿಸಿ, ಯಾವ ಒಂದು ತನಿಖೆಯೂ ಇಲ್ಲದೇನೇ ಅರ್ಬಿಟ್ರರಿ ಆಗಿ ಮಾಡಿದ್ದಾರೆ, ಈ ದರಗಳು ಬಹಳ ಹೆಚ್ಚಾಯಿತು ಅನ್ನುವುದು ಒಂದು ವಾದ. ಇನ್ನು ಎರಡನೆಯದಾಗಿ—ಲೈನುಗಳನ್ನು ಡಿಸ್‌ಕನೆಕ್ಟ್ ಮಾಡುತ್ತಿದ್ದಾರೆ, ಅದರಿಂದ ಜನರಿಗೆ ಅದರಲ್ಲೂ ಬಡಜನರಿಗೆ ಬಹಳ ತ್ರಾಸವಾಗುತ್ತಿದೆ. ಹಣವನ್ನು ಬೇಡಿದಾಗ ಅವರು ಕೊಡದಿದ್ದರೂ ಹಾಗೆ ಕಟ್ ಮಾಡಬಾರದು ಎನ್ನುವುದು ಎರಡನೇ ವಾದ. ಇನ್ನು ಅವರ ಮೂರನೆಯ ವಾದ ಅಂದರೆ—ಹೊಸದಾಗಿ ನೀರಿನ ಮೀಟರುಗಳನ್ನು ಸರಿಯಾಗಿ ಹಾಕಿಲ್ಲ. ಹಾಕಿದತಕ್ಕ ಮೀಟರುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಮಾಡಿದತಕ್ಕ ವಾದ ಒಂದು. ಇನ್ನು ನಾಲ್ಕನೆಯದಾಗಿ ಅಲ್ಲಿ ಕೆಲವೊಂದು ಹಳ್ಳಿಗಳನ್ನೇನು ನಗರಕ್ಕೆ ಸೇರಿಸಿಕೊಂಡರು ಆ ಹಳ್ಳಿಗಳಿಗೆ ಅಲ್ಲಿ ಸರಿಯಾಗಿ ನೀರನ್ನಾಗಲೀ, ವಿದ್ಯುದ್ದೀಪಗಳನ್ನಾಗಲಿ ಮತ್ತು ಅಂಡರ್‌ಗ್ರೌಂಡ್ ವ್ಯವಸ್ಥೆಯನ್ನಾಗಲಿ ಯಾವುದೊಂದು ಕೆಲಸಗಳನ್ನೂ ಮಾಡಿಲ್ಲ ಎಂಬುದು ಒಂದು ವಾದ. ಇನ್ನು ಕಡೆಯದಾಗಿ ಕಾವೇರಿ ನೀರನ್ನು ನಗರಕ್ಕೆ ಒದಗಿಸುತ್ತೇವೆಂದು ಹೇಳಿ ಭರವಸೆಯನ್ನು ಕೊಟ್ಟು ಆ ಕಾರ್ಯವನ್ನು ನಿಧಾನ ಮಾಡುತ್ತಿದ್ದಾರೆ ಅನ್ನುವುದಾಗಿ ಹೀಗೆ ಅವರು 4–5 ಅಂಶಗಳನ್ನು ಹೇಳಿದ್ದಾರೆ. ಆದರೆ ನಾನೀಗ ಅವರು ಹೇಳಿದತಕ್ಕ ವಿಷಯಗಳಲ್ಲಿ ನಾಲ್ಕನೆಯ ಮತ್ತು ಐದನೇ ವಿಷಯಗಳಲ್ಲಿ ಮೊದಲು ನಾಲ್ಕನೇ ವಿಷಯಕ್ಕೆ ಸಮಾಧಾನ ಹೇಳುತ್ತೇನೆ. ಅವರು ಹೇಳಿದತಕ್ಕ ಆ 31 ಹಳ್ಳಿಗಳೇನಿವೆ ಅವುಗಳನ್ನು ಸಿಟಿಯ ಪ್ರದೇಶದ ಒಳಕ್ಕೆ ತೆಗೆದುಕೊಂಡಿದ್ದು 1964–65 ರಲ್ಲಿ. ಅದರ ಆ ಕಾಲಕ್ಕೆ ಅಲ್ಲಿ ವಾಟಾಳ್ ನಾಗರಾಜರಾಗಲಿ ಅಥವಾ ಶಾಮಣ್ಣನವರಾಗಲಿ ಅಲ್ಲಿ ಕಾರ್ಪೊರೇಟರಾಗಿರಲಿಲ್ಲ. ಆದರೆ ಆ ಗ್ರಾಮಗಳನ್ನು ತೆಗೆದುಕೊಂಡಾಗ ಅಲ್ಲಿದ್ದ ಪರಿಸ್ಥಿತಿಗೂ ಈಗಿರತಕ್ಕ ಪರಿಸ್ಥಿತಿಗೂ ಬಹಳ ವ್ಯತ್ಯಾಸವಾಗಿದೆ. ಕಳೆದ 2 ವರ್ಷಗಳಲ್ಲಿ ಅಲ್ಲಿ ರಸ್ತೆಯ ವ್ಯವಸ್ಥೆ ಮತ್ತು ಲೈಟಿನ ವ್ಯವಸ್ಥೆಗಾಗಿ 10 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಅಲ್ಲಿ 4–5 ಹಳ್ಳಿಗಳಿಗೆ ನೀರಿನ ಪೂರೈಕೆಯನ್ನು ಮಾಡಲಾಗಿದೆ. ಅಲ್ಲಿಗೆ ಎಲ್ಲಾ ಸೌಕರ್ಯಗಳನ್ನೂ ಒದಗಿಸುವುದಕ್ಕೆ 10 ಲಕ್ಷ ಬೇಕಾಗುವುದು. ಅದರಲ್ಲಿ ಆಗಲೇ ಅವರು 3 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆದರೆ ಅವರಿಗೆ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿದ್ದಾರೆ. ಆ ಹಳ್ಳಿಗಳಿಗೆಲ್ಲ ಅನುಕೂಲ ಮಾಡಬೇಕು ಅಲ್ಲಿಗೂ ಹಣವನ್ನು ಸಾಕಷ್ಟು ಒದಗಿಸಬೇಕು ಅನ್ನುವ [illegible] ಸರ್ಕಾರಕ್ಕೂ ಇದೆ.

4-00 P.M.

ಈ ಮೂರುಮಂದಿ ಮಾನ್ಯ ಸದಸ್ಯರ ಆತುರತೆ ಏನಾಗಿದೆ ಎಂದರೆ ಘಟೋದ್ಗಜನ ಮಾಯಾ ಬಜಾರ್ ಮಾಡಬೇಕಾಗುತ್ತದೆ. ಈ ಮಾನ್ಯ ಸದಸ್ಯರುಗಳು ಕಾರ್ಪೋರೇಟರುಗಳಾಗಿದ್ದಾಗ ಅನೇಕ ವರ್ಷಗಳ ಕಾಲದಲ್ಲಿ ಕಾರ್ಪೊರೇಷನ್ ಸಾಧಿಸಿರುವ ಪ್ರಗತಿಯನ್ನು ನಾವು ಒಂದೇ ವರ್ಷದಲ್ಲಿ ಮಾಡಿ ತೋರಿಸಿದರೂ ಕೂಡ ಅವರಿಗೆ ಇನ್ನೂ ಸಮಾಧಾನವಾಗಿಲ್ಲ. ಅವರಿಗೆ ಸಮಾಧಾನ ಆಗಬೇಕಾದರೆ ಘಟೋತ್ಕಜನನ್ನು ಪ್ರಾರ್ಥಿಸಿ ಆತನನ್ನು ಕರೆಸಬೇಕೋ ಏನೋ ಗೊತ್ತಿಲ್ಲ. ಬೆಂಗಳೂರು ನಗರದಲ್ಲಿ ತೆರಿಗೆಯನ್ನು ಕಟ್ಟುವುದಕ್ಕೆ ಜನ ಹಿಂದೆ ಬೀಳುತ್ತಿದ್ದಾರೆ. ತೆರಿಗೆ ಹೆಚ್ಚು, ತೆರಿಗೆ ಹೆಚ್ಚು ಎನ್ನುವಂಥಾದ್ದು ಈಗ ಎಷ್ಟು ವರ್ಷಗಳಾದರೂ ನಾಗರೀಕರಿಗೆ ಇದು ಒಂದು ಪ್ರಿವಿಲೇಜ್ ಆಗದೇ ಇರುವಂಥಾದ್ದು. ಸಾಕಷ್ಟು ನೀರಿನ ಸೌಕರ್ಯ ಇಲ್ಲದೆ ಇರುವಂಥಾದ್ದು. ಸಣ್ಣ ರಸ್ತೆಗಳನ್ನು ದೊಡ್ಡದು ಮಾಡುವುದು, ದೊಡ್ಡ ರಸ್ತೆಗಳನ್ನು ದುರಸ್ತಿ ಮಾಡಿಸಿಕೊಂಡು ನಡೆಸಿಕೊಂಡು ಹೋಗತಕ್ಕದ್ದು ಇವುಗಳನ್ನು ಮಾಡುವುದಕ್ಕೆ ಕಾರ್ಪೊರೇಷನಿಗೆ ಶಕ್ತಿ ಇಲ್ಲ ಎಂದಲ್ಲ. ಇಂಥಾ ಯೋಜನೆಗಳನ್ನು ಒಂದೇ ವರ್ಷದಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರ ಕಾರ್ಪೊರೇಷನ್ ಆಡಳಿತವನ್ನು ವಹಿಸಿಕೊಂಡ ನಂತರ ಇಷ್ಟು ಕೆಲಸಗಳನ್ನು ಮಾಡಿದರೂ ಕೂಡ ಅದಕ್ಕೆ ಯಾರೂ ಕೃತಜ್ಞತೆಯನ್ನು ವ್ಯಕ್ತಪಡಿಸದೆ ಮಾನ್ಯ ಸದಸ್ಯರು ಅನ್‌ಚಾರಿಟಬಲ್ ರಿಮಾರ್ಕ್ಸ್ ಪಾಸುಮಾಡುವುದಾದರೆ ಅದು ಈ ಸಭೆಯ ಘನತೆ ಗೌರವಕ್ಕೆ ಕಡಿಮೆ ಎಂದು ನಾನು ಹೇಳುತ್ತೇನೆ.

(ಶ್ರೀ ಆರ್. ಎಂ. ಪಾಟೀಲ್)

ಇನ್ನು ಕಾವೇರಿನೀರಿನ ಯೋಜನೆಯನ್ನು ಕಾರ್ಯಗತ ಮಾಡುವಬಗ್ಗೆ 38 ಕೋಟಿ ರೂಪಾಯಿಗಳ ಯೋಜನೆಯನ್ನು ಬಿಟ್ಟಿದ್ದು ಆಗಿದೆ. ಇದರ ಬಗ್ಗೆ ಮುಖ್ಯಮಂತ್ರಿಗಳೂ ಹೇಳಿದ್ದಾರೆ. ನಾನೂ ಹೇಳಿದ್ದೇನೆ. ಈಗ 22 ಕೋಟಿರೂಪಾಯಿಗಳ ಕಾವೇರಿ ನೀರಿನ ಯೋಜನೆಯನ್ನು ನಾವು ಅಕ್ಸೆಪ್ಟ್ ಮಾಡಿದ್ದೇವೆ. ಇದರ ಇಂಜಿನಿಯರು ಮತ್ತು ವಾಟರ್ ಬೋರ್ಡಿನವರು ಎಷ್ಟು ಸಾಧ್ಯ ಇದೆ ಅಷ್ಟು ಖರ್ಚುಮಾಡುವುದಕ್ಕೆ ಕೆಲಸಮಾಡುವುದಕ್ಕೆ ಸಾಕಷ್ಟು ಹಣ ನ್ನು ಒದಗಿಸಿಕೊಡಬೇಕು ಎನ್ನುವ ಆತುರತೆ ಸರ್ಕಾರಕ್ಕೆ ಇದೆ. ಬೋರ್ಡಿಗೂ ಇದೆ. ಈಗ ಅದನ್ನೆಲ್ಲಾ ಫೈನಲ್ ಮಾಡಿ ಈ ಯೋಜನೆಯ ನಿರ್ಮಾಣಕ್ಕಾಗಿ ಇಷ್ಟರಲ್ಲೇ ಟೆಂಡರನ್ನು ಕರೆಯಲಾಗುತ್ತದೆ. ಆದ್ದರಿಂದ ಈ ಕಾರ್ಯ ಬಹಳ ಪ್ರಗತಿಪರವಾಗಿ ನಡೆಯುತ್ತದೆ ಎಂದು ನಾನು ಹೇಳಬಲ್ಲೆ.

ಶ್ರೀ ಟಿ. ಆರ್. ಶಾಮಣ್ಣ.—ಎಷ್ಟು ದಿವಸಗಳಲ್ಲಿ ಅದನ್ನು ಪೂರೈಸುತ್ತೀರಿ ?

ಶ್ರೀ ಆರ್. ಎಂ. ಪಾಟೀಲ್. 1973 ರಲ್ಲಿ ಈ ಯೋಜನೆಯು ಪೂರ್ತಿಯಾಗುತ್ತದೆ ಎಂದು ನಾನು ಧೈರ್ಯವಾಗಿ, ದೃಢವಾಗಿ ಹೇಳುತ್ತೇನೆ. ನೀರಿನ ಮೀಟರುಗಳು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಅವು ಸರಿಯಾಗಿ ಕೆಲಸಮಾಡದೇ ಇದ್ದರೆ ಆ ಬಗ್ಗೆ ಕಂಪ್ಲೆಂಟ್ ಕೊಟ್ಟರೆ ಅದನ್ನು ದುರಸ್ತು ಮಾಡಿ ಕೆಟ್ಟಿದ್ದಂತಹ ಮೀಟರನ್ನು ಬದಲಾಯಿಸಿ ಹೊಸಮೀಟರನ್ನು ಹಾಕುವುದನ್ನು ಯೋಚನೆ ಮಾಡಿದ್ದೇವೆ. ಅದರ ಲಾಭವನ್ನು ಬೇಕಾದಷ್ಟು ಜನ ತೆಗೆದು ಕೊಂಡಿದ್ದಾರೆ. ಈ ವಿಚಾರವನ್ನು ಶ್ರೀಮಾನ್ ಶ್ಯಾಮಣ್ಣನವರಿಗೆ 12-13 ಸಲ ನಾನು ಹೇಳಿದ್ದೇನೆ. ನಾನು ಇದನ್ನು ವಿಚಾರಮಾಡಿದೇನೆ, ಒಟ್ಟಿನ ಮೇಲೆ ಇವರು ನಮ್ಮ ಪ್ರಿಸ್ಟೇಜ್ ಹೋಗುತ್ತದೆ ಎಂದು ಎಜಿಟೇಷನ್ ಪಟ್ಟಿಯಲ್ಲಿ ಈ ಒಂದು ನೀರಿನ ಎಜಿಟೇಷನ್ ಐಟಂಅನ್ನೂ ಹಾಕಿಕೊಂಡಿದ್ದಾರೆ.

ಇನ್ನು ನೀರಿನದರದ ಬಗ್ಗೆ ಹೇಳುವುದಾದರೆ ಇದಕ್ಕೆ ಬಹಳ ಹಿನ್ನಲೆ ಇದೆ. ಆ ಹಿನ್ನಲೆ ಏನು ಎಂದರೆ 1934ನೇ ಇಸವಿಯಲ್ಲಿ ಒಂದುಸಾವಿರ ಗ್ಯಾಲನ್ನುಗಳಿಗೆ ಒಂದುರೂಪಾಯಿ ದರ ಇತ್ತು. ಅದೇ ರೀತಿ ಈಗಲೂ ನೀರನ್ನು ಕೊಡಬೇಕು, ಅದನ್ನು ಕಾರ್ಪೊರೇಷನ್ನಿನವರು ಡಿಸ್ಟ್ರಿಬ್ಯೂಟ್ ಮಾಡಬೇಕು ಎನ್ನುವಂಥಾದ್ದು. ನಾನು ಈಗ ಶ್ಯಾಮಣ್ಣನವರಿಗೆ ಒಂದು ಆರ್ಡಿನರಿ ಪ್ರಶ್ನೆಯನ್ನು ಕೇಳುತ್ತೇನೆ. 1934ನೇ ಇಸವಿಯಲ್ಲಿ ಇದ್ದಂತಹ ಧಾರಣೆವಾಸಿಗಳಾಗಲೀ ಜೀವನದ ನಿರ್ವಹಣದ ವೆಚ್ಚವಾಗಲೀ ಜೀವನದ ವೆಚ್ಚವಾಗಲೀ, 1968ನೇ ಇಸವಿಯಲ್ಲಿ ಇದೆಯೇ ಎಂಬುದನ್ನು ವಿಚಾರ ಮಾಡಬೇಕು. ಆ ಕಾಲಕ್ಕೆ 1934ನೇ ಇಸವಿಯಲ್ಲಿ ಸಾಧಾರಣವಾದ ಸಣ್ಣದು ಒಂದು ವಾಟರ್‌ಸಪ್ಲೈ ಸ್ಕೀಮು ಇತ್ತು. ಅದು ಇವೊತ್ತು ಬೃಹದಾಕಾರವಾಗಿ ಬೆಳೆದು ನಿಂತಿದೆ. ಅದನ್ನು ನಾನು ಹೇಳಬೇಕು ಎಂದರೆ 1951ನೇ ಇಸವಿ ಒಳಗೆ 3 ಕೋಟಿ ರೂಪಾಯಿಗಳು ಇದಕ್ಕಾಗಿ ಖರ್ಚಾಯಿತು. ಅದಾದನಂತರ ಪುನಃ ಮೇಲಿಂದಮೇಲೆ ಅನೇಕ ರೀತಿಯಿಂದ ವಾಟರ್‌ಸಪ್ಲೈ ಬಗ್ಗೆ ಇಂಪ್ರೂವ್ ಮಾಡಲಾಗಿದೆ. 1961 ರಿಂದ 1965ರ ವರೆಗೆ 36 ಇಂಚಿನ ಪೈಪು ಹಾಕುವುದರಿಂದ 2 ಕೋಟಿ 14ಲಕ್ಷ ರೂಪಾಯಿಗಳು ಖರ್ಚಾಗಿದೆ. ಹೀಗಾದರೆ ಇವೊತ್ತು ಇದರ ಖರ್ಚು ಎಷ್ಟು ಇದೆ ಎಂಬುದನ್ನು ಯೋಚನೆಮಾಡಬೇಕು. ಇದರ ಬಗ್ಗೆ ಮೆಷಿನರಿ ಮತ್ತು ಇತರ ಇನ್‌ವೆಸ್ಟ್‌ಮೆಂಟ್ ಏನಿದೆ ಎಂದರೆ 6 ಕೋಟಿ 71 ಲಕ್ಷರೂಪಾಯಿಗಳ ಇನ್‌ವೆಸ್ಟ್‌ಮೆಂಟಾಗಿದೆ. ನಮ್ಮ ಅಸೆಟ್ಸ್‌ವ್ಯಾಲ್ಯುಯೇಷನ್ ಸರಿಯಾಗಿ ಮಾಡಿಲ್ಲ ಎಂದು ಹೇಳುತ್ತಾರೆ. ಆ ಬಗ್ಗೆ ಅಕೌಂಟೆಂಟ್ ಜನರಲ್ ಏನು ವ್ಯಾಲ್ಯುಯೇಷನ್ ಮಾಡಿದ್ದಾರೆಯೋ ಅದನ್ನು ಬೋರ್ಡಿನವರು ಒಪ್ಪಿದ್ದಾರೆ. ಮತ್ತು ಕಾರ್ಪೊರೇಷನ್ನಿನವರೂ ಒಪ್ಪಿದ್ದಾರೆ. ಇನ್ನು ಉಳಿದಿರುವುದು ಏನು ಎಂದರೆ ಕಾರ್ಪೊರೇಷನ್ನಿಂದ ಬೋರ್ಡಿಗೆ ಏನು ಹೋಗಿದೆ ಎಂಬುದು. ಮೆಟೀರಿಯಲ್ಸ್ ಒಂದುಕೋಟಿ 28 ಲಕ್ಷ ರೂಪಾಯಿಗಳು ಬಂದಿದೆ ಅದನ್ನು ವ್ಯಾಲ್ಯುಯೇಷನ್ ಮಾಡಿಲ್ಲ. ಅದು ಆಗತಕ್ಕದ್ದು ಇದೆ. ಸರ್ವೇಸಾಧಾರಣವಾಗಿ ಇನ್‌ವೆಸ್ಟ್‌ಮೆಂಟ್ ಹೆಚ್ಚಾಗುತ್ತಿದೆ. ಇದಕ್ಕೆ ಮತ್ತೊಂದು ಕಾರಣ ಏನೆಂದರೆ ಇದಕ್ಕೆ ಬಹಳ ಬಡ್ಡಿ ದರ ಇದೆ ಎನ್ನುವಂಥಾದ್ದು ನಮ್ಮ ರಾಜ್ಯ ಸರ್ಕಾರದವರು ಇಂಡಿಯಾ ಸರ್ಕಾರದಿಂದ 5½ ಪರ್ಸೆಂಟ್ ಬಡ್ಡಿಯಂತೆ ಸಾಲತೆಗೆದುಕೊಂಡು ಬೋರ್ಡಿಗೆ 6 ಪರ್ಸೆಂಟ್‌ನಂತೆ ಸಾಲಕೊಟ್ಟಿದ್ದಾರೆ. ಇದು ಯಾವ ರೀತಿಯಿಂದ ಹೆಚ್ಚು ಎನ್ನುವಂಥಾದ್ದು ಈ ಸಭೆಯಲ್ಲಿ ವಿಚಾರ ಮಾಡಬೇಕಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—2½ ಪರ್ಸೆಂಟಿನಂತೆ ತೆಗೆದುಕೊಂಡು 6 ಪರ್ಸೆಂಟಿನಂತೆ ಹೇಗೆ ಹಾಕುತ್ತೀರಿ ?

ಶ್ರೀ ಆರ್. ಎಂ. ಪಾಟೀಲ್.—ಅದು ಹಿಂದಿನದು. ಇವೊತ್ತು ಇಂಡಿಯಾ ಸರ್ಕಾರದವರು ನಮಗೆ ಏನು ಸಾಲ ಕೊಡುತ್ತಾರೆಯೋ ಎಂದರೆ ಯಾವ ಬಡ್ಡಿದರದಲ್ಲಿ ನಮಗೆ ಸಾಲವನ್ನು ಕೊಡುತ್ತಾರೆಯೊ ಅದಕ್ಕಿಂತ 8 ಆಣೆ ಹೆಚ್ಚು ಬಡ್ಡಿ ಬೋರ್ಡಿನವರಿಗೆ ಮಾಡಿದರೆ ಅದು ಯಾವ ರೀತಿ ಅನ್ಯಾಯ ಎಂಬುದು ನನಗೆ ಅರ್ಥವಾಗುವುದಿಲ್ಲ. ಆ ಮೇಲೆ ಇನ್ನೊಂದು ಮಾತು ಹೇಳುತ್ತಾರೆ. ರೇಟ್ ಆಫ್ ಡಿಪ್ರಿಸಿಯೇಷನ್ 2.3 ಪರ್ಸೆಂಟ್ ಇದ್ದದ್ದನ್ನು 1.66 ಪರ್ಸೆಂಟಿಗೆ ಅಕ್ಸೆಪ್ಟ್ ಮಾಡಿದದರಿಂದ ಡಿಫರೆನ್ಸ್ ಬಹಳ ಆಗುತ್ತದೆ ಎಂದು ಹೇಳಿದ್ದಾರೆ. ಇದರ ಅಂತರವು ಅಷ್ಟು ಹೆಚ್ಚು ಬರುವುದಿಲ್ಲ. ಇದರಲ್ಲಿ ಬೆಂಗಳೂರಿನ ವಾಟರ್ ಸಪ್ಲೈ ಬಗ್ಗೆ 18 ಕೋಟಿ ರೂಪಾಯಿಗಳನ್ನು ಸಾಲ ಕೊಡಬೇಕು ಎನ್ನುವಂಥಾ ಒಂದು ಏಜೆನ್ಸಿ ಮಾಡಿಕೊಂಡು ಅದನ್ನು ಕೂಲಂಕಷವಾಗಿ ವಿಚಾರ ಮಾಡಿದಾಗ ಟೆಕ್ನಿಕಲ್ ಅಡ್ವೈಸರು ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ. "Loss and waste :—This Water is some times classified as unaccounted for, Coming to 30 per cent although some of the loss and waste will be accounted for in the sense that it is due to the meter and Pump seepage unauthorized water Connections, leakages in mains, leak in plumbing fixtures and careless or wilful waste. It is apparent that the unaccounted for water including waste can be much reduced by careful maintenance of the water system by inversing the meters. As a rule in a system of hundred per cent meters well maintained unaccounted for water exclusive of pump seepage will be about 20 per cent." ಎಂದು ಹೇಳಿದ್ದಾರೆ.

ಇಲ್ಲಿ 100 ಪರ್ಸೆಂಟ್ ವಾಟರ್ ಕನೆಕ್ಷನ್‌ನಲ್ಲಿ 20 ಪರ್ಸೆಂಟ್ ಅನ್‌ಅಕೌಂಟೆಡ್ ಎಂಬುದಾಗಿ ಪರಿಗಣಿಸಬಹುದೆಂದು ಅವರು ಹೇಳುತ್ತಾರೆ. ಇದನ್ನೇ ಒಂದು ಅಥಾರಿಟಿಯನ್ನಾಗಿ ಇಟ್ಟುಕೊಂಡರೆ ಬೆಂಗಳೂರು ವಾಟರ್ ಸಪ್ಲೈ ಸ್ಕೀಮ್ ವಿಚಾರ ಮಾಡುವುದಾದರೆ, 60 ವರ್ಷಗಳ ಹಿಂದೆ ಹಾಕಿದಂತಹ ಕೆಲವು ನಲ್ಲಿಗಳು ಲೀಕ್ ಆಗುತ್ತಿವೆ. ಈ ಕಾರಣದಿಂದ ಅನೇಕ ರೀತಿಯಿಂದ ನೀರು ವೇಸ್ಟ್ ಆಗುತ್ತಿದೆಯೆಂದು ಹೇಳಬಹುದು. ಸಾರ್ವಜನಿಕರ ಸರ್ವಸಾಧಾರಣವಾದಂಥ ಆಶೆಆಕಾಂಕ್ಷೆಗಳನ್ನು ನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ಕಳೆದ ನಾಲ್ಕು ತಿಂಗಳಲ್ಲಿ ಸುಮಾರು 110 ನಲ್ಲಿಗಳನ್ನು ಹೊಸದಾಗಿ ಹಾಕಲಾಗಿದೆ. ಇದನ್ನು ಸೇರಿಸಿಕೊಂಡು ಒಟ್ಟು 2330 ಪಬ್ಲಿಕ್ ನಲ್ಲಿಗಳು ಬೆಂಗಳೂರಿನಲ್ಲಿವೆ. ಈ ನಲ್ಲಿಗಳಿಂದ ನೀರನ್ನು ಸಾರ್ವಜನಿಕರು ಯಾವ ರೀತಿ ಉಪಯೋಗ ಮಾಡುತ್ತಿದ್ದಾರೆಂಬುದು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಕೆಲವು ನಲ್ಲಿಗಳು ಲೀಕ್ ಆಗಿ ನೀರು ಹೋಗುವುದು ಹೋಗುತ್ತಿರುತ್ತದೆ. ಈ ರೀತಿಯಿರುವುದರಿಂದ ನಾವು 30 ಪರ್ಸೆಂಟ್‌ವರೆಗೆ ಅಲೋಯೆನ್ಸ್ ಕೊಟ್ಟಿರುವುದು ಯೋಗ್ಯವಾಗಿದೆ. ಇದಕ್ಕೆ ಶ್ರೀ ಶಾಮಣ್ಣನವರು ಸಹ ಒಪ್ಪಿದ್ದಾರೆ. ಕಾರ್ಪೋರೇಷನ್ ಕೌನ್ಸಿಲ್ ಇದ್ದಾಗ ಇವರು ಒಪ್ಪಿದ್ದಾರೆ, ಎರಡನೆಯದಾಗಿ 10 ಪರ್ಸೆಂಟ್ ಬ್ಯಾಡಡೆಟ್ ಇರುತ್ತದೆ. ಕೆಲವರು ಊರು ಬಿಟ್ಟು ಹೋಗುವುದರಿಂದ ಬಾಕಿ ವಸೂಲಾಗುವುದಿಲ್ಲ. ಈ ಕಾರಣದಿಂದ 10 ಪರ್ಸೆಂಟ್ ಬ್ಯಾಡಡೆಟ್ ಇರುತ್ತದೆಂದು ತಜ್ಞರು ಹೇಳಿಕೆ ಕೊಟ್ಟಿದ್ದಾರೆ. ಇಷ್ಟು ವಿಚಾರ ಮಾಡಿದರೆ, ಸರ್ವಸಾಧಾರಣವಾಗಿ ಇವತ್ತಿನದಿವಸ ವಾಟರ್ ರೇಟ್ ಏನಿದೆ ಅದನ್ನು ಫಿಕ್ಸ್ ಮಾಡಿರುವುದು ಕಬೂಲಿ ಇದೆ. ಈ ಒಂದು ರೇಟನ್ನು ಕಾರ್ಪೊರೇಷನ್ ಅವರು ಸಹ ಒಪ್ಪಿದ್ದಾರೆ, ವಾಟರ್ ಬೋರ್ಡಿನವರು ಸಹ ಒಪ್ಪಿದ್ದಾರೆ. ಈ ವಾಟರ್ ರೇಟ್ ವಿಷಯದಲ್ಲಿ ಒಂದು ವಿಚಾರವನ್ನು ಮಾನ್ಯ ಸಭೆಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ, ಏನೆಂದರೆ 1961 ರೊಳಗೆ ವಾಟರ್ ಸಪ್ಲೈ ಡಿಸ್ಟ್ರಿಬ್ಯೂಷನ್ ಕೆಲಸ ಕಾರ್ಪೊರೇಷನ್‌ಗೆ ಬಂತು. ಆ ಕಾಲಕ್ಕೆ ನೀರಿನದರವನ್ನು ಹೆಚ್ಚು ಮಾಡಬೇಕೆಂಬ ಒಂದು ವಿಚಾರ ಬಂತು. 1934ರಲ್ಲಿ ಸಾವಿರ ಗ್ಯಾಲನ್‌ಗೆ ಒಂದು ರೂಪಾಯಿ ಎಂದು ಇತ್ತು. 1961 ರಲ್ಲಿ ಕಾರ್ಪೊರೇಷನ್ ಅವರು ವಾಟರ್ ರೇಟನ್ನು ಹೆಚ್ಚು ಮಾಡೋಣ ಎಂಬ ಭಾವನೆಯಿಂದ ಒಂದು ಬೈಲಾ ಫ್ರೇಮ್ ಮಾಡಿದರು. ಅದು ಒಪ್ಪಿದ್ದು ಆಯಿತು. ಆಗಿನ ಕಾರ್ಪೊರೇಷನ್‌ನ ಫೈನಾನ್ಸ್ ಕಮಿಟಿಗೆ ಶ್ರೀ ಶಾಮಣ್ಣನವರೇ ಚೇರ್‌ಮನ್ ಆಗಿದ್ದರು. ಇವರ ಅಧ್ಯಕ್ಷತೆಯಲ್ಲಿ ಬೇರೆ ಒಂದು ನೀರಿನ ದರವನ್ನು ಫಿಕ್ಸ್ ಮಾಡಿದರು. ಈ ದರ ಮಂಜೂರಾಗಿ ಬರುವುದರೊಳಗೆ ವಾಟರ್ ಬೋರ್ಡ್ ಅಸ್ತಿತ್ವಕ್ಕೆ ಬಂತು. ಈ ಕಾರಣದಿಂದ ಕಾರ್ಪೊರೇಷನ್ ಅವರು ಏನು ಒಂದು ಯೋಜನೆಯನ್ನು ನೀರಿನ ದರದ ಬಗ್ಗೆ ತರಬೇಕೆಂದಿದ್ದರು ಅದು ಸಫಲವಾಗಲಿಲ್ಲ. ಈಗಿನ ನೀರಿನ ದರ ಏನಿದೆ

(ಶ್ರೀ ಆರ್. ಎಂ. ಪಾಟೀಲ್)

ಅದು ಯಾರಿಗೆ ಲಾಭಧಾಯಕವಾಗಿದೆಯೆಂದರೆ ಸಾರ್ವಜನಿಕರಿಗೆ ಅದರೊಳಗೂ ಸಾಮಾನ್ಯ ಜನತೆಗೆ ಎಂದು ಹೇಳಬಹುದು. ಈಗಿನ ನೀರಿನ ದರ ಯಾವ ರೀತಿ ಇದೆಯೆಂದರೆ :

30 paise per thousand litres. This was done on 11-4-63 by the Corporation.

ಇವತ್ತು ಫಿಕ್ಸ್ ಆಗಿರುವುದು ಹೀಗಿದೆ

		Per Thousand Litres
Up to 10,000 litres	30 paise	Rs. 2 per month (minimum charges)
From 10,000 to 20,000 litres	32 ,,	
From 20,000 to 40,000 litres	36 ,,	
Above 40,000 ,,	44 ,,	

ಈ ಒಂದು ಸ್ಲ್ಯಾಬ್ ಇಟ್ಟಿರುವುದರಿಂದ ಹೆಚ್ಚಿನ ಸೌಲಭ್ಯ ಸಾಮಾನ್ಯ ಜನರಿಗೆ ಆಗಿದೆ. ಈ ದರವನ್ನು ಆರ್ಥಿಕ ದೃಷ್ಟಿಯಿಂದ ಮಾಡಿದೆ. ಈ ದರಕ್ಕಿಂತಲೂ ಕಡಿಮೆ ಮಾಡಿ ಎಂದು ಹೇಳುವುದು ಯಾವ ದೃಷ್ಟಿಯಿಂದಲೂ ನನಗೆ ಅರ್ಥವಾಗುವುದಿಲ್ಲ. ನಾನು ಹೇಳುವುದು ಇಷ್ಟೆ......

ಶ್ರೀ ಟಿ. ಆರ್. ಶಾಮಣ್ಣ.—ನಿಜಾಂಶವನ್ನು ಮಾನ್ಯ ಮಂತ್ರಿಗಳು ಮುಚ್ಚಿಡುತ್ತಿದ್ದಾರೆ. ಬೇಕಾದರೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಲಿ. ಅವರು ತೀರ್ಮಾನಮಾಡುತ್ತಾರೆ. ಈಗ ಮಾನ್ಯ ಮಂತ್ರಿಗಳು ಆಫೀಸ್‌ನ ಅಧಿಕಾರಿಗಳು ಬರೆದುಕೊಟ್ಟಿರುವುದನ್ನು ಓದುತ್ತಿದ್ದಾರೆ.

ಶ್ರೀ ಆರ್. ಎಂ. ಪಾಟೀಲ್.—ಯಾವ ರೀತಿ ಬಗೆಹರಿಯಬೇಕೋ ಆ ರೀತಿ ಬಗೆಹರಿಯುತ್ತದೆ. ನಾವು ಮತ್ತು ನೀವು ಕೂಡ ಬಗೆಹರಿಸುವುದು ಬೇರೆ ಮಾತು. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಅನೇಕ ಸಾರಿ ಪ್ರಶ್ನೆ ಕೇಳಿದ್ದರು, ಮತ್ತು ಒಂದು ಕಾಲ್ ಅಟೆನ್ಷನ್ ನೋಟೀಸ್ ಸಹ ಕೊಟ್ಟಿದ್ದರು. ಈ ಕಾರಣದಿಂದ ಬೋರ್ಡ್‌ನವರು ಸಮಗ್ರವಾಗಿ ಮತ್ತು ಸಮರ್ಪಕವಾಗಿ ವಿಚಾರ ಮಾಡಿ ಸ್ಟ್ಯಾಟಿಸಟಿಕ್ ತಯಾರು ಮಾಡಿಕೊಟ್ಟಿದ್ದಾರೆ, ಆ ಒಂದು ಮಾಹಿತಿಯನ್ನು ಇಲ್ಲಿ ಹೇಳಿದ್ದೇನೆ. ಇನ್ನೊಂದು ವಿಷಯ ಹೇಳಬೇಕೆಂದರೆ ಸರ್ವಸಾಧಾರಣವಾಗಿ ಬೆಂಗಳೂರಿನಲ್ಲಿ ಡೊಮೆಸ್ಟಿಕ್ ಮತ್ತು ನಾನ್-ಡೊಮೆಸ್ಟಿಕ್ ಕನ್‌ಜಮ್‌ಷನ್ ಒಳಗೆ ಸುಮಾರು 59 ಸಾವಿರ ನಲ್ಲಿಗಳಿವೆ. ಡೊಮೆಸ್ಟಿಕ್ ಕನ್‌ಜಮ್‌ಷನ್ ಒಳಗೆ 54 ಸಾವಿರ ನಲ್ಲಿಗಳಿವೆ. ಇದರೊಳಗೆ ಪ್ರಾಪರ್ಟಿ ಟ್ಯಾಕ್ಸ್ ಕೊಡುವವರು ಎನಿದ್ದಾರೆ ಅವರ ಸಂಖ್ಯೆ ಹೆಚ್ಚಿದೆ. There are at present 59,698 water supply connections; out of which 54,544 are domestic connections. Considering only the total number of domestic connections, the following figures furnish information pertaining to the number of disconnections made from December 1967 to March 1968: ಇದರ ಬಗ್ಗೆ ಒಂದು ಸ್ಟೇಟ್‌ಮೆಂಟಿನಲ್ಲಿ ಮಾನ್ಯ ಚೀಫ್ ಮಿನಿಸ್ಟರ್‌ರವರು ಇಲ್ಲಿ ಹೇಳಿದ್ದಾರೆ. ಇದರ ಜೊತೆಗೆ........

ಶ್ರೀ ಹೆಚ್. ಸಿದ್ಧವೀರಪ್ಪ.—ಇದೇನೋ ಬಗೆಹರಿಯುವಹೊಲ್ಲದು ಎಂದು ತೋರುತ್ತೆ ಮತ್ತು ಇದು ಗಂಡ ಹೆಂಡಿರ ವ್ಯಾಜ್ಯ ಇದ್ದ ಹಂಗಾಗಿದೆ.

ಶ್ರೀ ಆರ್. ಎಂ. ಪಾಟೀಲ್.—ಗಂಡನೂ ಅಲ್ಲ ಹೆಂಡತಿಯೂ ಅಲ್ಲ. ಜಂಡಿಗಳು ಬಾಳಿವ ಮಾಡಿದಹಾಂಗೆ ಆಗೆದ ಎಂದಂತಾಗಿದೆ. ಇದರೊಳಗೆ ಏನಾಗಿದೆ ಎನ್ನುವುದಕ್ಕಾಗಿ ಇಲ್ಲ ವಿವರಗಳನ್ನು ಕೊಡುತ್ತೇನೆ. No. of consumers in the concession limit 18,937 ಇದರೊಳಗೆ ಒಂದು ವಿಷಯವನ್ನು ತಿಳಿದುಕೊಳ್ಳತಕ್ಕದ್ದು ಅವಶ್ಯ ಇದೆ. The Public taps are meant only for common man. ಬಡವರ ಸಲುವಾಗಿ ಟೀ ಇರುವುದು ಮತ್ತು ಇವರುಗಳು ಬೀದಿಯಲ್ಲಿರುವ ಪಬ್ಲಿಕ್ ಟ್ಯಾಪ್‌ಗಳಿಂದ ನೀರು ಪಡೆಯುತ್ತಿದ್ದಾರೆ. ಆಮೇಲೆ No. of consumers who come within the purview 1-,937 of conession allowance : ಆಮೇಲೆ No. of consumers who have paid the

bills in full ಎಂದರೆ ಪೂರ್ತಿಯಾಗಿ ಎಷ್ಟು ಜನ ಬಿಲ್‌ಗಳನ್ನು ಕೊಟ್ಟಿದ್ದಾರೆ: 6,518 No. of consumers who have paid the bills partly roughly about 19,000 or 20,000 ಈ ರೀತಿ ಇರುವುದರಿಂದ ಬಡವರ ಸಲುವಾಗಿ ನೀರಿನ ಸಮಸ್ಯೆ ವಿಷಯ ಇದರೊಳಗೆ ಬರಲಿಕ್ಕಾಗುವುದಿಲ್ಲ. ಯಾರು ಬಡವರಾಗಿದ್ದಾರೋ ಆ ಬಡವರ ಸಲುವಾಗಿಯೋ ಪಬ್ಲಿಕ್ ಟ್ಯಾಪ್ಸ್‌ಗಳು ಎಂದು ಮಾಡಿರುವುದು. ಸಾಧಾರಣವಾಗಿ ಮನೆಯೊಳಗೆ ಟ್ಯಾಪ್‌ಗಳನ್ನು ತೆಗೆದುಕೊಂಡಿರುವವರಿಗೆ ಈ ವಾಟರು ಅಲೋಯನ್ಸ್ ಬರುತ್ತದೆ. ಇದರೊಳಗೆ ಏನೋ ಒಂದು ತರಹದ ತಪ್ಪು ಭಾವನೆ ಮಾಡುತ್ತಿದ್ದಾರೆ.

ಇನ್ನೊಂದು ವಿಷಯವನ್ನು ಇಲ್ಲಿ ಹೇಳಬೇಕಾಗಿದೆ. ಅದು ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಕೆಲವು ಹೆಣ್ಣು ಮಕ್ಕಳ ಕೈಲಿ ಬರೀಕೊಡಗಳನ್ನು ತೆಗೆದುಕೊಂಡು ನನ್ನನ್ನು ನೋಡಲು ಬಂದರು. ಇವರು ಬಂದದಿವಸವೇ ಮಳೆ ಬಂತು. ವಿಧಾನಸೌಧದ ಬಳಿ ಬರುವಷ್ಟರಲ್ಲಿಯೇ ಇವರೆಲ್ಲರೂ ಮಳೆಯಿಂದ ನೆಂದು ಹೋದರು. ಹೆಣ್ಣು ಮಕ್ಕಳು ಬರೀ ಕೊಡದಿಂದ ಬಂದುದರಿಂದಲೇ ಮಳೆ ಬಂತು ಎಂದು ತೋರುತ್ತೆ. ಇದು ಒಂದು ಶುಭ ಲಕ್ಷಣ ಎಂದು ನಾನು ಭಾವಿಸಿಕೊಂಡೆ. ಇವರೆಲ್ಲರನ್ನೂ ಕರೆದುಕೊಂಡು ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ನನ್ನ ಬಳಿಗೆ ಬಂದರು. ಹೀಗೆ ಬಂದಿದ್ದ ಪ್ರತಿಯೊಬ್ಬರನ್ನೂ ನಾನು ಕೇಳಿದೆ ಯಾರ ಯಾರ ಮನೆಗಳಲ್ಲಿ ನಲ್ಲಿಗಳಿವೆ ಎಂದು. ಅದಕೆ ಉತ್ತರವಾಗಿ ಅವರು ಬಂದಿದ್ದವರು ಒಟ್ಟು ಎಂಟು ಜನರು. ಅವರೆಲ್ಲರೂ ನಮ್ಮ ಮನೆಗಳಲ್ಲಿ ನಲ್ಲಿ ಇಲ್ಲ ಎಂದು ಹೇಳಿದರು. ಇವರಲ್ಲಿ ಒಬ್ಬರ ಮನೆಗಳಲ್ಲಿಯೂ ನಲ್ಲಿಗಳೇ ಇಲ್ಲದಿರುವುದರಿಂದ ಇವರನ್ನು ನಾನು ನಲ್ಲಿಗಾಗಿ ಟ್ಯಾಕ್ಸ್ ಕೊಡುತ್ತಿದ್ದೀರಾ ಎಂದು ಕೇಳಿದೆ. ಅದಕ್ಕೆ ಅವರೆಲ್ಲರು ಇಲ್ಲ ಎಂದು ಹೇಳಿದರು. ಆಮೇಲೆ ಏತಕ್ಕಾಗಿ ಇಲ್ಲಿಗೆ ಬಂದಿರಿ ಎಂದು ಕೇಳಿದುದಕ್ಕೆ ಅವರು ನನಗೆ ಹೇಳಿದರು, ನಮ್ಮ ರಸ್ತೆಯಲ್ಲಿ ಒಬ್ಬರು ಮಾರವಾಡಿ ಮೂರು ಅಂತಸ್ತುಗಳ ಮನೆಯಲ್ಲಿದ್ದಾರೆ. ಅವರು ಮೂರನೇ ಅಂತಸ್ತಿನಲ್ಲಿರುವುದರಿಂದ ಅವರಿಗೆ ನೀರು ಬರುತ್ತಿಲ್ಲ. ಅದಕ್ಕಾಗಿ ನಾವು ಇಲ್ಲಿ ಬಂದಿದ್ದೀವಿ ಎಂದು ಹೇಳಿದರು. ಇಂತಹ ಜನರನ್ನು ನಮ್ಮ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ನನ್ನಲ್ಲಿಗೆ ಕರೆತಂದಿದ್ದರು. ಮಾನ್ಯ ಸದಸ್ಯರು ಸ್ವಲ್ಪ ಚೆನ್ನಾಗಿ ಕೆಲಸ ಮಾಡುವುದನ್ನು ತಿಳಿದುಕೊಂಡು ಮಾಡಬೇಕು. ಇಲ್ಲವೇ ಇಲ್ಲ ಬಂದು ನಮಗೆ ಹೇಳಿದರೆ ಅದು ಬಹಳ ಕಠಿಣವಾಗುತ್ತದೆ.

ಶ್ರೀ ವಾಟಾಳ್ ನಾಗರಜ್.—ನಾವು ಹೇಳಿದ್ದೇ ಒಂದು. ಇವರು ಹೇಳುವುದೇ ಒಂದು ರೀತಿ ಪ್ರತಿಸಲವೂ ಏನು ಹೇಳುತ್ತಾರೋ ಅದನ್ನೇ ಪುನಃ ಹಾಡಿದ್ದೆ ಹಾಡೋ ಕಿಸಬಾಯಿ ದಾಸ ಎನ್ನುವಂತೆ ಇಲ್ಲಿ ಹೇಳುತ್ತಿದ್ದಾರೆ. ಸಚಿವರು ನಿಜ ಹೇಳುತ್ತಿಲ್ಲ.

ಶ್ರೀ ಎ. ನಂಜಪ್ಪ.—ಮಾನ್ಯ ಸಚಿವರೊಡನೆ ಮಾತುಕತೆಗಳು ನಡೆಯುವಾಗ ನಾನೂ ಅಲ್ಲಿದ್ದೆ. ಮಾನ್ಯ ಸಚಿವರು ಹೇಳಿದ್ದೆಲ್ಲ ನಿಜವಾದುದು. ಇದನ್ನು ಸರಿಯಾಗಿದೆ ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರೂ ಒಪ್ಪಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್‌ನವರು ಹೇಳೋದೆಲ್ಲಾ ನಿಜವಾಗುವುದಿಲ್ಲ. ಇವರು ಸತ್ಯಕ್ಕೆ ದೂರವಾದ ಮಾತುಗಳನ್ನು ಇಲ್ಲಿ ಹೇಳುತ್ತಿದ್ದಾರೆ.

ಶ್ರೀ ಆರ್. ಎಂ. ಪಾಟೀಲ್.—ಈ ವಿಷಯವನ್ನು ಅವರೇ ವಿಚಾರ ಮಾಡಲಿ. ಅವರು ಈ ರೀತಿ ಹೋಗುತ್ತಿರುವುದರಿಂದ ನಾನು ಅವರಲ್ಲಿ ಕಳಕಳಿಯಿಂದ ಮನವಿಮಾಡಿಕೊಳ್ಳುವುದು ಏನೆಂದರೆ ಒಂಬತ್ತು ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿ ವಾಟರು ರೇಟನ್ನು ಫಿಕ್ಸ್ ಮಾಡಿದಾಗ ಅದರಲ್ಲಿ ಲುಕ್ಸಾನು ಎಷ್ಟಾಗಿದೆ ಎಂದರೆ 64–65 ರೊಳಗೆ 19 ಲಕ್ಷ, 65–66ರಲ್ಲಿ 20 ಲಕ್ಷ, 67–68 ರಲ್ಲಿ 39 ಲಕ್ಷ ಲುಕ್ಸಾನಾಗಿದೆ ಮತ್ತು ನಮಗೆ ಬರುತ್ತಿರುವುದು ಇಲ್ಲಿ ಡೆಫಿಸಿಟ್ ಬಿಟ್ಟಿದ್ದು. ನಾವು ಇದಕ್ಕಾಗಿ ಸುಮಾರು 22 ಕೋಟಿಯಷ್ಟು ಖರ್ಚು ಮಾಡಿ ಪ್ರಾಜೆಕ್ಟ್ ಮಾಡಿರುವಾಗ ನೀರಿನ ದರವನ್ನು ಕಡಿಮೆ ಮಾಡಿ ಎಂದರೆ ನಾವು ಯಾವ ರೀತಿಯಿಂದ ಹಣ ಕೊಟ್ಟವರಿಗೆ ಅದನ್ನು ತಿರುಗಿ ಕೊಡುವುದು ಹೇಗೆ. ಇವನ್ನೆಲ್ಲಾ ವಿಚಾರಮಾಡಿ ಇದರ ಅಡ್ಮಿನಿಸ್ಟ್ರೇಷನ್ನು ನಾವು ತೆಗೆದುಕೊಂಡಿದ್ದೇವೆ ಎಂದು ಹೇಳುತ್ತೀರಿ. ಇಲ್ಲ ಎಂದು ನಾವೇನೂ ಹೇಳುವುದಿಲ್ಲ ನಾವೆಲ್ಲ ಜನತೆಯ ಪ್ರತಿನಿಧಿಗಳಾಗಿ ಇಂತಹ ಬೀಜವನ್ನು ತಾವು ಬಿತ್ತುತ್ತಾ ಹೋದರೆ ಗೊತ್ತು ನೀವೇನು ಬೀಜ ಬಿತ್ತುತ್ತೀರೋ ಆ ಬೀಜದಿಂದ ಬರತಕ್ಕ ಹಣ್ಣನ್ನು ನಾಳೆ ಅದು ಮರವಾದಾಗ ನೀವೇ ತಿನ್ನಬೇಕಾಗಿ ಬರುತ್ತದೆ. ನೀವು ಕೊಡುವ ಹಣವನ್ನು ಶಾಸ್ತ್ರೀಯವಾಗಿ ಏನು ಕೊಡಬೇಕಾಗುತ್ತೋ ಅದನ್ನು ಕೊಡಲು ಪ್ರಯತ್ನ ಮಾಡಬೇಕು. ಕೊಡುವುದಿಲ್ಲ

(ಶ್ರೀ ಆರ್. ಎಂ. ಪಾಟೀಲ್)

ಎಂದು ಹಠ ಹಿಡಿಯಬಾರದು. ನ್ಯಾಯವಾಗಿ ಎಷ್ಟು ಹಣ ಕೊಡಬೇಕೋ ಅದನ್ನು ಕೊಡಲೇ ಬೇಕಾಗುತ್ತದೆ. ಇಲ್ಲದೇ ಇದ್ದರೆ ಇಲ್ಲಿನ ಕೆಲಸಗಳೇ ಆಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ವಾಟರು ರೇಟು ಜಾಸ್ತಿಯಾಗಿದೆ ಇದನ್ನು ಇನ್ವೆಸ್ಟಿಗೇಟು ಮಾಡಿ ಎಂದು ಹೇಳುತ್ತಲೇ ಇದ್ದಾರೆ. ಅವರ ಮನೆಯ ನಲ್ಲಿಗಾಗಿ ಸುಮಾರು ಮೂರು ಸಾವಿರ ರೂಪಾಯಿಗಳಷ್ಟು ಬಿಲ್ಲು ಬಂದಿದೆ ಎಂದು ಹೇಳಿದರು. ಯಾವ ಕಾಲದಿಂದ ಕೊಡಬೇಕು ಎನ್ನುವುದನ್ನು ಅವರು ಇಲ್ಲಿ ಹೇಳಲಿಲ್ಲ. ಎಲ್ಲರಿಗೂ ನೋಟೀಸು ಕೊಡುವಂತೆ ಇವರಿಗೂ ಕೊಟ್ಟಿದ್ದಾರೆ. ಯಾರಿಗೂ ಮೂರು ಸಾವಿರ ರೂಪಾಯಿಗಳಷ್ಟು ಬಿಲ್ಲು ಬಂದಿಲ್ಲ. ಇವರು ಕ್ರಮ ಕ್ರಮವಾಗಿ ಹಂತ ಹಂತವಾಗಿ ಸ್ವಲ್ಪ ಸ್ವಲ್ಪವಾಗಿ ಹಣ ಕಟ್ಟುತ್ತಾ ಬರುತ್ತಿದ್ದರೆ ಇಷ್ಟು ಹೆಚ್ಚಾಗಿ ಬರುತ್ತಿರಲಿಲ್ಲ. ಇದನ್ನು ಬೆಳೆಸಿಕೊಂಡೇ ಬರುತ್ತಿರುವುದರಿಂದ ಇಷ್ಟು ಹೆಚ್ಚು ಮೊತ್ತದ ಬಿಲ್ಲು ಬಂದಿದೆ ಮತ್ತು ಇದನ್ನು ಒಮ್ಮೆಲೇ ಕೊಡಬೇಕು ಎಂದರೆ ಕಷ್ಟವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀಮಂತರಿಂದ ನೀವು ವಸೂಲು ಮಾಡುವುದನ್ನು ನಾವು ನಿಮಗೆ ಹೇಳುತ್ತಿಲ್ಲ. ಇವೊತ್ತು ಬೆಂಗಳೂರು ನಗರದಲ್ಲಿ ಸಹಸ್ರಾರು ಜನ ಬಾಡಿಗೆ ಮನೆಗಳಲ್ಲಿ ವಾಸಮಾಡುತ್ತಿದ್ದಾರೆ. ಅವರಿಗೆಲ್ಲಾ ಅನುಕೂಲವಾಗಬೇಕಾದರೆ ಕಷ್ಟವಾಗುತ್ತದೆ. ನೀವು ಮನೆ ಮಾಲೀಕರ ಮೇಲೆ ಹೆಚ್ಚು ಟ್ಯಾಕ್ಸ್ ಬೀಳುವಂತೆ ಮಾಡಿದರೆ, ಆ ಹೆಚ್ಚು ಟ್ಯಾಕ್ಸನ್ನು ಜನತೆಯ ಮೇಲೆ ಹಾಕುತ್ತಾರೆ ಅಂತಹ ಹೆಚ್ಚುವರಿ ಟ್ಯಾಕ್ಸಿನ ನೆಪ ಮಾಡಿಕೊಂಡು ಬಾಡಿಗೆಗಳನ್ನು ಹೆಚ್ಚು ಮಾಡುತ್ತಾರೆ. ಹೀಗೆ ಬಾಡಿಗೆ ಜಾಸ್ತಿ ಮಾಡುವುದರಿಂದ ಬಹಳ ಜನಕ್ಕೆ ತೊಂದರೆಯಾಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಗಮನ ಕೊಡಬೇಕು ಎಂದು ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಆರ್. ಎಂ. ಪಾಟೀಲ್.—ಈ ರೀತಿಯಾದ ಸಮಸ್ಯೆ ಇರುವುದರಿಂದ ಇದನ್ನು ವಿಚಾರ ಮಾಡಲು ಒಂದು ಬೋರ್ಡ್ ಇದೆ. ಅದು ಕಾನೂನು ಪ್ರಕಾರ ಕೆಲಸ ಮಾಡಲು ಅನುಕೂಲವಾಗುವಂತೆ ಇದರಲ್ಲಿ ಒಬ್ಬರು ಚೇರ್ಮನ್ನರು ಮತ್ತು ಇತರ ರೆಪ್ರಸೆಂಟಿಟೀವ್ಸ್‌ಗಳೂ ಇದ್ದಾರೆ. ಇವರೆಲ್ಲಾ ತಜ್ಞರು ಯಾವ ರೀತಿಯಿಂದ ಹೇಳುತ್ತಾರೋ ಅದರಂತೆ ಮಾಡೋಣ. ಇಲ್ಲಿ ಏನಾದರೂ 'ಅನ್‌ರೀಸನಬಲ್‌ನೆಸ್' ಇದ್ದರೆ, ಅದನ್ನು ಅವರು ವಿಚಾರ ಮಾಡುತ್ತಾರೆ ಮತ್ತು ತಕ್ಕಕ್ರಮ ತೆಗೆದುಕೊಳ್ಳುತ್ತಾರೆ. ಅವರೇ ಇಲ್ಲಿ ಹೇಳಿದಂತೆ ಇಲ್ಲಿ ಸುಮಾರು 39 ಲಕ್ಷದಷ್ಟು ಡೆಫಿಸಿಟ್ ಇದೆ ಮತ್ತು ಇದರಂತೆ ಡೆಫಿಸಿಟ್ ಬಡ್ಜೆಟ್ ಬರುತ್ತಿದೆ. ಹೀಗಿರುವಾಗ ಇದಕ್ಕಾಗಿ ಸ್ವಲ್ಪ ಸರಿಯಾದ ದರದಲ್ಲಿ ಹಣ ಕೊಡಬೇಕೆಂದು ಕೇಳಿದರೆ ಅದನ್ನು ಕೊಡುವುದಿಲ್ಲ ಎಂದರೆ ನಾವು ಪ್ರಾಜೆಕ್ಟ್ ಮಾಡಲು ತೆಗೆದುಕೊಂಡ ಹಣವನ್ನು ಅವರಿಗೆ ತಿರುಗಿ ಪುನಃ ತುಂಬಿಕೊಡುವುದಾದರೂ ಹೇಗೆ? ಇದಕ್ಕಾಗಿ ಜನರಲ್ ರೆವಿನ್ಯೂಸ್‌ನಿಂದ ಕೊಡಬೇಕು ಎಂದರೆ ಸರಕಾರಕ್ಕೆ ಕೊಡುವುದಕ್ಕಾಗುವುದಿಲ್ಲ. ಇಂತಹ ಒಂದು ಸಮಸ್ಯೆಯನ್ನು ಉದ್ಭವ ಮಾಡುತ್ತಿರುವುದರಿಂದ ನಾನಾಗಲೇ ಹೇಳಿದಂತೆ ಸರಕಾರದ ವತಿಯಿಂದ ಈ ವಾಟರು ರೇಟು ವಿಚಾರವನ್ನು ಪುನರ್ ವಿಚಾರ ಮಾಡಲಿಕ್ಕೆ ಸಾಧ್ಯವಿಲ್ಲ. ಈಗ ಈ ವಾಟರ್ ರೇಟ್ ಫಿಕ್ಸ್ ಮಾಡಿದೇವೆ. ಈ ರೇಟಿನಲ್ಲಿ ಯಾವ ರೀತಿ ಕಡಿಮೆಮಾಡಲು ಸಾಧ್ಯವಿಲ್ಲ ಎಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

4-30 P.M.

ಶ್ರೀ ಟಿ. ಆರ್ ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯಮಂತ್ರಿಗಳು ವಾಟರ್ ಸಪ್ಲೈ ಬೋರ್ಡ್ ಆಫೀಸರರು ಬರೆದು ಕೊಟ್ಟಿರುವುದನ್ನು ಇಲ್ಲಿ ಓದಿ ಬಿಟ್ಟರು. ಇದು ಸಂತೋಷದ ವಿಚಾರ. ನಾವು ಕೇಳತಕ್ಕಂಥಾದ್ದನ್ನು ಬಿಟ್ಟು ಸತ್ಯಕ್ಕೆ ದೂರವಾದ ಕಥೆ ಪುರಾಣ ಹೇಳಿ ಬಿಟ್ಟರು. ಒಂದು ಎಕ್ಸಪರ್ಟ್ ಕಮಿಟಿ ಅಪಾಯಿಂಟ್ ಮಾಡಿ, ತಜ್ಞರು ಯಾವ ರೇಟು ಫಿಕ್ಸ ಮಾಡುತ್ತಾರೆ ಅದನ್ನು ಕೊಡುತ್ತೇವೆ. 1957 ರಲ್ಲಿ ಎಕ್ಸಪರ್ಟ್ ನೇಮಕ ಮಾಡಿದಾಗ್ಗೆ ಎಂಟು ಆಣೆ ರೇಟು ಫಿಕ್ಸ ಮಾಡಿದ್ದರು. ಆದುದರಿಂದ ಮಾನ್ಯ ಸಚಿವರು ಹೇಳಿದ್ದು ಸತ್ಯಕ್ಕೆ ದೂರವಾದ ವಿಷಯ. ಅವರು ಹೇಳಿದ್ದು ನ್ಯಾಯವಾಗಿ ಇದ್ದರೆ ಒಂದು ಎಕ್ಸಪರ್ಟ್ ಕಮಿಟಿ ಅಪಾಯಿಂಟ ಮಾಡುವುದಕ್ಕೆ ಇವರಿಗೆ ಏನು ತೊಂದರೆ ಇದೆ ದಯವಿಟ್ಟು ಹೇಳಬೇಕು.

Sri R. M. PATIL.—It is not possible at present. It will be considered as and when necessary.

ಶ್ರೀ ಟಿ. ಆರ್. ಶಾಮಣ್ಣ.—ಈ ದಿನ ಬಹಳ ನಿರಾಶಾದಾಯಕವಾದ ವಿಚಾರ ಹಾಗು ಸತ್ಯಕ್ಕೆ ದೂರವಾದ ಒಂದು ಹೇಳಿಕೆ ಕೊಟ್ಟು ಜನಗಳ ಕಣ್ಣಿಗೆ ಮಣ್ಣು ಹಾಕಿ ನ್ಯಾಯವಾದ ಬೇಡಿಕೆಯನ್ನು ತಡೆ ಹಿಡಿದಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಮಾನ್ಯ ಸಚಿವರು ಪ್ರೊಫೆಷನ್ ಟ್ಯಾಕ್ಸ್ ತೆಗೆದು ಹಾಕುವ ಬಗ್ಗೆ ಭಾಷಣದಲ್ಲಿ ಏನೂ ಹೇಳಲಿಲ್ಲ. ಅದನ್ನು ಹೇಳಬೇಕು.

Sri R. M. PATIL.—It is a pleasure to announce that with regard to Profession Tax so far as Bangalore City is concerned, the Administrator had recommended that the Profession Tax be entirely abolished. So the Government has accepted from 8th April 1968 there is no tax on profession.

Sri M. S. KRISHNAN.—Thank you.

ಶ್ರೀ ಟಿ. ಆರ್. ಶಾಮಣ್ಣ.—ಒಂದು ಬಹಳ ಕಠಿಣವಾದ ಸಮಸ್ಯ ನಮ್ಮ ಮುಂದೆ ಮಾನ್ಯ ಸಚಿವರು ತಂದು ಇಟ್ಟಿದ್ದಾರೆ. ಯಾವುದೇ ರೀತಿಯ ಆಶಾದಾಯಕವಾದಂಥ ಜನಗಳಿಗೆ ಪ್ರಯೋಜನವಾಗತಕ್ಕಂಥ ಒಂದು ವಚನ ಮಂತ್ರಿಗಳಿಂದ ಬರುತ್ತದೆ ಎಂದು ನಾವು ನಿರೀಕ್ಷಣೆ ಮಾಡಿದ್ದೆವು, ನಾವು ಏನಾದರೂ ಆಹಾರ ಕೊಡಿ ಎಂದು ಕೇಳಿದರೆ ಅವರು ನಮ್ಮ ಬಾಯಿಗೆ ಮಣ್ಣು ಹಾಕಿದ್ದಾರೆ. ಈಗ ಈ ಸಮಸ್ಯೆ ಸ್ವಲ್ಪವು ಕೂಡ ನ್ಯಾಯವಾದ ರೀತಿಯಲ್ಲಿ ಬಗೆಹರಿಸದೇ ಇರುವುದರಿಂದ ಅನಾವಶ್ಯಕವಾಗಿ ಬೆಂಗಳೂರಿನ ನಾಗರಿಕರಿಗೆ ತೊಂದರೆಯಾಗುತ್ತಿರುವುದರಿಂದ ಯಾವ ಗತ್ಯಂತರವು ಇಲ್ಲದೆ ಈ ಮಾನ್ಯ ಸಭೆಯಲ್ಲಿ ಮಾನ್ಯ ಸ್ಪೀಕರ್ ಅವರ ಪ್ರೊಟೆಕ್ಷನ್ ಕೇಳಿಕೊಂಡು ಅವರು ನಮಗೆ ಸಹಾಯ ಮಾಡಬೇಕೆಂದು ಕೇಳಿಕೊಂಡು ನಮಗೆ ಬೇರೆ ದಾರಿ ಇಲ್ಲದೆ ಈ ಮಾನ್ಯ ಸಭೆಗೆ ಯಾವ ವಿಧವಾದ ಅವಮರ್ಯಾದೆ ಮಾಡದೆ ನಾವು ಇಲ್ಲ ಕೂತುಕೊಳ್ಳುವುದಕ್ಕೆ ಅವಕಾಶ ಕೊಡಬೇಕು ಎಂದು ಕೇಳಿಕೊಳ್ಳುತ್ತೇವೆ. ನಮಗೆ ಪ್ರೊಟೆಕ್ಷನ್ ಕೊಡಬೇಕು. ಯಾಕೆಂದರೆ ಒಂದು ಎಕ್ಸ್‌ಪರ್ಟ್ ಕಮಿಟಿ ಅಪಾಯಿಂಟ ಮಾಡದೇ ಇಂಥ ಮೊಂಡತನ ನಡೆದಿದೆ.

ಶ್ರೀ ವಾಟಾಳ್ ನಾಗರಾಜ್.—ಇದು ಒಂದು ಪ್ರಾಮುಖ್ಯವಾದ ವಿಷಯ. ವಾಟರ್ ಕನ್‌ಕ್ಷನ್ ಕಟ್ ಮಾಡತಕ್ಕಂಥಾದ್ದನ್ನು ನಿಲ್ಲಿಸಬೇಕು. ಅಲ್ಲಿಯವರೆಗೆ ಹಳೇ ರೇಟಿನಲ್ಲಿ ವಸೂಲ್ಮಾಡ ಬೇಕಾಗಿತ್ತು. ಅದಕ್ಕೆ ಮಾನ್ಯ ಸಚಿವರು ಉತ್ತರ ಹೇಳಲಿಲ್ಲ. ಅವರು ಹೇಳಿದ್ದು ನಿಜವಾಗಿಯೂ ಕಣ್ಣು ಒರಿಸತಕ್ಕಂಥ ಮಾತು. ಈ ಸಭೆಗೆ ಗೌರವ ಕೊಟ್ಟು ತಮ್ಮ ಪರ್ಮಿಷನ್ ಕೇಳಿಕೊಂಡು ತಮಗೂ ಗೌರವ ಕೊಟ್ಟು, ಮಾನ್ಯ ಸಚಿವರ ಉತ್ತರದಿಂದ ಅಸಮಾಧಾನವಾಗಿರುವುದರಿಂದ ಬೆಂಗಳೂರು ನಗರದ ನಾಗರೀಕರ ಪರವಾಗಿ ಈ ಪ್ರಶ್ನೆ ಇತ್ಯರ್ಥವಾಗುವವರೆಗೆ ಸತ್ಯಾಗ್ರಹ ರೂಪದಲ್ಲಿ ನಾವು ಇಲ್ಲಿ ಕೂತುಕೊಳ್ಳುತ್ತೇವೆ.

Mr. DEPUTY SPEAKER.—I will put the Demands to the Vote of the House.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ರೂಪಾಯಿ ಹಳೇ ದರದಲ್ಲಿ ಸದ್ಯಕ್ಕೆ ವಸೂಲ್ಮಾಡ ಬೇಕು. ತಜ್ಞರ ಸಮಿತಿ ನೇಮಕ ಮಾಡಬೇಕೆಂದು ಕೇಳಿದ್ದೇವೆ. ತಜ್ಞರನ್ನು ನೇಮಿಸಿ ಅವರು ತನಿಖೆ ಮಾಡುವವರೆಗೆ ಒಂದು ರೂಪಾಯಿ ದರದಲ್ಲಿ ವಸೂಲ್ಮಾಡಿ ಎಂದು ಹೇಳಿದ್ದೇವೆ. ಆದರೆ ಮಾನ್ಯ ಸಚಿವರು ಬೆಂಗಳೂರು ನಾಗರಿಕರಿಗೆ ಕೊಟ್ಟಿರುವ ಉತ್ತರ ಸರಿಯಾದುದು ಅಲ್ಲ ಅದು ಸಮಾಧಾನಕರವಾಗಿಲ್ಲ. ನಾವು ಕೂಡ ನಮ್ಮ ಸ್ನೇಹಿತರ ಜೊತೆಗೆ ಸೇರಿಕೊಳ್ಳುತ್ತೇವೆ ಮತ್ತು ಸತ್ಯಾಗ್ರಹ ಮಾಡುವುದರಿಂದ ಈ ಸಭೆಯ ಘನತೆಗೆ ಚ್ಯುತಿ ಬರುವುದಿಲ್ಲ ಎಂದು ಹೇಳಿ ಬೆಂಗಳೂರು ಜನತೆಯ ಪರವಾಗಿ ನಾವು ಇಲ್ಲಿ ಕೂತುಕೊಳ್ಳುತ್ತೇವೆ.

(ಈ ಸಮಯದಲ್ಲಿ ಶ್ರೀ ಟಿ. ಆರ್. ಶಾಮಣ್ಣ, ಶ್ರೀ ವಾಟಾಳ್ ನಾಗರಾಜ್, ಶ್ರೀ ಎಂ. ಎಸ್. ಕೃಷ್ಣನ್ ಮತ್ತು ಶ್ರೀ ಪಿ. ತಿಮ್ಮಯ್ಯ ಅವರುಗಳು ವಿಧಾನ ಸಭೆಯ ಮಧ್ಯ ಇರುವ ದಾರಿಯಲ್ಲಿ ನೆಲದ ಮೇಲೆ ಕೂತುಕೊಂಡರು)

Mr. DEPUTY SPEAKER.—I will put the Demands to the Vote of the House. The question is :

"That the respective sums not exceeding the amounts mentioned including the sums already voted on account, be granted to the Government to defray the charges which will come in course of payment during the financial year for the period ending 31st day of March 1969, in respect of Demand Nos. 12, 13, 41-A., 39."

The motion was adopted.

As ordered by the Chair the motion for Demands adopted by the Chair are reproduced below :

DEMAND No. 12—.JAILS.

22. *Jails.*

"That a sum not exceeding Rs. 74,60,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969 in respect of 'Jails'."

DEMAND No. 13.—POLICE.

23. *Police.*

"That a sum not exceeding Rs. 8,15,00,000 including the sums already voted on account be granted to the Government to defray the charges which will come in coures of payment during the financial year for the period ending 31st day of March 1969 in respect of 'Police'"

DEMAND No. 41–A.—NATIONAL EMERGENCY –CIVIL DEFENCE.

78–A. *Expenditure connected with the National Emergency.*

"That a sum not exceeding Rs. 4,51,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of Expenditure connected with the 'National Emergency'."

DEMAND No. 39.—MISCELLANEOUS.

71. *Miscellaneous.*

"That a sum not exceeding Rs. 5,02,61,000 including the sum already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Miscellaneous'."

Mr. DEPUTY SPEAKER.—Now the House will adjourn for fifteen minutes.

The House rose at Thirty-five Minutes past Four of the Clock to re-assemble at Fifty Minutes past Four of the Clock.

The House re-assembled at Fifty-five Minutes past Four of the Clock.

[MR. DEPUTY SPEAKER in the Chair]

Members' Representation

ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಗಳೇ, ಈ ಸಭೆಯ ಭವನದಲ್ಲಿ ......

ಶ್ರೀ ಬಿ. ಎಂ. ಸಾಣಿಕೊಪ್ಪ.—ಒಂದು ಕ್ರಿಯಾ ಲೋಪ ಸ್ವಾಮಿ. ಈ ಸಭೆಯಲ್ಲಿ ಬೆಂಗಳೂರು ನಗರ ಸದಸ್ಯರು ಸತ್ಯಾಗ್ರಹ ಮಾಡುತ್ತಾ ಕೂತುಕೊಂಡಿದ್ದಾರೆ. ಇದು ಸಭೆಗೆ ಅಗೌರವ ತೋರಿಸಿದ ಹಾಗೆ ಆಗುತ್ತದೆ. ಇದರ ಬಗ್ಗೆ ವಿಚಾರ ಮಾಡಬೇಕು.

ಶ್ರೀ ಅಜೀಜ್ ಶೇಠ್.—ಬೆಂಗಳೂರು ನಗರದ ನಾಗರೀಕರ ತೊಂದರೆ ಸರಕಾರಕ್ಕೆ ಹೇಳಬೇಕು ಎಂದು ಅವರು ಕೂತುಕೊಂಡಿದ್ದಾರೆ.

ಶ್ರೀ ಎಸ್. ಶಿವಪ್ಪ.—ತಾವು ರೂಲಿಂಗ ಕೊಡುವ ಮುಂಚೆ ಒಂದು ವಿಷಯ ಪ್ರಸ್ತಾಪ ಮಾಡುತ್ತೇನೆ. ಈ ಸಭೆಯ ಮಾನ್ಯ ಸದಸ್ಯರಾದ ನಮ್ಮ ಮಾನ್ಯ ಸದಸ್ಯ ಬಂಧುಗಳಾದ ಶ್ರೀ ವಾಟಾಳ್ ನಾಗರಾಜ, ಶ್ರೀ ಎಂ. ಎಸ್. ಕೃಷ್ಣನ್, ಶ್ರೀ ಟಿ. ಆರ್. ಶಾಮಣ್ಣ, ಶ್ರೀ ಪಿ. ತಿಮ್ಮಯ್ಯ ಅವರು ಬೆಂಗಳೂರು ನಗರದ ನೀರಿನ ದರದ ಬಗ್ಗೆ ತಮ್ಮ ಅತೃಪ್ತಿ ಸೂಚಿಸುವುದಕ್ಕೆ ಈ ಶಾಸನ ಸಭೆಯಲ್ಲಿ—ಅದಕ್ಕೆ ಸತ್ಯಾಗ್ರಹ ಎಂದು ಹೇಳುವುದಕ್ಕಾಗದಿದ್ದರೂ— ಒಂದು ರೂಪದಲ್ಲಿ ಆ ರೀತಿ ಇರತಕ್ಕಂಥ ಅಷ್ಟು ಆಳವಾಗಿ ಭಾವನೆ ಬರುವುದಕ್ಕಾಗಿ ಚಳವಳಿ ಮಾಡಿ ತೋರಿಸುತ್ತಿದ್ದಾರೆ. ಸರಕಾರಕ್ಕೆ ತಮ್ಮ ಮುಖೇನ ಒಂದು ಸೂಚನೆ ಮಾಡುತ್ತೇನೆ. ನೀರಿನ ದರದ ಬಗ್ಗೆ ಎಲ್ಲವನ್ನೂ ಅಮೂಲಾಗ್ರವಾಗಿ ವಿಚಾರ ಮಾಡುವುದಕ್ಕಾಗಿ ಸರಕಾರ ಈಗ ಕೂಡ ಒಂದು ಸಮಿತಿ ನೇಮಕ ಅವರು ಮಾಡಬಹುದು. ಈ ಸಭೆಯಲ್ಲಿ ಇರತಕ್ಕಂಥ ಎಸ್ಟಿಮೇಟ್ಸ್ ಕಮಿಟಿ ಇದೆ. ಈ ಎಸ್ಟಿಮೇಟ್ಸ್ ಕಮಿಟಿಗೆ ಕೂಡ ಈ ವಿಷಯ ಕಳಿಸಿ ಅಲ್ಲಿ ಇದನ್ನು ವಿಮರ್ಶೆ ಮಾಡಿ ಇದರ ಬಗ್ಗೆ ಚರ್ಚೆ ಮಾಡಿ ತೀರ್ಪನ್ನು ಈ ಸಭೆಗೆ ಕೊಟ್ಟರೆ ಅದನ್ನು ಸಭೆ ಒಪ್ಪುತ್ತದೆ. ಈ ತೀರ್ಮಾನಕ್ಕೆ ಸರಕಾರ ಒಪ್ಪಿ ಎಸ್ಟಿಮೇಟ್ಸ್ ಕಮಿಟಿಗೆ ಈ ಕೆಲಸ ಒಪ್ಪಿಸಿದ್ದಾರೆ. ನನ್ನ ಸದಸ್ಯ ಬಂಧುಗಳು ಅಲ್ಲಿಂದ ಎದ್ದು ಬಂದು ತಮ್ಮ ತಮ್ಮ ಸೀಟುಗಳಲ್ಲಿ ಕೂತುಕೊಳ್ಳುವುದಕ್ಕೆ ಅವರಿಗೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸರಕಾರದ ಉತ್ತರದ ಮೇಲೆ ಇದು ಅವಲಂಬಿಸಿದೆ. ಇದಕ್ಕೆ ಸರಕಾರ ಏನು ಉತ್ತರ ಹೇಳುತ್ತದೆ ?